ಸೋಮವಾರ, ಸೆಪ್ಟೆಂಬರ್ 12, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಒಟಿಟಿ ಪ್ರಶಸ್ತಿ

ಮುಂಬೈನಲ್ಲಿ ಹಮ್ಮಿಕೊಂಡಿದ್ದ ಪ್ಯಾನ್ ಇಂಡಿಯಾ ಒಟಿಟಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬಾಲಿವುಡ್ ನಟಿ ನಿಮ್ರತ್ ಕೌರ್ ಪಾಲ್ಗೊಂಡಿದ್ದರು

ಸೋಮವಾರ, ಸೆಪ್ಟೆಂಬರ್ 12, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 253 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಪಿಯುಸಿ ನಂತರ ಎಂಜಿನಿಯರಿಂಗ್ ಸೀಟು ಸಿಗದಿದ್ದರೆ ಚಿಂತಿಸದಿರಿ. ಆ ಕೋರ್ಸ್‌ಗೆ ಸರಿ ಸಮಾನವಾದ ಸಾಕಷ್ಟು ಕೋರ್ಸ್‌ಗಳಿವೆ. ಅವುಗಳ ವಿವರ ಇಲ್ಲಿದೆ.

ಆಳ-ಅಗಲ
ರಸ್ತೆ ಅಪಘಾತ: ಹೆದ್ದಾರಿ ವಿನ್ಯಾಸ ದೋಷವೂ ಕಾರಣ

ನೌಕಾಪಡೆಗೆ ತಾರಾಗಿರಿ ಬಲ 9

‘ನೀಟ್’ ಗೊಂದಲ: ಅಂಕ ನಷ್ಟ! 4

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಇಳಿಕೆ

ಪೆಟ್ರೋಲ್, ಡೀಸೆಲ್ ಬೆಲೆ ಸ್ಥಿರ 8

ಇಂದಿನಿಂದ ವಿಧಾನಮಂಡಲ ಅಧಿವೇಶನ • ಶೇ 40 ಲಂಚ, ನೇಮಕಾತಿ ಅಕ್ರಮ ಚರ್ಚೆಗೆ ಸಿದ್ಧತೆ

ಸದನ ಸಮರಕ್ಕೆ ಅಖಾಡ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಮಂಡಲದ ಅಧಿವೇಶನ ಸೋಮವಾರ ಆರಂಭಗೊಳ್ಳಲಿದ್ದು, ಹತ್ತು ದಿನಗಳ ಕಲಾಪದಲ್ಲಿ (ಸೆ.12 ರಿಂದ ಸೆ.23) ಬಿಜೆಪಿ ಸರ್ಕಾರದ ಹೆಡೆಮುರಿ ಕಟ್ಟಲು ಕಾಂಗ್ರೆಸ್ ಮತ್ತು ಜೆಡಿಎಸ್ ಹಲವು ‘ಅಸ್ತ್ರ’ಗಳನ್ನು ಸಿದ್ಧ ಮಾಡಿಕೊಂಡಿವೆ. ಅಧಿವೇಶನ ಆರಂಭ ದಿಂದಲೇ ಕಾವೇರುವ ಸಾಧ್ಯತೆಯಿದೆ.

ಗುತ್ತಿಗೆ ಕಾಮಗಾರಿಯಲ್ಲಿ ಶೇ 40 ಲಂಚದ ಆರೋಪ, ಇತ್ತೀಚಿನ ಮಳೆ ಮತ್ತು ಪ್ರವಾಹದಿಂದ ಜನರಿಗಾದ ಸಂಕಷ್ಟ, ಪಠ್ಯ ಪುಸ್ತಕ ಪರಿಷ್ಕರಣೆಯಲ್ಲಿ ಅವಾಂತರ ಸೇರಿದಂತೆ ಹಲವು ವಿಷಯಗಳನ್ನು ಪ್ರಸ್ತಾಪಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಉಭಯ ಪಕ್ಷಗಳು ಸಜ್ಜಾಗಿವೆ. ಇದಕ್ಕೆ ತಿರುಗೇಟು ನೀಡಲು ಬಿಜೆಪಿಯೂ ತಯಾರಿ ನಡೆಸಿದೆ.

2023ರ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಈ ಅಧಿವೇಶನವು ಜಿದ್ದಾಜಿದ್ದಿಗೆ ವೇದಿಕೆಯಾಗಲಿದೆ.

ಶೇ 40ರಷ್ಟು ಲಂಚದ ವಿಷಯವನ್ನು ಕಾಂಗ್ರೆಸ್ ಪ್ರಸ್ತಾಪಿಸಲಿದೆ. ಹಿಂದಿನ ಎರಡು ಅಧಿವೇಶಗಳಲ್ಲೂ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಈ ವಿಷಯವನ್ನು ಪ್ರಸ್ತಾಪಿಸಿದ್ದರು. ಈ ಬಾರಿ ಕಾಂಗ್ರೆಸ್‌ಗೆ ತಿರುಗೇಟು ನೀಡಲು ಬಿಜೆಪಿ ನಾಯಕರು ಅರ್ಕಾವತಿ ರೀಡೂ ವಿಷಯವನ್ನು ಪ್ರಸ್ತಾಪಿಸಿ, ತನಿಖೆಗೆ ಒತ್ತಾಯಿಸುವ ಸಾಧ್ಯತೆಯೂ ಇದೆ. ಲಂಚದ ವಿಚಾರಕ್ಕೆ ಸಂಬಂಧಿಸಿದಂತೆ ತನಿಖೆಗೆ ಸರ್ಕಾರ ಮುಂದಾದರೆ, ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಹಗರಣಗಳ ತನಿಖೆಗೂ ಒತ್ತಾಯಿಸುವ ಸಾಧ್ಯತೆ ಇದೆ.

ಪಿಎಸ್‌ಐ ನೇಮಕಾತಿ ಸೇರಿ ವಿವಿಧ ಇಲಾಖೆಗಳಲ್ಲಿ ನೇಮಕಾತಿಗಾಗಿ ನಡೆದ ಪರೀಕ್ಷೆಯ ಅಕ್ರಮಗಳು ಪ್ರಸ್ತಾಪವಾಗಲಿವೆ. ಪಿಎಸ್‌ಐ ನೇಮಕಾತಿ ಪರೀಕ್ಷೆಯ ಅಕ್ರಮದ ತನಿಖೆ ನಡೆಯುತ್ತಿದ್ದು, ನೇಮಕಾತಿ ವಿಭಾಗದ ಎಡಿಜಿಪಿ ಅಮೃತ್ ಪೌಲ್ ಸೇರಿ ಹಲವರು ಬಂಧನಕ್ಕೆ ಒಳಗಾಗಿದ್ದಾರೆ. ನೇಮಕಾತಿ ಆದೇಶವನ್ನೇ ಸರ್ಕಾರ ರದ್ದು ಮಾಡಿದ್ದು, ಈ ವಿಷಯ ಆಡಳಿತ ಮತ್ತು ವಿರೋಧಪಕ್ಷಗಳ ಮಧ್ಯೆ ವಾಕ್ಸಮರಕ್ಕೆ ಕಾರಣವಾಗುವ ನಿರೀಕ್ಷೆಯಿದೆ.

ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಆಗಿರುವ ಅವಾಂತರದ ವಿಷಯವೂ ಚರ್ಚೆಗೆ ಬರಲಿದೆ. ಆರ್‌ಎಸ್‌ಎಸ್ ಸ್ಥಾಪಕ ಹೆಡಗೇವಾರ್ ಅವರ ಭಾಷಣವನ್ನು ಪಠ್ಯದಲ್ಲಿ ಸೇರಿಸಿರುವುದು ಸೇರಿ, ಪಠ್ಯಪುಸ್ತಕದಲ್ಲಿನ ಹಲವು ವಿಷಯಗಳ ಬಗ್ಗೆ ಆಡಳಿತ ಮತ್ತು ವಿರೋಧ ಪಕ್ಷಗಳ ಮಧ್ಯೆ ಬಿಸಿ ಬಿಸಿ ಚರ್ಚೆಯಾಗುವ ಸಂಭವ ಉಂಟು.

ರಾಜ್ಯದಲ್ಲಿ ಭಾರಿ ಮಳೆಯಿಂದ ವಿವಿಧ ಜಿಲ್ಲೆಗಳಲ್ಲಿ ಪ್ರವಾಹ, ಭೂಕುಸಿತವಾಗಿದೆ. ರಾಜಧಾನಿಯ ಕೆಲಭಾಗಗಳಲ್ಲಿ ಸಾರ್ವಜನಿಕರು ಸಂಕಷ್ಟಕ್ಕೆ ತುತ್ತಾಗಿದ್ದಾರೆ. ಪರಿಸ್ಥಿತಿ ನಿಭಾಯಿಸುವಲ್ಲಿ ಸರ್ಕಾರ ವಿಫಲವಾಗಿದೆ. ಜೊತೆಗೆ ಕೇಂದ್ರದಿಂದ ಅಗತ್ಯ ಪ್ರಮಾಣದ ನೆರವು ಬಂದಿಲ್ಲ ಎಂದು ಆರೋಪಿಸಿ ವಿರೋಧ ಪಕ್ಷಗಳು ವಾಗ್ದಾಳಿ ನಡೆಸಲು ಸಜ್ಜಾಗಿವೆ.

ದಕ್ಷಿಣ ಕನ್ನಡದ ಸುಳ್ಯ ಸಮೀಪ ಬೆಳ್ಳಾರೆಯಲ್ಲಿ ನಡೆದ ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆಯ ಘಟನೆ ಸೇರಿದಂತೆ ದಕ್ಷಿಣ ಕನ್ನಡದಲ್ಲಿ ನಡೆದ ಕೋಮು ಆಧಾರಿತ ಹತ್ಯೆಗಳ ವಿಷಯವೂ ಪ್ರಸ್ತಾಪವಾಗಲಿದೆ. ರಾಜ್ಯ ಸರ್ಕಾರ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿ ವಿರೋಧಪಕ್ಷಗಳು ಮುಗಿಬೀಳಬಹುದು.

ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಲು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಇದ್ದಾಗ ಪ್ರಯತ್ನ ನಡೆದಿತ್ತು ಎಂದು ಇಂಧನ ಸಚಿವ ವಿ.ಸುನಿಲ್‌ಕುಮಾರ್ ಮಾಡಿರುವ ಆರೋಪ ಸದನದಲ್ಲಿ ಕಿಡಿ ಹೊತ್ತಿಸುವ ಸಾಧ್ಯತೆ ಇದೆ. ಈ ವಿಚಾರವಾಗಿ ಶ್ವೇತಪತ್ರಕ್ಕೆ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ. ಹಿಂದೆ ನಡೆದ ವಿದ್ಯುತ್ ಖರೀದಿ ಒಪ್ಪಂದಗಳನ್ನು ಪರಾಮರ್ಶೆಗೆ ಒಳಪಡಿಸಬೇಕು ಎಂದು ಸಚಿವರು ಹೇಳಿದ್ದು, ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ಮಾತಿನ ಸಮರ ನಡೆದಿದೆ. ಕಲಾಪದ ವೇಳೆ ಇದು ಪ್ರತಿಧ್ವನಿಸಲಿದೆ.

ಈ ಮಧ್ಯೆ ಕೆಲವು ಮಸೂದೆಗಳನ್ನು ಮಂಡಿಸಿ ಅಂಗೀಕಾರ ಪಡೆದುಕೊಳ್ಳಲು ಆಡಳಿತ ಪಕ್ಷ ಮುಂದಾಗಲಿದೆ. ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದಿರುವ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆ, ಬೆಂಗಳೂರು ಸಂಚಾರ ದಟ್ಟಣೆ ನಿರ್ವಹಣೆಗೆ ಪ್ರತ್ಯೇಕ ಪ್ರಾಧಿಕಾರ ರಚಿಸುವ ಮಸೂದೆ, ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ ತಿದ್ದುಪಡಿ ಮಸೂದೆ ಈ ಪೈಕಿ ಪ್ರಮುಖವಾದವು.

ಸಭಾಪತಿ ಚುನಾವಣೆ

ವಿಧಾನಪರಿಷತ್ ಸಭಾಪತಿ ಸ್ಥಾನಕ್ಕೆ ಚುನಾವಣೆ ನಡೆಸಬೇಕಿದ್ದು, ಪರಿಷತ್ ಸದಸ್ಯ ರಘುನಾಥ ರಾವ್ ಮಲ್ಕಾಪುರೆ ಹಂಗಾಮಿ ಸಭಾಪತಿಯಾಗಿದ್ದಾರೆ. ಚುನಾವಣಾ ದಿನಾಂಕ ನಿಗದಿ ಮಾಡಬೇಕಾಗಿದೆ. ಪರಿಷತ್‌ನಲ್ಲಿ ಬಹುಮತ ಪಡೆದಿರುವ ಬಿಜೆಪಿ ಸಭಾಪತಿ ಮತ್ತು ಉಪಸಭಾಪತಿ ಎರಡೂ ಸ್ಥಾನಗಳಿಗೂ ಪಕ್ಷದ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಲಿದೆ ಎಂದು ಮೂಲಗಳು ತಿಳಿಸಿವೆ.

ಮುಂದುವರಿದ ಮಳೆ ಆರ್ಭಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಭಾನುವಾರ ಧಾರಾಕಾರ ಮಳೆಯಾಗಿದೆ. ಮಹಾರಾಷ್ಟ್ರದ ಉಜನಿ ಜಲಾಶಯದಿಂದ ನೀರು ಬಿಡುಗಡೆ ಮಾಡಿದ್ದರಿಂದ ಪ್ರಸಿದ್ಧ ತೀರ್ಥಕ್ಷೇತ್ರಗಳಾದ ದೇವಲ ಗಾಣಗಾಪುರ, ಘತ್ತರಗಾ ಬಳಿಯ ಸೇತುವೆಗಳು ಜಲಾವೃತಗೊಂಡಿದೆ.

ಕೃಷ್ಣಾ ನದಿ ನೀರಿನ ಹರಿವು ಏರಿಕೆಯಾಗಿದ್ದು, ಜಿಲ್ಲೆಯ ವಿವಿಧೆಡೆ ಐದು ಸೇತುವೆಗಳು ಮುಳುಗಡೆಯಾಗಿವೆ. ಸಂಚಾರ ಬಂದ್ ಮಾಡಲಾಗಿದೆ.

ವಿಜಯಪುರ ಜಿಲ್ಲೆಯ ಡೋಣಿ ನದಿ ಪ್ರವಾಹದಿಂದ ತಾಳಿಕೋಟೆ–ವಿಜಯಪುರ, ತಾಳಿಕೋಟೆ–ಹಡಗಿನಾಳ ಸೇತುವೆ ಸಂಪೂರ್ಣ ಮುಳುಗಿದ್ದು, ಸಂಚಾರ ಸಂಪೂರ್ಣ ಕಡಿತವಾಗಿದೆ. ಸವದತ್ತಿ ತಾಲ್ಲೂಕಿನ ಹೂಲಿಕಟ್ಟಿಯಲ್ಲಿ ಮನೆಯ ಗೋಡೆ ಕುಸಿದು ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಶುಕ್ರವಾರ ಹಳ್ಳದ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋಗಿದ್ದ ಗೋಕಾಕ ತಾಲ್ಲೂಕಿನ ಕೊಳವಿ ಗ್ರಾಮದ ದಂಡಪ್ಪ ಬಸಪ್ಪ ಮಾಲದಿನ್ನಿ (22) ಅವರ ಶವ ಭಾನುವಾರ ಪತ್ತೆಯಾಗಿದೆ.

ಇನ್ನಷ್ಟು ಸುದ್ದಿಗಳು 4

ಜೆಇಇ ಅಡ್ವಾನ್ಸ್ಡ್: ರಾಜ್ಯದ ಶಿಶಿರ್‌ಗೆ ಮೊದಲ ರ್‍ಯಾಂಕ್

ಬೆಂಗಳೂರು: ಐಐಟಿ ಸಂಸ್ಥೆಗಳಿಗೆ ಪ್ರವೇಶಕ್ಕಾಗಿ ನಡೆಸುವ ಜಂಟಿ ಪ್ರವೇಶ ಪರೀಕ್ಷೆ (ಜೆಇಇ) ಅಡ್ವಾನ್ಸ್ಡ್ ಫಲಿತಾಂಶದಲ್ಲಿ ರಾಜ್ಯದ ವಿದ್ಯಾರ್ಥಿ ಆರ್.ಕೆ.ಶಿಶಿರ್ ಅಖಿಲ ಭಾರತ ಮಟ್ಟದಲ್ಲಿ ಮೊದಲ ರ್‍ಯಾಂಕ್ ಪಡೆದರೆ, ಲಕ್ಷ್ಮಿ ಸಾಯಿ ಲೋಹಿತ್ ರೆಡ್ಡಿ ದ್ವಿತೀಯ ರ್‍ಯಾಂಕ್ ಪಡೆದಿದ್ದಾರೆ.

ರಾಜ್ಯದ ಮತ್ತೊಬ್ಬ ವಿದ್ಯಾರ್ಥಿ, ವಿಶಾಲ್ ಬೈಸಾನಿ 13ನೇ ರ್‍ಯಾಂಕ್ ಗಳಿಸಿದ್ದಾರೆ. ಬೆಂಗಳೂರು ಸಹಕಾರ ನಗರದ ನಾರಾಯಣ ಟೆಕ್ನೊ ಸ್ಕೂಲ್‌ನ ವಿದ್ಯಾರ್ಥಿಯಾದ ಶಿಶಿರ್, ಜೆಇಇ–ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ 360ಕ್ಕೆ 314 ಅಂಕಗಳಿಸಿದ್ದಾರೆ.

ಶಿಶಿರ್

ಲಕ್ಷ್ಮಿ ಸಾಯಿ

9ನೇ ಪುಟ ನೋಡಿ

ಬಿಬಿಎಂಪಿ: 4 ವಾರ್ಡ್ ಮೀಸಲಾತಿ ಬದಲು

ಬೆಂಗಳೂರು: ಬಿಬಿಎಂಪಿಯ 243 ವಾರ್ಡ್‌ಗಳ ಪೈಕಿ ನಾಲ್ಕು ವಾರ್ಡ್‌ಗಳ ಮೀಸಲಾತಿಯನ್ನು ಮರುನಿಗದಿ ಮಾಡಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ. ಕೆ.ಆರ್. ಪುರದ 88ನೇ ಬಸವಪುರ ವಾರ್ಡ್‌ನ ಪರಿಶಿಷ್ಟ ಜಾತಿ ಮೀಸಲಾತಿಯನ್ನು ಬದಲಿಸಿ ಸಾಮಾನ್ಯ ಮಹಿಳೆ ಎಂದು ಮರುನಿಗದಿ ಮಾಡಿದೆ. 3B

‘ಪಂಪ ಮಹಾಕವಿ ರಸ್ತೆ ಹೆಸರು ಬದಲಿಸಬೇಡಿ’

ಬೆಂಗಳೂರು: ಚಾಮರಾಜಪೇಟೆಯಲ್ಲಿ ಇರುವ ಪಂಪ ಮಹಾಕವಿ ರಸ್ತೆಯ ಹೆಸರನ್ನು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಸ್ತೆ ಎಂದು ಬದಲಾಯಿಸುವ ಪ್ರಸ್ತಾವಕ್ಕೆ ಸಾಹಿತ್ಯ ವಲಯದ ಪ್ರಮುಖರಿಂದ ಆಕ್ಷೇಪ ವ್ಯಕ್ತವಾಗಿದೆ. 4

ರಾಷ್ಟ್ರೀಯ ಪಕ್ಷ ಸ್ಥಾಪನೆ: ಕೆಸಿಆರ್

ಹೈದರಾಬಾದ್ (ಪಿಟಿಐ): ‘ಶೀಘ್ರವೇ ರಾಷ್ಟ್ರೀಯ ಪಕ್ಷ ಸ್ಥಾಪಿಸಲಾಗುವುದು ಮತ್ತು ಅದಕ್ಕಾಗಿ ನೀತಿಗಳನ್ನು ರೂಪಿಸುವ ಕೆಲಸ ನಡೆದಿದೆ’ ಎಂದು ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ (ಕೆಸಿಆರ್) ಅವರು ಭಾನುವಾರ ಹೇಳಿದ್ದಾರೆ. 9

ಟೆನಿಸ್: ಅಮೆರಿಕ ಓಪನ್‌ಗೆ ಇಗಾ ರಾಣಿ

ಇಗಾ ಸ್ವಟೆಕ್–ಎಎಫ್‌ಪಿ ಚಿತ್ರ

ನ್ಯೂಯಾರ್ಕ್ (ಎಎಫ್‌ಪಿ): ಪೋಲೆಂಡ್‌ನ ಇಗಾ ಸ್ವಟೆಕ್ ಅವರು ಅಮೆರಿಕ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಕಿರೀಟ ಧರಿಸಿದರು. ಅವರು ಈ ಪ್ರಶಸ್ತಿಯನ್ನು ಮೊದಲ ಬಾರಿ ಜಯಿಸಿದರು. ಈ ಸಾಧನೆ ಮಾಡಿದ ಪೋಲೆಂಡ್‌ನ ಪ್ರಥಮ ಆಟಗಾರ್ತಿಯಾಗಿದ್ದಾರೆ.

ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಫೈನಲ್‌ನಲ್ಲಿ ಅವರು 6–2, 7–6 (7–5) ರಲ್ಲಿ ಟ್ಯುನೀಷಿಯಾದ ಆನ್ಸ್ ಜಬೇರ್ ಅವರನ್ನು ಮಣಿಸಿದರು. ಇದು ಅವರ ವೃತ್ತಿಜೀವನದ ಮೂರನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ. 21 ವರ್ಷದ ಸ್ವಟೆಕ್, ಒಂದು ಗಂಟೆ 52 ನಿಮಿಷಗಳಲ್ಲಿ ಪಂದ್ಯ ಗೆದ್ದರು. 10

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಾಹಿತಿ ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ ಆಕ್ರೋಶ • ವಿವಿಧ ಕ್ಷೇತ್ರಗಳ ನಾಲ್ವರು ಸಾಧಕರಿಗೆ 'ವಿಶ್ವಚೇತನ ಪ್ರಶಸ್ತಿ' ಪ್ರದಾನ

'ಪರಂಪರೆ ಅರಿವಿಲ್ಲದವರಿಂದ ಹೆಸರು ಬದಲಾವಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಪರಂಪರೆಯ ಅರಿವಿದ್ದವರು ಪಂಪ ಮಹಾಕವಿ ರಸ್ತೆಯ ಹೆಸರು ಬದಲಾಯಿಸುವ ಕೆಲಸಕ್ಕೆ ಮುಂದಾಗುವುದಿಲ್ಲ. ಯಾವುದೇ ಕಾರಣಕ್ಕೂ ಕನ್ನಡ ಸಾಹಿತ್ಯ ಪರಿಷತ್ತಿನ ಮುಂಭಾಗ ಇರುವ ರಸ್ತೆಯ ಹೆಸರನ್ನು ಬದಲಾಯಿಸಬಾರದು' ಎಂದು ಸಾಹಿತಿ ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ ಆಗ್ರಹಿಸಿದರು.

ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆಯು ನಗರದಲ್ಲಿ ಭಾನುವಾರ ಹಮ್ಮಿಕೊಂಡ 'ಕುವೆಂಪು ಚಿಂತನೆಗಳು: ಸಮಕಾಲೀನ ಸಂದರ್ಭ' ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಭಾಗವಹಿಸಿ, ಮಾತನಾಡಿದರು.

'ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕಟ್ಟಿದ ಕನ್ನಡ ಸಾಹಿತ್ಯ ಪರಿಷತ್ತಿಗೆ ದೊಡ್ಡ ಇತಿಹಾಸವಿದೆ. ಈ ಸಂಸ್ಥೆಯ ಮುಂಭಾಗದ ರಸ್ತೆಗೆ ಪಂಪ ಮಹಾಕವಿ ರಸ್ತೆ ಎಂದು ಹೆಸರಿಡಲಾಗಿದೆ. ಪಂಪ ಕನ್ನಡದ ಹೆಮ್ಮೆಯ ಪ್ರತೀಕ. ಅವರ ಆದರ್ಶದ ನೆಲೆಯಲ್ಲಿಯೇ ಕನ್ನಡ ಸಾಹಿತ್ಯಲೋಕ ನಡೆದು ಬಂದಿದೆ. ಈಗ ಅವರ ಹೆಸರಿನ ರಸ್ತೆಯ ಹೆಸರನ್ನು ಬದಲಾಯಿಸುವ ಪ್ರಯತ್ನ ನಡೆಯುತ್ತಿದೆ. ಈ ಕೆಲಸ ಮಾಡುತ್ತಿರುವವರಿಗೆ ಕನ್ನಡ ಪರಂಪರೆಯ ಅರಿವಿದೆಯೇ' ಎಂದು ಪ್ರಶ್ನಿಸಿದರು.

ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಡಾ.ಎಚ್‌.ಎಂ. ವೆಂಕಟಪ್ಪ, ಭೀಮಾಶಂಕರ ಗುಳೇದ ಹಾಗೂ ಬೈರಮಂಗಲ ರಾಮೇಗೌಡ ಅವರಿಗೆ 'ವಿಶ್ವಚೇತನ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಸಂಸ್ಕೃತಿ ಚಿಂತಕ ಡಿ.ಸಿ. ಚಿತ್ರಲಿಂಗಯ್ಯ, ವೇದಿಕೆಯ ಸಂಸ್ಥಾಪನಾ ಅಧ್ಯಕ್ಷ ಜೀವನ್ಮುಖಿ ಸುರೇಶ್, ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ, ಪಿ.ಜಿ.ಆರ್. ಸಿಂಧ್ಯಾ, ಟಿ. ತಿಮ್ಮೇಗೌಡ, ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ಹಾಗೂ ಕನ್ನಡ ಪ್ರಾಧ್ಯಾಪಕ ಪಿ.ಜಿ. ರವಿಕುಮಾರ್ ಇದ್ದಾರೆ.

'ಹೆಸರು ಬದಲಾಯಿಸುವಂತಹ ದುಸ್ಸಾಹಸ ತೋರುವ ಕೆಲಸವನ್ನು ಯಾರೂ ಮಾಡಬಾರದು. ಪರಿಷತ್ತಿಗೆ ಅದರದೇ ಆದ ಘನತೆಯಿದೆ. ಪಂಪ ಮಹಾಕವಿ ರಸ್ತೆಯಿಂದ ಪರಿಷತ್ತಿಗೆ ಬರುತ್ತೇವೆ. ಸಾಹಿತ್ಯದ ಪ್ರವೇಶವೂ ಪಂಪನಿಂದಲೇ ಆಗುತ್ತದೆ. ಒಂದು ವೇಳೆ ಹೆಸರು ಬದಲಾಯಿಸಿದರೆ ಕನ್ನಡ ಸಾಹಿತ್ಯದ ವಿವೇಕ ಇಲ್ಲದವರು ಮಾಡುವ ಕೆಲಸವಾಗುತ್ತದೆ. ಅದು ಆಗುವುದು ಬೇಡ' ಎಂದು ಹೇಳಿದರು.

ಭಾರತ್ ಸ್ಕೌಟ್ ಅಂಡ್ ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ, 'ಕುವೆಂಪು ಅವರ ಸಾಹಿತ್ಯ ಓದುವುದು ಕಷ್ಟದ ಕೆಲಸ. ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಹಾಗೂ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಓದಿದ್ದೇನೆ. ಈ ಕಾದಂಬರಿಯಲ್ಲಿನ ಪಾತ್ರಗಳು ತಲೆಯಲ್ಲಿ ಹಾಗೇ ನಿಚ್ಚಳವಾಗಿ ಉಳಿದಿವೆ. ಕುವೆಂಪು ಅವರ ವಿಶ್ವ ಮಾನವನ ಚಿಂತನೆ ಪ್ರಸ್ತುತ ಸಂದರ್ಭಕ್ಕೆ ಅತ್ಯಗತ್ಯ. ಇವತ್ತಿನ ಜಾತಿ, ಧರ್ಮ ಸಂಘರ್ಷ ವ್ಯವಸ್ಥೆಯಲ್ಲಿ ಈ ಚಿಂತನೆಗಳ ಅಳವಡಿಕೆ ಸುಲಭವಲ್ಲ. ಆದರೆ, ಈ ಚಿಂತನೆಗಳ ಅಳವಡಿಕೆಯಿಂದ ಜಗತ್ತಿಗೆ ಒಳ್ಳೆಯದಾಗುತ್ತದೆ' ಎಂದು ಅವರು ಹೇಳಿದರು.

'ಮುಂಚಿತವಾಗಿ ವೇತನ ಪಾವತಿ'

'ಕರ್ನಾಟಕ ಜಾನಪದ ಪರಿಷತ್ತಿನ ಸಿಬ್ಬಂದಿಗೆ ಮಾರ್ಚ್ ತಿಂಗಳಲ್ಲಿಯೇ ಮುಂದಿನ ಐದು ತಿಂಗಳ ವೇತನವನ್ನು ಮುಂಚಿತವಾಗಿ ನೀಡಲಾಗಿತ್ತು. ಆಗಸ್ಟ್ ತಿಂಗಳವರೆಗೆ ವೇತನ ಕೊಡಲಾಗಿದೆ. ಇದಕ್ಕೆ ಸರ್ಕಾರವು ವೇತನಕ್ಕಾಗಿ ನೀಡಿದ ಅನುದಾನವನ್ನೇ ಬಳಸಿಕೊಳ್ಳಲಾಗಿದೆ. ವೇತನ ನೀಡಿಲ್ಲ ಎನ್ನುವ ಆರೋಪದಲ್ಲಿ ಯಾವುದೇ ಹುರುಳಿಲ್ಲ' ಎಂದು ಕರ್ನಾಟಕ ಜಾನಪದ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಟಿ. ತಿಮ್ಮೇಗೌಡ ತಿಳಿಸಿದರು.

'ಈ ಹಣಕಾಸು ವರ್ಷದಿಂದ ಎಚ್‌ಆರ್‌ಎಂಎಸ್ ಅಡಿ ಬರುವ ಇಬ್ಬರು ಸಿಬ್ಬಂದಿಗೆ ಮಾತ್ರ ಅನುದಾನ ನೀಡುವುದಾಗಿ ಸರ್ಕಾರ ಹೇಳಿತ್ತು. ಉಳಿದ 30 ಹಂಗಾಮಿ ಸಿಬ್ಬಂದಿಗೆ ಪರಿಷತ್ತೇ ಭರಿಸಬೇಕು ಎಂದು ತಿಳಿಸಲಾಗಿತ್ತು. ಮೊದಲಿನಂತೆ ಅನುದಾನ ನೀಡಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಇಷ್ಟು ವರ್ಷ ಸರ್ಕಾರದಿಂದ ಪರಿಷತ್ತಿನ ಚಟುವಟಿಕೆಗೆ ₹ 1 ಕೋಟಿ, ವೇತನಕ್ಕೆ ₹ 60 ಲಕ್ಷ ಬಿಡುಗಡೆಯಾಗುತ್ತಿತ್ತು. ನನ್ನ ಅವಧಿಯಲ್ಲಿ ವೇತನ ನಿಲ್ಲಿಸಿಲ್ಲ. ಹಣದ ಕೊರತೆಯೂ ಎದುರಾಗಿಲ್ಲ' ಎಂದು ಹೇಳಿದರು.

'ವಿಶ್ವಚೇತನ ಪ್ರಶಸ್ತಿ' ಪ್ರದಾನ

ಕಣ್ವ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಎಚ್‌.ಎಂ. ವೆಂಕಟಪ್ಪ, ಸಾಹಿತಿ ಬೈರಮಂಗಲ ರಾಮೇಗೌಡ, ಬೆಂಗಳೂರು ಪೂರ್ವ ವಿಭಾಗದ ಪೊಲೀಸ್ ಉಪ ಆಯುಕ್ತ ಭೀಮಾಶಂಕರ ಗುಳೇದ ಹಾಗೂ ಸಮಾಜ ಸೇವಕ ಸೂರಿ ಮೀರಡೆ ಅವರಿಗೆ ಕರ್ನಾಟಕ ಜಾನಪದ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಟಿ. ತಿಮ್ಮೇಗೌಡ ಅವರು 'ವಿಶ್ವಚೇತನ ಪ್ರಶಸ್ತಿ' ಪ್ರದಾನ ಮಾಡಿದರು.

ಸುದ್ದಿ 2 ನಿಮಿಷ

'ನ್ಯಾಯಾಂಗ ತನಿಖೆ ನಡೆಸಲಿ'

ಬಳ್ಳಾರಿ: 'ಬೊಮ್ಮಾಯಿ ನೇತೃತ್ವದ ಸರ್ಕಾರದ ವಿರುದ್ಧ ಗುತ್ತಿಗೆದಾರರು ಮಾಡಿರುವ ಆರೋಪ ಕುರಿತು ನ್ಯಾಯಾಂಗ ತನಿಖೆ ನಡೆಸಲಿ. ನಮ್ಮ ಅವಧಿಯಲ್ಲಿ ಕಮಿಷನ್ ಪಡೆದಿದ್ದರೆ ಅದನ್ನೂ ತನಿಖೆಗೆ ಒಳಪಡಿಸಲಿ' ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಭಾನುವಾರ ಬಳ್ಳಾರಿಯಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ಸಂಭ್ರಮಾಚರಣೆ ಅಥವಾ ಡ್ಯಾನ್ಸ್ ಮಾಡುವುದರಲ್ಲಿ ಸರ್ಕಾರ ಕಾಲಹರಣ ಮಾಡದೆ ತ್ವರಿತವಾಗಿ ನ್ಯಾಯಾಂಗ ತನಿಖೆಗೆ ಆದೇಶಿಸಲಿ' ಎಂದು ಒತ್ತಾಯಿಸಿದರು.

'ಬಿಜೆಪಿ ಸರ್ಕಾರ ಬಂದು ಮೂರು ವರ್ಷ ಕಳೆದಿದೆ. ನಾವು ಭ್ರಷ್ಟಾಚಾರ ಎಸಗಿದ್ದರೆ ಇಷ್ಟು ವರ್ಷ ಏಕೆ ತನಿಖೆ ನಡೆಸಲಿಲ್ಲ, ಮಲಗಿದ್ದರಾ? ಈಗಲೂ ಏನೆಲ್ಲಾ ತನಿಖೆ ಬೇಕೋ ನಡೆಸಲಿ. ನಾವು ತಪ್ಪು ಮಾಡಿದ್ದರೆ ನೇಣುಹಾಕಲು ಬಳ್ಳಾರಿ ಹಗ್ಗ ಕಳಿಸುತ್ತೇವೆ' ಎಂದು ಸವಾಲೆಸೆದರು.

'ರಾಹುಲ್ ಗಾಂಧಿ ನಡೆಸುತ್ತಿರುವ 'ಭಾರತ್ ಜೋಡೋ' ಯಾತ್ರೆ ಈ ತಿಂಗಳ 30ರಂದು ರಾಜ್ಯ ಪ್ರವೇಶಿಸಲಿದೆ. 21 ದಿನ 510 ಕಿ.ಮೀ ಪಾದಯಾತ್ರೆ ನಡೆಯಲಿದೆ. ಗುಂಡ್ಲುಪೇಟೆ ಬಳಿ ಪ್ರವೇಶಿಸಲಿರುವ ಯಾತ್ರೆ ಬಳ್ಳಾರಿ, ರಾಯಚೂರು ಮೂಲಕ ತೆಲಂಗಾಣಕ್ಕೆ ಹೋಗಲಿದೆ' ಎಂದು ಡಿಕೆಶಿ ವಿವರಿಸಿದರು.

'ಮಹಿಳಾ ಸಬಲೀಕರಣಕ್ಕೆ ಸಹಕಾರ ಸಂಘದ ಕೊಡುಗೆ ಶ್ಲಾಘನೀಯ'

ಬೆಂಗಳೂರು: 'ಮಹಿಳೆಯರೇ ಸಹಕಾರ ಸಂಘಗಳನ್ನು ಮುನ್ನಡೆಸುತ್ತಿರುವುದು ಶ್ಲಾಘನೀಯ' ಎಂದು ವಿಜಯನಗರದ ಆದಿಚುಂಚನಗಿರಿಯ ಶಾಖಾಮಠದ ಸೌಮ್ಯನಾಥ ಸ್ವಾಮೀಜಿ ಹೇಳಿದರು.

ನಗರದ ಲಕ್ಷ್ಮಿ ಮಹಿಳಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಬೆಳ್ಳಿಹಬ್ಬದ ಸಮಾರಂಭದಲ್ಲಿ ಮಾತನಾಡಿದ ಅವರು, 'ಈ ಸಹಕಾರ ಬ್ಯಾಂಕ್ ಗ್ರಾಹಕರಿಗೆ ಸಾಲಸೌಲಭ್ಯದ ಜತೆಗೆ ವಸ್ತು ಪ್ರದರ್ಶನ ಆಯೋಜಿಸಿ, ಸಮಾಜಮುಖಿಯಾದ ಕಾರ್ಯಗಳನ್ನು ಮಾಡುತ್ತಿದೆ. ಯಾವುದೇ ಜಾತಿ ತಾರತಮ್ಯ ಮಾಡದೇ ಸಾಲ ವಿತರಣೆ ಮಾಡುತ್ತಿರುವುದು ಹೆಮ್ಮೆಯ ವಿಚಾರ' ಎಂದು ಹೇಳಿದರು.

ಐಪಿಎಸ್ ಅಧಿಕಾರಿ ರಶ್ಮಿ ಮಾತನಾಡಿ, 'ಆರ್ಥಿಕವಾಗಿ ಮಹಿಳೆಯರನ್ನು ಸಬಲೀಕರಣಗೊಳಿಸಲು ಈ ಸಹಕಾರ ಸಂಘ ಶ್ರಮಿಸುತ್ತಿದೆ. 25 ವರ್ಷ ಎಂಬುದು ಮಹತ್ವದ ಮೈಲುಗಲ್ಲು. ಮತ್ತಷ್ಟು ಸಾಧನೆ ತೋರಲಿ' ಎಂದರು.

ಈಸ್ಟ್‌ವೆಸ್ಟ್ ಸಂಸ್ಥೆಯ ರಶ್ಮಿ ರವಿಕಿರಣ್ ಮಾತನಾಡಿ, 'ಮಹಿಳೆಯರು ಯಾವುದೇ ಅಡೆತಡೆ ಬಂದರೂ ಕುಗ್ಗದೇ ಮುಂದಕ್ಕೆ ಸಾಗಬೇಕು. ಸವಾಲುಗಳು ಎದುರಾದರೆ ಕುಗ್ಗಬಾರದು' ಎಂದು ಹೇಳಿದರು.

ಐಪಿಎಸ್ ಅಧಿಕಾರಿ ರಶ್ಮಿ, ವೈದ್ಯಕೀಯ ಕ್ಷೇತ್ರದಿಂದ ಡಾ.ಜಯಂತಿ, ರಕ್ತದಾನ ಸೇವೆ ವಿಭಾಗದಿಂದ ಮಧುರ ಅಶೋಕ್ ಕುಮಾರ್, ಶೈಕ್ಷಣಿಕ ಕ್ಷೇತ್ರದಿಂದ ರಶ್ಮಿ ರವಿಕಿರಣ್, ಚಲನಚಿತ್ರ ನಟಿ ರೇಖಾ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು. ಬೆಳ್ಳಿಹಬ್ಬದ ಅಂಗವಾಗಿ ಹೊರತರಲಾದ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ದೂರ ಶಿಕ್ಷಣ: ಅರ್ಜಿ ಆಹ್ವಾನ

ಬೆಂಗಳೂರು: ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಜುಲೈ ಆವೃತ್ತಿಗೆ ಯುಜಿಸಿ ಅನುಮೋದಿತ ಶಿಕ್ಷಣ ಕ್ರಮಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಬಿ.ಎ, ಬಿ.ಕಾಂ, ಬಿಎಸ್ಸಿ, ಬಿಬಿಎ, ಬಿಸಿಎ, ಬಿ.ಲಿಬ್‌ಐಎಸ್‌ಸಿ, ಎಂ.ಎ, ಎಂ.ಕಾಂ, ಎಂ.ಎಸ್ಸಿ, ಎಂಬಿಎ, ಎಂ.ಲಿಬ್‌ಐಸಿ, ಪಿಜಿ ಸರ್ಟಿಫಿಕೇಟ್, ಡಿಪ್ಲೊಮಾ ಮತ್ತು ಯುಜಿ ಸರ್ಟಿಫಿಕೇಟ್ ಶಿಕ್ಷಣಕ್ಕೆ ಬೆಂಗಳೂರು ಪ್ರಾದೇಶಿಕ ಕೇಂದ್ರದಲ್ಲಿ ಪ್ರವೇಶಾತಿ ಆರಂಭವಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅಕ್ಟೋಬರ್ 31 ಕಡೆಯ ದಿನವಾಗಿದೆ.

www/ksoumysuru.ac.inನಲ್ಲಿ ವಿವರ ನೀಡಲಾಗಿದೆ. ಬಿಪಿಎಲ್ ಕಾರ್ಡ್‌ದಾರರು, ಮಹಿಳಾ ಅಭ್ಯರ್ಥಿಗಳು, ಮಾಜಿ ಸೈನಿಕರಿಗೆ, ಆಟೊ ಮತ್ತು ಕ್ಯಾಬ್ ಚಾಲಕರ ಮಕ್ಕಳಿಗೆ ಬೋಧನಾ ಶುಲ್ಕದಲ್ಲಿ ರಿಯಾಯಿತಿ ಇದೆ. ಕೋವಿಡ್‌ನಿಂದ ಮೃತಪಟ್ಟವರು, ಅಂಧರು, ತೃತೀಯ ಲಿಂಗಿ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ಪೂರ್ಣ ವಿನಾಯಿತಿ ಇದೆ ಎಂದು ಪ್ರಾದೇಶಿಕ ನಿರ್ದೇಶಕ ಎಚ್‌.ಎನ್‌.ಗಿರೀಶ್ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ ಹೊಂಗಸಂದ್ರದಲ್ಲಿನ ಕಚೇರಿ ಅಥವಾ ದೂರವಾಣಿ ಸಂಖ್ಯೆ 080-23158888, 9448668880, 9538733169, 7483783174 ಸಂಪರ್ಕಿಸಬಹುದು ಎಂದು ವಿವರಿಸಿದ್ದಾರೆ.

ಬ್ರಿಟನ್‌ನ ರಾಣಿ ಭೇಟಿ ಮಾಡಿದ್ದ ನಗರದ ಹೆಡ್ವಿಗ್ ರೆಗೋ

'ಕೈಕುಲುಕಿ, ನಸು ನಕ್ಕಿದ್ದರು ಎಲಿಜಬೆತ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರಿಟನ್‌ನ ರಾಣಿಯಾಗಿದ್ದ ಎರಡನೇ ಎಲಿಜಬೆತ್ ಅವರನ್ನು ಕಣ್ತುಂಬಿಕೊಳ್ಳುವ ಅವಕಾಶ 1997ರಲ್ಲಿ ಒದಗಿಬಂದಿತ್ತು. ಅವರು ನಸು ನಗುತ್ತಾ, ಕೈಕುಲುಕಿದ ಆ ಕ್ಷಣಗಳು ಇಂದಿಗೂ ಕಣ್ಣಮುಂದೆ ಹಾಗೆಯೇ ಇವೆ. ಆ ದಿನ ನನ್ನ ಜೀವನದ ಅತ್ಯಂತ ಮಹತ್ವದ ದಿನಗಳಲ್ಲಿ ಒಂದಾಗಿದೆ'.

ಇವು ನಗರದಲ್ಲಿ ನೆಲೆಸಿರುವ ಆಂಗ್ಲೋ ಇಂಡಿಯನ್ ಸಮುದಾಯದ ಹೆಡ್ವಿಗ್ ರೆಗೋ ಅವರ ಮನದಾಳದ ಮಾತುಗಳು. 1937ರಲ್ಲಿ ಜನಿಸಿದ ಇವರು, ತಮ್ಮ ಸಾಮಾಜಿಕ ಕಾರ್ಯಗಳ ಮೂಲಕ ಗುರುತಿಸಿಕೊಂಡಿದ್ದರು. 1997ರಲ್ಲಿ ನಾಮನಿರ್ದೇಶಿತ ಸದಸ್ಯರಾಗಿ ಲೋಕಸಭೆಗೆ ಪ್ರವೇಶಿಸಿದ್ದರು. ಈ ಅವಧಿಯಲ್ಲಿ ಅವರಿಗೆ ಕ್ವೀನ್ ಎಲಿಜಬೆತ್ ಭೇಟಿ ಮಾಡುವ ಅವಕಾಶ ದೊರೆತಿತ್ತು. 85 ವರ್ಷದ ಅವರು, ಭೇಟಿಯ ಕ್ಷಣಗಳನ್ನು 'ಪ್ರಜಾವಾಣಿ' ಜತೆಗೆ ಹಂಚಿಕೊಂಡರು.

ಹೆಡ್ವಿಗ್ ರೆಗೋ

'ತಳ ಸಮುದಾಯದವರ ಕಲ್ಯಾಣಕ್ಕಾಗಿ ನಾನು ಶ್ರಮಿಸಿದೆ. ಸ್ತನ ಕ್ಯಾನ್ಸರ್ ಜಯಿಸಿದ ನಾನು, ಈ ಕಾಯಿಲೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನೂ ಮಾಡಿದೆ. ಚೆನ್ನೈನಲ್ಲಿ ಸ್ನಾತಕೋತ್ತರ ಪದವಿ ಪಡೆದು, 1977ರಿಂದ 1997ರ ವರೆಗೆ ಬೆಂಗಳೂರಿನ ದಿ ಫ್ರಾಂಕ್ ಆಂಥೋನಿ ಪಬ್ಲಿಕ್ ಸ್ಕೂಲ್‌ನಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದೆ. ನನ್ನ ಸಾಮಾಜಿಕ ಕಾರ್ಯಗಳನ್ನು ಗುರುತಿಸಿದ ಅಂದಿನ ಪ್ರಧಾನಿ ಎಚ್‌.ಡಿ. ದೇವೇಗೌಡ, ಲೋಕಸಭೆಗೆ ನಾಮನಿರ್ದೇಶನ ಮಾಡಿದರು. ಇದರಿಂದಾಗಿ ಸಂಸತ್ತು ಪ್ರವೇಶಿಸುವ ಅವಕಾಶ ದೊರೆಯಿತು. ಎಲಿಜಬೆತ್ ಅವರು ಭಾರತಕ್ಕೆ ಭೇಟಿ ನೀಡಿದಾಗ, ಸಂಸತ್ತಿಗೆ ಅತಿಥಿಯಾಗಿ ಬಂದಿದ್ದರು' ಎಂದರು.

'ಬ್ಯಾಂಕ್ವೆಟ್ ಹಾಲ್‌ನಲ್ಲಿ ಅವರ ಎದುರಿಗೆ ಕುಳಿತುಕೊಂಡಿದ್ದೆ. ಅವರನ್ನು ನೋಡುತ್ತಿದ್ದರೆ ನಮ್ಮನ್ನೇ ನಾವು ಮರೆಯುತ್ತೇವೆ. ಅವರು ಬ್ಯಾಂಕ್ವೆಟ್ ಹಾಲ್‌ನಲ್ಲಿ ಇದ್ದಷ್ಟು ಹೊತ್ತು ಅವರ ಚಲನವಲನವನ್ನೇ ಗಮನಿಸುತ್ತಿದ್ದೆವು. ಆ ವೇಳೆ ಅವರು ಎಲ್ಲ ಸಂಸದರಿಗೆ ಶುಭಹಾರೈಸಿದರು. ಅವರ ಜತೆಗೆ ವೈಯಕ್ತಿಕವಾಗಿ ಮಾತುಕತೆ ನಡೆಸಬೇಕು ಅಂದುಕೊಂಡೆ. ಆದರೆ, ಅವರಿಗೆ ಸಮಯಾವಕಾಶ ಇಲ್ಲದಿದ್ದರಿಂದ ಸಾಧ್ಯವಾಗಲಿಲ್ಲ' ಎಂದು ನೆನಪಿಸಿಕೊಂಡರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banaswadi

BDA SITE for Sale at O.M.B.R. Layout Near Banasavadi 20x30 North facing please contact: 9449003779

PUBLIC NOTICE

PUBLIC NOTICE

Notice is hereby given that my clients are negotiating to purchase all that residential site/land and buildings comprised in No.32 (erstwhile Nos.125 & 126), "Pushpanjali", 6th Cross Road, Rajamahal Vilas Extension, Bangalore-08 (Schedule Property hereinbelow).

Whereas **Mrs. Radhika Yathin** has claimed to be the sole and absolute owner thereof.

All persons having any claim, right, title, interest, ownership, etc. of any nature etc, in the Schedule Property, either by way of sale, exchange, mortgage, charge, lien, gift, trust, maintenance, inheritance, possession, lease, license, easement or otherwise of whatsoever nature, howsoever, are hereby requested to make known the same in writing, to the undersigned, together with the documentary evidence in support thereof **WITHIN A PERIOD OF 10 DAYS** from the date of publication hereof, failing which such claim/s or objections, if any, shall be considered as waived and/or discharged forever. My client will proceed to conclude the negotiations and based thereon proceed to acquire the Schedule Property from the aforesaid person, and no claims shall be entertained thereafter.

SCHEDULE PROPERTY

All that piece and parcel of residential site with residential house named "Pushpanjali" having a plinth area of 4,260 sq.ft, cottage with plinth area of 1,152 sq.ft, detached garage, well and pump house, comprised in **No.32 (erstwhile Nos.125 & 126), 6th Cross Road, Rajamahal Vilas Extension, Bangalore-560080**, having PID No.99-22-32, allotted by the BBMP, measuring East-West (136'+136')/2, North-South (136'6"+156'3")/2, together with all rights, appurtenances whatsoever whether underneath above the surface and bounded on:

East By : Site Nos. 133 & 134
West By : 6th Cross Road
North By : Site Nos. 127 & 132
South By : 9th Main Road

Yovini Rajesh Rohra,
Advocate
Chanderkumar and Associates
No.510, 4th Floor, Oxford Towers
139, Old Airport Road, Kodihalli,
Bangalore-560008.
Ph: +91 9845016471

PUBLIC NOTICE

Notice is hereby given that my clients are negotiating to purchase a strip of vacant land bearing No.33/2, 6th Cross Road, Rajamahal Vilas Extension, Bangalore-08 carved out of erstwhile Site Nos.125 & 126 and abutting erstwhile Plot No.134, at Rajamahal Vilas Extension, Bangalore-80 (Schedule Property hereinbelow).

Whereas **Smt. Indira Bipin Patel** has claimed to be the sole and absolute owner thereof.

All persons having any claim in respect of, against or to the Schedule Property by way of sale, exchange, mortgage, charge, lien, gift, trust, maintenance, inheritance, possession, lease, license, easement or otherwise of whatsoever nature, howsoever, are hereby requested to make known the same in writing, to the undersigned, together with the documentary evidence in support thereof **WITHIN A PERIOD OF 10 DAYS** from the date of publication hereof, failing which such claim/s or objections, if any, shall be considered as waived and/or discharged forever. My client will proceed to conclude the negotiations and based thereon proceed to acquire the Schedule Property from the aforesaid persons, and no claims shall be entertained thereafter.

SCHEDULE PROPERTY

All that piece and parcel of a strip of vacant land bearing **No.33/2, 6th Cross Road, Rajamahal Vilas Extension, Bangalore-08** carved out of erstwhile Site Nos.125 & 126, and abutting erstwhile Plot No.134, at Rajamahal Vilas Extension, Bangalore-80, having PID No. 99-22-32/2, allotted by the BBMP, measuring East to West 13 feet and North to South 74 feet, together with all rights, appurtenances whatsoever whether underneath above the surface and bounded on:

East By : Erstwhile Plot No.134 of Smt.Indira Bipin Patel
West By : No.32 (erstwhile Nos.125 & 126)
North By : No.32 (erstwhile Nos.125 & 126)
South By : 9th Main Road

Yovini Rajesh Rohra,
Advocate
Chanderkumar and Associates
No.510, 4th Floor, Oxford Towers
139, Old Airport Road, Kodihalli,
Bangalore-560008.
Ph: +91 9845016471

JOB OPPORTUNITIES

Multiple Vacancy

A REPUTED developer company in Mysore is looking for Marketing Manager, Marketing Executive and Telecallers and Office Boy (Class-7). Attractive salary, any degree. 7483442527, 8088546307

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

EDUCATION CORNER

2nd PU Failed?

Don't be left behind!

A golden opportunity to study degree under Bangalore University this academic year and save one precious year of your life.

BBA B.Com BCA BA

Limited seats. For admissions call:

2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:

7846000222

BUSINESS

Business Offers

Finance

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

OPPORTUNITY FOR Retired Officials, Bankers, Professionals, Teachers, Homemakers, CAs. Work part time/ full time. Earn unlimited income. Please call: 9008403686/ 9945114828.

PERSONAL

Change of Name

I, SAROJA Nanjundegowda, Residing at No.5093, Manjunatha Nilaya, 2nd Cross, Ravindranagar, Hassan-573201 have changed my name to SAROJA MAKANAHALLI NANJEGOWDA vide affidavit dated 10.09.2022 sworn beforenotary: R.Raghunath Rao, Benagaluru

Book Your Classifieds Ads
Online Log in to
dhclassifieds.com

DH Deccan Herald | ಪ್ರಜಾವಾಣಿ

Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

ಕುಂದು ಕೊರತೆ

ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

'ಅಪಾಯ ಆಹ್ವಾನಿಸುವ ವಿದ್ಯುತ್ ಬಾಕ್ಸ್'

ಕಾಳಿದಾಸ ಮಾರ್ಗದಲ್ಲಿರುವ ಪಾದಚಾರಿ ಮಾರ್ಗದಲ್ಲಿ ಅಳವಡಿಸಿರುವ ವಿದ್ಯುತ್ ಬಾಕ್ಸ್ ಅಪಾಯಕಾರಿ ಸ್ಥಳದಲ್ಲಿದೆ. ಈ ಬಾಕ್ಸ್‌ನ ಬಾಗಿಲು ತೆರೆದಿದ್ದು, ಅಪಾಯವನ್ನು ಆಹ್ವಾನಿಸುತ್ತಿದೆ. ಪ್ರತಿನಿತ್ಯ ಈ ಮಾರ್ಗದಲ್ಲಿ ವಿದ್ಯಾರ್ಥಿಗಳು ಸೇರಿದಂತೆ ಸಾವಿರಾರು ಜನ ಸಂಚರಿಸುತ್ತಾರೆ. ಆಕಸ್ಮಿಕವಾಗಿ ಯಾರಾದರೂ ಬಾಕ್ಸ್ ಸ್ಪರ್ಶಿಸಿದರೆ ವಿದ್ಯುತ್ ಅವಘಡ ಸಂಭವಿಸುವ ಸಾಧ್ಯತೆ ಇದೆ. ಅವಘಡ ಸಂಭವಿಸುವ ಮುನ್ನ ಬೆಸ್ಕಾಂ ಅಧಿಕಾರಿಗಳು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಮಳೆಗಾಲ ಇರುವುದರಿಂದ ನೀರು ತೆರೆದ ಬಾಕ್ಸ್‌ನೊಳಗೆ ಹೋದರೂ ವಿದ್ಯುತ್ ಅವಘಡ ಸಂಭವಿಸುವ ಸಾಧ್ಯತೆ ಇದೆ.

–ಶಿವಪ್ರಸಾದ್, ಸ್ಥಳೀಯ ನಿವಾಸಿ



ಕಾಳಿದಾಸ ಮಾರ್ಗದಲ್ಲಿರುವ ವಿದ್ಯುತ್ ಬಾಕ್ಸ್.

'ನೀರಿನ ಸಂಪರ್ಕ ಕಲ್ಪಿಸಲು ಆಗ್ರಹ'

ಚಾಮರಾಜಪೇಟೆ ಕ್ಷೇತ್ರದ ವ್ಯಾಪ್ತಿಯ ಗೂಡ್ಸ್‌ಶೆಡ್ ರಸ್ತೆಯಲ್ಲಿ ಇತ್ತೀಚೆಗೆ ವೈಟ್‌ಟಾಪಿಂಗ್ ಕಾಮಗಾರಿ ಮುಕ್ತಾಯಗೊಂಡಿದೆ. ನೀರಿನ ಪೈಪ್‌ಗಳನ್ನು ಅಳವಡಿಸಲು ಸ್ಥಳ ಗುರುತಿಸಲಾಗಿತ್ತು. ಆದರೆ, ನೀರಿನ ಸಂಪರ್ಕ ಕಲ್ಪಿಸಿಲ್ಲ. ಕಾಮಗಾರಿ ಮುಗಿದು ನಾಲ್ಕು ತಿಂಗಳು ಕಳೆದರೂ ಅಧಿಕಾರಿಗಳು ಇನ್ನೂ ಗಮನಹರಿಸಿಲ್ಲ. ಈ ಸಂಬಂಧ ಬಿಬಿಎಂಪಿ ಅಧಿಕಾರಿಗಳನ್ನು ಪ್ರಶ್ನಿಸಿದರೆ ನೀರಿನ ಸಂಪರ್ಕ ಕಲ್ಪಿಸುವುದು ಜಲಮಂಡಳಿಯ ಕೆಲಸ ಎಂದು ಅವರತ್ತ ಬೆರಳು ಮಾಡುತ್ತಿದ್ದಾರೆ. ಆದರೆ, ವೈಟ್ ಟಾಪಿಂಗ್ ಕಾಮಗಾರಿ ಮಾಡಿದವರೇ ನೀರಿನ ಸಂಪರ್ಕ ಕಲ್ಪಿಸಬೇಕು ಎಂದು ಜಲಮಂಡಳಿ ಅಧಿಕಾರಿಗಳು ಅವರತ್ತ ಬೊಟ್ಟು ಮಾಡುತ್ತಿದ್ದಾರೆ. ಈ ಇಬ್ಬರ ಗೊಂದಲದ ಹೇಳಿಕೆಯಿಂದ ಜನರು ಸಮಸ್ಯೆಯನ್ನು ಎಲ್ಲಿ ಹೇಳಬೇಕೆಂದು ತಿಳಿಯದೆ ನೀರಿನ ಸಂಪರ್ಕಕ್ಕಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ.

–ಎಸ್ ಪ್ರಭಾಕರ್, ಚಾಮರಾಜಪೇಟೆ

'ರಸ್ತೆಯಲ್ಲೇ ಹರಿಯುವ ಚರಂಡಿ ನೀರು'

ಹೊಸಕೆರೆಹಳ್ಳಿ 7ನೇ ಮುಖ್ಯ ರಸ್ತೆಯಲ್ಲಿ ಮೋರಿ ಮುಚ್ಚಿರುವ ಕಾರಣ ರಸ್ತೆಯಲ್ಲಿ ಚರಂಡಿ ನೀರು ಹರಿಯುತ್ತಿದೆ. ವಿದ್ಯಾರ್ಥಿಗಳು, ಮಕ್ಕಳು, ವೃದ್ಧರು ಮಹಿಳೆಯರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಿಬಿಎಂಪಿ ಈ ವಾರ್ಡ್‌ನ್ನು ನಿರ್ಲಕ್ಷ್ಯ ಮಾಡುತ್ತಿದೆ.

ಎಸ್‌.ಕೆ. ರಮೇಶ, ಹೊಸಕೆರೆ ಹಳ್ಳಿ ನಿವಾಸಿ

ರಸ್ತೆಯಲ್ಲಿ ಹರಿಯುವ ಚರಂಡಿ ನೀರು

ಬಸವನಗುಡಿಯ ಕನಕಪುರ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಾರು ಪಾರ್ಕ್ ಮಾಡಿರುವುದು

'ರಸ್ತೆ ದುರಸ್ತಿಗೊಳಿಸಿ'

ಬೆಂಗಳೂರು ಪೂರ್ವ ತಾಲ್ಲೂಕಿನ ಹೊರಮಾವು-ಕಲ್ಕೆರೆ ಬಳಿಯ ಬಂಜಾರ ಬಡಾವಣೆಯ ಓಂ ಶಕ್ತಿ ದೇವಾಲಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗೆ ಡಾಂಬರು ಹಾಕಿ ವರ್ಷಗಳೇ ಕಳೆದಿವೆ. ಅಲ್ಲಿನ ಅಡ್ಡರಸ್ತೆಯೊಂದರ ಮೋರಿಗೆ ನಿರ್ಮಿಸಿರುವ ಕಲ್ವರ್ಟ್‌ಗೆ ಜಲ್ಲಿ ಕಲ್ಲು ಹಾಕಲಾಗಿದೆ. ಇದರಿಂದ ದ್ವಿಚಕ್ರ ವಾಹನ ಸವಾರರಿಗೆ ತೊಂದರೆಯಾಗಿದ್ದು, ಅಪಘಾತಗಳು ಸಂಭವಿಸುತ್ತಿವೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು ಮತ್ತು ವೃದ್ಧರು ಓಡಾಡುವುದು ದುಸ್ತರವಾಗಿದೆ. ಬಿಬಿಎಂಪಿ ಕೂಡಲೇ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

–ಬೆನಕನಹಳ್ಳಿ ಶೇಖರ್ ಗೌಡ, ಬಿ.ಜಿ. ಸಿಂಚನಾ ಈಶ್ವರ್, ಓಂಶಕ್ತಿ ಬಡಾವಣೆ, ಹೊರಮಾವು

ಓಂಶಕ್ತಿ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಜಲ್ಲಿ ಕಲ್ಲು ಹಾಕಿರುವುದು.

'ಪಾದಚಾರಿ ಮಾರ್ಗ ಅತಿಕ್ರಮಣ'

ಬಸವನಗುಡಿಯ ಕನಕಪುರ ರಸ್ತೆಯಲ್ಲಿರುವ ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿ ಕಾರುಗಳನ್ನು ಪಾರ್ಕಿಂಗ್ ಮಾಡಲಾಗುತ್ತಿದ್ದು, ಜೀವ ಕೈಯಲ್ಲಿ ಹಿಡಿದುಕೊಂಡು ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಚಾರ ಪೊಲೀಸರು ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು.

–ಬಿ ಎಸ್ ಮನೋಹರ್, ಬಸವನಗುಡಿ.

ಸೆ.25ಕ್ಕೆ ಬಾಗಿಲು ಮುಚ್ಚಲಿದೆ 45 ವರ್ಷಗಳ ಹಳೆಯ ಹೋಟೆಲ್

ಸಾಮ್ರಾಟ್ ಹೋಟೆಲ್ ಸೆ.25ಕ್ಕೆ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮ್ರಾಟ್(ಚಾಲುಕ್ಯ) ಹೋಟೆಲ್‌ನ ಮಸಾಲೆ ದೋಸೆ, ರವಾ ಇಡ್ಲಿಗೆ ವಿದಾಯ ಹೇಳುವ ಕಾಲ ಈಗ ಹತ್ತಿರವಾಗಿದೆ. ಹೋಟೆಲ್‌ನಲ್ಲಿ ಊಟ ಮತ್ತು ತಿಂಡಿ ಸೆಪ್ಟೆಂಬರ್ 25ಕ್ಕೆ ಕೊನೆಗೊಳ್ಳಲಿದೆ.

ವಿಧಾನಸೌಧಕ್ಕೆ ಕೂಗಳತೆ ದೂರದಲ್ಲಿರುವ ಸಾಮ್ರಾಟ್ ಹೋಟೆಲ್ ಎಂದರೆ ರಾಜಕಾರಣಿಗಳು, ಅಧಿಕಾರಿಗಳು, ನೌಕರರು ಆಗಾಗ ಭೇಟಿ ನೀಡುವ ಸ್ಥಳ. ರಾಜಕಾರಣಿಗಳನ್ನು ಹುಡುಕಿಕೊಂಡು ಬರುವ ಜನರಿಗೂ ಇದು ಚಿರಪರಿಚಿತ.

ಬಸವೇಶ್ವರ ವೃತ್ತದಲ್ಲಿ ಈ ಹೋಟೆಲ್ ಇದೆ. ಆದರೆ, ಸಾಮಾನ್ಯವಾಗಿ ಈ ವೃತ್ತಕ್ಕೆ ಚಾಲುಕ್ಯ ವೃತ್ತ ಎಂದೇ ಕರೆಯಲಾಗುತ್ತದೆ. ಇದು ಈ ಹೋಟೆಲ್‌ನ ಜನಪ್ರಿಯತೆಗೆ ಸಾಕ್ಷಿ. ಲೋಕಾಭಿರಾಮವಾಗಿ ಕಾಲ ಕಳೆಯುವ ಹಲವು ಸ್ನೇಹಿತರ ಗುಂಪುಗಳಿಗೆ ಚಾಲುಕ್ಯ ಹೋಟೆಲ್ ಹೊರಾಂಗಣ ಎಂದರೆ ಅಚ್ಚುಮೆಚ್ಚಿನ ತಾಣ. ಅನೌಪಚಾರಿಕ ರಾಜಕೀಯ ಚರ್ಚೆಗಳು, ವ್ಯಾವಹಾರಿಕ ಚರ್ಚೆಗಳೂ ಇಲ್ಲಿ ನಡೆಯುತ್ತಿದ್ದವು.

ಬೆಂಗಳೂರಿನ ಹಳೇ ರೌಡಿಗಳ ಭೇಟಿಯ ತಾಣಗಳಲ್ಲಿ ಈ ಹೋಟೆಲ್ ಕೂಡ ಒಂದಾಗಿತ್ತು. 45 ವರ್ಷಗಳ ಸುದೀರ್ಘ ಪಯಣದಲ್ಲಿ ಈ ಹೋಟೆಲ್ ಹಲವು ಘಟನೆಗಳಿಗೆ ಸಾಕ್ಷಿಯಾಗಿದೆ ಎನ್ನುತ್ತಾರೆ ಇಲ್ಲಿನ ಸಿಬ್ಬಂದಿ.

1977ರಲ್ಲಿ ಆರಂಭವಾದ ಹೋಟೆಲ್ ಅನ್ನು ಈ ಹಿಂದೆ ಲಕ್ಷ್ಮಣ್ ಶಾನಭಾಗ್ ಅವರು ನಡೆಸು-ತ್ತಿದ್ದರು. ಅವರ ನಿಧನದ ಬಳಿಕ ಮಗ ಸಂತೋಷ್ ಮುನ್ನಡೆಸುತ್ತಿದ್ದಾರೆ. 90ಕ್ಕೂ ಅಧಿಕ ಜನ ಕೆಲಸ ಮಾಡುತ್ತಿದ್ದು, ಮಸಾಲೆ ದೋಸೆ, ರವಾ ಇಡ್ಲಿ, ಬಾದಾಮ್ ಹಲ್ವಾ ಈ ಹೋಟೆಲ್‌ನಲ್ಲಿ ಜನರಿಗೆ ಪ್ರಿಯವಾದ ತಿನಿಸುಗಳು.

ಪ್ರತಿದಿನ 3 ಸಾವಿರಕ್ಕೂ ಅಧಿಕ ಮಂದಿ ಈ ಹೋಟೆಲ್‌ಗೆ ಭೇಟಿ ನೀಡುತ್ತಾರೆ. ವಾರಾಂತ್ಯದಲ್ಲಿ ಈ ಸಂಖ್ಯೆ 5 ಸಾವಿರ ದಾಟುತ್ತದೆ. ಹೋಟೆಲ್‌ನಲ್ಲಿ ಕೂತು ತಿನ್ನುವ ಜತೆಗೆ ಹೊರಾಂಗಣದಲ್ಲಿ ಕಾರಿನಲ್ಲಿ ಮತ್ತು ಲೋಕಾಭಿರಾಮವಾಗಿ ನಿಲ್ಲುವ ಜನರಿಗೂ ತಿನಿಸು ಮತ್ತು ಕಾಫಿ ಪೂರೈಸಲಾ-ಗುತ್ತದೆ. ಅದಕ್ಕೆಂದೇ ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಸೆ.14ರಿಂದ ಹೋಟೆಲ್‌ನಲ್ಲಿ ಉತ್ತರ ಭಾರತದ ಶೈಲಿಯ ಊಟ–ತಿಂಡಿ ಇರುವುದಿಲ್ಲ ಎಂಬ ಫಲಕವನ್ನು ಹಾಕಲಾಗಿದೆ. ಈ ತಿನಿಸುಗಳಿಗೆ ವಸಂತನಗರದಲ್ಲಿ ಆರಂಭವಾಗಿರುವ ಮಿನಿ ಸಾಮ್ರಾಟ್ ಹೋಟೆಲ್ ಸಂಪರ್ಕಿಸಬಹುದು ಎಂದು ತಿಳಿಸಲಾಗಿದೆ. ವಸತಿ ವ್ಯವಸ್ಥೆ ಮುಂದುವರಿಯಲಿದೆ ಎಂದು ಸಿಬ್ಬಂದಿ ಹೇಳಿದರು.

ಸೆ.14ರಿಂದ ಉತ್ತರ ಭಾರತದ ಶೈಲಿಯ ಊಟ ಇರುವುದಿಲ್ಲ ಎಂದು ಸಾಮ್ರಾಟ್ ಹೋಟೆಲ್ ಮುಂಭಾಗದಲ್ಲಿ ಹಾಕಿರುವ ಫಲಕ ನೋಡುತ್ತಿರುವ ಗ್ರಾಹಕ –ಪ್ರಜಾವಾಣಿ ಚಿತ್ರ

ಗುತ್ತಿಗೆ ಅವಧಿ ಮುಕ್ತಾಯ

‘ಕಟ್ಟಡದ ಮಾಲೀಕರೊಂದಿಗೆ ಮಾಡಿಕೊಂಡಿದ್ದ ಗುತ್ತಿಗೆ ಅವಧಿ ಮುಕ್ತಾಯವಾಗಿದ್ದರಿಂದ ಹೋಟೆಲ್ ಮುಚ್ಚಲಾಗುತ್ತಿದೆ. ಬೇರೆ ಕಡೆಗೆ ಸ್ಥಳಾಂತರ ಆಗುತ್ತಿರುವ ಯಾವುದೇ ಮಾಹಿತಿ ಇಲ್ಲ. ಬೇರೆ ಕಡೆ ಕೆಲಸ ನೋಡಿಕೊಳ್ಳಬೇಕಾದ ಅನಿವಾರ್ಯ ಇದೆ’ ಎಂದು ಸಿಬ್ಬಂದಿ ಬೇಸರದಿಂದ ಹೇಳುತ್ತಾರೆ.

ಹೋಟೆಲ್ ಮುಚ್ಚುತ್ತಿರುವುದು ಆಗಾಗ ಹೋಟೆಲ್‌ಗೆ ಬರುವ ಜನರ ಬೇಸರಕ್ಕೂ ಕಾರಣವಾಗಿದೆ. ‘ವಿಧಾನಸೌಧದಲ್ಲಿ ಯಾವುದೇ ಕೆಲಸಕ್ಕೆ ಬಂದರೂ ಸಾಮ್ರಾಟ್ ಹೋಟೆಲ್‌ನಲ್ಲಿ ದೋಸೆ ತಿಂದು ಹೋಗುವುದು ವಾಡಿಕೆಯಾಗಿತ್ತು. ಮುಂದಿನ ತಿಂಗಳು ನಾನು ಬರುವಷ್ಟರಲ್ಲಿ ಈ ಹೋಟೆಲ್ ಇರುವುದಿಲ್ಲ. ಈ ಹೋಟೆಲ್‌ನಲ್ಲಿ ಕೊನೆಯ ಮಸಾಲೆ ದೋಸೆ ತಿಂದಿದ್ದೇನೆ’ ಎಂದು ಧಾರವಾಡದಿಂದ ಬಂದಿದ್ದ ಪುರುಷೋತ್ತಮ ಬೇಸರ ವ್ಯಕ್ತಪಡಿಸಿದರು.

‘ಸುಳ್ಳು ಹೇಳಲು ಸ್ಪರ್ಧೆಗೆ ಬಿದ್ದ ಬಿಜೆಪಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಜನಸ್ಪಂದನ ಹೆಸರಿನಲ್ಲಿ ಕಾರ್ಯಕ್ರಮವನ್ನು ಮಾಡಿ, ಸುಳ್ಳೇ ನಮ್ಮ ಸ್ಪಂದನೆ-ಜನರಿಗೆ ಟೋಪಿ ಹೊಲಿಯುವುದೆ ನಮ್ಮ ಸಾಧನೆ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಸಿದ್ದರಾಮಯ್ಯ

‘ದೊಡ್ಡಬಳ್ಳಾಪುರದಲ್ಲಿ ನಡೆದ ಸಮಾವೇಶದ ವೇದಿಕೆಯಲ್ಲಿ ಇದ್ದವರು ಕಾರ್ಯಕ್ರಮದುದ್ದಕ್ಕೂ ಸುಳ್ಳುಗಳನ್ನು ಹೇಳಿದ್ದಾರೆ. ಬಿಜೆಪಿಯವರ ಸುಳ್ಳು ಮಾತುಗಳನ್ನು ಕೇಳಿ ಕುರ್ಚಿಗಳನ್ನು ಅರ್ಧಂಬರ್ಧ ಭರ್ತಿ ಮಾಡಿದ್ದ ಜನರು ಬೇಸರದಿಂದ ಎದ್ದು ಹೊರ ನಡೆದದ್ದು ಕಾಣುತ್ತಿತ್ತು. ಸುಳ್ಳು ಹೇಳುವುದಕ್ಕೆ ಸ್ಪರ್ಧೆಗೆ ಬಿದ್ದವರಂತೆ ವರ್ತಿಸಿದ ಬಿಜೆಪಿಯವರು ಮತ್ತು ಮುಖ್ಯಮಂತ್ರಿ ಕೂಡಲೇ ಕ್ಷಮೆ ಕೇಳಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

‘ಐಎಎಸ್ ಅಧಿಕಾರಿಯಾಗಿದ್ದ ಅನುರಾಗ್ ತಿವಾರಿ ಹಗರಣವೊಂದರ ತನಿಖೆ ಮಾಡುತ್ತಿದ್ದಾಗ, ಯಾರದೋ ಪಿತೂರಿಯಿಂದ ಸಾವಿಗೀಡಾಗಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಈ ಪ್ರಕರಣವನ್ನು ಸಿಬಿಐಗೆ ವಹಿಸಿ ನಾಲ್ಕು ವರ್ಷಗಳಾಗಿವೆ. ತನಿಖೆಯ ಫಲಿತಾಂಶ ಏನೆಂದು ಅವರು ತಿಳಿಸಬೇಕು. ಇಲ್ಲದಿದ್ದರೆ ರಾಜ್ಯದ ಜನರ ಬೇಷರತ್ ಕ್ಷಮೆ ಕೇಳಬೇಕು’ ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

‘ಅನ್ನಭಾಗ್ಯ ಯೋಜನೆಯ ಬಗ್ಗೆ ಹಗುರವಾಗಿ ಮಾತನಾಡಿರುವ ಬೊಮ್ಮಾಯಿ, ಮೋದಿಯವರ ಅಕ್ಕಿಗೆ ಸಿದ್ದರಾಮಯ್ಯನವರ ಚೀಲ ಎಂದು ವ್ಯಂಗ್ಯ ಮಾಡಿದ್ದಾರೆ. ಹಾಗಿದ್ದರೆ, ಆಹಾರ ಇಲಾಖೆಯ ದಾಖಲೆಗಳನ್ನು ಪರಿಶೀಲಿಸಿ ಅಥವಾ ಆರ್ಥಿಕ ಇಲಾಖೆಯ ಅಧಿಕಾರಿಗಳನ್ನು ಕೇಳಿ ಅವರು ಸತ್ಯವನ್ನು ಅವರು ಜನರ ಮುಂದಿಡಬೇಕು’ ಎಂದೂ ಸವಾಲು ಹಾಕಿದ್ದಾರೆ.

‘ಮೋದಿಯವರು ಅಕ್ಕಿ ಕೊಟ್ಟಿದ್ದರೆ ನಮ್ಮ ಕಾಂಗ್ರೆಸ್ ಸರ್ಕಾರ ಯಾಕೆ ಇಷ್ಟೊಂದು ಹಣವನ್ನು ಆಹಾರ ಇಲಾಖೆಯ ವತಿಯಿಂದ ಖರ್ಚು ಮಾಡಬೇಕಾಗಿತ್ತು? ಕಾಂಗ್ರೆಸ್ ಸರ್ಕಾರ ಕೊಡುತ್ತಿದ್ದ ತೊಗರಿಬೇಳೆಯನ್ನು ಬಿಜೆಪಿ ಸರ್ಕಾರ 2020ರ ಏಪ್ರಿಲ್‌ನಿಂದಲೇ ನಿಲ್ಲಿಸಿದೆ. ಈ ಎಲ್ಲ ವಿಚಾರಗಳ ಕುರಿತು ಬೊಮ್ಮಾಯಿಯವರು ಚರ್ಚಿಸಲು ಸಿದ್ಧರಿದ್ದರೆ ನಾನು ಸದನದಲ್ಲೇ ಚರ್ಚಿಸುತ್ತೇನೆ’ ಎಂದೂ ಅವರು ಹೇಳಿದ್ದಾರೆ.

‘ಸಾಧನೆ ಪಟ್ಟಿ ಕೂಡ ಸುಳ್ಳಿನ ಕಂತೆ’

‘ಬಿಜೆಪಿ ಸರ್ಕಾರದ ಸಾಧನೆಯ ಸಮಾವೇಶ ಉತ್ಸವಕ್ಕಿಂತ, ಕೇವಲ ಮುಖ್ಯಮಂತ್ರಿ ಹಾಗೂ 3–4 ಮಂತ್ರಿಗಳ ಉತ್ಸವವಾಗಿ ಕಂಡಿತು. ಮುಖ್ಯಮಂತ್ರಿಗಳು ಹೇಳಿರುವ ಅಲ್ಪ ಸಾಧನೆ ಪಟ್ಟಿ ಕೂಡ ಸುಳ್ಳಿನ ಕಂತೆ’ ಎಂದು ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೆಲೆ ಏರಿಕೆಯಿಂದ ಜನ ಸಾಮಾನ್ಯರು, ಮಹಿಳೆಯರು ಸಂಕಷ್ಟಕ್ಕೆ ಸಿಲುಕಿದ್ದರೂ, ಬೆಂಗಳೂರು ಮುಳುಗುತ್ತಿದ್ದರೂ, ನಿರುದ್ಯೋಗಿ ಯುವಕರು ಆಕ್ರೋಶದಲ್ಲಿದ್ದರೂ ಉತ್ಸವ ಮಾಡಲೇಬೇಕೆಂದು ಬಿಜೆಪಿಯವರು ಈ ಕಾರ್ಯಕ್ರಮ ಮಾಡಿದ್ದಾರೆ. ಸರ್ಕಾರದ ಸಾಧನೆ ಹೇಳುವುದಕ್ಕಿಂತ ಕಾಂಗ್ರೆಸ್ ಟೀಕೆ ಮಾಡಿದ್ದೇ ಹೆಚ್ಚು’ ಎಂದರು.

‘ಯಾವ ಸಾಧನೆ?’

‘ಜನಸ್ಪಂದನ ಎಂಬ ತಮಾಷೆಯ ಹೆಸರಿನ ಸಮಾವೇಶದಲ್ಲಿ ನೀವು(ಬೊಮ್ಮಾಯಿ) ಅಪ್ರಬುದ್ಧವಾಗಿ ಕಿರುಚಾಡಿ, ಬಿಜೆಪಿ ಸರ್ಕಾರದ ಸಾಧನೆಯನ್ನು ಮನೆ ಬಾಗಿಲಿಗೆ ತಲುಪಿಸುತ್ತೇವೆ ಎಂದಿದ್ದೀರಿ. ಯಾವ ಸಾಧನೆಯನ್ನು? ಶೇ 40 ಭ್ರಷ್ಟಾಚಾರದ ಬಗ್ಗೆಯೇ, ಪಠ್ಯ ಪುಸ್ತಕ ತಿರುಚಿದ ಬಗ್ಗೆಯೇ’ ಎಂದು ಕಾಂಗ್ರೆಸ್ ನಾಯಕ ಎಚ್‌.ಸಿ. ಮಹದೇವಪ್ಪ ಪ್ರಶ್ನಿಸಿದ್ದಾರೆ.

‘ಸಿದ್ದರಾಮಯ್ಯ ಎಂದ್ರೆ ಢೋಂಗಿತನ’

ಬೆಂಗಳೂರು: ‘ಸಿದ್ದರಾಮಯ್ಯ ಎಂದರೆ ಢೋಂಗಿತನ, ಹಿಂದೂ ವಿರೋಧಿತನದ ಸಂಕೇತ. ರಾಷ್ಟ್ರ ವಿರೋಧಿ ಶಕ್ತಿಗಳ ಜತೆ ಕೈ ಜೋಡಿಸುವ ಮತ್ತು ಧರ್ಮಗಳನ್ನು ಒಡೆಯುವುದರ ಪ್ರತೀಕ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

‘ಮಂಗಳೂರು ಮತ್ತು ದೊಡ್ಡಬಳ್ಳಾಪುರದಲ್ಲಿ ನಡೆದ ಬಿಜೆಪಿ ಸಮಾವೇಶಗಳಿಗೆ ಸ್ವಯಂಪ್ರೇರಿತರಾಗಿ ಜನ ಸಾಗರ ಹರಿದು ಬಂದಿದ್ದನ್ನು ನೋಡಿ ಸಿದ್ದರಾಮಯ್ಯ ಮಾನಸಿಕ ಸ್ಥಿಮಿತ ಕಳೆದುಕೊಂಡು, ಬಾಯಿಗೆ ಬಂದಂತೆ ಸುಳ್ಳುಗಳ ಮತ್ತು ಆರೋಪಗಳ ನಾಟಕ ಮುಂದುವರಿಸಿದ್ದಾರೆ’ ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ಹೇಳಿದರು.

‘ಅರ್ಕಾವತಿ ಹಗರಣ ಸೇರಿ ವಿವಿಧ ಭ್ರಷ್ಟಾಚಾರ ಹಗರಣಗಳನ್ನು ಬಯಲಿಗೆ ಎಳೆಯಲಿದೆ ಎಂದು ಸರ್ಕಾರ ತಿಳಿಸಿದ ಬಳಿಕ ಸಿದ್ದರಾಮಯ್ಯ ಅವರಿಗೆ ಚಳಿಜ್ವರ ಬಂದಂತಾಗಿದೆ. ಜನರ ಗಮನ ಬೇರೆಡೆ ಸೆಳೆಯಲು ಮತ್ತು ಸದಾ ಪ್ರಚಾರದಲ್ಲಿರಲು ದಿನವೂ ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದಾರೆ’ ಎಂದು ಹೇಳಿದರು.

‘ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ವಾರ್ಥ ರಾಜಕಾರಣಿ ಸಿದ್ದರಾಮಯ್ಯ ಅವರನ್ನು ಜನರು ಸೋಲಿಸಿ ರಾಜಕೀಯವಾಗಿ ಮೂಲೆಗುಂಪಾಗುವಂತೆ ಮಾಡಲಿದ್ದಾರೆ. ಕಾಂಗ್ರೆಸ್ ಕೂಡ ಸಂಪೂರ್ಣ ನೆಲಕಚ್ಚಲಿದೆ. ಟ್ವೀಟ್‌ಗಳು ಮತ್ತು ಹೇಳಿಕೆಗಳ ಮೂಲಕ ಜನರ ಮುಂದೆ ಅಪಹಾಸ್ಯಕ್ಕೆ ಗುರಿಯಾಗಿದ್ದಾರೆ’ ಎಂದು ಲೇವಡಿ ಮಾಡಿದರು.

‘ಜೀವನದಲ್ಲಿ ತೃಪ್ತಿ ಕಂಡುಕೊಳ್ಳುವಿಕೆ ಕಷ್ಟ’

‘ಪ್ರೀತಿಯಿಂದ ರಮೇಶ್ – ಯಶಸ್ಸಿನ ಸರಳ ಸೂತ್ರಗಳು’ ಪುಸ್ತಕ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೀವನದಲ್ಲಿ ತೃಪ್ತಿ ಕಂಡುಕೊಳ್ಳುವುದು ಕಷ್ಟ. ಆಸೆಗಳನ್ನು ಈಡೇರಿಸಿಕೊಂಡಷ್ಟು ಹೊಸ ಆಸೆಗಳು ಉದ್ಭವಿಸುತ್ತವೆ’ ಎಂದು ಚಲನಚಿತ್ರ ನಟ ರಮೇಶ್ ಅರವಿಂದ್ ತಿಳಿಸಿದರು.

ಸಾವಣ್ಣ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯ-ಕ್ರಮದಲ್ಲಿ ಅವರ ‘ಪ್ರೀತಿಯಿಂದ ರಮೇಶ್-ಯಶಸ್ಸಿನ ಸರಳ ಸೂತ್ರಗಳು’ ಪುಸ್ತಕ ಬಿಡುಗಡೆಯಾಯಿತು. ‘ಜೀವನದ ವಿವಿಧ ಹಂತಗಳಲ್ಲಿ ಮನುಷ್ಯನ ಆಸೆಗಳು ಮತ್ತು ಆದ್ಯತೆಗಳು ಬದಲಾಗುತ್ತಾ ಹೋಗುತ್ತವೆ. ಕೊನೆಗೆ ನೆಮ್ಮದಿಯೇ ಸಾಕು ಅನ್ನಿಸಿಬಿಡುತ್ತದೆ. ನನ್ನ ಬದುಕೂ ಇದಕ್ಕೆ ಹೊರತಾಗಿಲ್ಲ. ಆದರೆ, ಯಾವುದೇ ಅಚ್ಚರಿಯ ವಿಷಯಗಳು ನಮ್ಮ ಅರಿವಿಗೆ ಬಂದಾಗ, ಥಟ್ ಅಂತ ನಮ್ಮವರಿಗೆ ಹೇಳುವುದು ಎಲ್ಲರ ಸ್ವಭಾವ. ಅಂತಹ ಆಸಕ್ತಿಕರ ವಿಷಯಗಳನ್ನು ನಾನೂ ಈ ಕೃತಿಯ ಮೂಲಕ ಹೇಳುತ್ತಿದ್ದೇನೆ’ ಎಂದು ರಮೇಶ್ ಹೇಳಿದರು.

‘ನಾನು ಚಿಕ್ಕವಯಸ್ಸಿನಿಂದ ಈವರೆಗೆ ಓದಿದ, ಕೇಳಿದ ಹಾಗೂ ನೋಡಿದ ಕೆಲವು ಸಣ್ಣ-ಪುಟ್ಟ ಘಟನೆಗಳನ್ನು ಈ ಪುಸ್ತಕದಲ್ಲಿ ಬರೆದಿದ್ದೇನೆ. ಒಬ್ಬರಿಗೆ ಒಳ್ಳೆಯದು ಅನ್ನಿಸಿದ್ದು, ಬೇರೆಯವರಿಗೆ ಹೇಳಿಕೊಳ್ಳುವವರೆಗೆ ನಮಗೆ ಸಮಾಧಾನ ಇರುವುದಿಲ್ಲ. ಹೀಗಾಗಿ, ನಾನು ಕೆಲವು ಒಳ್ಳೆಯ ವಿಷಯಗಳನ್ನು ಪುಸ್ತಕದಲ್ಲಿ ಹಂಚಿಕೊಂಡಿದ್ದೇನೆ’ ಎಂದು ತಿಳಿಸಿದರು.

ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಚಲನಚಿತ್ರ ನಟ ಅನಂತ್ ನಾಗ್, ‘ಮನುಷ್ಯ ಜೀವನದಲ್ಲಿ ಹೇಗಿರಬೇಕು ಎಂಬುದನ್ನು ತಿಳಿದುಕೊಳ್ಳಬೇಕಾದರೆ ಈ ಪುಸ್ತಕ ಓದಬೇಕು. ಕಾಲೇಜು ವಿದ್ಯಾರ್ಥಿಗಳಿಗೆ ಈ ಪುಸ್ತಕ ಕೈಪಿಡಿ ಆಗಬೇಕು. ರಮೇಶ್ ಒಬ್ಬ ಸಾಧಕ ಎಂಬುದರಲ್ಲಿ ಯಾವುದೇ ಅನುಮಾನ ಇಲ್ಲ. ನಾವಿಬ್ಬರು ಒಟ್ಟಾಗಿ ಸಿನಿಮಾ ಮಾಡುವಾಗ ಸೆಟ್‌ನಲ್ಲಿ ಕೆಲವು ಸಣ್ಣ ಪುಟ್ಟ ಲೋಪದೋಷಗಳು ಸಂಭವಿಸಿದರೆ, ಆ ಬಗ್ಗೆ ಅವರು ಸಿಟ್ಟಾಗುತ್ತಿರಲಿಲ್ಲ’ ಎಂದು ಹಳೆಯ ದಿನಗಳನ್ನು ಸ್ಮರಿಸಿಕೊಂಡರು.

‘ನೈತಿಕತೆ ಮೌಲ್ಯಗಳ ಮಾರ್ಗದರ್ಶನ ನೀಡುವ ಕೈಪಿಡಿಯನ್ನು ರಮೇಶ್ ಅರವಿಂದ್ ತಮ್ಮ ಕೃತಿಯ ಮೂಲಕ ನೀಡಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾವಣ್ಣ ಪ್ರಕಾಶನದ ಪ್ರಕಾಶಕ ಜಮೀಲ್, ‘ಪುಸ್ತಕದ ಎಲ್ಲ ಪತ್ರಿಗಳು ಮಾರಾಟವಾಗಿದ್ದು, ಶೀಘ್ರದಲ್ಲೇ ಎರಡನೇ ಮುದ್ರಣ ಮಾಡಲಾಗುವುದು’ ಎಂದು ಹೇಳಿದರು.



ಅನಂತ್ ನಾಗ್ ಅವರು (ಮಧ್ಯದವರು) ರಮೇಶ್ ಅರವಿಂದ್ ಅವರ (ಎಡದಿಂದ ಎರಡನೇಯವರು) ‘ಪ್ರೀತಿಯಿಂದ ರಮೇಶ್–ಯಶಸ್ಸಿನ ಸರಳ ಸೂತ್ರಗಳು’ ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಜೀ ಕನ್ನಡ ವಾಹಿನಿಯ ಬಿಸಿನೆಸ್ ಹೆಡ್ ರಾಘವೇಂದ್ರ ಹುಣಸೂರ್, ಪತ್ರಕರ್ತ ಜೋಗಿ ಹಾಗೂ ಜಮೀಲ್ ಸಾವಣ್ಣ ಇದ್ದಾರೆ – ಪ್ರಜಾವಾಣಿ ಚಿತ್ರ

ನೂರು ಶಾಲೆಗೆ ನೂರು ಪುಸ್ತಕ

ಬೆಂಗಳೂರು: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ವತಿಯಿಂದ ಸೆಪ್ಟೆಂಬರ್ ಕೊನೆಯ ವಾರದಲ್ಲಿ ಶಿವಮೊಗ್ಗ ಜಿಲ್ಲೆಯ ಆಯ್ದ 100 ಸರ್ಕಾರಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಉಚಿತವಾಗಿ 100 ಪುಸ್ತಕಗಳನ್ನು ವಿತರಿಸಲಾಗುವುದು.

ಮಕ್ಕಳ ಜ್ಞಾನವಿಕಾಸಕ್ಕೆ ಪೂರಕವಾದ ಯಾವುದೇ ವಿಷಯಕ್ಕೆ ಸಂಬಂಧಿಸಿದ ಮಕ್ಕಳ ಪುಸ್ತಕಗಳನ್ನು ಬರಹಗಾರರು, ಪ್ರಕಾಶಕರು, ಸಂಘ–ಸಂಸ್ಥೆಗಳು, ಅಕಾಡೆಮಿಗಳು, ಪ್ರಸ್ತಕ ಪ್ರಾಧಿಕಾರ, ವಿಶ್ವವಿದ್ಯಾಲಯದ ಪ್ರಸಾರಾಂಗ, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಆಸಕ್ತ ದಾನಿಗಳು ಪುಸ್ತಕಗಳನ್ನು ಉಚಿತವಾಗಿ ನೀಡಬೇಕು ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿ: 9448753991

StockHolding®

ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿಮಿಟೆಡ್

ಸಿಐಎನ್: U67190MH1986GOI040506

ನೋಂದಾಯಿತ ಕಚೇರಿ: 301, ಸೆಂಟರ್ ಪಾಯಿಂಟ್, ಡಾ. ಬಾಬಾಸಾಹೇಬ ಅಂಬೇಡ್ಕರ್ ರಸ್ತೆ, ಪರೇಲ್, ಮುಂಬೈ–400 012

ಪ್ರಿ–ಪ್ರಿಂಟೆಡ್ ಸೆಕ್ಯೂರ್ಡ್ ಕಲರ್ ಸ್ಟೇಷನರಿ ಪೂರೈಕೆಗಾಗಿ ಇ–ಟೆಂಡರ್ ಆಹ್ವಾನ ಪ್ರಕಟಣೆ

ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿಮಿಟೆಡ್ ರವರು, ಪ್ರಿ–ಪ್ರಿಂಟೆಡ್ ಸೆಕ್ಯೂರ್ಡ್ ಕಲರ್ ಸ್ಟೇಷನರಿ ಪ್ರಿಂಟಿಂಗ್ ಹಾಗೂ ಪೂರೈಕೆಗಾಗಿ, ಪ್ರತಿಷ್ಠಿತ ಮತ್ತು ಅನುಭವಿ ಸೆಕ್ಯೂರಿಟಿ ಪ್ರಿಂಟರ್‌ಗಳಿಂದ ನಿರ್ದಿಷ್ಟ ನಮೂನೆಯಲ್ಲಿ ಇ–ಟೆಂಡರ್ ಸಿಸ್ಟಮ್ (ತಾಂತ್ರಿಕ ಮತ್ತು ಹಣಕಾಸು ಬಿಡ್) ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಪೂರ್ವಾರ್ಹತೆಗೆ ಸಂಬಂಧಿತ ಅರ್ಹತಾ ಮಾನದಂಡ ಮತ್ತು ಅರ್ಜಿ ನಮೂನೆಯನ್ನು ನಮ್ಮ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು: **www.stockholding.com** ಅಥವಾ **https://StockHolding.auctiontiger.net**

ಸದರಿ ಜಾಹೀರಾತಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಮಾರ್ಪಾಡು ಉಂಟಾದಲ್ಲಿ, ಅಂತಹವುಗಳನ್ನು ನಮ್ಮ **www.stockholding.com** ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. ಆನ್‌ಲೈನ್ ಬಿಡ್ ಸಲ್ಲಿಸುವ ಕೊನೆಯ ದಿನಾಂಕ 30ನೇ ಸೆಪ್ಟಂಬರ್ 2022ರಂದು ಅಪರಾಹ್ನ 03.00 ಗಂಟೆ.

ಯಾವುದೇ ಕಾರಣ ನೀಡದೆಯೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸ್ಟಾಕ್ ಹೋಲ್ಡಿಂಗ್ ಕಾಯ್ದಿರಿಸಿಕೊಂಡಿರುತ್ತದೆ.

ವಿಚಾರಣೆಗಳಿಗಾಗಿ ಸಂಪರ್ಕಿಸಿ: (022) 27785477 / 27785468 ಬೆಳಗ್ಗೆ 11.00 ರಿಂದ ಸಂಜೆ 04.00 ಗಂಟೆಯೊಳಗೆ

ಕವಿ ಬಿ.ಆರ್. ಲಕ್ಷ್ಮಣರಾವ್ (ಎಡದಿಂದ 4ನೇಯವರು) ಅವರು ಮೂರು ಕೃತಿಗಳನ್ನು ಬಿಡುಗಡೆಗೊಳಿಸಿದರು. ಅನುವಾದಕಿ ಮಾಯಾ ನಾಯರ್, ವ್ಯಂಗ್ಯಚಿತ್ರಕಾರ ಕೆ.ಆರ್.ಸ್ವಾಮಿ, ನಿರ್ದೇಶಕ ಪಿ.ಶೇಷಾದ್ರಿ, ಸಾಹಿತಿ ಕೆ.ಕೆ. ಗಂಗಾಧರನ್, ಸಾಹಿತಿ ಬಿ. ಜನಾರ್ದನ ಭಟ್ ಇದ್ದಾರೆ.

ಕೋವಿಡ್ ಸಂಕಷ್ಟ ಕಾಲದಲ್ಲಿ ಸಾಹಿತ್ಯ ಸೃಷ್ಟಿ: ಲಕ್ಷ್ಮಣರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್‌ನಿಂದ ಎಷ್ಟೆಲ್ಲಾ ಅನಾಹುತಗಳಾಗಿದ್ದರೂ, ಆ ಸಂಕಷ್ಟದ ಕಾಲದಲ್ಲಿ ಹಲವಾರು ಜನ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ’ ಎಂದು ಕವಿ ಬಿ.ಆರ್. ಲಕ್ಷ್ಮಣರಾವ್ ಅಭಿಪ್ರಾಯ ವ್ಯಕ್ತಪಡಿಸಿದರು.

ಅಂಕಿತ ಪುಸ್ತಕ ಮತ್ತು ಬುಕ್‌ಬ್ರಹ್ಮ ಸಹಯೋಗದಲ್ಲಿ ಭಾನುವಾರ ನಡೆದ ಆನ್‌ಲೈನ್ ಕಾರ್ಯಕ್ರಮದಲ್ಲಿ ಕೆ.ಆರ್. ಸ್ವಾಮಿ ಅವರ ‘ಚಿಗುರು ಚಿತ್ತಾರ’, ಬಿ. ಜನಾರ್ದನ ಭಟ್ ಅವರ ‘ಗಮ್ಯ’ ಮತ್ತು ಕೆ.ಕೆ. ಗಂಗಾಧರನ್ ಅವರ ‘ಮರಳಿ ಮನೆಗೆ’ ಪುಸ್ತಕಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

‘ಕೆ.ಆರ್. ಸ್ವಾಮಿ ಅವರು ಕೋವಿಡ್ ಸಂಕಷ್ಟದ ಸಮಯದಲ್ಲಿ ಫೇಸ್‌ಬುಕ್‌ನಲ್ಲಿ ಬರೆದಂತಹ ಪೋಸ್ಟ್‌ಗಳನ್ನು ಸಂಗ್ರಹಿಸಿ ಅದಕ್ಕೆ ಪುಸ್ತಕ ರೂಪ ಕೊಟ್ಟಿರುವುದು ಶ್ಲಾಘನೀಯ. ಸಾಮಾಜಿಕ ಮಾಧ್ಯಮಗಳನ್ನು ಈ ರೀತಿಯಾಗಿ ಬಳಸಿಕೊಳ್ಳಬಹುದು’ ಎಂದು ಅಭಿಪ್ರಾಯಪಟ್ಟರು.

‘ಬಿ.ಜನಾರ್ದನ ಭಟ್, ಅವರ ಗಮ್ಯ ಕಾದಂಬರಿ ಸಾಮಾಜಿಕ ಹಿನ್ನಲೆಯನ್ನು ಒಳಗೊಂಡಿದೆ. ಇದು ಹಳೆಯ ರಾಜ್ ಕಪೂರ್, ರಾಜಕುಮಾರ್ ಅವರ ಚಿತ್ರಕಥೆಗಳಲ್ಲಿರುವ ತ್ರಿಕೋನ ಪ್ರೇಮಕಥೆಯನ್ನು ಹೊಂದಿದೆ. ಕಥೆಯ ಸಂದರ್ಭದ ವಿವರಗಳನ್ನು ಮನಸ್ಸಿಗೆ ಮುಟ್ಟುವಂತೆ ಸವಿವರಗಳನ್ನು ನೀಡಿದ್ದಾರೆ’ ಎಂದರು.

‘ಮರಳಿ ಮನೆಗೆ ನನ್ನನು ಬಹಳ ಕಾಡಿದ ಕಾದಂಬರಿ. ಇಲ್ಲಿ ಒಬ್ಬ ವ್ಯಕ್ತಿ ಜೀವನದಲ್ಲಿ ರಿಸ್ಕ್ ತೆಗೆದುಕೊಳ್ಳುವ ಸಂದರ್ಭದಲ್ಲಿ ಅದಕ್ಕೆ ಬೇಕಾದ ಆತ್ಮಸ್ಥೈರ್ಯವಿಲ್ಲದೆ ಪಲಾಯಾನ ಮಾಡುವ ಸ್ಥಿತಿಯನ್ನು ನಿರೂಪಿಸಲಾಗಿದೆ. ಇದು ಕನ್ನಡದಲ್ಲಿ ಅನುವಾದಗೊಂಡ ಸೃಜನಶೀಲ ಕಾದಂಬರಿಯಾಗಿದೆ’ ಎಂದು ಹೇಳಿದರು.

ನಿರ್ದೇಶಕ ಪಿ.ಶೇಷಾದ್ರಿ ಮಾತನಾಡಿ, ‘ಕೆ.ಆರ್. ಸ್ವಾಮಿಯವರು ತಮ್ಮ ವಿಶಿಷ್ಟ ಶೈಲಿಯಲ್ಲಿ 40,720ಕ್ಕೂ ಹೆಚ್ಚು ವ್ಯಂಗ್ಯಚಿತ್ರಗಳನ್ನು ಬರೆದಿದ್ದಾರೆ. ಅವರು ಬರೆದಂತಹ ‘ಚಿಗುರು ಚಿತ್ತಾರ’ ಪುಸ್ತಕ ಮರುಓದಿಗೆ ಹಚ್ಚುವಂತಹ ಕೃತಿಯಾಗಿದೆ. ಇದರಲ್ಲಿ 40ಕ್ಕೂ ಹೆಚ್ಚು ಲೇಖನಗಳು ಮತ್ತು ಅನುಭವ ಕಥನಗಳನ್ನು ಒಳಗೊಂಡಿದೆ. ಯಾವ ಪುಟವನ್ನು ತೆರೆದರೂ ಕನಿಷ್ಠ 5–10 ನಿಮಿಷಗಳಲ್ಲಿ ಓದಿ ಮುಗಿಸಬಹುದು’ ಎಂದರು.

ಪುಸ್ತಕಗಳ ಪರಿಚಯ

ಚಿಗುರು ಚಿತ್ತಾರ: ನೆನಪಿನ ಕಥನ–ವ್ಯಂಗ್ಯ ಕಂಗಳಿಂದ
ಲೇಖಕರು: ಕೆ.ಆರ್. ಸ್ವಾಮಿ
ಪ್ರಕಾಶನ: ಅಂಕಿತ ಪುಸ್ತಕ
ಪುಟಗಳು: 272
ಬೆಲೆ: ₹295

ಕಾದಂಬರಿ: ಗಮ್ಯ
ಲೇಖಕರು: ಬಿ. ಜನಾರ್ದನ ಭಟ್
ಪ್ರಕಾಶನ: ಅಂಕಿತ ಪುಸ್ತಕ
ಪುಟಗಳು: 224 **ಬೆಲೆ:** ₹225

ಕಾದಂಬರಿ: ಮರಳಿ ಮನೆಗೆ
ಲೇಖಕರು: ಕೆ.ಕೆ. ಗಂಗಾಧರನ್
ಪ್ರಕಾಶನ: ಅಂಕಿತ ಪುಸ್ತಕ
ಪುಟಗಳು: 136 **ಬೆಲೆ:** ₹150

ನಗರದಲ್ಲಿ ಇಂದು

ದುನಿಯಾ ವಿಜಯ್

ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಾರೋಪ ಸಮಾರಂಭ: ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ದುನಿಯಾ ವಿಜಯ್, ಕೋಮಲ್, ಕೆ.ಕೆ. ಅಮರನಾಥ್, ಉಪಸ್ಥಿತಿ: ಪಿ.ಟಿ. ಶ್ರೀನಿವಾಸ ನಾಯಕ್, ಆಯೋಜನೆ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 11

ಸಾಧಕರಿಗೆ ಸನ್ಮಾನ–ಪ್ರಶಸ್ತಿ ಪ್ರದಾನ ಕಾರ್ಯಕ್ರಮ: ಭಾಷಣ: ನಾಗೇಂದ್ರ ಪ್ರಸಾದ್, ರಾಜ್ ಸಂಪಾಜೆ, ಮಹೇಂದ್ರ ಮುನ್ನೋತ್, ಅಧ್ಯಕ್ಷತೆ: ಬನಶಂಕರಿ.ವಿ. ಅಂಗಡಿ, ಆಯೋಜನೆ: ಉದ್ಭವ ಕಲಾವಿದರು, ಸ್ಥಳ: ನಯನಾ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಸಂಜೆ 5

ಶಿಕ್ಷಕರ ದಿನಾಚರಣೆ: ಉದ್ಘಾಟನೆ: ಜಯಕರ್.ಎಸ್.ಎಂ., ಅತಿಥಿಗಳು: ಎಂ.ಕೊಟ್ರೇಶ್, ಅಜೀತ್‌ಕುಮಾರ್ ಹೆಗಡೆ, ಬಿ.ಸಿ. ಮೈಲಾರಪ್ಪ, ಅಧ್ಯಕ್ಷತೆ: ಸಿ. ಸೋಮಶೇಖರ್, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸಮಾಜವಿಜ್ಞಾನ ವಿಭಾಗ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ನಟಿಯರೊಂದಿಗೆ ಸಿಕ್ಕಿಬಿದ್ದಿದ್ದ ಶ್ರೀನಿವಾಸ್ ಸುಬ್ರಹ್ಮಣ್ಯ • ಯುವಜನತೆ ಸೆಳೆದು ಅಶ್ಲೀಲ ನೃತ್ಯ, ವೇಶ್ಯಾವಾಟಿಕೆ

'ಡ್ರಗ್ಸ್ ಪಾರ್ಟಿ' ನಡೆದಿದ್ದ ವಿಲ್ಲಾದಲ್ಲಿ 'ರೇವ್ ಪಾರ್ಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಡ್ರಗ್ ಜಾಲ ಪ್ರಕರಣ ಸಂಬಂಧ 2021ರಲ್ಲಿ ಬಂಧಿಸಲಾಗಿದ್ದ ಶ್ರೀನಿವಾಸ್ ಸುಬ್ರಹ್ಮಣ್ಯ ಅಲಿಯಾಸ್ ಶ್ರೀನಿ ಸೇರಿದ್ದ ವಿಲ್ಲಾದಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿ ಮೇಲೆ ಸಿಸಿಬಿ ಪೊಲೀಸರು ಇತ್ತೀಚೆಗೆ ದಾಳಿ ಮಾಡಿದ್ದು, ಅಶ್ಲೀಲ ನೃತ್ಯ ಹಾಗೂ ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಎಂಟು ಮಂದಿಯನ್ನು ಬಂಧಿಸಿದ್ದಾರೆ.

2021ರಲ್ಲಿ ಹೆಚ್ಚು ಸುದ್ದಿಯಾಗಿದ್ದ ಅಂತರರಾಷ್ಟ್ರೀಯ ಡ್ರಗ್ ಜಾಲ ಪ್ರಕರಣದಲ್ಲಿ ನಟಿಯರಾದ ರಾಗಿಣಿ ದ್ವಿವೇದಿ, ಸಂಜನಾ ಗಲ್ರಾನಿ ಹಾಗೂ ಇತರರನ್ನು ಬಂಧಿಸಲಾಗಿತ್ತು. ಈ ಪ್ರಕರಣದ 18ನೇ ಆರೋಪಿಯಾಗಿದ್ದ ಹಾಸನದ ಶ್ರೀನಿವಾಸ್ ಸುಬ್ರಹ್ಮಣ್ಯ, ಸಾದಹಳ್ಳಿಯ ಅನ್ನರ್ ಬಡಾವಣೆಯ ಜೀಡ್ ಗಾರ್ಡನ್‌ನಲ್ಲಿರುವ ತನ್ನ ವಿಲ್ಲಾದಲ್ಲಿ (ನಂಬರ್ 735) ಡ್ರಗ್ ಪಾರ್ಟಿ ನಡೆಸಲು ಅವಕಾಶ ನೀಡಿದ್ದ. ಈತನನ್ನೂ ಬಂಧಿಸಿದ್ದ ಸಿಸಿಬಿ ಪೊಲೀಸರು, ವಿಲ್ಲಾ ಮೇಲೆ ಹಲವು ಬಾರಿ ದಾಳಿ ಮಾಡಿದ್ದರು. ದೋಷಾರೋಪ ಪಟ್ಟಿ ಸಹ ಸಲ್ಲಿಸಿದ್ದರು.

ಶ್ರೀನಿವಾಸ್

'ಡ್ರಗ್ ಪ್ರಕರಣದಲ್ಲಿ ಜಾಮೀನು ಪಡೆದಿರುವ ಆರೋಪಿ ಶ್ರೀನಿವಾಸ್, ಪುನಃ ತನ್ನ ವಿಲ್ಲಾವನ್ನು ರೇವ್ ಪಾರ್ಟಿ ನಡೆಸಲು ಇತ್ತೀಚೆಗೆ ಬಾಡಿಗೆ ನೀಡಿದ್ದ. ಖಚಿತ ಮಾಹಿತಿ ಮೇರೆಗೆ ಸೆ. 6ರಂದು ರಾತ್ರಿ ವಿಲ್ಲಾ ಮೇಲೆ ದಾಳಿ ಮಾಡಿ ರೇವ್ ಪಾರ್ಟಿಯಲ್ಲಿ ಪಾಲ್ಗೊಂಡಿದ್ದವರನ್ನು ಬಂಧಿಸಲಾಗಿದೆ. ವಿಲ್ಲಾ ಮಾಲೀಕ ಶ್ರೀನಿವಾಸ್ ಪರಾರಿಯಾಗಿದ್ದಾನೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಮದ್ಯ, ಅಶ್ಲೀಲ ನೃತ್ಯ, ವೇಶ್ಯಾವಾಟಿಕೆಗಾಗಿ ರೇವ್ ಪಾರ್ಟಿ ಆಯೋಜಿಸಲಾಗಿತ್ತು. ಹಲವು ಯುವಕ–ಯುವತಿಯರು ಇದರಲ್ಲಿ ಪಾಲ್ಗೊಂಡಿದ್ದರು. ಮದ್ಯದ ಅಮಲು ಏರಿಸಿಕೊಂಡಿದ್ದ ಯುವಜನತೆ, ಅಬ್ಬರದ ಸಂಗೀತದೊಂದಿಗೆ ಅಶ್ಲೀಲ ನೃತ್ಯ ಮಾಡುತ್ತಿದ್ದರು' ಎಂದೂ ತಿಳಿಸಿವೆ.

'ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ವಿಶಾಲ್ (41), ಕಮಲೇಶ್ ಜೈನ್ (40), ಶೈಲೇಶ್ ಕಟಾರಿಯಾ (46), ನಂದೇಶ್ (40), ಮನೀಶ್ (32), ಅಂಕಿತ್ ಜೈನ್ (32), ವಿನೋದ್ (44) ಹಾಗೂ ಮಹಾವೀರ್ ಎಂಬುವವರನ್ನು ಬಂಧಿಸಲಾಗಿದೆ. ಪಾರ್ಟಿಯಲ್ಲಿ ಡ್ರಗ್ ಮಾರಾಟವಾದ ಬಗ್ಗೆಯೂ ಮಾಹಿತಿ ಇದ್ದು, ತನಿಖೆ ಮುಂದುವರಿದಿದೆ' ಎಂದೂ ಮೂಲಗಳು ಹೇಳಿವೆ.

ಮಧ್ಯವರ್ತಿಯೂ ಪರಾರಿ: 'ಉದ್ಯೋಗದ ಆಮಿಷವೊಡ್ಡಿ ಹೊರ ರಾಜ್ಯಗಳಿಂದ ಯುವತಿಯರನ್ನು ಪಾರ್ಟಿಗೆ ಕರೆಸಲಾಗಿತ್ತು. ಅವರಿಂದ ಅಶ್ಲೀಲ ನೃತ್ಯ ಮಾಡಿಸಿ, ವೇಶ್ಯಾವಾಟಿಕೆಗೆ ಬಳಸಿಕೊಳ್ಳಲಾಗುತ್ತಿತ್ತು. ದಾಳಿ ವೇಳೆ ಆರು ಯುವತಿಯರನ್ನು ರಕ್ಷಿಸಲಾಗಿದೆ. ಯುವತಿಯರನ್ನು ಕರೆತಂದಿದ್ದ ಮಧ್ಯವರ್ತಿ ರಾಹುಲ್ ಅಲಿಯಾಸ್ ಅರ್ಜುಲ್ ಎಂಬಾತ ಪರಾರಿಯಾಗಿದ್ದಾನೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಪೊಲೀಸರ ವೈಫಲ್ಯ'

'ಶ್ರೀನಿವಾಸ್ ಸುಬ್ರಹ್ಮಣ್ಯ ಒಡೆತನದ ವಿಲ್ಲಾದಲ್ಲಿ ಮೇಲಿಂದ ಮೇಲೆ ಪಾರ್ಟಿಗಳು ಹಾಗೂ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ. ಅಲ್ಲಿಯ ಸಂಗೀತದಿಂದ ಸ್ಥಳೀಯರಿಗೂ ತೊಂದರೆ ಆಗುತ್ತಿದೆ. ಪಾರ್ಟಿ ತಡೆಯುವಲ್ಲಿ ಪೊಲೀಸರ ವೈಫಲ್ಯ ಎದ್ದು ಕಾಣುತ್ತಿದೆ' ಎಂದು ಸ್ಥಳೀಯರು ದೂರಿದ್ದಾರೆ.

'ಪಾರ್ಟಿ ನಡೆಯುತ್ತಿದ್ದರೂ ಸ್ಥಳೀಯ ಪೊಲೀಸರು ಯಾವುದೇ ಕ್ರಮ ಜರುಗಿಸಿಲ್ಲ. ಇದೀಗ, ಸಿಸಿಬಿ ಪೊಲೀಸರು ದಾಳಿ ಮಾಡಿದ ಮೇಲೆಯೇ ಅಕ್ರಮ ಬಯಲಾಗಿದೆ. ಇನ್ನಾದರೂ ವಿಲ್ಲಾಗಳ ಮೇಲೆ ಪೊಲೀಸರು ಕಣ್ಣಿಡಬೇಕು' ಎಂದೂ ಆಗ್ರಹಿಸಿದರು.

ಸುದ್ದಿ 2 ನಿಮಿಷ

ಕಾಂಗ್ರೆಸ್ಸಿನಿಂದ 'ಬೆಟರ್ ಬೆಂಗಳೂರು' ಕ್ರಿಯಾ ಯೋಜನೆ ಸಮಿತಿ

ಬೆಂಗಳೂರು: ನಗರದ ವೈಭವವನ್ನು ಮರಳಿ ತರುವ ಉದ್ದೇಶದಿಂದ ಕಾಂಗ್ರೆಸ್‌ನಿಂದ 'ಬೆಟರ್ ಬೆಂಗಳೂರು' ಕ್ರಿಯಾ ಯೋಜನೆ ಸಮಿತಿಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ರಚಿಸಿದ್ದಾರೆ. ವಿವಿಧ ಭಾಗಿದಾರರ ಜೊತೆ ಸಮಾಲೋಚಿಸಿ 20 ದಿನಗಳಲ್ಲಿ ಸಮಗ್ರ ವರದಿ ಸಲ್ಲಿಸುವಂತೆ ಸಮಿತಿಗೆ ಅವರು ಸೂಚಿಸಿದ್ದಾರೆ.

ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯ ಸಮಿತಿಗೆ ರಾಜ್ಯಸಭೆ ಮಾಜಿ ಸಂಸದ ರಾಜೀವ್ ಗೌಡ ಸಂಚಾಲಕರಾಗಿದ್ದಾರೆ. ಶಾಸಕರಾದ ಜಿ. ಪರಮೇಶ್ವರ್, ಕೆ.ಜೆ. ಜಾರ್ಜ್, ಕೃಷ್ಣಬೈರೇಗೌಡ, ಎನ್.ಎ. ಹ್ಯಾರಿಸ್, ರಿಜ್ವಾನ್ ಅರ್ಷದ್, ಮಾಜಿ ಮೇಯರ್‌ಗಳಾದ ಪದ್ಮಾವತಿ ಮತ್ತು ಗಂಗಾಂಬಿಕೆ ಸದಸ್ಯರು.

'ಈ ಸಮಿತಿಯು ಬೆಂಗಳೂರಿನ ನಿವಾಸಿಗಳು, ಸಿವಿಲ್ ಎಂಜಿನಿಯರ್‌ಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು, ಪರಿಸರ ಕಾರ್ಯಕರ್ತರ ಜೊತೆ ಸಮಾಲೋಚನೆ ನಡೆಸಲಿದೆ. ಬೆಂಗಳೂರಿನಲ್ಲಿ ಉಂಟಾದ ಪ್ರವಾಹಕ್ಕೆ ಕಾರಣಗಳನ್ನು ಸಮಿತಿ ಪತ್ತೆ ಮಾಡಲಿದೆ. ತಜ್ಞರು ನೀಡಿದ ಸಲಹೆಗಳ ಆಧಾರದ ಮೇಲೆ ಸಮಿತಿ ತನ್ನ ವರದಿ ಮತ್ತು ಶಿಫಾರಸುಗಳನ್ನು ಸಿದ್ಧಪಡಿಸಲಿದೆ. ರಾಜ್ಯದಲ್ಲಿ ಪಕ್ಷ ಅಧಿಕಾರಕ್ಕೆ ಬಂದ ತಕ್ಷಣ ಸಮಿತಿ ನೀಡುವ ವರದಿಯಲ್ಲಿರುವ ಅಂಶಗಳನ್ನು ಕಾರ್ಯಗತಗೊಳ್ಳುವ ದೂರದೃಷ್ಟಿಯ ಯೋಜನೆ ರೂಪಿಸುತ್ತೇವೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಬೇಡಿಕೆಗೆ ಆಗ್ರಹ: ಮಾಜಿ ಸೈನಿಕರಿಂದ ಅಹೋರಾತ್ರಿ ಧರಣಿ ಇಂದು

ಬೆಂಗಳೂರು: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸೋಮವಾರ (ಸೆಪ್ಟೆಂಬರ್ 12)ರಂದು ವಿಧಾನ ಸೌಧ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ತಿಳಿಸಿದೆ.

'ಟೌನ್ ಹಾಲ್‌ನಿಂದ ಫ್ರೀಡಂ ಪಾರ್ಕ್‌ವರೆಗೂ ಪಾದಯಾತ್ರೆ ಮೂಲಕ ತೆರಳಿ ಅಹೋರಾತ್ರಿ ಧರಣಿ ಸತ್ಯಾಗ್ರಹ ಮಾಡಲಾಗುವುದು' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಣ್ಣ ಎನ್.ಕೆ. ತಿಳಿಸಿದರು.

'ಮಾಜಿ ಸೈನಿಕರ ನಿವೃತ್ತಿ ಜೀವನ ಕಷ್ಟಕರವಾಗಿದ್ದು, ಸರ್ಕಾರಿ ಸೌಲಭ್ಯಗಳು ಇದ್ದರೂ ಸರಿಯಾಗಿ ತಲುಪುತ್ತಿಲ್ಲ. 1969ರ ಭೂ ಕಾಯ್ದೆ ಪ್ರಕಾರ ಸೈನಿಕರಿಗೆ ನೀಡುವ ಜಮೀನಿಗಾಗಿ ಹೊಸ ಕಾಯ್ದೆಯನ್ನು ರೂಪಿಸಬೇಕು. ಉದ್ಯೋಗ ಅವಕಾಶದ ತಿದ್ದುಪಡಿ, ಮಾಜಿ ಸೈನಿಕರ ಮಕ್ಕಳಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶುಲ್ಕ ವಿನಾಯ್ತಿ ನೀಡಬೇಕು. ಸೈನಿಕರ ಕೋಟಾದಡಿಯಲ್ಲಿ ಸರ್ಕಾರಿ ಉದ್ಯೋಗಕ್ಕೆ ಸೇರಿರುವ ನೌಕರರಿಗೆ ವರ್ಗಾವಣೆಯಲ್ಲಿ ವಿನಾಯ್ತಿ, ಜಿಲ್ಲೆಗೊಂದು ಸೈನಿಕ ಭವನ ನಿರ್ಮಾಣ ಮಾಡಬೇಕು. ಮಾಜಿ ಸೈನಿಕ ನಿಧನದ ನಂತರ ಪತ್ನಿಗೆ ಜಮೀನು ನಿವೇಶನ ಸಿಗುವಂಗಾಬೇಕು' ಎಂದು ಆಗ್ರಹಿಸಿದರು.

ಉರುಳಿಬಿದ್ದ ದ್ವಿಚಕ್ರ ವಾಹನ: ವ್ಯವಸ್ಥಾಪಕ ರಂಜನ್ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಉರುಳಿಬಿದ್ದು ಅಪಘಾತ ಸಂಭವಿಸಿದ್ದು, ರಂಜನ್ ರಾಯ್ (50) ಎಂಬುವವರು ಮೃತಪಟ್ಟಿದ್ದಾರೆ.

ರಂಜನ್ ರಾಯ್

'ಪಶ್ಚಿಮ ಬಂಗಾಳದ ರಂಜನ್, ನಗರದ ಕಂಪನಿಯೊಂದರಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. ಸಹೋದ್ಯೋಗಿ ರಾಜಸ್ಥಾನದ ಕೃತಿಕಾ ಸಿಂಗ್ (23) ಜೊತೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

'ರಂಜನ್ ಹಾಗೂ ಕೃತಿಕಾ, ಶನಿವಾರ ರಾತ್ರಿ ಊಟಕ್ಕೆಂದು ಹೋಟೆಲ್‌ಗೆ ಹೋಗಿದ್ದರು. ತಡರಾತ್ರಿ ಊಟ ಮುಗಿಸಿದ್ದ ಇಬ್ಬರೂ ದ್ವಿಚಕ್ರ ವಾಹನದಲ್ಲಿ ವಾಪಸು ಮನೆಗೆ ತೆರಳುತ್ತಿದ್ದರು. ಕುಂದಲಹಳ್ಳಿ ಕೆಳಸೇತುವೆ ಕಡೆಯಿಂದ ವರ್ತೂರು ಮುಖ್ಯರಸ್ತೆಯಲ್ಲಿ ದ್ವಿಚಕ್ರ ವಾಹನ ಹೊರಟಿತ್ತು.'

'ರಂಜನ್ ಅವರು ನಿರ್ಲಕ್ಷ್ಯದಿಂದ ದ್ವಿಚಕ್ರ ವಾಹನ ಚಲಾಯಿಸಿದ್ದರು. ನಿಯಂತ್ರಣ ತಪ್ಪಿದ ವಾಹನ, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿತ್ತು. ನಂತರ, ರಸ್ತೆ ಪಕ್ಕದ ವಿದ್ಯುತ್ ಕಂಬಕ್ಕೂ ಗುದ್ದಿತ್ತು. ರಂಜನ್ ಹಾಗೂ ಕೃತಿಕಾ ಇಬ್ಬರೂ ರಸ್ತೆಗೆ ಬಿದ್ದು ತೀವ್ರವಾಗಿ ಗಾಯಗೊಂಡಿದ್ದರು' ಎಂದೂ ಪೊಲೀಸರು ತಿಳಿಸಿದರು.

'ತಲೆಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ರಂಜನ್ ಮೃತಪಟ್ಟಿದ್ದಾರೆ. ಗಾಯಗೊಂಡಿರುವ ಕೃತಿಕಾ ಅವರನ್ನು ಸ್ಥಳೀಯರೇ ಆಸ್ಪತ್ರೆಗೆ ಸೇರಿಸಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ' ಎಂದೂ ಹೇಳಿದರು.

'ಸವಾರ ರಂಜನ್, ಮದ್ಯದ ಅಮಲಿನಲ್ಲಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದರಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಅವರ ವಿರುದ್ಧವೇ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದೂ ಪೊಲೀಸರು ತಿಳಿಸಿದರು.

ಮಹಿಳೆ ಸರಗಳವು

ಬೆಂಗಳೂರು: ವಾಯುವಿಹಾರ ಮಾಡುತ್ತಿದ್ದ ಮಹಿಳೆಯ ಚಿನ್ನದ ಮಾಂಗಲ್ಯ ಸರವನ್ನು ಕಿತ್ತೊಯ್ಯಲಾಗಿದ್ದು, ಸಂಬಂಧ ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಠಾಣೆ ವ್ಯಾಪ್ತಿಯ ನಿವಾಸಿ 56 ವರ್ಷದ ಮಹಿಳೆಯೊಬ್ಬರು ಸರ ಕಳವು ಬಗ್ಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಭುವನೇಶ್ವರನಗರದ 8ನೇ ಮುಖ್ಯರಸ್ತೆಯ 4ನೇ ಅಡ್ಡರಸ್ತೆಯಲ್ಲಿ ಶನಿವಾರ (ಸೆ. 10) ಬೆಳಿಗ್ಗೆ 5.30ರ ಸುಮಾರಿಗೆ ಮಹಿಳೆ ವಾಯುವಿಹಾರ ಮಾಡುತ್ತಿದ್ದರು. ಬೈಕ್‌ನಲ್ಲಿ ಬಂದ ಇಬ್ಬರು ಆರೋಪಿಗಳು, ಮಹಿಳೆಯನ್ನು ಹಿಂಬಾಲಿಸಿ ಚಿನ್ನದ ಸರ ಕಿತ್ತುಕೊಂಡು ಹೋಗಿದ್ದಾರೆ' ಎಂದೂ ತಿಳಿಸಿವೆ.

ಅಪಘಾತ: ಚರಂಡಿಗೆ ಬಿದ್ದು ಯುವತಿ ಮರಣ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ತಡರಾತ್ರಿ ಅಪಘಾತ ಸಂಭವಿಸಿದ್ದು, ದ್ವಿಚಕ್ರ ವಾಹನ ಸಮೇತ ಚರಂಡಿಗೆ ಬಿದ್ದು ತಾರಾ ಬಡಾಯಿಕ್ (23) ಎಂಬುವವರು ಮೃತಪಟ್ಟಿದ್ದಾರೆ.

'ನೇಪಾಳದ ತಾರಾ, ನಗರದ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಹೆಣ್ಣೂರಿನಲ್ಲಿ ವಾಸವಿದ್ದರು. ಸ್ನೇಹಿತ ದಿಲೀಪ್ (28) ಜೊತೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

'ತಾರಾ ಹಾಗೂ ದಿಲೀಪ್, ಊಟಕ್ಕೆಂದು ಶನಿವಾರ ರಾತ್ರಿ ಹೋಟೆಲ್‌ಗೆ ಹೋಗಿದ್ದರು. ಊಟ ಮುಗಿಸಿಕೊಂಡು ವಾಪಸು ಮನೆಯತ್ತ ತೆರಳುತ್ತಿದ್ದರು. ತಾರಾ ಅವರೇ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದರು. ದಿಲೀಪ್, ಹಿಂಬದಿಯಲ್ಲಿ ಕುಳಿತಿದ್ದರು' ಎಂದೂ ತಿಳಿಸಿದರು.

'ಸಾರಾಯಿಪಾಳ್ಯ ಕಡೆಯಿಂದ ಹೆಣ್ಣೂರು ಕಡೆಗೆ ತಾರಾ ಹಾಗೂ ದಿಲೀಪ್ ಹೊರಟಿದ್ದರು. ಮಾರ್ಗಮಧ್ಯೆ ಎಚ್‌ಬಿಆರ್ ಲೇಔಟ್‌ನ ಅಶ್ವಥ್‌ನಗರ ಬಳಿ ತಾರಾ ಅವರು ನಿರ್ಲಕ್ಷ್ಯದಿಂದ ವಾಹನ ಚಲಾಯಿಸಿದ್ದರು. ನಿಯಂತ್ರಣ ತಪ್ಪಿದ್ದ ದ್ವಿಚಕ್ರ ವಾಹನ, ರಸ್ತೆಯಲ್ಲಿ ಉರುಳಿತ್ತು. ನಂತರ, ರಸ್ತೆ ಪಕ್ಕದಲ್ಲಿದ್ದ ಚರಂಡಿಯೊಳಗೆ ಹೋಗಿ ಬಿದ್ದಿತ್ತು. ಇದರಿಂದಾಗಿ ತಾರಾ ಅವರ ತಲೆ ಹಾಗೂ ತೊಡೆ ಭಾಗಕ್ಕೆ ತೀವ್ರ ಪೆಟ್ಟು ಬಿದ್ದಿತ್ತು.'

ತಾರಾ ಬಡಾಯಿಕ್

'ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆಯೇ ಅವರು ಮೃತಪಟ್ಟಿದ್ದಾರೆ. ಸ್ನೇಹಿತ ದಿಲೀಪ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದೂ ಪೊಲೀಸರು ಹೇಳಿದರು.

ವಿದ್ಯಾರ್ಥಿಗಳ ಜಾಲಿ ರೈಡ್: ಸ್ಕೂಟರ್ ಸವಾರ ಸಾವು

ರಾಮನಗರ: ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆ. ಗೊಲ್ಲಹಳ್ಳಿ ಸಮೀಪ ಶುಕ್ರವಾರ ಕಾರೊಂದು ಸ್ಕೂಟರ್ ಹಾಗೂ ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ಒಬ್ಬರು ಮೃತಪಟ್ಟು ಮೂವರು ತೀವ್ರವಾಗಿ ಗಾಯಗೊಂಡಿದ್ದಾರೆ.

ಕುಳ್ಳೇಗೌಡನಪಾಳ್ಯದ ನಿವಾಸಿ ಗಿರಿಯಪ್ಪ (50) ಮೃತರು. ಕೆ. ಗೊಲ್ಲಹಳ್ಳಿ ಗ್ರಾಮದ ವಿದ್ಯಾರ್ಥಿನಿಯರಾದ ಯೋಗಿತಾ (10), ಚರಿತಾ (8) ಹಾಗೂ ಗೋಣಿಪುರ ಗ್ರಾಮದ ಲತೇಶ್ (45) ಎಂಬುವರು ಗಾಯಗೊಂಡಿದ್ದಾರೆ.

ಗಿರಿಯಪ್ಪ ತಮ್ಮ ಸಂಬಂಧಿಕರಾದ ವಿದ್ಯಾರ್ಥಿನಿಯರನ್ನು ಶಾಲೆಗೆ ಬಿಡುವ ಸಲುವಾಗಿ ಸ್ಕೂಟರಿನಲ್ಲಿ ತೆರಳುತ್ತಿದ್ದರು. ಮತ್ತೊಂದು ಬೈಕಿನಲ್ಲಿ ಲತೇಶ್ ಸಹ ಕುಂಬಳಗೋಡು ಕಡೆ ತೆರಳುತ್ತಿದ್ದರು. ಈ ವೇಳೆ ಕುಂಬಳಗೋಡಿನಿಂದ ಬಿಡದಿ ಕಡೆಗೆ ಬರುತ್ತಿದ್ದ ಕಾರು, ಚಾಲಕನ ಅಜಾಗರೂಕತೆಯಿಂದ ಸ್ಕೂಟರ್ ಮತ್ತು ಬೈಕಿಗೆ ಡಿಕ್ಕಿ ಹೊಡೆದಿದೆ. ಗಿರಿಯಪ್ಪ ತೀವ್ರ ಗಾಯಗಳಿಂದ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆಯೇ ಮೃತಪಟ್ಟಿದ್ದಾರೆ.

ಜಿಗಣಿ ಬಳಿಯ ಖಾಸಗಿ ಕಾಲೇಜೊಂದರ 3 ವಿದ್ಯಾರ್ಥಿಗಳು ಹಾಗೂ ಇಬ್ಬರು ವಿದ್ಯಾರ್ಥಿನಿಯರು ಸ್ವಿಫ್ಟ್ ಕಾರಿನಲ್ಲಿ ಬೆಳಿಗ್ಗೆ 8.30ರ ಸುಮಾರಿಗೆ ಬಿಡದಿಗೆ ಜಾಲಿರೈಡ್ ಹೊರಟಿದ್ದರು ಎನ್ನಲಾಗಿದೆ.

ಕಲ್ಯಾಣ ಕಾರ್ಯಕ್ರಮಗಳಿಗೆ ಆನ್‌ಲೈನ್ ಅರ್ಜಿ ಆಹ್ವಾನ

ಬೆಂಗಳೂರು: ಬಿಬಿಎಂಪಿಯ ಕಲ್ಯಾಣ ಕಾರ್ಯಕ್ರಮಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಂತ ನಿವೇಶನ ಹೊಂದಿರುವವರಿಗೆ ಒಂಟಿ ಮನೆ ಯೋಜನೆಯಡಿ ಮನೆ ನಿರ್ಮಾಣ ಮಾಡಿಕೊಳ್ಳಲು ₹5 ಲಕ್ಷ ಸಹಾಯಧನ, ಪದವಿ ಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್, ಅಂಧರಿಗೆ ಸ್ಮಾರ್ಟ್ ಸ್ಟಿಕ್, ಅಂಧ ವಿದ್ಯಾರ್ಥಿಗಳಿಗೆ ಎಜುಕೇಷನಲ್ ಲ್ಯಾಪ್‌ಟಾಪ್, ಹಿರಿಯ ನಾಗರಿಕರಿಗೆ ಮಡಚಬಹುದಾದ ವೀಲ್ ಚೇರ್ ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ.

ಜಾಲತಾಣವಾದ https://accounts.bbmpgov.in/welfare ಅಥವಾ ಆಯ್ದ 92 ಬೆಂಗಳೂರು ಒನ್ ಕೇಂದ್ರಗಳಲ್ಲಿ ₹30 ಪಾವತಿಸಿ ಅರ್ಜಿ ಸಲ್ಲಿಸಬಹುದು. ಸೆ.19ರವರೆಗೆ ಅರ್ಜಿ ಸಲ್ಲಿಬಹುದು. ಮಾಹಿತಿಗೆ ಪಾಲಿಕೆಯ ಕಲ್ಯಾಣ ವಿಭಾಗದ ಸಹಾಯಕ ಕಂದಾಯ ಅಧಿಕಾರಿಯನ್ನು ಸಂಪರ್ಕಿಸಬಹುದು.

ಚಿತ್ರಾವಳಿ

ನಗರದಲ್ಲಿ ಭಾನುವಾರ ಕೋಟಕ್ ಸಮೂಹ ಆಯೋಜಿಸಿದ್ದ 'ಮಾರ್ನಿಂಗ್ ರಾಗಾಸ್' ಸಂಗೀತ ಕಾರ್ಯಕ್ರಮದಲ್ಲಿ ಯು. ರಾಜೇಶ್ ಅವರ ಮ್ಯಾಂಡಲಿನ್ ವಾದನ ಹಾಗೂ ಜಯತೀರ್ಥ ಮೇವುಂಡಿ ಅವರ ಗಾಯನದ ಜುಗಲ್‌ಬಂದಿ ಮನ ಸೆಳೆಯಿತು. ವಿ. ಪ್ರವೀಣ್ ಮೃದಂಗದಲ್ಲಿ, ವ್ಯಾಸಮೂರ್ತಿ ಅವರು ಹಾರ್ಮೋನಿಯಂ ಸಾಥ್ ನೀಡಿದರು – ಪ್ರಜಾವಾಣಿ ಚಿತ್ರ

ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಲಭಿಸಿದ 2020–21ನೇ ಸಾಲಿನ ಅತ್ಯುತ್ತಮ ಎನ್‌ಎಸ್‌ಎಸ್ ರಾಜ್ಯ ಪ್ರಶಸ್ತಿಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಂದ ಕುಲಪತಿ ಡಾ.ಎಸ್.ಎಂ. ಜಯಕರ್ ಸ್ವೀಕರಿಸಿದರು. ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ಎಚ್. ಆರ್. ರವೀಶ್, ಡಾ. ಸತೀಶ್ ಗೌಡ ಇದ್ದರು.

ಬಿಲ್ಲವ ಅಸೋಸಿಯೇಷನ್ ನಗರದಲ್ಲಿ ಭಾನುವಾರ ಆಯೋಜಿಸಿದ್ದ ನಾರಾಯಣಗುರು ಜಯಂತಿ ಕಾರ್ಯಕ್ರಮದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣ ಗೌಡ ಅವರು 'ದಿವ್ಯ ಚೇತನ ಶ್ರೀ ನಾರಾಯಣಗುರು' ಪುಸ್ತಕ ಬಿಡುಗಡೆ ಮಾಡಿದರು. ಅಸೋಸಿಯೇಷನ್ ಅಧ್ಯಕ್ಷ ವೇದಕುಮಾರ್, ಆರ್ಯ ಈಡಿಗ ಸಂಘದ ಅಧ್ಯಕ್ಷ ತಿಮ್ಮೇಗೌಡ, ಗೋವಿಂದ ಬಾಬು ಪೂಜಾರಿ ಹಾಗೂ ಎಂ.ಓ. ಮಮತೇಶ್ ಕುಮಾರ್ ಇದ್ದಾರೆ.

ಆಯ್ಕೆಯಾದ ಗ್ರಾ.ಪಂ.ಗೆ ಎರಡು ವರ್ಷಗಳಿಂದ ಪ್ರಶಸ್ತಿ ನೀಡಿಲ್ಲ

'ಗಾಂಧಿ ಗ್ರಾಮ ಪುರಸ್ಕಾರ' ಮರೆತ ಸರ್ಕಾರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ತಾಲ್ಲೂಕಿನಲ್ಲಿ ಆಡಳಿತ ಮತ್ತು ಆರ್ಥಿಕ ಮಾನದಂಡಗಳಲ್ಲಿ ಅತ್ಯುತ್ತಮ ಸಾಧನೆ ತೋರಿದ ತಲಾ ಒಂದು ಗ್ರಾಮ ಪಂಚಾಯಿತಿಯನ್ನು ಆಯ್ಕೆ ಮಾಡಿ ಗಾಂಧಿ ಜಯಂತಿ ದಿನ (ಅ.2) 'ಗಾಂಧಿ ಗ್ರಾಮ ಪುರಸ್ಕಾರ' ಪ್ರಶಸ್ತಿ ನೀಡುವ ಪರಿಪಾಠವನ್ನು ರಾಜ್ಯ ಸರ್ಕಾರ ಮರೆತೇಬಿಟ್ಟಿದೆ ಎಂಬ ದೂರು ಕೇಳಿ ಬಂದಿದೆ.

ಕಳೆದ ಎರಡು (2019–20, 2020–21) ಸಾಲಿನಲ್ಲಿ ಈ ಪ್ರಶಸ್ತಿಗೆ ಗ್ರಾಮ ಪಂಚಾಯಿತಿಗಳನ್ನು ಸರ್ಕಾರ ಆಯ್ಕೆ ಮಾಡಿದ್ದರೂ ಕೋವಿಡ್ ಕಾರಣ ಪುರಸ್ಕಾರ ನೀಡಿಲ್ಲ. ಮತ್ತೊಂದು ಗಾಂಧಿ ಜಯಂತಿ ದಿನ ಸಮೀಪಿಸಿದರೂ ಪ್ರಸಕ್ತ ವರ್ಷದ ಸಾಲಿನ ಪ್ರಶಸ್ತಿಗೆ ಗ್ರಾಮ ಪಂಚಾಯಿತಿಗಳ ಆಯ್ಕೆ ಪ್ರಕ್ರಿಯೆಯನ್ನು ಇನ್ನೂ ಆರಂಭಿಸಿಲ್ಲ.

ವಿಧಾನ ಪರಿಷತ್ ಸದಸ್ಯರೊಬ್ಬರ ಪ್ರಶ್ನೆಗೆ 2021ರ ಡಿ. 24 ರಂದು ಉತ್ತರಿಸಿದ್ದ ಅಂದಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ, ಈ ಹಿಂದಿನ ಎರಡು ವರ್ಷಗಳ ಪ್ರಶಸ್ತಿಗಳನ್ನು ಒಟ್ಟಿಗೆ ನೀಡಲಾಗುವುದು ಎಂದಿದ್ದರು. ಆದರೆ, ಎಂಟು ತಿಂಗಳು ಕಳೆದರೂ ಪ್ರಶಸ್ತಿ ವಿತರಿಸಿಲ್ಲ.

ಗ್ರಾಮ ಪಂಚಾಯಿತಿಗಳ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಯೋಜನೆಗಳ ಅನುಷ್ಠಾನದಲ್ಲಿ ತ್ವರಿತಗತಿಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 2023–14 ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾಗಿದ್ದ ಎಚ್.ಕೆ. ಪಾಟೀಲ ಅವರು 'ಗಾಂಧಿ ಗ್ರಾಮ ಪುರಸ್ಕಾರ' ಪ್ರಶಸ್ತಿ ಜಾರಿಗೆ ತಂದಿದ್ದರು. ಹಲವು ಆರ್ಥಿಕ ಮತ್ತು ಆಡಳಿತ ಮಾನದಂಡಗಳ ಮೇಲೆ ಗ್ರಾಮ ಪಂಚಾಯಿತಿಗಳು ಸಾಧಿಸುವ ಶೇ 90 ರಿಂದ ಶೇ 95 ರಷ್ಟು ಸಾಧನೆಗಳನ್ನು ಮೌಲ್ಯಮಾಪನ ಮಾಡಿ, ತಾಲ್ಲೂಕಿನ ಒಂದು ಗ್ರಾಮ ಪಂಚಾಯಿತಿಗೆ ಮೊದಲ ವರ್ಷ ₹ 2 ಲಕ್ಷ, ನಂತರದ ವರ್ಷಗಳಲ್ಲಿ ₹ 5 ಲಕ್ಷ ಪ್ರೋತ್ಸಾಹ ಧನದ ಜೊತೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

'ಗ್ರಾಮ ಪಂಚಾಯಿತಿಗಳನ್ನು ಸದೃಢಗೊಳಿಸುವ ಮತ್ತು ಉತ್ತಮ ಆಡಳಿತವನ್ನು ಉತ್ತೇಜಿಸಲು ನೀಡುವ 'ಗಾಂಧಿ ಗ್ರಾಮ ಪುರಸ್ಕಾರ' ಪ್ರಶಸ್ತಿ ಕಾರ್ಯಕ್ರಮವನ್ನು ರಾಜ್ಯ ಸರ್ಕಾರ ಮುಂದುವರಿಸಬೇಕು. ಅಲ್ಲದೆ, ಪ್ರಶಸ್ತಿ ಮೊತ್ತವನ್ನು ₹ 10 ಲಕ್ಷಕ್ಕೆ ಏರಿಸಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಕಾಡಶೆಟ್ಟಿಹಳ್ಳಿ ಸತೀಶ್ ಮನವಿ ಸಲ್ಲಿಸಿದ್ದಾರೆ.

'ಸರ್ಕಾರಿ ವಾಹನಗಳ ದುರುಪಯೋಗಕ್ಕೆ ಕಡಿವಾಣ ಬೀಳಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ವಾಹನಗಳನ್ನು ಸರ್ಕಾರಿ ಕೆಲಸಗಳ ಬಳಕೆಗೆ ಮಾತ್ರ ಸೀಮಿತಗೊಳಿಸಬೇಕು. ಬೆಳಿಗ್ಗೆ 9.30ರಿಂದ ಸಂಜೆ 5.30 ರವರೆಗೆ ಅಷ್ಟೇ ಉಪಯೋಗಿಸಬೇಕೆಂದು ಸರ್ಕಾರ ಕಟ್ಟುನಿಟ್ಟಿನ ಆದೇಶ ಹೊರಡಿಸಬೇಕು' ಎಂದು ಕೆಎಸ್‌ಟಿಡಿಸಿ ಎಂಪ್ಲಾಯೀಸ್ ಯೂನಿಯನ್ ಆಗ್ರಹಿಸಿದೆ.

'ಸೆಪ್ಟೆಂಬರ್ 15ರಂದು ಸಂಜೆ 5.30ರಿಂದ ಸರ್ಕಾರಿ ವಾಹನಗಳು ಕಚೇರಿ ವೇಳೆಯನ್ನು ಬಿಟ್ಟು ಸ್ವಂತಕ್ಕೆ ಬಳಸಿಕೊಳ್ಳುತ್ತಿದ್ದರೆ ಅಂತಹ ಅಧಿಕಾರಿಗಳನ್ನು ಸಾರ್ವಜನಿಕರ ಸಮ್ಮುಖದಲ್ಲೇ ತಡೆದು, ಅವರ ವಿರುದ್ಧ ಪೊಲೀಸರಿಗೆ ದೂರು ನೀಡಲಾಗುವುದು. ಸರ್ಕಾರಿ ವಾಹನಗಳನ್ನು ಅಧಿಕಾರಿಗಳು ಸ್ವಂತಕ್ಕೆ ಬಳಸಿಕೊಳ್ಳುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿ ನಷ್ಟವಾಗುತ್ತಿದೆ. ಇದಕ್ಕೆ ಕಡಿವಾಣ ಬೀಳಬೇಕು' ಎಂದು ಯೂನಿಯನ್ ಗೌರವಾಧ್ಯಕ್ಷ ಎಂ.ಎನ್. ವೇಣುಗೋಪಾಲ್ ಈಚೆಗೆ ಸುದ್ದಿಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

'ಸರ್ಕಾರದ ವಿವಿಧ ಇಲಾಖೆ, ನಿಗಮ ಮಂಡಳಿ ಮತ್ತು ನಗರ ಪಾಲಿಕೆಗಳಲ್ಲಿ ವಾಹನ ಚಾಲಕರು, ಗುಮಾಸ್ತರು, ಡಾಟಾ ಎಂಟ್ರಿ ಆಪ್‌ರೇಟರ್ಸ್, 'ಡಿ' ಗ್ರೂಪ್ ನೌಕರರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು. ನೌಕರರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದನ್ನು ಸ್ಥಗಿತಗೊಳಿಸಬೇಕು' ಎಂದು ಒತ್ತಾಯಿಸಿದರು.

'ಬೀದಿನಾಯಿಗಳು ಕಚ್ಚಿದರೆ ಆಹಾರ ಹಾಕಿದವರೇ ಹೊಣೆ'

ನವದೆಹಲಿ (ಪಿಟಿಐ): 'ಬೀದಿ ನಾಯಿಗಳು ಕಚ್ಚಿದರೆ ಆ ವ್ಯಕ್ತಿಗಳಿಗೆ ಚುಚ್ಚುಮದ್ದು ಕೊಡಿಸುವ ಮತ್ತು ಅದರ ಖರ್ಚುವೆಚ್ಚಗಳನ್ನು ಭರಿಸುವ ಜವಾಬ್ದಾರಿ ನಾಯಿಗಳಿಗೆ ಆಹಾರ ಹಾಕುವವರದ್ದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಜನರ ಸುರಕ್ಷತೆ ಮತ್ತು ಪ್ರಾಣಿಗಳ ಹಕ್ಕುಗಳ ನಡುವೆ ಸಮತೋಲನ ಕಾಪಾಡಿಕೊಳ್ಳಬೇಕು ಎಂದು ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ಜೆ.ಕೆ. ಮಾಹೇಶ್ವರಿ ಅವರನ್ನೊಳಗೊಂಡ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಬೀದಿ ನಾಯಿಗಳನ್ನು ಕೊಲ್ಲುವ ನಿಟ್ಟಿನಲ್ಲಿ ಕೆಲವು ನಗರ ಸ್ಥಳೀಯ ಸಂಸ್ಥೆಗಳು ನೀಡಿರುವ ಆದೇಶಗಳ ವಿಚಾರದಲ್ಲಿ ಕೇರಳ ಮತ್ತು ಬಾಂಬೆ ಹೈಕೋರ್ಟ್‌ಗಳು ನೀಡಿದ ಆದೇಶಗಳನ್ನು ಪ್ರಶ್ನಿಸಿ ಸಲ್ಲಿಸಲಾದ ವಿವಿಧ ಅರ್ಜಿಗಳ ವಿಚಾರಣೆ ವೇಳೆ ಪೀಠ ಈ ಸೂಚನೆ ನೀಡಿದೆ. ಮುಂದಿನ ವಿಚಾರಣೆಯನ್ನು ಇದೇ 28ಕ್ಕೆ ನಿಗದಿಪಡಿಸಲಾಗಿದೆ.

'ಮಲ್ಲೇಶ್ವರದಲ್ಲಿ ಮಾದರಿ ರಸ್ತೆ'

ಬೆಂಗಳೂರು: 'ಮಲ್ಲೇಶ್ವರದಲ್ಲಿ ವೈಟ್ ಟಾಪಿಂಗ್ ಕಾಮಗಾರಿಯನ್ನು ಅತ್ಯಂತ ವೈಜ್ಞಾನಿಕವಾಗಿ ನಿರ್ವಹಿಸಲಾಗಿದ್ದು, ಇದು ಬೆಂಗಳೂರಿಗೆ ಮಾದರಿ ರಸ್ತೆ' ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಮಲ್ಲೇಶ್ವರದ ಸ್ವಾಭಿಮಾನ ಅಸೋಸಿಯೇಷನ್ ನಾಗರಿಕ ಸಂಘಟನೆಗೆ ಚಾಲನೆ ನೀಡಿ ಮಾತನಾಡಿದ ಅವರು, 'ಸಂಪಿಗೆ ರಸ್ತೆಯಲ್ಲಿ ಅಭಿವೃದ್ಧಿಪಡಿಸಿರುವ ವೈಟ್ ಟಾಪಿಂಗ್ ಕಾಮಗಾರಿಯನ್ನು ಅತಿ ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಲಾಗಿದೆ. ಉಳಿದ ಕಾಮಗಾರಿ ಅಕ್ಟೋಬರ್ ಎರಡನೇ ವಾರದಲ್ಲಿ ಪೂರ್ಣವಾಗಲಿದೆ' ಎಂದು ಭರವಸೆ ನೀಡಿದರು.

'ಕ್ಷೇತ್ರದಲ್ಲಿ 150 ಕಿಲೋಮೀಟರ್ ಉದ್ದದಷ್ಟು ನೆಲದಡಿ ವಿದ್ಯುತ್ ಕೇಬಲ್ ಅಳವಡಿಸಲಾಗಿದೆ. ಕೊಳವೆ ಸಂಪರ್ಕ ನೀಡಲಾಗಿದೆ' ಎಂದು ವಿವರಿಸಿದರು.

ಹಾಲಿನ ದರ ಹೆಚ್ಚಿಸಲು ಕೆಎಂಎಫ್ ನಿರ್ಧಾರ

ಬೆಂಗಳೂರು: ಪ್ರತಿ ಲೀಟರ್ ಹಾಲಿನ ದರವನ್ನು ₹ 3 ಹೆಚ್ಚಿಸಲು ಕೆಎಂಎಫ್ ತೀರ್ಮಾನಿಸಿದ್ದು, ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ನೇತೃತ್ವದಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಹಾಲಿನ ದರ ಹೆಚ್ಚಿಸಲು ಸರ್ವಾನುಮತದ ನಿರ್ಣಯ ಕೈಗೊಳ್ಳಲಾಗಿದೆ. 14 ಜಿಲ್ಲಾ ಹಾಲು ಒಕ್ಕೂಟಗಳು ಹಾಲಿನ ದರ ಹೆಚ್ಚಿಸಲು ಒಲವು ತೋರಿದ್ದವು.

ಆದರೆ, ದರ ಹೆಚ್ಚಿಸಲು ಸರ್ಕಾರ ಅನುಮತಿ ನೀಡಿದ ಬಳಿಕವೇ ಈ ನಿರ್ಧಾರ ಜಾರಿಯಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ದರ ಹೆಚ್ಚಿಸುವಂತೆ ಎಂಟು ತಿಂಗಳಿಂದ ಜಿಲ್ಲಾ ಹಾಲು ಒಕ್ಕೂಟಗಳು ಕೆಎಂಎಫ್ ಮೇಲೆ ಒತ್ತಡ ಹೇರಿದ್ದವು. ಅಧ್ಯಕ್ಷರು ಮನವಿ ಮಾಡಿದ್ದರೂ ಹಾಲಿನ ದರ ಹೆಚ್ಚಳಕ್ಕೆ ಸರ್ಕಾರ ಮುಂದಾಗಿರಲಿಲ್ಲ. ರೈತರ ಅನುಕೂಲಕ್ಕೋಸ್ಕರ ಈಗ ದರ ಹೆಚ್ಚಿಸಲು ನಿರ್ಧರಿಸಲಾಗಿದೆ' ಎಂದು ಆಡಳಿತ ಮಂಡಳಿ ಮೂಲಗಳು ಹೇಳಿವೆ. 'ಖಾಸಗಿ ಬ್ರಾಂಡ್‌ಗಳ ಹಾಲಿನ ದರದಲ್ಲಿ ಭಾರಿ ಬದಲಾವಣೆಯಾಗಿದೆ. ಕೆಎಂಎಫ್ ಮಾತ್ರ ಪ್ರತಿ ಲೀಟರ್ ಹಾಲಿಗೆ ₹ 37 ನೀಡುತ್ತಿದೆ. ₹ 8 ರಿಂದ ₹ 10 ವ್ಯತ್ಯಾಸ ಕಂಡುಬರುತ್ತಿದೆ. ಹೆಚ್ಚಿಸುವ ದರವನ್ನು ರೈತರಿಗೆ ನೀಡಲು ನಿರ್ಧಾರ ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ದೌರ್ಬಲ್ಯಗಳಿಗೆ ಫಿಸಿಯೋಥೆರಪಿ ರಾಮಬಾಣ'

ಕೆಂಗೇರಿ: 'ಸ್ನಾಯು ದೌರ್ಬಲ್ಯ ಹಾಗೂ ಪಾರ್ಕಿನ್ಸನ್‌ನಂಥ ಗಂಭೀರ ಕಾಯಿಲೆಗಳನ್ನು ಫಿಸಿಯೋಥೆರಪಿ ಮೂಲಕ ಪರಿಣಾಮಕಾರಿಯಾಗಿ ಗುಣಪಡಿಸಬಹುದು' ಎಂದು ಬಿಜಿಎಸ್ ಗ್ಲೆನಿಗಲ್ಸ್ ಗ್ಲೋಬಲ್ ಹಾಸ್ಪಿಟಲ್‌ನ ಫಿಸಿಯೋಥೆರಪಿ ವಿಭಾಗದ ಮುಖ್ಯಸ್ಥ ಬಾಬು ಜೆ. ಹೇಳಿದರು.

ವಿಶ್ವ ಫಿಸಿಯೊಥೆರಪಿ ದಿನಾಚರಣೆ ಅಂಗವಾಗಿ ಬಿಜಿಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಪ್ರತಿನಿತ್ಯ ನಡೆಯುವ ಭೀಕರ ರಸ್ತೆ ಅಪಘಾತಗಳಲ್ಲಿ ನೂರಾರು ಮಂದಿ ಗಂಭೀರವಾಗಿ ಗಾಯಗೊಳ್ಳುತ್ತಿದ್ದಾರೆ. ಪ್ರಾಣ ಉಳಿದರೂ ನರ ದೌರ್ಬಲ್ಯದಂತಹ ಗಂಭೀರ ಸಮಸ್ಯೆಯಿಂದ ಜೀವನವಿಡೀ ನರಳುತ್ತಾರೆ. ಇಂತಹ ಸಮಸ್ಯೆಗಳನ್ನು ಫಿಸಿಯೋಥೆರಪಿ ಮೂಲಕ ಅತ್ಯಂತ ಕಡಿಮೆ ಅವಧಿಯಲ್ಲಿ ಗುಣಪಡಿಸಬಹುದಾಗಿದೆ' ಎಂದು ತಿಳಿಸಿದರು.

ಫಿಸಿಯೋಥೆರಪಿ ಮಹತ್ವ ಹಾಗೂ ಅಗತ್ಯತೆ ಕುರಿತ ಕಾರ್ಯಾಗಾರದಲ್ಲಿ ವೈದ್ಯ ಬಾಬು.ಜೆ, ಸಿಒಒ ಬಿಜು ನಾಯರ್ ಹಾಗೂ ಆಸ್ಪತ್ರೆ ಸಿಬ್ಬಂದಿ ಇದ್ದಾರೆ

'ಕ್ರೀಡಾ ಕ್ಷೇತ್ರದಲ್ಲಿ ತೊಡಗಿಕೊಂಡವರಿಗೆ ಆಗಾಗ್ಗೆ ನರ ಸಂಬಂಧಿ ಸಮಸ್ಯೆಗಳು ಬಾಧಿಸುತ್ತಿರುತ್ತವೆ. ಇಂತಹ ವ್ಯಕ್ತಿಗಳಿಗೆ ಫಿಸಿಯೋಥೆರಪಿ ಚಿಕಿತ್ಸೆ ಅತ್ಯಂತ ಪರಿಣಾಮಕಾರಿ ಆಗಿರುತ್ತದೆ ಎಂದು ತಿಳಿಸಿದರು.

ಹೃದಯ ಸಂಬಂಧಿ ಕಾಯಿಲೆ, ಮಕ್ಕಳಲ್ಲಿ ಕಂಡುಬರುವ ಬೆಳವಣಿಗೆ ಕುಂಠಿತ ಸಮಸ್ಯೆ, ಮಿದುಳು ಸಂಬಂಧಿ ಸಮಸ್ಯೆಗಳಿಗೂ ಈ ಚಿಕಿತ್ಸೆ ರಾಮಬಾಣವಾಗಿದೆ ಎಂದರು.

ಕೆ.ಆರ್.ಪುರ – ಬಿಬಿಎಂಪಿ ವಿರುದ್ಧ ಸ್ಥಳೀಯ ನಿವಾಸಿಗಳ ಆಕ್ರೋಶ

ಪ್ರಭಾವಿಗಳ ಜಾಗ ಉಳಿಸಲು ಬಡವರ ಮನೆ ತೆರವು

• ಶಿವರಾಜ್ ಮೌರ್ಯ

ಕೆ.ಆರ್.ಪುರ: ರಾಜಕಾಲುವೆ ಒತ್ತುವರಿ ತೆರವಿಗೆ ಪಾಲಿಕೆ ನಿರ್ಧರಿಸಿದ್ದು, ವೈಜ್ಞಾನಿಕವಾಗಿ ಸರ್ವೆ ನಡೆಸದೆ ಹಾಗೂ ನೋಟಿಸ್ ಸಹ ನೀಡದೆ ಪ್ರಭಾವಿಗಳ ಜಮೀನು ಉಳಿಸಲು ಬಡವರ ಮನೆಗಳನ್ನು ಒಡೆಯಲು ಬಿಬಿಎಂಪಿ ಮುಂದಾಗಿದೆ ಎಂದು ಸ್ಥಳೀಯ ನಿವಾಸಿಗಳು ಆಕ್ರೋಶ ಹೊರಹಾಕಿದ್ದಾರೆ.

ಬಸವನಪುರ ವಾರ್ಡ್‌ನ ಗಾಯಿತ್ರಿ ಬಡಾವಣೆಯ ದೇವಸಂದ್ರ ಸ್ಮಶಾನದಿಂದ ಶೀಗೆಹಳ್ಳಿ ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆ ಒತ್ತುವರಿ ತೆರವು ಸೋಮವಾರದಿಂದ ನಡೆಸಲು ಮುಂದಾಗಿದ್ದು, ರಾಜಕಾಲುವೆ ಹೊಂದಿಕೊಂಡಿರುವ ಮನೆಗಳಿಗೆ ಗುರುತು ಮಾಡಿ ಮನೆಯ ಅರ್ಧದಷ್ಟು ಭಾಗ ಅಂದರೆ 10 ಮೀಟರ್‌ನಷ್ಟು ಮನೆಯ ಜಾಗವನ್ನು ಒಡೆಯಲು ಮುಂದಾಗಿದೆ. ಬಿಬಿಎಂಪಿಯ ಈ ದಿಢೀರ್ ನಿರ್ಧಾರದಿಂದ ಮನೆ ಕಳೆದುಕೊಳ್ಳುವ ಭೀತಿಯಲ್ಲಿ ಮನೆ ಮಾಲೀಕರದ್ದು.

ಗಾಯಿತ್ರಿ ಬಡಾವಣೆಯಲ್ಲಿ ಒತ್ತುವರಿ ಎಂದು ಗುರುತು ಮಾಡಿರುವ ಮನೆ

ಬಸವನಪುರ ವಾರ್ಡಿನ ಗಾಯಿತ್ರಿ ಬಡಾವಣೆ, ಎಸ್.ಆರ್.ಬಡಾವಣೆ, ಮಂಜುನಾಥ್ ಬಡಾವಣೆಯ ಐವತ್ತಕ್ಕೂ ಹೆಚ್ಚು ಮನೆಗಳು ಒತ್ತುವರಿಯಿಂದ ತೆರವು ಕಾರ್ಯ ಸೋಮವಾರದಿಂದ ಆರಂಭಗೊಳ್ಳಲಿರುವುದರಿಂದ 500ಕ್ಕೂ ಹೆಚ್ಚು ಕುಟುಂಬಗಳು ಮನೆ ಕಳೆದುಕೊಳ್ಳುವ ಭೀತಿಯಲ್ಲಿವೆ.

ಅವೈಜ್ಞಾನಿಕವಾಗಿ ಸರ್ವೆ ಕಾರ್ಯ ಮಾಡಿ ಬಡವರ ಮನೆಗಳನ್ನು ಕೆಡವಲು ಬಿಬಿಎಂಪಿ ಮುಂದಾಗಿದ್ದು, ಪಕ್ಕದ ಅಪಾರ್ಟ್‌ಮೆಂಟ್ ಹಾಗೂ ಕಾಲೇಜು ಒತ್ತುವರಿ ಮಾಡಿಕೊಂಡಿರುವ ಜಾಗ ಸರ್ವೆ ಮಾಡದೇ ಪ್ರಭಾವಿಗಳ ಒತ್ತಡಕ್ಕೆ ಮಣಿದು ನಮಗೆ ಯಾವುದೇ ನೋಟಿಸ್ ನೀಡದೆ ಮನೆ ತೆರವು ಕಾರ್ಯಕ್ಕೆ ಬಿಬಿಎಂಪಿ ಮುಂದಾಗಿದೆ. ಬಿಬಿಎಂಪಿ ಅಧಿಕಾರಿಗಳು ಪ್ರಭಾವಿಗಳ ಅಪಾರ್ಟ್‌ಮೆಂಟ್ ಹಾಗೂ ಕಾಲೇಜು ಒತ್ತುವರಿ ಆಗಿರುವ ಬಗ್ಗೆ ಕೆಂಪು ಗುರುತು ಮಾಡಿದ್ದರು. ಈಗ ಏಕಾಏಕಿ ಅವರ ಜಾಗಗಳನ್ನು ಒತ್ತುವರಿ ತೆರವು ಮಾಡದೇ ನಮ್ಮ ಮನೆಗಳನ್ನು ಒಡೆಯಲು ಮುಂದಾಗಿದ್ದಾರೆ ಎಂದು ಮನೆ ಮಾಲೀಕರಾದ ಉಷಾ ರಾಣಿ ಆಕ್ರೋಶ ವ್ಯಕ್ತಪಡಿಸಿದರು.

'ಹಲವು ವರ್ಷಗಳಿಂದ ಮನೆ ಕಂದಾಯ ಕಟ್ಟಿಕೊಂಡು ಬರುತ್ತಿದ್ದೇವೆ. ಕಾನೂನು ಪ್ರಕಾರ ಯೋಜನಾ ನಕ್ಷೆಗೆ ಬಿಬಿಎಂಪಿಯಿಂದ ಅನುಮೋದನೆ ಪಡೆದಿದ್ದೇವೆ. ಯಾವ ಆಧಾರದ ಮೇಲೆ ನಮ್ಮ ಮನೆ ಒತ್ತುವರಿ ಆಗಿದೆ ಎಂದು ಒಡೆಯುತ್ತಿದ್ದಾರೆ' ಎಂದು ಸ್ಥಳೀಯ ನಿವಾಸಿ ವೆಂಕಟೇಶ ಹೇಳಿದರು.

ಉಷಾ ರಾಣಿ

ವೆಂಕಟೇಶ

ಕಮಲಾ

ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಇಪ್ಪತ್ತು ವರ್ಷದ ಹಿಂದೆ ಬಡಾವಣೆಯಲ್ಲಿ ನಿವೇಶನ ಖರೀದಿ ಮಾಡಿಕೊಂಡು ಮನೆ ಕಟ್ಟಿಸಿಕೊಂಡಿದ್ದೇವೆ. ಆಗ ಒಂದೂವರೆ ಅಡಿಯಷ್ಟು ಮಾತ್ರ ಮೋರಿ ಇತ್ತು. ರಾಜಕಾಲುವೆ ಇತ್ತೆಂದು ನಮಗೆ ಗೊತ್ತಿರಲಿಲ್ಲ. ನಂತರ ರಾಜಕಾಲುವೆ ಆಗಿದೆ. ಮನೆ ಕಟ್ಟಿಸುವ ಮುಂಚೆಯೆ ರಾಜಕಾಲುವೆಗೆ ಜಾಗ ಬಿಟ್ಟು ಮನೆ ಕಟ್ಟಿಸಿಕೊಂಡಿದ್ದೇವೆ. ಈಗ ಅಧಿಕಾರಿಗಳು ಬಂದು ರಾಜಕಾಲುವೆ ಒತ್ತುವರಿ ಮಾಡಿಕೊಂಡಿದ್ದೇವೆ ಎಂದು ಹೇಳಿ ಮನೆ ಒಡೆಯಲು ಮುಂದಾಗಿದ್ದಾರೆ ಎಂದು ಕಮಲಾ ದೂರಿದರು.

ಬಿಡಿಎ, ಬಿಬಿಎಂಪಿ, ಬಿಎಂಟಿಸಿ, ಸ್ಲಂ ಬೋರ್ಡ್‌ಗಳಿಂದ ಅಕ್ರಮ; ಕ್ರಮ ಏಕಿಲ್ಲ– ನಾಗರಿಕರ ಪ್ರಶ್ನೆ

ಇಲಾಖೆಗಳಿಂದ ಕೆರೆ, ಕಾಲುವೆ ಒತ್ತುವರಿ

• ಆರ್. ಮಂಜುನಾಥ್

ಬೆಂಗಳೂರು: ನಗರದ ಪೂರ್ವ ಭಾಗ ಜಲಾವೃತವಾಗಲು ಕಾರಣವಾಗಿರುವ ರಾಜಕಾಲುವೆಗಳ ಒತ್ತುವರಿಯಲ್ಲಿ ಬಿಡಿಎ, ಬಿಬಿಎಂಪಿ, ಬಿಎಂಟಿಸಿಗಳ ಪಾತ್ರ ಹೆಚ್ಚಿದೆ. ಅಲ್ಲದೆ, ಕೋರಮಂಗಲ– ಚಲ್ಲಘಟ್ಟ ವ್ಯಾಲಿಯ ಬೃಹತ್ ಚಲ್ಲಘಟ್ಟ ಕೆರೆಯನ್ನು ಸುಳಿವಿಲ್ಲದಂತೆಯೇ ಮಾಡಿ ಅದರ ಮೇಲೆ ಗಾಲ್ಫ್ ಕೋರ್ಸ್ ಕಟ್ಟಿರುವುದು ಕೂಡ ಮಳೆನೀರು ಐಟಿ ಕಾರಿಡಾರ್ ಹಾಗೂ ಬಡಾವಣೆಗಳಿಗೆ ನುಗ್ಗಲು ಪ್ರಮುಖ ಕಾರಣ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬಡಾವಣೆ, ಕಟ್ಟಡ ಎಂದು ರಾಜಕಾಲುವೆ ಹಾಗೂ ಕೆರೆ ಪ್ರದೇಶವನ್ನು ಬೆಂಗಳೂರು ಪೂರ್ವ ವಲಯದಲ್ಲಿ ಅತಿಹೆಚ್ಚು ಒತ್ತುವರಿ ಮಾಡಿಕೊಂಡಿದೆ. ಇದೆಲ್ಲ ಒತ್ತುವರಿ ಎಂದು ಅಧಿಕೃತವಾಗಿ ಬಿಬಿಎಂಪಿ ದಾಖಲೆಗಳೇ ಹೇಳುತ್ತಿದ್ದರೂ ತೆರವು ಮಾಡಲು ಯಾವ ಅಧಿಕಾರಿಗಳೂ ಮುಂದಾಗುತ್ತಿಲ್ಲ. 20–25 ವರ್ಷದಿಂದ ಇಷ್ಟೆಲ್ಲ ಒತ್ತುವರಿಯಾಗಿದ್ದರೂ, ಹಿಂದೆ ಅಧಿಕಾರ ನಡೆಸಿದ ಪಕ್ಷವಾಗಲಿ, ಈಗ ಅಧಿಕಾರ ನಡೆಸುವವರು ಸರ್ಕಾರದ ಇಲಾಖೆಗಳಿಂದಲೇ ನಡೆದಿರುವ ಒತ್ತುವರಿ ತೆರವಿನ ಬಗ್ಗೆ ಮಾತನಾಡದಿರುವುದು ನಾಗರಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಧರ್ಮಾಂಬುಧಿ ಕೆರೆ ಒತ್ತುವರಿ ಮಾಡಿಕೊಂಡು ನಿಲ್ದಾಣ ಕಟ್ಟಿಕೊಂಡು ನಗರದ ಕೆರೆಗಳ ಒತ್ತುವರಿಗೆ ಮುನ್ನುಡಿ ಬರೆದ ಅಂದಿನ ಬಿಟಿಎಸ್, ಸಿ.ವಿ. ರಾಮನ್‌ನಗರದ ಬಿನ್ನಮಂಗಲದಲ್ಲಿ 15 ಗುಂಟೆ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡು ಬಿಎಂಟಿಎಸ್ ಬಸ್ ಡಿಪೊ ನಿರ್ಮಿಸಿದೆ.

ಒಣಗಿರುವ ಕೆರೆ, ವರ್ಷಗಳಿಂದ ನೀರು ಹರಿದಿಲ್ಲದ ಕಾಲುವೆ ಎಂದು ಹೇಳಿ ಬಿಡಿಎ, ಬಿಬಿಎಂಪಿ ಅಧಿಕಾರಿಗಳು ಅವುಗಳ ಮೇಲೆಯೇ ಬಡಾವಣೆ, ಕಟ್ಟಡಗಳನ್ನು ಕಟ್ಟಲು ಕಾನೂನು ಮಾರ್ಪಡಿಸಿಕೊಂಡಿದ್ದಾರೆ. ಈ ರೀತಿ ಕಾನೂನು ಬದಲಿಸಿಕೊಳ್ಳಬಹುದು ಎಂದರೆ ಅದು ಎಲ್ಲ ರೀತಿಯ ಒತ್ತುವರಿಗಳಿಗೂ ಅನ್ವಯಿಸಬೇಕು. ಅಧಿಕಾರಿಗಳು ಐಷಾರಾಮಿ ಬದುಕಿಗೆ ಒಂದು ಕಾನೂನು, ಸಾರ್ವಜನಿಕರಿಗೆ ಒಂದು ಕಾನೂನು ಏಕೆ ಎಂಬುದು ಪರಿಸರ ಕಾರ್ಯಕರ್ತರ ಪ್ರಶ್ನೆಯಾಗಿದೆ.

ವಿಧಾನಸಭೆ ಕ್ಷೇತ್ರ	ರಾಜಕಾಲುವೆ ಒತ್ತುವರಿ
ಪುಲಕೇಶಿ ನಗರ	1,928.13 ಚ.ಮೀ + 6 ಗುಂಟೆ
ಸರ್ವಜ್ಞನಗರ	1,009.74 ಚ.ಮೀ + 1 ಎಕರೆ 33 ಗುಂಟೆ
ಹೆಬ್ಬಾಳ	27 ಎಕರೆ 7 ಗುಂಟೆ
ಶಿವಾಜಿನಗರ	10.23 ಚ.ಮೀ + 23 ಗುಂಟೆ
ಸಿ.ವಿ.ರಾಮನ್‌ನಗರ	4 ಎಕರೆ 8 ಗುಂಟೆ



ಅಧಿಕಾರಿಗಳು ಈಗಲಾದರೂ ಉಪಕಾರ ಮಾಡಲಿ...

ರಾಮ್ ಪ್ರಸಾದ್

ಚಲ್ಲಘಟ್ಟದಂತಹ ಅತ್ಯಂತ ದೊಡ್ಡ ಕೆರೆಗೆ ಹರಿಯುವ ನೀರಿನ ಕಾಲುವೆಯನ್ನು ಮುಚ್ಚಿ, 112 ಎಕರೆ ಕೆರೆಯನ್ನೇ ಒಣಗಿದ ಪ್ರದೇಶ ಎಂದು ಪ್ರತಿಪಾದಿಸಿ ಗಾಲ್ಫ್ ಕೋರ್ಸ್ ಮಾಡಿಕೊಂಡಿರುವುದರಿಂದ ಮಹದೇವಪುರ ವಲಯದಲ್ಲಿ ಬಡಾವಣೆಗಳು, ಐಟಿ ಕಾರಿಡಾರ್‌ಗಳು ನೀರಿನಲ್ಲಿ ಮುಳುಗಲು ಕಾರಣ. ಚಲ್ಲಘಟ್ಟ ಕೆರೆಯನ್ನು ವ್ಯವಸ್ಥಿತವಾಗಿ ಒಣಗಿಸಿ ಅದನ್ನು ಕಬಳಿಸಲಾಗಿದೆ. ಇದರಿಂದ ಬೃಹತ್ ಪ್ರಮಾಣದಲ್ಲಿ ಮಳೆ ನೀರನ್ನು ಹಿಡಿದುಕೊಳ್ಳಬೇಕಿದ್ದ ಕೆರೆ ಇಲ್ಲದ್ದರಿಂದ ಬೆಳ್ಳಂದೂರು ಕೆರೆಗೆ ಈ ನೀರೆಲ್ಲ ಹೋಗಿ ಅಲ್ಲಿಂದ ಬಡಾವಣೆಗಳಿಗೆ ಹರಿದಿದೆ. ಸಣ್ಣಪುಟ್ಟ ಮನೆಗಳನ್ನು ಒಡೆಯುವ ಅಧಿಕಾರಿಗಳು ಬಿಡಿಎ, ಗಾಲ್ಫ್ ಕೋರ್ಸ್, ಬಿಬಿಎಂಪಿಯಂತಹ ಸರ್ಕಾರದ ಇಲಾಖೆಗಳ ಒತ್ತುವರಿಯನ್ನು ಮೊದಲು ತೆರವು ಮಾಡಲಿ. ಅತ್ಯಂತ ಉನ್ನತ ಸ್ಥಾನದಲ್ಲಿರುವ ಅಧಿಕಾರಿಗಳು ಸೇರಿಕೊಂಡಿರುವ ಗಾಲ್ಫ್ ಕೋರ್ಸ್ ಈಗಲಾದರೂ ಕಟ್ಟಡವನ್ನು ಉಳಿಸಿಕೊಂಡು ಮಳೆನೀರನ್ನು ಹಿಡಿದಿಟ್ಟುಕೊಳ್ಳಲು ಅವಕಾಶ ಮಾಡಿಕೊಟ್ಟರೆ ಬೃಹತ್ ಉಪಕಾರ ಮಾಡಿಕೊಟ್ಟಂತಾಗುತ್ತದೆ. ಈ ಬಗ್ಗೆ ಅಧಿಕಾರಿಗಳು ಯೋಚಿಸಲಿ ಎಂದು ಫ್ರೆಂಡ್ಸ್ ಆಫ್ ಲೇಕ್‌ನ ರಾಮ್‌ಪ್ರಸಾದ್ ಆಗ್ರಹಿಸಿದರು.

ಚಲ್ಲಘಟ್ಟ ಕೆರೆ ಮೇಲೆ ಗಾಲ್ಫ್ ಕೋರ್ಸ್

ಜಗದೀಶ ರೆಡ್ಡಿ

ರಾಜಕಾಲುವೆ ಒತ್ತುವರಿ ಎಲ್ಲೆಡೆ ಆಗಿದೆ. ಇದಕ್ಕೆ ಅಧಿಕಾರಿಗಳೇ ಅನುವು ಮಾಡಿದ್ದಾರೆ. ಬಿಡಿಎ ಅಧಿಕಾರಿಗಳೇ ಒತ್ತುವರಿಗೆ ಮೊದಲ ಕಾರಣ. ಇದು ಒಂದು ಸರ್ಕಾರದ್ದಲ್ಲ. 30 ವರ್ಷಗಳಿಂದ ನಡೆದ ಐಟಿ ಕಾರಿಡಾರ್‌ಗಳ ಬೆಳವಣಿಗೆ, ಕಟ್ಟಡಗಳಿಗೆ ಅನುವು ಮಾಡಿಕೊಟ್ಟಿರುವುದು ಇಂದಿನ ಪ್ರವಾಹದಂತಹ ಪರಿಸ್ಥಿತಿಗೆ ಕಾರಣ. ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು ಸೇರಿದಂತೆ ಬಹುತೇಕ ಎಲ್ಲ ಅಧಿಕಾರಿಗಳು ಕೆರೆಗಳನ್ನು ಅತಿಕ್ರಮಣ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದಾರೆ. ಬಡಾವಣೆಗಳಲ್ಲಿ ರಾಜಕಾಲುವೆ ಮಾರ್ಪಾಟು ಮಾಡಿಕೊಳ್ಳುವ ಸಂದರ್ಭದಲ್ಲಿ ಯಾರು ಕ್ರಮ ಕೈಗೊಳ್ಳಲಿಲ್ಲ. ಕುಂಟೆಗಳನ್ನು ಮುಚ್ಚಿ ಕಟ್ಟಡ, ಬಡಾವಣೆಗಳನ್ನು ಕಟ್ಟಲಾಗಿದೆ. ಇವು ನೀರು ಹಿಡಿದಿಟ್ಟುಕೊಳ್ಳುವ ಪ್ರಮುಖ ತಾಣಗಳಾಗಿದ್ದವು. ಲಕ್ಷ್ಮಣರಾವ್, ಎ.ಟಿ. ರಾಮಸ್ವಾಮಿ, ಕೋಳಿವಾಡ ಸಮಿತಿ ವರದಿಗಳಂತೆ ಯಾರೂ ಕ್ರಮ ಕೈಗೊಂಡಿಲ್ಲ. ಚಲ್ಲಘಟ್ಟ ಎಂಬ ಬೃಹತ್ ಕೆರೆಯನ್ನು ದೊಡ್ಡ ಅಧಿಕಾರಿಗಳೇ ಮುಚ್ಚಿಹಾಕಿ ಅಕ್ರಮವಾಗಿ ಗಾಲ್ಫ್ ಕೋರ್ಸ್ ಮಾಡಿಕೊಂಡಿದ್ದಾರೆ. ರಿಯಲ್ ಎಸ್ಟೇಟ್‌ನಲ್ಲಿ ತೊಡಗಿರುವ ಶಾಸಕರು ಇದಕ್ಕೆಲ್ಲ ಕುಮ್ಮಕ್ಕು ನೀಡಿದ್ದಾರೆ. ಚಲ್ಲಘಟ್ಟದಂತಹ ಬೃಹತ್ ಕೆರೆಯನ್ನು ಮುಚ್ಚಿದ್ದರಿಂದ ಮುಂದಿನ ಭಾಗದಲ್ಲಿ ಜಲಾವೃತಕ್ಕೆ ಪ್ರಮುಖ ಕಾರಣ ಎಂದು ವರ್ತೂರಿನಲ್ಲಿರುವ ಪರಿಸರ ಕಾರ್ಯಕರ್ತ ಜಗದೀಶ ರೆಡ್ಡಿ ದೂರಿದರು.

ಮಳೆಯ ಸವಾಲು ನಿಮ್ಮದೇನು ಜವಾಬು?

ಮಹದೇವಪುರ ವ್ಯಾಪ್ತಿಯ ಕೆಲವು ಪ್ರದೇಶಗಳು ಜೋರು ಮಳೆಗೆ ನಲುಗಿದ್ದೇ ತಡ, ಐಟಿ ಕ್ಷೇತ್ರದಲ್ಲಿ ಕೆಲಸ ಮಾಡುವವರು ವ್ಯವಸ್ಥೆಯನ್ನು ಕಟುವಾಗಿ ದೂರಿದರು. ವ್ಯವಸ್ಥೆ ಹೀಗೆಯೇ ಇದ್ದರೆ ಪರ್ಯಾಯ ಮಾರ್ಗಗಳನ್ನು ಹುಡುಕಿ ಬೇರೆಡೆಗೆ ಹೊರಡಬೇಕಾದೀತು ಎಂದು ಉದ್ಯಮಿಗಳು ಎಚ್ಚರಿಸಿದ್ದಾರೆ. ಇದರ ಬೆನ್ನಲ್ಲೇ ಅಂಥವರಿಗೇ ಸವಾಲೊಡ್ಡುವಂಥ #Leavebengaluru ಎಂಬ ಟ್ವಿಟರ್ ಅಭಿಯಾನ ಶುರುವಾಗಿದೆ. ನಿಮ್ಮ ದೃಷ್ಟಿಯಲ್ಲಿ ಇಂತಹ ಸಮಸ್ಯೆಗೆ ಕ್ರಿಯಾತ್ಮಕ ಪರಿಹಾರ ಏನು? ನೀರು ನಿಲ್ಲುವ ಉಸಾಬರಿಯಿಂದ ಯಶಸ್ವಿಯಾಗಿ ಹೊರಬಂದ ಅನುಭವ ನಿಮ್ಮದೂ ಆಗಿದ್ದರೆ ಬರೆದು ಕಳುಹಿಸಿ. ಒತ್ತುವರಿ ತೆರವಿಗೆ ಪರಿಹಾರವನ್ನೂ ಸೂಚಿಸಬಹುದು. ಆಯ್ದ ಬರಹಗಳು ಪತ್ರಿಕೆಯಲ್ಲಿ ಪ್ರಕಟಗೊಳ್ಳಲಿವೆ. ಬರಹ 60 ಪದಗಳಿಗೆ ಸೀಮಿತವಾಗಿರಲಿ. ನಿಮ್ಮ ಪೂರ್ಣ ವಿಳಾಸ, ಫೋಟೊ ಕೂಡ ಕಳುಹಿಸಿ.

9606038256

ರಾಜಕಾಲುವೆ ಒತ್ತುವರಿ ತೆರವಿಗೆ ತಹಶೀಲ್ದಾರ್ ನೋಟಿಸ್

ಕೆ.ಆರ್.ಪುರ: ರಾಜಕಾಲುವೆ ಒತ್ತುವರಿ ಜಾಗ ತೆರವುಗೊಳಿಸುವಂತೆ ಮಹದೇವಪುರದ ರೈನ್ ಬೋ ಡ್ರೈವ್ ಬಡಾವಣೆಯ ಮನೆಗಳಿಗೆ ಬೆಂಗಳೂರು ಪೂರ್ವ ತಾಲ್ಲೂಕು ತಹಶಿಲ್ದಾರ್ ಅಜಿತ್ ಕುಮಾರ್ ನೋಟಿಸ್ ಜಾರಿ ಮಾಡಿದ್ದಾರೆ.

ಇತ್ತೀಚೆಗೆ ಸುರಿದ ಧಾರಾಕಾರ ಮಳೆಯಿಂದ ರೈನ್ ಬೋ ಲೇಔಟ್ ಜಲವೃತಗೊಂಡು ರಾಷ್ಟ್ರಮಟ್ಟದಲ್ಲಿ ಚರ್ಚೆಗೆ ಕಾರಣವಾಗಿತ್ತು. ಇದೀಗ ಸರ್ಕಾರ ಕಠಿಣ ಕ್ರಮಕ್ಕೆ ಮುಂದಾಗಿದೆ.

ರೈನ್ ಬೋ ಲೇಔಟ್ ಒಂದು ಭಾಗದ ಕೋಟ್ಯಂತರ ರೂಪಾಯಿ ಮೌಲ್ಯದ ಮನೆಗಳಿಗೆ ಪ್ರವಾಹ ನೀರು ನುಗ್ಗಿ ಸಾಕಷ್ಟು ಹಾನಿ ಉಂಟಾಗಿತ್ತು. ಇದಕ್ಕೆ ಮೂಲ ಕಾರಣ ರಾಜಕಾಲುವೆ ಒತ್ತುವರಿ ಮಾಡಿ ಮನೆಗಳನ್ನು ನಿರ್ಮಿಸಿರುವುದು ಎಂದು ಸ್ಥಳೀಯ ನಾಗರಿಕರು ದೂರಿದ್ದರು.

ಬೆಂಗಳೂರು ಪೂರ್ವ ತಾಲ್ಲೂಕು ತಹಶೀಲ್ದಾರ್ ಮನೆ ಮಾಲೀಕರಿಗೆ ಒತ್ತುವರಿ ತೆರವು ನೋಟಿಸ್ ನೀಡಿದ್ದಾರೆ. ಅಲ್ಲದೆ, ರೈನ್ ಬೋ ಲೇಔಟ್ ನಿರ್ಮಾಣದ ಬಿಲ್ಡರ್ಸ್‌ಗಳಿಗೆ ಕಂದಾಯ ಇಲಾಖೆಯ ತೆರವಿಗೆ ಸೂಚನೆ ನೀಡಿದೆ. ಈ ಸಂಬಂಧ ಏಳು ದಿನಗಳ ಕಾಲಾವಕಾಶ ನೀಡಿ ಷರತ್ತುಗಳನ್ನು ವಿಧಿಸಿದೆ. ರೈನ್ಬೋ ಡ್ರೈವ್ ಲೇಔಟ್‌ನಲ್ಲಿ ಜಿಲ್ಲಾಡಳಿತ ಸರ್ವೆ ನಡೆಸಿದ್ದು, ಕಾಲುವೆ ಒತ್ತುವರಿ ಮಾಡಿ ವಿಲ್ಲಾಗಳನ್ನ ನಿರ್ಮಿಸಿರುವುದು ಬಹಿರಂಗವಾಗಿದೆ.

ಹೀಗಾಗಿ ಒತ್ತುವರಿ ಜಾಗವನ್ನು ತೆರವು ಮಾಡದಿದ್ರೆ ನಾವೇ ಮಾಡುತ್ತೇವೆ. ತೆರವು ಕಾರ್ಯಾಚರಣೆ ವೆಚ್ಚ ನೀವೇ ಭರಿಸಬೇಕೆಂದು ನಿವಾಸಿಗಳಿಗೆ ತಹಶೀಲ್ದಾರ್ ಎಚ್ಚರಿಕೆ ನೀಡಿದ್ದಾರೆ.

‘ಆಜಾದಿ ಕ್ವೆಸ್ಟ್: ಗೇಮಿಂಗ್ ಆ್ಯಪ್ ಬಿಡುಗಡೆ’

ಬೆಂಗಳೂರು: ‘ಭಾರತದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಮತ್ತು ಚಳವಳಿಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಆಜಾದಿ ಕ್ವೆಸ್ಟ್ ಎಂಬ ಶೈಕ್ಷಣಿಕ ಗೇಮಿಂಗ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ’ ಎಂದು ಕೇಂದ್ರ ವಾರ್ತಾ ಇಲಾಖೆಯ ಹೆಚ್ಚುವರಿ ಮಹಾನಿರ್ದೇಶಕ ಎಸ್.ಜಿ. ರವೀಂದ್ರ ಹೇಳಿದರು.

‘ಶಿಕ್ಷಣದ ಜೊತೆಗೆ ಮನರಂಜನೆ ನೀಡುವ ಉದ್ದೇಶದಿಂದ ಕೇಂದ್ರ ವಾರ್ತಾ ಮತ್ತು ಪ್ರಸಾರ ಇಲಾಖೆ ಮತ್ತು ಜಿಂಗಾ ಇಂಡಿಯಾ ಸಹಯೋಗದಲ್ಲಿ ಆಜಾದಿ ಕ್ವೆಸ್ಟ್ ಎಂಬ ಗೇಮಿಂಗ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ’ ಎಂದು ತಿಳಿಸಿದರು.

‘ಆಟಗಾರನಿಗೆ ಭಾರತದ ಸ್ವಾತಂತ್ರ್ಯ ಹೋರಾಟಗಾರರ ಸಾಹಸಗಳ ಬಗ್ಗೆ ತಿಳಿದುಕೊಳ್ಳಲು ವೇದಿಕೆ ಕಲ್ಪಿಸುತ್ತದೆ. ಸದ್ಯ ಈ ಆ್ಯಪ್ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಲಭ್ಯವಿದೆ. ಇದರಲ್ಲಿ 495 ಹಂತಗಳಿದ್ದು, 750 ಪ್ರಶ್ನೆಗಳಿವೆ. ಎಲ್ಲವನ್ನೂ ರಸಪ್ರಶ್ನೆ ರೂಪದಲ್ಲಿ ವಿನ್ಯಾಸ ಮಾಡಲಾಗಿದೆ. ಆಟಗಾರರು ಎಲ್ಲಾ ಹಂತಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಸಾಧನೆಗೆ ತಕ್ಕಂತೆ ಆನ್‌ಲೈನ್ ಮೂಲಕ ಪ್ರಮಾಣಪತ್ರಗಳನ್ನು ನೀಡಲಾಗುತ್ತದೆ ಎಂದರು.

ಈ ಲಿಂಕ್ ಬಳಸಿ https://play.google.com/store/apps/details?id=com.zynga.heroes.of.bharat ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಕೋವಿಡ್ ಇಳಿಕೆ

ಬೆಂಗಳೂರು: ನಗರದಲ್ಲಿ ಕಳೆದ ತಿಂಗಳು ಸಾವಿರದ ಗಡಿಗೆ ಏರಿಕೆ ಕಂಡಿದ್ದ ಕೋವಿಡ್ ಹೊಸ ಪ್ರಕರಣಗಳು, ಈ ತಿಂಗಳು 500ರ ಗಡಿಯೊಳಗೆ ಇವೆ. ಇದರಿಂದಾಗಿ ಸಕ್ರಿಯ ಪ್ರಕರಣಗಳು 2,612ಕ್ಕೆ ಇಳಿಕೆಯಾಗಿವೆ.

ಹೊಸ ಪ್ರಕರಣಗಳ ಜತೆಗೆ ಆಸ್ಪತ್ರೆ ದಾಖಲಾತಿಯೂ ಇಳಿಕೆಯಾಗಿದೆ. ಸೋಂಕಿತರಲ್ಲಿ 59 ಜನ ಆಸ್ಪತ್ರೆಗೆ ದಾಖಲಾಗಿದ್ದು,16 ಮಂದಿ ಮಾತ್ರ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಗರದಲ್ಲಿ ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 18.68 ಲಕ್ಷ ತಲುಪಿದೆ. 18.48 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

ಸೆಲ್ಕೊ: ‘ಸೂರ್ಯಮಿತ್ರ’ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ


ನೇವಿಲ್ಲೆ ವಿಲಿಯಮ್ಸ್

ರಿಚೆಂಡಾ ವಾನ್ ಲೀವೆನ್

ಬೆಂಗಳೂರು: ಸೆಲ್ಕೊ ಸಂಸ್ಥೆಯ ಅಂತರರಾಷ್ಟ್ರೀಯ ‘ಸೂರ್ಯಮಿತ್ರ’ ವಾರ್ಷಿಕ ಪ್ರಶಸ್ತಿಗೆ ಸೌರತಜ್ಞರಾದ ನೇವಿಲ್ಲೆ ವಿಲಿಯಮ್ಸ್, ರಿಚೆಂಡಾ ವಾನ್ ಲೀವೆನ್ ಹಾಗೂ ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್ ಸಂಸ್ಥೆ ಭಾಜನವಾಗಿದೆ.

ಸೌರಶಕ್ತಿಯ ಉಪಯೋಗ ಉತ್ತೇಜಿಸುತ್ತಿರುವ ನೇವಿಲ್ಲೆ ವಿಲಿಯಮ್ಸ್ 2020ನೇ ಸಾಲಿನ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇವರು ‘ಸೋಲಾರ್ ಎಲೆಕ್ಟ್ರಿಕಲ್ ಲೈಟ್ ಫಂಡ್’ (ಎಸ್‌ಇಎಲ್‌ಎಫ್) ಅನ್ನು 1990 ರಲ್ಲಿ ವಾಷಿಂಗ್ಟನ್‌ನಲ್ಲಿ ಸ್ಥಾಪಿಸಿದ್ದರು.

2021 ನೇ ಸಾಲಿನ ಪ್ರಶಸ್ತಿಗೆ ಇಂಧನ ಬಳಕೆ ಕುರಿತ ಜಾಗತಿಕ ಮನ್ನಣೆ ಪಡೆದ ತಜ್ಞೆ ರಿಚೆಂಡಾ ವಾನ್ ಲೀವೆನ್ ಆಯ್ಕೆಯಾಗಿದ್ದಾರೆ. ರಿಚೆಂಡಾ ಪ್ರಸ್ತುತ ‘ಆಸ್ಪೆನ್ ನೆಟ್‌ವರ್ಕ್ ಆಫ್ ಡೆವಲಪ್‌ಮೆಂಟ್ ಎಂಟಪ್ರೆನರ್ಸ್ ’ನ ಕಾರ್ಯನಿರ್ವಾಹಕ ನಿರ್ದೇಶಕಿ. ಶುದ್ಧ ಇಂಧನ ಪರಿಹಾರಗಳ ಮೂಲಕ ಸುಸ್ಥಿರ ಅಭಿವೃದ್ಧಿಯ ರಾಯಭಾರಿಯಾಗಿ ಕೆಲಸ ಮಾಡುತ್ತಿರುವ ಅವರು ಜಾಗತಿಕವಾಗಿ ಗುರುತಿಸಿಕೊಂಡಿದ್ದಾರೆ.

2022 ನೇ ಸಾಲಿನ ಪ್ರಶಸ್ತಿಗೆ ಕರ್ನಾಟಕದ ವಿವಿಧೆಡೆ ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಮೂಲ ಸೌಕರ್ಯ ಬಲಪಡಿಸುವ ಕೆಲಸ ಮಾಡುತ್ತಿರುವ ‘ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್ ಸಂಸ್ಥೆ’ (ಎಸ್‌ವಿವೈಎಂ) ಪಾತ್ರವಾಗಿದೆ. ಡಾ.ಆರ್.ಬಾಲಸುಬ್ರಮಣ್ಯಂ ನೇತೃತ್ವದಲ್ಲಿ 1984 ರಿಂದ ಈ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ.

ಪ್ರಶಸ್ತಿ ಪ್ರದಾನ ಸಮಾರಂಭವು ಬೆಂಗಳೂರಿನ ವಸಂತನಗರದ ಅಂಬೇಡ್ಕರ್ ಭವನದಲ್ಲಿ ಸೆ.24 ರಂದು ಸಂಜೆ ನಡೆಯಲಿದೆ ಎಂದು ಸೆಲ್ಕೋ ಇಂಡಿಯಾದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮೋಹನ ಭಾಸ್ಕರ ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಡಾ.ಎಚ್. ಹರೀಶ್ ಹಂದೆ ಸ್ಥಾಪಕರಾಗಿರುವ ಸೆಲ್ಕೋ ಸಂಸ್ಥೆ 2012ರಿಂದ ಈ ಪ್ರಶಸ್ತಿ ನೀಡುತ್ತಿದೆ.

ಬಿಬಿಎಂಪಿ: 4 ವಾರ್ಡ್ ಮೀಸಲಾತಿ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 243 ವಾರ್ಡ್‌ಗಳ ಪೈಕಿ ನಾಲ್ಕು ವಾರ್ಡ್‌ಗಳ ಮೀಸಲಾತಿಯನ್ನು ಮರುನಿಗದಿ ಮಾಡಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಕೆ.ಆರ್. ಪುರ ವಿಧಾನಸಭೆ ಕ್ಷೇತ್ರದ 88ನೇ ಬಸವಪುರ ವಾರ್ಡ್ ಈ ಹಿಂದೆ ಇದ್ದ ಪರಿಶಿಷ್ಟ ಜಾತಿ ಮೀಸಲಾತಿಯನ್ನು ಬದಲಿಸಿ ಸಾಮಾನ್ಯ ಮಹಿಳೆ ಎಂದು ಮರುನಿಗದಿ ಮಾಡಿದೆ. ಬಿ.ಟಿ.ಎಂ. ವಿಧಾನಸಭೆ ಕ್ಷೇತ್ರದ 185ನೇ ಈಜಿಪುರ ವಾರ್ಡ್‌ನ ಸಾಮಾನ್ಯ ಮಹಿಳೆ ಮೀಸಲಾತಿಯ ಬದಲು ಪರಿಶಿಷ್ಟ ಜಾತಿ ಎಂದು ಮರು ನಿಗದಿ ಮಾಡಲಾಗಿದೆ.

ಇದಲ್ಲದೆ, ದಾಸರಹಳ್ಳಿ ಕ್ಷೇತ್ರದ 23ನೇ ನೆಲಗದರೇನಹಳ್ಳಿ ವಾರ್ಡ್ ಮೀಸಲಾತಿಯನ್ನು ಸಾಮಾನ್ಯ ಮಹಿಳೆಯಿಂದ ಪರಿಶಿಷ್ಟ ಪಂಗಡ ಮಹಿಳೆ ಹಾಗೂ ಸರ್ವಜ್ಞನಗರ ವಿಧಾನಸಭೆ ಕ್ಷೇತ್ರದ 96ನೇ ವಾರ್ಡ್ ಕಾಡುಗೊಂಡನಹಳ್ಳಿ ಮೀಸಲಾತಿಯನ್ನು ಪರಿಶಿಷ್ಟ ಪಂಗಡ ಮಹಿಳೆಯಿಂದ ಸಾಮಾನ್ಯ ಮಹಿಳೆಗೆ ಮರುನಿಗದಿ ಮಾಡಿ ಆದೇಶ ಹೊರಡಿಸಲಾಗಿದೆ.

ಈಜಿಪುರ ವಾರ್ಡ್‌ನಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ 6,717 ಇದ್ದು, ಬಸವನಪುರ ವಾರ್ಡ್‌ನಲ್ಲಿ 6,511 ಇದೆ. ಮೀಸಲಾತಿ ನಿಗದಿಪಡಿಸುವಾಗ ಬಿಬಿಎಂಪಿಯ ಎಲ್ಲ 243 ವಾರ್ಡ್‌ಗಳಲ್ಲಿ ಅತಿ ಹೆಚ್ಚಿನ ಪರಿಶಿಷ್ಟ ಜಾತಿ ಜನಸಂಖ್ಯೆಯ ಮೊದಲ 28 ವಾರ್ಡ್‌ಗಳಿಗೆ ಇಳಿಕೆ ಕ್ರಮದಲ್ಲಿ ಮೀಸಲಿಡಬೇಕು. ಅದರಂತೆ ಬಸವನಪುರ ಮತ್ತು ಈಜಿಪುರ ವಾರ್ಡ್ ಮೀಸಲಾತಿ ಮರುನಿಗದಿಪಡಿಸಲಾಗಿದೆ.

ಇನ್ನು, ನೆಲಗದರೇನಹಳ್ಳಿ ವಾರ್ಡ್‌ನಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ 1,259 ಇದ್ದು, ಕಾಡುಗೊಂಡನಹಳ್ಳಿ ವಾರ್ಡ್‌ನಲ್ಲಿ 1,217 ಇದೆ. 2011ರ ಜನಸಂಖ್ಯೆ ಆಧಾರದಲ್ಲಿ ಮೊದಲ 4 ವಾರ್ಡ್‌ಗಳಿಗೆ ಇಳಿಕೆ ಕ್ರಮದಲ್ಲಿ ಪರಿಶಿಷ್ಟ ಪಂಗಡಕ್ಕೆ ಮೀಸಲಿಡಲು ತೀರ್ಮಾನಿಸಿ ಕಾಡುಗೊಂಡನಹಳ್ಳಿ ಮತ್ತು ನೆಲಗದೆರೇನಹಳ್ಳಿ ವಾರ್ಡ್ ಮೀಸಲಾತಿ ಮರುನಿಗದಿ ಮಾಡಲಾಗಿದೆ ಎಂದು ಸೆ.9ರ ದಿನಾಂಕವಿರುವ ನಗರಾಭಿವೃದ್ಧಿ ಇಲಾಖೆ ಆದೇಶದಲ್ಲಿ ವಿವರಿಸಲಾಗಿದೆ.

‘ಸಮಾನತೆ ತರುವ ಭಾಷಾ ನೀತಿ ಅಗತ್ಯ’

ಬೆಂಗಳೂರು: ‘ಸಮಾನತೆಯೇ ಜೀವಾಳವಾದ ಭಾರತೀಯ ಸಂವಿಧಾನಕ್ಕೆ ಅಂಟಿಕೊಂಡಿರುವ ಅಸಮಾನತೆಯ ಕಳಂಕವೆಂದರೆ ಭಾರತದ ಇಂದಿನ ಭಾಷಾನೀತಿ’ ಎಂದು ಬರಹಗಾರ ಆನಂದ್ ಕಳವಳ ವ್ಯಕ್ತಪಡಿಸಿದರು.

ಬನವಾಸಿ ಬಳಗದ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್‌ನ ಅಕ್ಕಮಹಾದೇವಿ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ‘ಹಿಂದಿ ಹೇರಿಕೆ ಮತ್ತು ನುಡಿ ಸಮಾನತೆ ಒಂದು ಮಾತುಕತೆ’ಯಲ್ಲಿ ಅವರು ಮಾತನಾಡಿದರು.

‘ಬಹುಭಾಷಿಕ ನಾಡುಗಳಲ್ಲಿ ಯಾವುದೇ ಒಂದು ಭಾಷೆಯನ್ನು ಉಳಿದವುಗಳಿಗಿಂತ ಮೇಲಿರಿಸಿದರೆ ಅದು ಉಳಿದ ನುಡಿಗಳಿಗೆ ಕಂಟಕವಾಗುವ ಅಪಾಯವಿದೆ. ಭಾರತದ ಸ್ಥಿತಿ ಅದೇ ಆಗಿದೆ’ ಎಂದು ಹೇಳಿದರು.

‘ಪ್ರಜ್ಞಾವಂತ ಭಾರತೀಯರೆಲ್ಲರೂ ಕೆಡುಕು ಸರಿಪಡಿಸಿಕೊಳ್ಳುವತ್ತ ಆಲೋಚಿಸಬೇಕಾಗಿದೆ. ನುಡಿ ಸಮಾನತೆಯನ್ನು ಎತ್ತಿ ಹಿಡಿಯುವ ಭಾಷಾನೀತಿಯ ಬಗ್ಗೆ ನಾವೆಲ್ಲರೂ ಇಂದು ಆಲೋಚಿಸುವ, ಅದರ ಕುರಿತು ಮಾತನ್ನಾಡುವ ಅಗತ್ಯ ಹಿಂದಿಗಿಂತ ಹೆಚ್ಚಾಗಿದೆ’ ಎಂದು ಪ್ರತಿಪಾದಿಸಿದರು.

‘ಕನ್ನಡದ ಉಳಿವಿಗಾಗಿ ಭಾರತದ ಭಾಷಾನೀತಿಯು ಬದಲಾಗಬೇಕಾಗಿದೆ’ ಎಂದು ಹೇಳಿದರು.

ಜೈನ್ ಆಸ್ಪತ್ರೆ: 26 ಮ್ಯಾಕ್ಸಿಲೋಫೇಶಿಯಲ್‌ಗಳಿಗೆ ತರಬೇತಿ

ಸೀಳು ತುಟಿ ಉಚಿತ ಶಸ್ತ್ರಚಿಕಿತ್ಸೆ

• ಖಲೀಲಅಹ್ಮದ ಶೇಖ

ಬೆಂಗಳೂರು: ‘ಸ್ಮೈಲ್ ಟ್ರೇನ್ ಇಂಡಿಯಾ ಮತ್ತು ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆ ಸಹಭಾಗಿತ್ವದಲ್ಲಿ ಸೀಳು ತುಟಿ ಹಾಗೂ ಸೀಳು ಅಂಗಳ ಹೊಂದಿರುವ ಮಕ್ಕಳ ಮುಖದಲ್ಲಿ ನಗು ತರಿಸಲಾಗುತ್ತಿದೆ.

ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆ ಮತ್ತು ಸ್ಮೈಲ್ ಟ್ರೈನ್ ಇಂಡಿಯಾ ಸಹಭಾಗಿತ್ವದಲ್ಲಿ 2005ರಿಂದ ಇದುವರೆಗೂ ಸೀಳುತುಟಿ, ಸೀಳು ಅಂಗಳ ಉಚಿತ ಶಸ್ತ್ರಚಿಕಿತ್ಸೆಯನ್ನು ಮಾಡಲಾಗುತ್ತಿದೆ. ಇಲ್ಲಿಯವರೆಗೂ 14,500 ಮಕ್ಕಳು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ. ಇದರ ಜೊತೆಗೆ ಸಮಗ್ರ ಆರೈಕೆ, ಸ್ಪೀಚ್ ಥೆರಪಿ, ಆರ್ಥೊಡಾಂಟಿಕ್ಸ್, ದಂತ ಮತ್ತು ಪೋಷಣೆಯನ್ನು ನೀಡಲಾಗುತ್ತದೆ ಎಂದು ಡಾ.ಕೃಷ್ಣಮೂರ್ತಿ ಬೋನಂತಾಯ ಮಾಹಿತಿ ನೀಡಿದರು.

ಸೀಳು ತುಟಿ ಶಸ್ತ್ರ ಚಿಕತ್ಸೆ ಪಡೆದ ಮಗು (ಮೊದಲು ಮತ್ತು ನಂತರ)

2010ರಲ್ಲಿ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ಪ್ರಾರಂಭಿಸಿದ ಸರ್ಜಿಕಲ್ ಫೆಲೋಶಿಪ್ ಕಾರ್ಯಕ್ರಮದ ಅಡಿಯಲ್ಲಿ 26 ಯುವಕರು ಮ್ಯಾಕ್ಸಿಲೋಫೇಶಿಯಲ್ ಶಸ್ತ್ರವೈದ್ಯರಾಗಿ ತರಬೇತಿ ಪಡೆದುಕೊಂಡಿದ್ದಾರೆ. ದೇಶದ ವಿವಿಧ ರಾಜ್ಯಗಳಲ್ಲಿ ಸ್ಮೈಲ್ ಟ್ರೈನ್ ಇಂಡಿಯಾ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಸರ್ಜಿಕಲ್ ಫೆಲೋಶಿಪ್ ಕಾರ್ಯಕ್ರಮವು ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ. ಇಲ್ಲಿ ತರಬೇತಿ ಪಡೆದ 26 ಫೆಲೊಗಳಲ್ಲಿ 12 ಜನ ಉತ್ತರಾಖಂಡ, ಬಿಹಾರ, ಪಶ್ಚಿಮ ಬಂಗಾಳ, ಗುಜರಾತ್, ತಮಿಳನಾಡು, ಕೇರಳ ಮತ್ತು ನೇಪಾಳದಲ್ಲಿರುವ ಸ್ಮೈಲ್ ಟ್ರೈನ್ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

‘35 ವರ್ಷ ಮ್ಯಾಕ್ಸಿಫೇಶಿಯಲ್ ಸರ್ಜನ್ ಆಗಿ ಕಾರ್ಯನಿರ್ವಹಿಸಿದ್ದೇನೆ. 2010ರಿಂದ ವೃತ್ತಿಪರರಿಗೆ ತರಬೇತಿ ನೀಡಲು ಸರ್ಜಿಕಲ್ ಫೆಲೋಶಿಪ್ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಸೀಳು ತುಟಿ ಮತ್ತು ಅಂಗಳ ಸಮಸ್ಯೆಗೆ ಸ್ಮೈಲ್ ಟ್ರೈನ್ ಇಂಡಿಯಾ ಉಚಿತವಾಗಿ ಚಿಕತ್ಸೆ ನೀಡುತ್ತಿದ್ದು, ಇದೊಂದು ಲಾಭರಹಿತ ಸಂಸ್ಥೆಯಾಗಿದೆ’ ಎಂದು ಡಾ.ಕೃಷ್ಣಮೂರ್ತಿ ಬೋನಂತಾಯ ತಮ್ಮ ಅನುಭವವನ್ನು ಹಂಚಿಕೊಂಡರು.

‘ಸಾವರ್ಕರ್ ವ್ಯಕ್ತಿತ್ವಕ್ಕೆ ಧಕ್ಕೆ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ಭಾರತವನ್ನು ಛಿದ್ರಗೊಳಿಸುವ ಹುನ್ನಾರ ಮಾಡುತ್ತಿರುವ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಸಾವರ್ಕರ್ ಅವರನ್ನು ಹೇಡಿ ಹಾಗೂ ದೇಶ ವಿರೋಧಿ ಎಂಬಂತೆ ಬಿಂಬಿಸಲು ವ್ಯವಸ್ಥಿತವಾಗಿ ಸಂಚು ನಡೆಸುತ್ತಿವೆ ಎಂದು ವೀರ ಸಾವರ್ಕರ್ ಮೊಮ್ಮಗ ಸಾತ್ಯಕಿ ಸಾವರ್ಕರ್ ದೂರಿದರು.

ವಿವೇಕ ಜಾಗೃತಿ ಸಂಸ್ಥೆ ವತಿಯಿಂದ ಕೆಂಗೇರಿ ಉಪನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಜಯೋಸ್ತುತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಾಲ್ಯದಿಂದಲೇ ತಮ್ಮದೇ ಆದ ವಿಭಿನ್ನ ಹೋರಾಟ ಹಾಗೂ ಬರಹಗಳಿಂದ ಸ್ವಾತಂತ್ರ್ಯ ಕಿಡಿಯನ್ನು ಹೊತ್ತಿಸಿದ್ದ ಸಾವರ್ಕರ್ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗಿದ್ದರು. ವಿವಿಧ ಜಾತಿಗಳಿಂದ, ಸಿಖ್ , ಜೈನ್ ,ಬೌದ್ಧ ಧರ್ಮಗಳ ಹೆಸರಿನಲ್ಲಿ ಇಬ್ಭಾಗವಾಗಿದ್ದ ಸಮಾಜವನ್ನು ಹಿಂದುತ್ವದ ಕಲ್ಪನೆಯಡಿ ಒಟ್ಟುಗೂಡಿಸಿ, ಸ್ವಾತಂತ್ರ್ಯದ ರಣ ಕಹಳೆ ಮೊಳಗಿಸುವ ಗುರಿ ಹೊಂದಿದ್ದರು. ಭಾರತ ಒಡೆದವರಿಗೆ, ಒಡೆದು ಆಳುವ ಮನಸ್ಥಿತಿ ಇರುವವರಿಗೆ ಈ ವಿಚಾರಧಾರೆ ಸಹ್ಯವಾಗಲಿಲ್ಲ ಎಂದರು.

ಜಯೋಸ್ತುತಿ ಕಾರ್ಯಕ್ರಮದಲ್ಲಿ ಸಾತ್ಯಕಿ ಸಾವರ್ಕರ್ ಪಾಲ್ಗೊಂಡಿದ್ದರು. ಸಚಿವ ಎಸ್ ಟಿ ಸೋಮಶೇಖರ್, ಸಂಸದ ಡಿ.ವಿ.ಸದಾನಂದಗೌಡ, ಮುಖಂಡರಾದ ಅನಿಲ್ ಚಳಗೇರಿ ರಮೇಶ್, ರ.ಆಂಜನಪ್ಪ, ಎಂ ಜೆ ನಾಗರಾಜ್, ಉಪೇಂದ್ರಕುಮಾರ್ ಇದ್ದಾರೆ

ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ಸಾವರ್ಕರ್ ಒಬ್ಬ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ. ಅವರ ಕುರಿತ ನಿಜ ಮಾಹಿತಿಯನ್ನು ದೇಶದ ಪ್ರತಿಯೊಬ್ಬರಿಗೂ ತಲುಪಿಸಬೇಕಿದೆ. ಈ ನಿಟ್ಟನಲ್ಲಿ ರಾಜ್ಯದ ಪ್ರತಿಯೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲೂ ಸಾವರ್ಕರ್ ಕುರಿತ ಕಾರ್ಯಕ್ರಮ ಹಮ್ಮಿಕೊಳ್ಳಲು ಪಕ್ಷದ ವತಿಯಿಂದ ನಿರ್ಧಾರ ಮಾಡಲಾಗಿದೆ ಎಂದು ಹೇಳಿದರು.

ಗಾಂಧಿ ಹೊರತು ಪಡಿಸಿದಂತೆ ಯಾರೊಬ್ಬರನ್ನು ಸ್ವಾತಂತ್ರ್ಯ ಹೋರಾಟಗಾರ ಎಂದು ಒಪ್ಪಿಕೊಳ್ಳಲು ಕಾಂಗ್ರೆಸ್ ಸಿದ್ದವಿಲ್ಲ. ಸಾವರ್ಕರ್ ಅಂತಹ ನೂರಾರು ಹೋರಾಟದಿಂದ ಸ್ವಾತಂತ್ರ್ಯ ದೊರಕಿದೆ ಎಂಬುದನ್ನು ಎಲ್ಲರು ಒಪ್ಪಿಕೊಳ್ಳಲೇಬೇಕು ಎಂದರು.

ಸಂಸದ ಡಿ.ವಿ.ಸದಾನಂದಗೌಡ ಮಾತನಾಡಿ, ಕಾಂಗ್ರೆಸ್ ಪಕ್ಷವು ಒಂದು ಕೋಮಿನ ಓಲೈಕೆಗಾಗಿ ಸಾವರ್ಕರ್ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಕೆಲಸ ಮಾಡುತ್ತಿದೆ. ಜನತೆಗೆ ಇದೀಗ ಸತ್ಯದ ಅರಿವು ಆಗುತ್ತಿದೆ ಎಂದು ಹೇಳಿದರು.

ಮುಖಂಡರಾದ ಅನಿಲ್ ಚಳಗೇರಿ ರಮೇಶ್, ರ.ಆಂಜನಪ್ಪ ಎಂ.ಜೆ.ನಾಗರಾಜ್, ಉಪೇಂದ್ರಕುಮಾರ್ ಉಪಸ್ಥಿತರಿದ್ದರು.

ಅಯೋಧ್ಯೆ ರಾಮಜನ್ಮಭೂಮಿ ಟ್ರಸ್ಟ್ ಸಭೆಯಲ್ಲಿ ಸಮಿತಿ ನಿರ್ಣಯ

ಅಯೋಧ್ಯೆಯಲ್ಲಿ ಶ್ವೇತ ಶಿಲೆಯ ರಾಮ

ಪ್ರಜಾವಾಣಿ ವಾರ್ತೆ

ಉಡುಪಿ: ಅಯೋಧ್ಯೆ ರಾಮ ಮಂದಿರದಲ್ಲಿ ನೀಲಿ ಮಿಶ್ರಿತ ಶ್ವೇತ ಶಿಲೆಯ ಶ್ರೀರಾಮನ ವಿಗ್ರಹ ಪ್ರತಿಷ್ಠಾಪಿಸಲು ಭಾನುವಾರ ಅಯೋಧ್ಯೆಯಲ್ಲಿ ನಡೆದ ರಾಮ ಮಂದಿರ ಟ್ರಸ್ಟ್ ಸಭೆಯಲ್ಲಿ ನಿರ್ಣಯಿಸಲಾಗಿದೆ ಎಂದು ಪೇಜಾವರ ಮಠದ ಸಿಬ್ಬಂದಿ ತಿಳಿಸಿದ್ದಾರೆ.

ಮಂದಿರ ನಿರ್ಮಾಣಕ್ಕೆ ₹400 ಕೋಟಿ ಅಂದಾಜು ವೆಚ್ಚ ಮಾಡಲಾಗಿತ್ತು. ಆದರೆ, ಹಲವು ಕಾರಣಗಳಿಂದ ನಿರ್ಮಾಣ ವೆಚ್ಚ ₹1,300 ಕೋಟಿ ತಗಲಬಹುದು ಎಂದು ಈಗ ಅಂದಾಜಿಸಲಾಗಿದೆ. ಮಂದಿರಕ್ಕಾಗಿ ಭಕ್ತರಿಂದ ತಿಂಗಳಿಗೆ ₹50 ಲಕ್ಷದಿಂದ ₹1 ಕೋಟಿವರೆಗೂ ದೇಣಿಗೆ ಬರುತ್ತಿದೆ. ಇಲ್ಲಿಯವರೆಗೂ ₹300 ಕೋಟಿ ಖರ್ಚನ್ನು ದೇಣಿಗೆಯಿಂದಲೇ ನಿರ್ವಹಿಸಲಾಗಿದೆ ಎಂದು ಸಭೆಗೆ ತಿಳಿಸಲಾಯಿತು.

ಭವ್ಯ ರಾಮಮಂದಿರದ ಪ್ರಧಾನ ಗರ್ಭಗುಡಿಯ ಶಿಖರಕ್ಕೆ ಹನುಮ ಹುಟ್ಟಿದ ನೆಲ ಕರ್ನಾಟಕದಿಂದ ಸ್ವರ್ಣ ಶಿಖರ ಅರ್ಪಿಸುವ ಭಕ್ತರ ಇಂಗಿತವನ್ನು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸಭೆಯಲ್ಲಿ ಮಂಡಿಸಿದರು. ಮಂದಿರದ ವಾಸ್ತು ವಿನ್ಯಾಸಕ್ಕೆ ಅನುಗುಣವಾಗಿ ಸ್ವರ್ಣ ಶಿಖರವನ್ನು ಭಕ್ತರ ಸಹಕಾರದಿಂದ ನಿರ್ಮಿಸಿ, ವಿಶ್ವ ಹಿಂದೂ ಪರಿಷತ್ ನೇತೃತ್ವದಲ್ಲಿ ಹಂಪಿಯಿಂದ ಆರಂಭವಾಗುವ ‘ಸ್ವರ್ಣ ಶಿಖರ ಯಾತ್ರೆ’ ರಾಜ್ಯದಾದ್ಯಂತ ಸಂಚರಿಸಿ ಅಯೋಧ್ಯೆಯನ್ನು ತಲುಪಿಸುವುದಾಗಿ ಶ್ರೀಗಳು ತಿಳಿಸಿದರು.

ಅಯೋಧ್ಯೆಯ ಪ್ರವಾಸಿ ಮಂದಿರದಲ್ಲಿ ಭಾನುವಾರ ಅಯೋಧ್ಯೆ ರಾಮಜನ್ಮಭೂಮಿ ಟ್ರಸ್ಟ್ ಸಭೆಯಲ್ಲಿ ಭಾಗವಹಿಸಿದ್ದ ಸ್ವಾಮೀಜಿಗಳು ಹಾಗೂ ಗಣ್ಯರು

ನೂತನ ಮಂದಿರ ಸಮರ್ಪಣೆ ಹಾಗೂ ಶ್ರೀರಾಮನ ಪ್ರತಿಷ್ಠಾ ಮಹೋತ್ಸವಕ್ಕೆ ದಿನಾಂಕ ನಿಗದಿಪಡಿಸಿದ ಬಳಿಕ ಭಕ್ತರನ್ನು ಉತ್ಸವಕ್ಕೆ ಆಹ್ವಾನಿಸಲು ಯಾತ್ರೆ ಕೈಗೊಳ್ಳಬಹುದು ಎಂಬ ಅಭಿಪ್ರಾಯವನ್ನು ಶ್ರೀಗಳು ಸಭೆಯ ಮುಂದಿರಿಸಿದರು.

ಹೈದರಾಬಾದ್‌ನಲ್ಲಿ ಚಾತುರ್ಮಾಸ್ಯ ವ್ರತ ಮುಗಿಸಿದ ಶ್ರೀಗಳು ಭಾನುವಾರ ಅಯೋಧ್ಯೆ ತಲುಪಿ ಶ್ರೀರಾಮನ ತಾತ್ಕಾಲಿಕ ಮಂದಿರದಲ್ಲಿರುವ ರಾಮಲಲ್ಲಾನ ದರ್ಶನ ಪಡೆದು ಪೂಜೆ ಸಲ್ಲಿಸಿದರು ಎಂದು ಮಠದ ಸಿಬ್ಬಂದಿ ತಿಳಿಸಿದ್ದಾರೆ.

ಸಭೆಯಲ್ಲಿ ಟ್ರಸ್ಟ್ ಅಧ್ಯಕ್ಷ ಮಹಾಂತ ಗೋಪಾಲ್ ದಾಸ್, ಕಾರ್ಯದರ್ಶಿ ಚಂಪತ್ ರಾಯ್, ಕೋಶಾಧಿಕಾರಿ ಗೋವಿಂದ ಗಿರಿ ಮಹಾರಾಜ್, ಮುಖಂಡರಾದ ಗೋಪಾಲ್‌ಜೀ, ಎಂಜಿನಿಯರ್‌ಗಳು, ವಾಸ್ತು ತಜ್ಞರು ಇದ್ದರು.

ನಿಧನ ವಾರ್ತೆ

ಯಶೋದಮ್ಮ

ಬೆಂಗಳೂರು: ರಾಮಣ್ಣಪೇಟೆಯ ನಿವಾಸಿ ಯಶೋದಮ್ಮ (73) ಭಾನುವಾರ ಮಧ್ಯಾಹ್ನ ನಿಧನರಾದರು.

ಮೃತರಿಗೆ ಎಣ್ಣೆಗೆರೆ ಆರ್. ವೆಂಕಟರಾಮಯ್ಯ,ನಾಲ್ವರು ಪುತ್ರಿಯರು ಇದ್ದಾರೆ. ಸೋಮವಾರ ಮಧ್ಯಾಹ್ನ 12 ಗಂಟೆಗೆ ಚಾಮರಾಜಪೇಟೆಯ ರುದ್ರ ಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಜೋಸೆಫ್



ಬೆಂಗಳೂರು: ಬಿಎಚ್‌ಇಎಲ್ ಕಾರ್ಖಾನೆಯ ನಿವೃತ್ತ ನೌಕರರ ಜೋಸೆಫ್ (76) ಭಾನುವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ ಆರು ಜನ ಮಕ್ಕಳಿದ್ದಾರೆ. ಭಾನುವಾರ ಮೈಸೂರು ರಸ್ತೆಯ ಕ್ರೈಸ್ತರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಕಲಬುರಗಿ ಜಿಲ್ಲೆ ಸೊನ್ನ ಬ್ಯಾರೇಜಿನಿಂದ ನದಿಗೆ 1.30 ಲಕ್ಷ ಕ್ಯುಸೆಕ್ ನೀರು • ನದಿ ಪಾತ್ರದ ನಿವಾಸಿಗಳಲ್ಲಿ ನೆರೆ ಆತಂಕ

ಸೇತುವೆಗಳು ಮುಳುಗಡೆ, ಸಂಚಾರ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕಲಬುರಗಿ, ಬೆಳಗಾವಿ, ವಿಜಯಪುರ, ಉತ್ತರ ಕನ್ನಡ, ಕೊಡಗು ಮತ್ತು ಹಾಸನ ಜಿಲ್ಲೆಯಲ್ಲಿ ಭಾನುವಾರ ಮಳೆ ಅಬ್ಬರಿಸಿದೆ. ಹಲವೆಡೆ ಸೇತುವೆಗಳು ಜಲಾವೃತಗೊಂಡು, ಸಂಚಾರ ಸ್ಥಗಿತಗೊಂಡಿದೆ.

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಭೀಮಾ ನದಿಯ ಸುತ್ತಮುತ್ತ ಭಾರಿ ಮಳೆಯಾಗಿದ್ದರಿಂದ ಹಾಗೂ ಮಹಾರಾಷ್ಟ್ರದ ಉಜನಿ ಜಲಾಶಯದಿಂದ ನೀರು ಬಿಡುಗಡೆ ಮಾಡಿದ್ದರಿಂದ ಪ್ರಸಿದ್ಧ ತೀರ್ಥಕ್ಷೇತ್ರಗಳ ಬಳಿಯ ಸೇತುವೆಗಳು ಜಲಾವೃತವಾಗಿವೆ. ಹೀಗಾಗಿ, ಸೇತುವೆ ಮೇಲಿನ ಸಂಚಾರ ಬಂದ್ ಆಗಿದೆ.

ಮಹಾರಾಷ್ಟ್ರ ಭಾಗದಲ್ಲಿ ಭಾರಿ ಮಳೆಯಾಗಿದ್ದರಿಂದ ಉಜನಿ ಜಲಾಶಯದಿಂದ ಭೀಮಾ ನದಿಗೆ 1 ಲಕ್ಷ ಕ್ಯುಸೆಕ್ ನೀರು ಬಿಡುಗಡೆ ಮಾಡಲಾಗಿದೆ. ಅಫಜಲಪುರ ತಾಲ್ಲೂಕಿನ ಮಣ್ಣೂರು ಗ್ರಾಮದ ಯಲ್ಲಮ್ಮದೇವಿ ದೇವಸ್ಥಾನ ಭೀಮಾ ನದಿ ನೀರಿನಿಂದಜಲಾವೃತವಾಗಿದೆ. ಮಣ್ಣೂರ–ಭುಯ್ಯಾರ ಗ್ರಾಮದ ಮೂಲಕ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿಗೆ ಸಂಪರ್ಕಿಸುವ ಬ್ಯಾರೇಜ್ ಮೇಲೆ ಅಪಾರ ಪ್ರಮಾಣದ ನೀರು ಹರಿಯುತ್ತಿದೆ. ಇದರಿಂದ ಸಂಚಾರ ಸ್ಥಗಿತವಾಗಿದೆ.

3 ಟಿಎಂಸಿ ಅಡಿ ಸಾಮರ್ಥ್ಯದ ಸೊನ್ನ ಭೀಮಾ ಬ್ಯಾರೇಜಿನಿಂದ 1.30 ಲಕ್ಷ ಕ್ಯುಸೆಕ್ ನೀರನ್ನು ಎಲ್ಲ 15 ಗೇಟುಗಳಿಂದ ಹರಿಸಲಾಗುತ್ತಿದೆ. ನದಿ ದಂಡೆಯ ಗ್ರಾಮಸ್ಥರು ನದಿಯ ಬಳಿ ಹೋಗದಂತೆ ಜಿಲ್ಲಾಡಳಿತ ಸೂಚನೆ ನೀಡಿದೆ.

ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನಲ್ಲಿ 2 ಮನೆ ಭಾಗಶಃ ಕುಸಿದಿವೆ.

ಬೆಳಗಾವಿ ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಶನಿವಾರ ರಾತ್ರಿಯಿಂದ ಧಾರಾಕಾರ ಮಳೆ ಸುರಿಯುತ್ತಿದೆ. ಚಿಕ್ಕೋಡಿ ತಾಲ್ಲೂಕಿನಲ್ಲಿ ಕೃಷ್ಣಾ ಹಾಗೂ ಅದರ ಉಪನದಿಗಳಾದ ವೇದಗಂಗಾ, ದೂಧಗಂಗಾಗಳಲ್ಲೂ ನೀರಿನ ಮಟ್ಟ ಯಥಾಸ್ಥಿತಿ ಇದೆ.

ನಿಪ್ಪಾಣಿ ತಾಲ್ಲೂಕಿನ ಜತ್ರಾಟ- ಬಿವಶಿ ಸೇತುವೆ ಮೇಲೆ ಕೃಷ್ಣಾ ನೀರು ಹರಿದು ಸಂಚಾರ ಬಂದ್ ಮಾಡಲಾಗಿದೆ. ಬೈಲಹೊಂಗಲ ತಾಲ್ಲೂಕಿನ ಸಂಪಗಾಂವ ಗ್ರಾಮದಲ್ಲಿ ಮನೆ ಪೂರ್ಣ ಕುಸಿದಿದೆ.

ವಿಜಯಪುರ ಜಿಲ್ಲೆಯಲ್ಲಿ 39 ಮನೆಗಳಿಗೆ ಹಾನಿಯಾಗಿದೆ. ಮಹಾರಾಷ್ಟ್ರದಿಂದ ಭೀಮಾ ನದಿಗೆ ನೀರು ಬಿಟ್ಟಿರುವುದರಿಂದ ಆಲಮೇಲ ತಾಲ್ಲೂಕಿನ ಬಗಲೂರ ಗ್ರಾಮದ ಸೇತುವೆ ಮುಳುಗಿದ್ದು, ವಾಹನ ಸಂಚಾರ ಬಂದ್ ಮಾಡಲಾಗಿದೆ. ನದಿ ದಂಡೆಯ ಕಡೆ ಹೋಗದಂತೆ ಸೂಚನೆ ನೀಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಮುಂಡಗೋಡ, ಜೊಯಿಡಾ, ಕಾರವಾರ, ಕುಮಟಾ, ಹೊನ್ನಾವರ, ಭಟ್ಕಳ ತಾಲ್ಲೂಕುಗಳಲ್ಲಿ ವ್ಯಾಪಕ ಮಳೆಯಾಗಿದೆ. ಹೊನ್ನಾವರದಲ್ಲಿ ಚಿಕ್ಕನಕೋಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೋಟದಮಕ್ಕಿ ಸೇತುವೆ ಮೇಲೆ ನೀರು ಹರಿಯಿತು.

ಮಡಿಕೇರಿ ತಾಲ್ಲೂಕಿನ ಮಾದಾಪುರದ ಮೂವತ್ತೊಕ್ಲು ಗ್ರಾಮದ ಸಮೀಪ ಗುಡ್ಡದಿಂದ ಮಣ್ಣು ಕುಸಿದು ಆತಂಕ ಮೂಡಿಸಿದೆ. ತಾಲ್ಲೂಕಿನ ಮದೆ ಮತ್ತು ಕರಿಕೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತಲಾ 9 ಸೆಂ.ಮೀ ಮಳೆ ದಾಖಲಾಗಿದೆ. ಹಾಸನ ಜಿಲ್ಲೆಯ ಹೆತ್ತೂರು, ವನಗೂರು, ಮಾಗೇರಿ, ಹೊಸಹಳ್ಳಿ, ಹಿರದನಹಳ್ಳಿ, ಉಚ್ಚಂಗಿ ಹಾಗೂ ಬಿಸ್ಲೆ ಘಾಟ್‌ನಲ್ಲೂ ಉತ್ತಮ ಮಳೆಯಾಗಿದೆ.

ಮಳೆಯಿಂದ ಹಾನಿಗೊಳಗಾಗಿರುವ ಸೇತುವೆ ವೀಕ್ಷಣೆಗೆ ಬರುವಂತೆ ಆಗ್ರಹಿಸಿ ಬಿ.ಸಿ.ಪಾಟೀಲ ಅವರಿಗೆ ಗದಗ ತಾಲ್ಲೂಕಿನ ಬೆಂತೂರು ಗ್ರಾಮದಲ್ಲಿ ಭಾನುವಾರ ಸಾರ್ವಜನಿಕರು ಮುತ್ತಿಗೆ ಹಾಕಿ ಒತ್ತಾಯಿಸಿದರು. ಜನರ ಮನವಿಗೆ ಸ್ಪಂದಿಸಿದ ಪಾಟೀಲ, ಸೇತುವೆ ವೀಕ್ಷಣೆ ಮಾಡಿ, ದುರಸ್ತಿಯ ಭರವಸೆ ನೀಡಿದರು.

ಕಲಬುರಗಿ ಜಿಲ್ಲೆ ಅಫಜಲಪುರದ ಮಣ್ಣೂರು ಗ್ರಾಮದ ಎಲ್ಲಮ್ಮ ದೇವಿ ದೇವಸ್ಥಾನ ಭಾನುವಾರ ಮುಳುಗಿರುವುದು

6 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ಕರಾವಳಿ ಮತ್ತು ಉತ್ತರ ಒಳನಾಡಿನ ಬಹುತೇಕ ಕಡೆ ಹಾಗೂ ದಕ್ಷಿಣ ಒಳನಾಡಿನ ಹಲವು ಕಡೆ ಸೋಮವಾರ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಳಗಾವಿ, ಧಾರವಾಡ, ಉತ್ತರ ಕನ್ನಡ, ಹಾವೇರಿ, ಉಡುಪಿ ಹಾಗೂ ದಕ್ಷಿಣ ಕನ್ನಡಕ್ಕೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಕರಾವಳಿ ಮತ್ತು ಉತ್ತರ ಒಳನಾಡಿನ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗಲಿದೆ. ಬೆಂಗಳೂರಿನಲ್ಲಿ ಕೆಲವು ಬಾರಿ ಗುಡುಗು ಸಹಿತ ಸಾಧಾರಣ ಮಳೆ ಆಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಶ್ರೀರಂಗಪಟ್ಟಣ: ಮತ್ತೆ ಕುಸಿದ ಕೋಟೆ



ಶ್ರೀರಂಗಪಟ್ಟಣ: ಪಟ್ಟಣದ ಸ್ನಾನ ಘಟ್ಟದ ಬಳಿ ಐತಿಹಾಸಿಕ ಕೋಟೆಯ ಒಂದು ಭಾಗ ಕುಸಿದಿದೆ.

ಉತ್ತರದ ದಿಕ್ಕಿನಲ್ಲಿ ಸುಮಾರು 30 ಅಡಿ ಕೋಟೆ ಕುಸಿದಿದೆ. ಕೋಟೆ ಕಟ್ಟಲು ಬಳಸಿರುವ ದಪ್ಪ ಗಾತ್ರದ ಕಲ್ಲುಗಳು ಹಾಗೂ ಚುರುಕಿ ಗಾರೆ, ಗೋಡೆಯ ಅವಶೇಷಗಳು ಕಂದಕಕ್ಕೆ ಉರುಳಿವೆ.

'ಕೋಟೆಯ ಮೇಲೆ ಬೆಳೆದಿರುವ ಮರ–ಗಿಡಗಳನ್ನು ತೆಗೆದು ಸ್ವಚ್ಛಗೊಳಿಸುವಷ್ಟು ಅನುದಾನ ಲಭ್ಯವಿಲ್ಲ. ಕುಸಿದಿರುವ ಕೋಟೆಯ ಭಾಗವನ್ನು ಮಾತ್ರ ದುರಸ್ತಿಪಡಿಸಬಹುದು' ಎಂದು ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ಇಲಾಖೆ ಎಂಜಿನಿಯರ್ ಕುಬೇರಪ್ಪ ತಿಳಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	124.42	19,135	13,216
ಹಾರಂಗಿ	2,859	2,857.31	2,021	1,700
ಕಬಿನಿ	2,284	2,283.82	11,786	15,000
ಹೇಮಾವತಿ	2,922	2,921.90	9,946	8,210
ಲಿಂಗನಮಕ್ಕಿ	1,819	1,814	10,320	3,660
ಸೂಪಾ (ಮೀ)	564	551.32	6,966	173
ಮಾಣಿ	595	589	3,005	-
ತುಂಗಭದ್ರಾ	1,633	1,632.65	38,567	32,402
ಮಲಪ್ರಭಾ	2,079.50	2,079.50	2,294	2,294
ಘಟಪ್ರಭಾ	2175	2,175	3,154	3,154
ಭದ್ರಾ	186	184	8,538	8,827
ಆಲಮಟ್ಟಿ (ಮೀ)	519.60	519.58	48,784	52,500
ನಾರಾಯಣಪುರ (ಮೀ)	492.25	491.52	72,000	68,150

* ನೆಲಮಟ್ಟದಿಂದ

ಸುದ್ದಿ 2 ನಿಮಿಷ

ಅರಣ್ಯ ಹುತಾತ್ಮರ ಪರಿಹಾರ ₹ 50 ಲಕ್ಷಕ್ಕೆ ಏರಿಕೆ –ಸಿ.ಎಂ

ಬೆಂಗಳೂರು: 'ಅರಣ್ಯ ಹುತಾತ್ಮರ ಕುಟುಂಬಕ್ಕೆ ನೀಡುವ ಪರಿಹಾರದ ಮೊತ್ತವನ್ನು ₹ 30 ಲಕ್ಷದಿಂದ ₹ 50 ಲಕ್ಷಕ್ಕೆ ಹೆಚ್ಚಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಅರಣ್ಯ ಇಲಾಖೆ ಭಾನುವಾರ ಏರ್ಪಡಿಸಿದ್ದ 'ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನ' ಕಾರ್ಯಕ್ರಮದಲ್ಲಿ ಅವರು ಹುತಾತ್ಮರಿಗೆ ಗೌರವ ಸಲ್ಲಿಸಿ ಮಾತನಾಡಿದರು. 'ಹಿಂದೆ ₹ 20 ಲಕ್ಷ ಇದ್ದ ಪರಿಹಾರ ಮೊತ್ತವನ್ನು ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ₹ 30 ಲಕ್ಷಕ್ಕೆ ಹೆಚ್ಚಿಸಿದ್ದರು. ನೀವು ಅರಣ್ಯ ರಕ್ಷಣೆ ಮಾಡಿ, ಸರ್ಕಾರ ನಿಮ್ಮ ರಕ್ಷಣೆ ಮಾಡಲಿದೆ' ಎಂದು ಅರಣ್ಯ ಇಲಾಖೆ ಸಿಬ್ಬಂದಿಗೆ ಮುಖ್ಯಮಂತ್ರಿ ಹೇಳಿದರು

ಅರಣ್ಯ ಪ್ರದೇಶ ವೃದ್ಧಿಗೆ ಗುರಿ: 'ರಾಜ್ಯದಲ್ಲಿ ನಾಲ್ಕು ಲಕ್ಷ ಹೆಕ್ಟೇರ್‌ಗಿಂತ ಹೆಚ್ಚು ಬಂಜರು ಭೂಮಿ ಇದೆ. ಬಹಳಷ್ಟು ಗುಡ್ಡಗಾಡುಗಳಿವೆ. ಅಲ್ಲಿ ಸ್ಥಳೀಯ ಪ್ರಭೇಧದ ಗಿಡ ಬೆಳೆಸಲು ಆದ್ಯತೆ ನೀಡಬೇಕು' ಎಂದು ಹೇಳಿದರು.

'ಪರಿಸರ ಬಜೆಟ್ ರೂಪಿಸಿ ₹ 100 ಕೋಟಿ ಆ ಉದ್ದೇಶಕ್ಕೆ ಮೀಸಲಿಟ್ಟಿದ್ದು, ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ಕ್ರಿಯಾಯೋಜನೆ ಜಾರಿಗೊಳಿಸಿ, ಹೊಸ ಮಾದರಿ ಸಿದ್ಧ ಪಡಿಸಿ, ಮುಂದಿನ ದಿನಗಳಲ್ಲಿ ಅರಣ್ಯ ಪ್ರದೇಶ ಹೆಚ್ಚಿಸಬಹುದು' ಎಂದರು.

'ಮಾನವ –ಪ್ರಾಣಿಗಳ ಸಂಘರ್ಷ ಕಡಿಮೆ ಮಾಡಲು, ಹೊಸ ವಿಧಾನ ಬಳಸಲು ಅರಣ ಸಚಿವರಾಗಿದ್ದ ಉಮೇಶ ಕತ್ತಿ ಆಸಕ್ತಿ ವಹಿಸಿದ್ದರು. ಹೊಸ ವಿಧಾನಗಳ ಪ್ರಯೋಗ ಬಂಡೀಪುರದಲ್ಲಿ ನಡೆಯುತ್ತಿದೆ' ಎಂದರು. ಸಿ.ಎಂ ಇದೇ ಸಂದರ್ಭದಲ್ಲಿ ಕತ್ತಿ ಅವಧಿಯಲ್ಲಿನ ಇಲಾಖೆ ಸಾಧನೆಗಳ ಕಿರುಹೊತ್ತಿಗೆ ಬಿಡುಗಡೆ ಮಾಡಿದರು.



ರೋಹಿಣಿ ಸಿಂಧೂರಿ ವಿರುದ್ಧ ಮಾನನಷ್ಟ ಮೊಕದ್ದಮೆ: ಶಾಸಕ

ಮೈಸೂರು: 'ಸರ್ಕಾರಿ ಭೂಮಿಯನ್ನು ಕಬಳಿಸಿರುವುದಾಗಿ ನನ್ನ ವಿರುದ್ಧ ಆರೋಪಿಸಿರುವ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ನಗರದ 2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ (ಸಿವಿಲ್ ಮತ್ತು ಕ್ರಿಮಿನಲ್) ಹೂಡಿದ್ದೇನೆ' ಎಂದು ಜೆಡಿಎಸ್ ಶಾಸಕ ಸಾ.ರಾ. ಮಹೇಶ್ ತಿಳಿಸಿದರು.

'ಸೆ.3ರಂದು ದಾಖಲಿಸಿದ್ದು, ₹ 1 ಕೋಟಿ ದಂಡ ವಿಧಿಸುವಂತೆ ನ್ಯಾಯಾಲಯವನ್ನು ಕೋರಿದ್ದೇನೆ. ರಾಜಕಾರಣವನ್ನೇ ಬಿಟ್ಟೇನು, ಆದರೆ, ರೋಹಿಣಿಯಂಥವರಿಗೆ ಬುದ್ಧಿ ಕಲಿಸದೆ ಬಿಡುವುದಿಲ್ಲ. ಇದಕ್ಕಾಗಿ ಹೋರಾಡುತ್ತಿರುವೆ' ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಗುಡುಗಿದರು. 'ನ್ಯಾಯಾಲಯವು ಅ.20ರಂದು ಹಾಜರಾಗಿ ಉತ್ತರ ಕೊಡುವಂತೆ ರೋಹಿಣಿ ಅವರಿಗೆ ನೋಟಿಸ್ ನೀಡಿದೆ' ಎಂದು ವಕೀಲ ಅರುಣ್‌ಕುಮಾರ್ ತಿಳಿಸಿದರು.

ಒಳನೋಟ
ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ
https://bit.ly/3TUHLMJ

ಜೀವ ಬೆದರಿಕೆ: ಆರೋಪಿಗೆ ಜಾಮೀನು

ಸುಳ್ಯ: ಸಂಘ ಪರಿವಾರದ ಸಂಘಟನೆಯೊಂದರ ಮುಖಂಡ, ಬೆಳ್ಳಾರೆ ಗ್ರಾಮದ ಉಮಿಕ್ಕಳದ ಪ್ರಶಾಂತ್ ಪೂಂಜ ಅವರಿಗೆ ಬೆದರಿಕೆ ಹಾಕಿದ್ದ ಆರೋಪದ ಮೇಲೆ ಬಂಧಿತ ಆರೋಪಿ ಶಾಫ್ರಿದ್‌ನನ್ನು ಭಾನುವಾರ ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಈತ ಬಿಜೆಪಿ ಯುವ ಮೋರ್ಚಾ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಕಾರಿಣಿ ಸದಸ್ಯ, ಬೆಳ್ಳಾರೆಯ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ಬಂಧಿತನಾಗಿರುವ ಶಫೀಕ್‌ನ ಸಹೋದರ. ಶಾಫ್ರಿದ್ ತನಗೆ ಜೀವ ಬೆದರಿಕೆ ಹಾಕಿರುವುದಾಗಿ ಪ್ರಶಾಂತ್ ಪೂಂಜ ಬೆಳ್ಳಾರೆ ಠಾಣೆಗೆ ಶನಿವಾರ ರಾತ್ರಿ ದೂರು ನೀಡಿದ್ದರು.

ಮಾಹಿತಿ ತಿಳಿದು ನೂರಾರು ಮಂದಿ ಠಾಣೆ ಮುಂದೆ ಜಮಾಯಿಸಿ ಶಾಫ್ರಿದ್ ಬಂಧನಕ್ಕೆ ಆಗ್ರಹಿಸಿದ್ದರು. ಅದರ ಹಿಂದೆಯೇ ನ್ಯಾಯಾಲಯದಿಂದ ಆದೇಶ ಪಡೆದು ಭಾನುವಾರ ಆರೋಪಿಯನ್ನು ಬಜ್ಪೆಯಲ್ಲಿ ಬಂಧಿಸಲಾಗಿತ್ತು.

ಮರುನಾಮಕರಣ ಮಾಡದಂತೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಪ್ರಮುಖರ ಆಗ್ರಹ

'ಪಂಪ ಮಹಾಕವಿ ರಸ್ತೆ: ಹೆಸರು ಬದಲಿಸಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆಯಲ್ಲಿ ಇರುವ ಪಂಪ ಮಹಾಕವಿ ರಸ್ತೆಯ ಹೆಸರನ್ನು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಸ್ತೆ ಎಂದು ಬದಲಾಯಿಸುವ ಪ್ರಸ್ತಾವಕ್ಕೆ ಸಾಹಿತ್ಯ ವಲಯದ ಪ್ರಮುಖರಿಂದ ಆಕ್ಷೇಪ ವ್ಯಕ್ತವಾಗಿದೆ.

ರಸ್ತೆಯ ಹೆಸರು ಬದಲಾವಣೆಗೆ ಸಂಬಂಧಿಸಿದಂತೆ ಸರ್ಕಾರ ಮತ್ತು ಬಿಬಿಎಂಪಿಗೆ ಪ್ರಸ್ತಾವ ಸಲ್ಲಿಸಲು ಕಸಾಪ ಸಜ್ಜಾಗುತ್ತಿದೆ. ಪರಿಷತ್ತಿನ ಈ ನಡೆಗೆ ಸಾಮಾಜಿಕ ಜಾಲತಾಣಗಳಲ್ಲೂ ಹಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸದ್ಯ ಮಿಂಟೋ ಕಣ್ಣಿನ ಆಸ್ಪತ್ರೆ ವೃತ್ತದಿಂದ ನ್ಯಾಷನಲ್ ಕಾಲೇಜುವರೆಗಿನ ರಸ್ತೆಯನ್ನು ಪಂಪ ಮಹಾಕವಿ ರಸ್ತೆ ಎಂದು ಗುರುತಿಸಲಾಗಿದೆ. ಈ ರಸ್ತೆಯಲ್ಲಿ ಕಸಾಪ ಕೇಂದ್ರ ಕಚೇರಿ ಎದುರಿನ ಅರ್ಧ ಕಿ.ಮೀ (ಮಿಂಟೋ ಕಣ್ಣಿನ ಆಸ್ಪತ್ರೆಯಿಂದ ಮಕ್ಕಳ ಕೂಟದವರೆಗೆ) ರಸ್ತೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ರಸ್ತೆ ಎಂದು ಮರುನಾಮಕರಣ ಮಾಡುವಂತೆ ಪ್ರಸ್ತಾವ ಸಲ್ಲಿಸಲು ಸಿದ್ಧತೆಗಳು ನಡೆಯುತ್ತಿವೆ. ಈ ಬಗ್ಗೆ ಇತ್ತೀಚೆಗೆ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿಕೊಂಡು, ಹೆಸರು ಬದಲಾವಣೆ ಹಾಗೂ ರಸ್ತೆಯನ್ನು ಕನ್ನಡಮಯವಾಗಿಸಲು ಅನುವು ಮಾಡಿಕೊಡುವಂತೆ ಮನವಿ ಮಾಡಿಕೊಂಡಿದ್ದರು.

ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಕಸಾಪ ನಡೆಗೆ ಅಸಮಾಧಾನ ವ್ಯಕ್ತಪಡಿಸಿದ್ದು, ಕೆ.ಮರುಳಸಿದ್ದಪ್ಪ, ಪ್ರೊ.ಎಸ್.ಜಿ.ಸಿದ್ಧರಾಮಯ್ಯ, ರಾಜೇಂದ್ರ ಚೆನ್ನಿ, ವಿಜಯಾ, ಬಂಜಗೆರೆ ಜಯಪ್ರಕಾಶ್, ಡಾ.ವಸುಂಧರಾ ಭೂಪತಿ, ಕೆ.ಎಸ್. ವಿಮಲಾ ಹಾಗೂ ಬಿ.ಶ್ರೀಪಾದ ಭಟ್ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ಸಾಹಿತ್ಯ ಪರಿಷತ್ತಿಗೆ ಒಂದು ಐತಿಹಾಸಿಕ ಪರಂಪರೆ ಇರುವಂತೆಯೇ, ಪರಿಷತ್ತಿನ ಮುಂದಿನ ರಸ್ತೆ ಪಂಪ ಮಹಾಕವಿ ರಸ್ತೆಗೂ ಒಂದು ಐತಿಹಾಸಿಕ ಮಹತ್ವವಿದೆ. ಪಂಪ ಮಹಾಕವಿ ಕನ್ನಡದ ಆದಿಕವಿ. ಪಂಪನ ಹೆಸರಿನ ರಸ್ತೆಯ ಮೂಲಕ ಕನ್ನಡ ಸಾಹಿತ್ಯ ಪರಿಷತ್ತು ಪ್ರವೇಶಿಸುವುದು, ಕವಿ ಪರಂಪರೆಯ ಮಾರ್ಗದಲ್ಲಿ ನಡೆದು, ಸಾಹಿತ್ಯ ಪರಿಷತ್ತೆಂಬ ಕನ್ನಡದ ಸಾಕ್ಷಿ ಪ್ರಜ್ಞೆಯ ಪ್ರತೀಕದಂತಿರುವ ವರ್ತಮಾನದ ಅರಿವಿನ ದೇಗುಲವನ್ನು ಪ್ರವೇಶಿಸಿದಂತೆ' ಎಂದು ತಿಳಿಸಿದ್ದಾರೆ.

'ಈಗಿನ ಅಧ್ಯಕ್ಷರು ಪಂಪ ಮಹಾಕವಿ ರಸ್ತೆಯ ಹೆಸರನ್ನು ಬದಲಾಯಿಸಿ, ಸಾಹಿತ್ಯ ಪರಿಷತ್ತಿನ ರಸ್ತೆ ಎಂದು ನಾಮಕರಣ ಮಾಡಲು ಮುಂದಾಗಿರುವುದು ಸಾಹಿತ್ಯದ ತಿಳಿವಳಿಕೆ ಇಲ್ಲದ ಅಪದ್ಧ ನಡೆ. ಹೆಸರು ಬದಲಾಯಿಸಿದರೆ ಅದು ನಮ್ಮ ಆದಿಕವಿಗೆ, ಸಾಹಿತ್ಯ ಪರಂಪರೆಗೆ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಮಾಡಿದ ಮಹಾ ದ್ರೋಹವಾಗುತ್ತದೆ. ಆದ್ದರಿಂದ ಅಧ್ಯಕ್ಷರು ಇಂತಹ ವಿವೇಕಶೂನ್ಯ ಕಾರ್ಯಕ್ಕೆ ಮುಂದಾಗಬಾರದು' ಎಂದು ಆಗ್ರಹಿಸಿದ್ದಾರೆ.

'ಯಾವುದೇ ಕಾರಣಕ್ಕೂ ಪಂಪ ಮಹಾಕವಿ ರಸ್ತೆ ಹೆಸರು ಬದಲಾವಣೆ ಬೇಡ. ಪಂಪ ಕನ್ನಡದ ಅಸ್ಮಿತೆಯ ಸಂಕೇತ' ಎಂದು ಲೇಖಕ ಪುರುಷೋತ್ತಮ ಬಿಳಿಮಲೆ ಟ್ವೀಟ್ ಮಾಡಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು

> **ರಸ್ತೆ ಸಂಪೂರ್ಣ ಕನ್ನಡಮಯವಾಗಬೇಕು ಎಂಬುದು ನಮ್ಮ ಆಶಯ. ರಸ್ತೆಯ ಶೇ 90ರಷ್ಟು ಭಾಗಕ್ಕೆ ಪಂಪ ಮಹಾಕವಿ ಹೆಸರೇ ಇರಲಿದೆ. ಪರಿಷತ್ತಿನ ಮುಂಭಾಗ ಹೆಸರು ಬದಲಾವಣೆಗೆ ಅಭಿಪ್ರಾಯ ಆಧರಿಸಿ, ಮುನ್ನಡೆಯುತ್ತೇವೆ.**
> **ಮಹೇಶ ಜೋಶಿ,** ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ

ಪುನೀತ್ ಉತ್ತಮ ನಾಯಕ ನಟ, 'ಪುಷ್ಪ' ಅತ್ಯುತ್ತಮ ಚಿತ್ರ

ಬೆಂಗಳೂರು: ದಕ್ಷಿಣ ಭಾರತದ ಅಂತರರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಶನಿವಾರ ನಗರದಲ್ಲಿ ನಡೆಯಿತು. ಅಲ್ಲು ಅರ್ಜುನ್ ಅಭಿನಯದ, ಸುಕುಮಾರ್ ನಿರ್ದೇಶನದ 'ಪುಷ್ಪ ದಿ ರೈಸ್'(ತೆಲುಗು) ಅತ್ಯುತ್ತಮ ಚಿತ್ರ ಪ್ರಶಸ್ತಿ ಬಾಚಿಕೊಂಡಿತು. ಇದೇ ಚಿತ್ರದ ಅಭಿನಯಕ್ಕಾಗಿ ನಟ ಅಲ್ಲು ಅರ್ಜುನ್ ಅವರು ಅತ್ಯುತ್ತಮ ನಟ, ನಿರ್ದೇಶಕ ಸುಕುಮಾರ್ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಗೆ ಪಾತ್ರರಾದರು. ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರಿಗೆ 'ಯುವರತ್ನ' ಚಿತ್ರಕ್ಕಾಗಿ ಮರಣೋತ್ತರವಾಗಿ ಉತ್ತಮ ನಾಯಕ ನಟ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಗರದ ಅರಮನೆ ಆವರಣದಲ್ಲಿ ನಡೆದ ಈ ವರ್ಣರಂಜಿತ ಕಾರ್ಯಕ್ರಮದಲ್ಲಿ ಕನ್ನಡ, ತಮಿಳು, ತೆಲುಗು, ಮಲಯಾಳಂ ಚಿತ್ರರಂಗದ ಗಣ್ಯರು ಭಾಗವಹಿಸಿದ್ದರು.

ಸೈಮಾ ಪ್ರಶಸ್ತಿ

ವಿಭಾಗ	ಕಲಾವಿದ	ಚಿತ್ರ
ಉತ್ತಮ ನಾಯಕ ನಟ	ದಿವಂಗತ ಪುನೀತ್ ರಾಜ್‌ಕುಮಾರ್	ಯುವರತ್ನ
ಉತ್ತಮ ನಾಯಕಿ ನಟಿ	ಆಶಿಕಾ ರಂಗನಾಥ್	ಮದಗಜ
ಉತ್ತಮ ನಾಯಕಿ ನಟಿ ವಿಮರ್ಶಕರ ಪ್ರಶಸ್ತಿ	ಅಮೃತಾ ಅಯ್ಯಂಗಾರ್	ಬಡವ ರ್‍ಯಾಸ್ಕಲ್
ಉತ್ತಮ ಪೋಷಕ ನಟ	ಪ್ರಮೋದ್	ರತ್ನನ್ ಪ್ರಪಂಚ
ಉತ್ತಮ ಪೋಷಕ ನಟಿ	ಆರೋಹಿ ನಾರಾಯಣ	ದೃಶ್ಯ 2
ಉತ್ತಮ ಖಳನಟ	ಪ್ರಮೋದ್ ಶೆಟ್ಟಿ	ಹೀರೋ
ಉತ್ತಮ ಹಾಸ್ಯನಟ	ಚಿಕ್ಕಣ್ಣ	ಪೊಗರು
ಉತ್ತಮ ನಟ (ಮೊದಲ ಚಿತ್ರಕ್ಕಾಗಿ)	ನಾಗಭೂಷಣ	ಇಕ್ಕಟ್
ಉತ್ತಮ ನಟಿ (ಮೊದಲ ಚಿತ್ರಕ್ಕಾಗಿ)	ಶರಣ್ಯಾ ಶೆಟ್ಟಿ	1980
ಉತ್ತಮ ನಿರ್ದೇಶಕ	ತರುಣ್ ಸುಧೀರ್	ರಾಬರ್ಟ್
ಉತ್ತಮ ನಿರ್ದೇಶಕ (ಚೊಚ್ಚಲ ಚಿತ್ರಕ್ಕಾಗಿ)	ಶಂಕರ್ ಗುರು	ಬಡವ ರ್‍ಯಾಸ್ಕಲ್
ಉತ್ತಮ ಛಾಯಾಗ್ರಾಹಕ	ಸುಧಾಕರ್‌ರಾಜ್	ರಾಬರ್ಟ್
ಉತ್ತಮ ಸಂಗೀತ ನಿರ್ದೇಶಕ	ಅರ್ಜುನ್ ಜನ್ಯ	ರಾಬರ್ಟ್
ಉತ್ತಮ ಹಿನ್ನೆಲೆ ಗಾಯಕಿ	ಚೈತ್ರಾ ಆಚಾರ್	ಗರುಡ ಗಮನ ವೃಷಭ ವಾಹನ (ಸೋಜುಗಾದ ಸೂಜು ಮಲ್ಲಿಗೆ)
ಉತ್ತಮ ಹಿನ್ನೆಲೆ ಗಾಯಕ	ಅರ್ಮಾನ್ ಮಲಿಕ್ ಮತ್ತು ತಮನ್ ಎಸ್	ನೀನಾದೆ
ಉತ್ತಮ ಗೀತ ರಚನೆಕಾರ	ವಾಸುಕಿ ವೈಭವ್	ನಿನ್ನ ಸನಿಹಕೆ (ಹಾಡು: ನೀ ಪರಿಚಯ..)

ಪ್ರಣವಾನಂದ ಸ್ವಾಮೀಜಿ ಅಭಿಪ್ರಾಯ

'ಇದು ಕಲಿಯುಗ. ಭಕ್ತರು ಸ್ವಾಮೀಜಿಗಳ ಮನವೊಲಿಸಿದರೆ ಸನಾತನ ಸಂಸ್ಕೃತಿ ಉಳಿಯುತ್ತದೆ'

'ಸ್ವಾಮೀಜಿಗಳು ಮದುವೆ ಆಗಿಯೇ ಮಠ ನಡೆಸಲಿ'

ದಾವಣಗೆರೆ: 'ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಗೆಲ್ಲುವ ಸ್ವಾಮೀಜಿಗಳು ಸನ್ಯಾಸಿಯಾಗಿಯೇ ಮಠ ನಡೆಸಲಿ. ಗೆಲ್ಲಲಾರದವರು ಮದುವೆಯಾಗಿ ಮಠ ನಡೆಸುವುದೇ ಸೂಕ್ತ' ಎಂದು ಚಿತ್ತಾಪುರ ತಾಲ್ಲೂಕಿನ ಕರದಾಳ್ ಬ್ರಹ್ಮಶ್ರೀ ನಾರಾಯಣ ಗುರುಗಳ ಶಕ್ತಿ ಪೀಠದ ಪ್ರಣವಾನಂದ ಸ್ವಾಮೀಜಿ ಅಭಿಪ್ರಾಯಪಟ್ಟರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಋಷಿ, ಮುನಿಗಳು, ವೇದವ್ಯಾಸರು, ಬಸವಣ್ಣನವರು ಸೇರಿ ಅನೇಕರು ಮದುವೆಯಾಗಿ ಆಶ್ರಮ ನಡೆಸಿದ್ದಾರೆ. ಈ ಕಾಲದಲ್ಲೂ ಸ್ವಾಮೀಜಿಗಳು ಮದುವೆಯಾಗಿಯೇ ಮಠ ನಡೆಸುವುದು ಸೂಕ್ತ. ಅದಕ್ಕೆ ನಾನೇ ಉದಾಹರಣೆ. ನಮ್ಮ ಪರಂಪರೆಯಂತೆ ಮದುವೆ ಆಗಿದ್ದೇನೆ. ಸಂಸಾರವೂ ಇಲ್ಲ. ಸನ್ಯಾಸವೂ ಇಲ್ಲದಂತಾಗಿ ಅವಮಾನಕ್ಕೆ ಒಳಗಾಗುವುದಕ್ಕಿಂತ ಮದುವೆ ಆಗುವುದೇ ಒಳಿತು' ಎಂದರು.

'ನಾರಾಯಣ ಗುರುಗಳಿಗೂ ಮದುವೆ ಮಾಡಲು ತೀರ್ಮಾನಿಸಲಾಗಿತ್ತು. ವಿಷಯ ಗೊತ್ತಾಗಿ ಅವರು ಮನೆ ಬಿಟ್ಟು ಹೋಗಿದ್ದರು. ನಮ್ಮಲ್ಲಿ 8 ಜನ ಸ್ವಾಮೀಜಿಗಳಲ್ಲಿ ಮೂವರು ಗೃಹಸ್ಥರು. ₹ 2 ಲಕ್ಷ ಮೌಲ್ಯದ ಮೊಬೈಲ್ ಫೋನ್ ಹಿಡಿದು ಬ್ರಹ್ಮಚರ್ಯವನ್ನು ಪಾಲಿಸುವುದು ಹೇಗೆ' ಎಂದು ಅವರು ಪ್ರಶ್ನಿಸಿದರು.

ಪ್ರಕ್ರಿಯೆ ಪಾರದರ್ಶಕ: ಜೈರಾಜ್ ಪತ್ರ

ಬೇಗ್ ಮಾಲೀಕತ್ವದ ಡ್ಯಾನಿಷ್ ಪಬ್ಲಿಕೇಷನ್‌ಗೆ ಕ್ರಯಪತ್ರ ಮಾಡಿಕೊಟ್ಟ ವಿಚಾರ

ಪ್ರಜಾವಾಣಿ ವಾರ್ತೆ



ನವದೆಹಲಿ: 'ಡ್ಯಾನಿಷ್ ಪಬ್ಲಿಕೇಷನ್‌ಗೆ ಪಾರದರ್ಶಕವಾಗಿ ಕ್ರಯಪತ್ರ ಮಾಡಿಕೊಡಲಾಗಿದೆ' ಎಂದು ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕೆ.ಜೈರಾಜ್ ಅವರು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಪತ್ರ ಬರೆದಿದ್ದಾರೆ.

'ಆರ್.ರೋಷನ್ ಬೇಗ್ ಮಾಲೀಕತ್ವದ ಡ್ಯಾನಿಷ್ ಪಬ್ಲಿಕೇಷನ್‌ಗೆ ಬೆಂಗಳೂರಿನಲ್ಲಿ ₹30 ಕೋಟಿ ಬೆಲೆ ಬಾಳುವ ಜಾಗವನ್ನು ₹1.68 ಕೋಟಿಗೆ ಹಂಚಿಕೆ ಮಾಡಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಲಾಗಿದೆ' ಎಂದು ಜಾರಿ ನಿರ್ದೇಶನಾಲಯವು (ಇ.ಡಿ.) ವರದಿಯಲ್ಲಿ ತಿಳಿಸಿತ್ತು. ಸಂಸ್ಥೆಗೆ ಕ್ರಯಪತ್ರ ಮಾಡಿಕೊಟ್ಟ ಅಧಿಕಾರಿಗಳ ಪಟ್ಟಿಯನ್ನು ನಗರಾಭಿವೃದ್ಧಿ ಇಲಾಖೆಗೆ ಪಾಲಿಕೆ ಸಲ್ಲಿಸಿದೆ. ಈ ಪಟ್ಟಿಯಲ್ಲಿ ಕೆ. ಜೈರಾಜ್ (ಆಗ ಆಯುಕ್ತರಾಗಿದ್ದರು) ಹೆಸರಿದೆ.

ಪತ್ರದಲ್ಲಿ ಏನಿದೆ: 'ಜ್ಯೋತಿ ರಾಮಲಿಂಗಂ ಪಾಲಿಕೆಯ ಆಯುಕ್ತರಾಗಿದ್ದ ಸಂದರ್ಭದಲ್ಲಿ ಮಾರುಕಟ್ಟೆ ದರಕ್ಕೆ ಶೇ 20ರಷ್ಟು ಹೆಚ್ಚುವರಿ ಶುಲ್ಕದೊಂದಿಗೆ ಜಮೀನು ಮಂಜೂರು ಮಾಡಲು ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಯಿತು. ಸರ್ಕಾರಿ ಆದೇಶಗಳ ಆಧಾರದಲ್ಲಿ ಪಾಲಿಕೆ ಮೂಲಕ ಮಾರಾಟ ಪತ್ರ ಕಾರ್ಯಗತಗೊಳಿಸಲಾಗಿದೆ. 10,000 ಚದರ ಅಡಿಯನ್ನು ಈ ಸಂಸ್ಥೆಗೆ ಪ್ರತಿ ಚದರ ಅಡಿಗೆ ₹1,400 ಮತ್ತು ಶೇ 20 ಹೆಚ್ಚುವರಿ ದರ ವಿಧಿಸಿ ಮಾರಾಟ ಮಾಡಲು ಸರ್ಕಾರ ಅನುಮೋದನೆ ನೀಡಿತ್ತು. ಅದರಂತೆ ₹1.68 ಕೋಟಿ ದರ ನಿಗದಿಪಡಿಸಲಾಯಿತು' ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಈ ಪ್ರಸ್ತಾವಕ್ಕೆ ಪಾಲಿಕೆಯ ನಗರ ಯೋಜನೆ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಕೌನ್ಸಿಲ್ ಅನುಮೋದನೆ ನೀಡಿದೆ. ಬಳಿಕ ಕೌನ್ಸಿಲ್ ನಿರ್ಣಯವನ್ನು ಸರ್ಕಾರಕ್ಕೆ ಕಳುಹಿಸಲಾಯಿತು. ಕ್ರಯಪತ್ರ ಮಾಡಿಕೊಡುವ ಮೊದಲು ಜಾಗದ ಮಾರುಕಟ್ಟೆ ಮೌಲ್ಯ ಹಾಗೂ ಜಾಗದ ಬಗ್ಗೆ ಸಮಗ್ರ ಪರಿಶೀಲನೆ ನಡೆಸಿದ್ದೇನೆ. ಈ ಮಾರುಕಟ್ಟೆ ದರವನ್ನು ಪಾಲಿಕೆಯ ಆಗಿನ ಆಡಳಿತಗಾರ ದಿಲೀಪ್ ರಾವ್ ಅನುಮೋದಿಸಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

'ಜಾಗದ ಮಾರಾಟ ವಹಿವಾಟಿಗೆ ಕಾನೂನಿನ ಅಡೆತಡೆಗಳಿಲ್ಲ ಎಂದು ಪಾಲಿಕೆಯ ಉಪ ಕಾನೂನು ಅಧಿಕಾರಿ 2007ರ ಫೆಬ್ರುವರಿಯಲ್ಲಿ ದೃಢಪಡಿಸಿ ದ್ದಾರೆ. ಬಳಿಕ ಸಂಸ್ಥೆಯು ₹1.68 ಕೋಟಿಯನ್ನು ಪಾಲಿಕೆಗೆ ಪಾವತಿಸಿದೆ. ಪಾಲಿಕೆಯ ಹಿತಾಸಕ್ತಿ ರಕ್ಷಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ. ಈ ಪತ್ರವನ್ನು ಸರ್ಕಾರದ ಗಮನಕ್ಕೆ ತರಬೇಕು' ಎಂದು ಅವರು ಕೋರಿದ್ದಾರೆ.

'ನ್ಯಾಯಾಲಯದ ಆದೇಶದಂತೆ ಈಗ ಭೂಮಿಯು ಸಂಸ್ಥೆಯ ಸ್ವಾಧೀನದಲ್ಲಿಲ್ಲ. ಹೆಚ್ಚುವರಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರು 2019ರಂದು ಪಾಲಿಕೆ ಮಾಡಿಕೊಟ್ಟಿದ್ದ ಮಾರಾಟ ಪತ್ರ ರದ್ದುಗೊಳಿಸಿದ್ದಾರೆ. ಎಕ್ಸಿಕ್ಯೂಷನ್ ಅರ್ಜಿಯ ಮೂಲಕ ಪಾಲಿಕೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಿದೆ' ಎಂದು ಅವರು ಹೇಳಿದ್ದಾರೆ.

ಗಣೇಶ ಮೂರ್ತಿ ವಿಸರ್ಜನೆ: ಕ್ರೇನ್ ಬಿದ್ದು ಇಬ್ಬರು ಸಾವು

ಹೊಸಪೇಟೆ (ವಿಜಯನಗರ): ಗಣಪನ ಮೂರ್ತಿ ವಿಸರ್ಜನೆ ವೇಳೆ ಶನಿವಾರ ತಡರಾತ್ರಿ ನಗರದ ತುಂಗಭದ್ರಾ ಜಲಾಶಯ ಸಮೀಪದ ಪವರ್ ಕಾಲುವೆ ಬಳಿ ಕ್ರೇನ್ ಬಿದ್ದು ಒಂದೇ ಕುಟುಂಬದ ಇಬ್ಬರು ಯುವಕರು ಮೃತಪಟ್ಟಿದ್ದಾರೆ.

ಟಿ.ಬಿ.ಡ್ಯಾಂ ನಿವಾಸಿಗಳಾದ ಅಶೋಕ (18), ಸಾಯಿ ನಿಖಿಲ್ (17) ಮೃತರು.

ಮಧ್ಯರಾತ್ರಿ 1.30ರ ಸುಮಾರಿಗೆ 34 ಅಡಿ ಎತ್ತರದ ಗಣೇಶನ ಮೂರ್ತಿ ವಿಸರ್ಜಿಸುವಾಗ ಅವಘಡ ಸಂಭವಿಸಿದೆ. ನಿರ್ಲಕ್ಷ್ಯ, ಸಂಬಂಧ ಕ್ರೇನ್ ಆಪರೇಟರ್ ರಾಜು, ಇ.ವಿ.ಕ್ಯಾಂಪ್ ಮಹಾಗಣಪತಿ ಮಂಡಳಿ ಮುಖಂಡ ನೂಕರಾಜ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಕೊಲೆ: ಮೂವರ ಸೆರೆ

ಬೆಳಗಾವಿ: ಯರಗಟ್ಟಿ ತಾಲ್ಲೂಕಿನ ಮುಗಳಿಹಾಳದಲ್ಲಿ ಗಣೇಶ ವಿಸರ್ಜನೆ ವೇಳೆ ವಿದ್ಯಾರ್ಥಿ ಗುಂಪುಗಳ ನಡುವೆ ಘರ್ಷಣೆ ಉಂಟಾಗಿದ್ದು, ಯುವಕ ಮುಗಳಿಹಾಳ ಗ್ರಾಮದ ಅರ್ಜುನಗೌಡ ಪಾಟೀಲ (21) ಕೊಲೆಯಲ್ಲಿ ಅಂತ್ಯವಾಗಿದೆ.

'ಉದಯ ಭಂದ್ರೋಳಿ (21), ಸುಭಾಷ ಸೋಲಣ್ಣವರ (21), ವಿಠ್ಠಲ ಮೀಸಿ (20) ಬಂಧಿಸಲಾಗಿದೆ. ಗುಂಪಿನಲ್ಲಿದ್ದ 16 ವರ್ಷದ ಬಾಲಕನನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ' ಎಂದು ಎಸ್‌ಪಿ ಡಾ.ಸಂಜೀವ ಪಾಟೀಲ ತಿಳಿಸಿದ್ದಾರೆ.

ಮಸೀದಿ ಮೇಲೆ ಚಪ್ಪಲಿ ಎಸೆತ: ಬಂಧನ

ತೆಕ್ಕಲಕೋಟೆ (ಬಳ್ಳಾರಿ): ಗಣಪತಿ ಮೂರ್ತಿಗಳ ವಿಸರ್ಜನೆ ವೇಳೆ ಸಿರುಗುಪ್ಪ ಪಟ್ಟಣದ ದೇಶನೂರು ರಸ್ತೆಯ ಸೌದಾಗರ್ ಮಸೀದಿ ಮೇಲೆ ಚಪ್ಪಲಿ ಎಸೆದ ಸಂಬಂಧ ನಾಲ್ವರನ್ನು ಬಂಧಿಸಲಾಗಿದೆ.'ಘಟನೆ ಸಂಬಂಧ ಇಬ್ಬರನ್ನು ವಶಕ್ಕೆ ಪಡೆದಿದ್ದು, ವಿಚಾರಣೆ ನಡೆದಿದೆ' ಎಂದು ಎಸ್‌ಪಿ ಸೈದುಲು ಅಡಾವತ್ ಅವರು ತಿಳಿಸಿದರು.

ಪ್ರಶ್ನೆಪತ್ರಿಕೆ ಕೋಡ್ ಶೇಡ್ ವೇಳೆ ಪ್ರಮಾದ; ಕೋರ್ಟ್ ಮೆಟ್ಟಿಲೇರಲು ಪೋಷಕರ ನಿರ್ಧಾರ

'ನೀಟ್' ಗೊಂದಲ: ಅಂಕ ನಷ್ಟ!

• ರಾಜೇಶ್ ರೈ ಚಟ್ಲ

ಮುಖ್ಯಾಂಶಗಳು
- ಅಂಕ ಕಳೆದುಕೊಂಡ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು
- ಶೇಡ್ ಮಾಡುವ ವೇಳೆ ಹಲವರಿಗೆ ಗೊಂದಲ

ಬೆಂಗಳೂರು: ಪ್ರಸಕ್ತ ಸಾಲಿನ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಉತ್ತರ ಪತ್ರಿಕೆಯಲ್ಲಿ (ಒಎಂಆರ್ ಹಾಳೆ) ಪ್ರಶ್ನೆಪತ್ರಿಕೆ ಶ್ರೇಣಿಯ (ಟೆಸ್ಟ್ ಬುಕ್‌ಲೆಟ್ ಕೋಡ್) ವೃತ್ತಕ್ಕೆ ಶೇಡ್ ಮಾಡುವ ವೇಳೆ ಆದ ಪ್ರಮಾದದಿಂದ ರಾಜ್ಯದ 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಂಕ ಕಳೆದುಕೊಂಡಿದ್ದಾರೆ.

ಅಷ್ಟೇ ಅಲ್ಲ, ಕೆಲ ವಿದ್ಯಾರ್ಥಿಗಳು ಸರ್ಕಾರಿ ವೈದ್ಯಕೀಯ ಸೀಟು ಗಿಟ್ಟಿಸಿಕೊಳ್ಳುವ ಅವಕಾಶದಿಂದಲೇ ವಂಚಿತರಾಗಿದ್ದಾರೆ. ಇದರಿಂದ ತೀವ್ರ ಹತಾಶರಾಗಿರುವ ವಿದ್ಯಾರ್ಥಿಗಳ ಪೋಷಕರು ಹೈಕೋರ್ಟ್ ಮೆಟ್ಟಿಲೇರಲು ನಿರ್ಧರಿಸಿದ್ದಾರೆ.

ನೀಟ್ ನಡೆಸಿದ್ದ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ), ಉತ್ತರಪತ್ರಿಕೆಯಲ್ಲಿ ಪ್ರಶ್ನೆಪತ್ರಿಕೆ ಬುಕ್‌ಲೆಟ್ ಕೆಳಗಡೆ ಮೂರು ಸಾಲುಗಳಲ್ಲಿ ಖಾಲಿ ವೃತ್ತಗಳನ್ನು ನೀಡಿದೆ. ಮೊದಲ ಸಾಲಿನ ವೃತ್ತಗಳಲ್ಲಿ ಪ್ರಶ್ನೆಪತ್ರಿಕೆಯ ಆಂಗ್ಲ (ಎಸ್, ಆರ್, ಕ್ಯೂ.. ಹೀಗೆ) ಅಕ್ಷರವನ್ನು ಶೇಡ್ ಮಾಡಬೇಕಿತ್ತು. ನಂತರದ ಒಂದು ಸಾಲಿನಲ್ಲಿ ಆಂಗ್ಲ ಅಕ್ಷರದ ಜೊತೆಗಿದ್ದ ಸಂಖ್ಯೆಗೆ ಅನುಗುಣವಾಗಿ ವಿದ್ಯಾರ್ಥಿಗಳು ಶೇಡ್ ಮಾಡಬೇಕಿತ್ತು. ಆದರೆ, ಶೇಡ್ ಮಾಡುವ ವೇಳೆ ಹಲವು ವಿದ್ಯಾರ್ಥಿಗಳು ಗೊಂದಲಕ್ಕೀಡಾಗಿದ್ದಾರೆ.

'ನನ್ನ ಮಗಳು, ಬಿಜಿಎಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಯಾಗಿರುವ ಎಸ್.ಎಸ್. ಗಹನ, ಟೆಸ್ಟ್ ಬುಕ್‌ಲೆಟ್‌ನಲ್ಲಿ ಶೇಡ್ ಮಾಡಬೇಕಿದ್ದ ಸಾಲಿನಲ್ಲಿ ಎಸ್ 6ಗೆ ಮಾತ್ರ ಶೇಡ್ ಮಾಡಬೇಕಿತ್ತು. ಆದರೆ, ಎಸ್ 6 ಹಾಗೂ ಎಸ್ 7 ಎರಡಕ್ಕೂ ಶೇಡ್ ಮಾಡಿದ್ದಾಳೆ. ಎನ್‌ಟಿಎ ಪ್ರಕಟಿಸಿದ್ದ ಕೀ ಉತ್ತರದ ಪ್ರಕಾರ ಮಗಳಿಗೆ ಅಂದಾಜು 688 ಅಂಕ ಬರಬೇಕಿದೆ. ಆದರೆ, ಕೇವಲ 43 ಅಂಕ ಬಂದಿದೆ' ಎಂದು ಕೆ.ಆರ್. ಪೇಟೆಯ ಎಸ್.ವಿ. ಶ್ರೀನಾಥ್ ಹೇಳಿದರು.

'ನನ್ನ ಮಗಳು ನೀಟ್ ಉತ್ತಮವಾಗಿ ಬರೆದಿದ್ದು, ಕೀ ಉತ್ತರದ ಪ್ರಕಾರ ಅವಳಿಗೆ 552 ಅಂಕ ಬರಬಹುದೆಂಬ ವಿಶ್ವಾಸ ಇತ್ತು. ಆದರೆ, ಪ್ರಶ್ನೆಪತ್ರಿಕೆ ಶ್ರೇಣಿ ಬರೆಯುವ ವೇಳೆ ಎಸ್ 6 ವೃತ್ತಕ್ಕೆ ಶೇಡ್ ಮಾಡುವ ಬದಲು ಎಸ್ 7ನೇ ವೃತ್ತಕ್ಕೆ ಶೇಡ್ ಮಾಡಿದ್ದರಿಂದ 173 ಅಂಕ ಬಂದಿದೆ. ಇದರಿಂದಾಗಿ ಸರ್ಕಾರಿ ವೈದ್ಯಕೀಯ ಸೀಟು ಪಡೆಯುವ ಅವಕಾಶದಿಂದ ವಂಚಿತಳಾಗಿದ್ದಾಳೆ' ಎಂದು ಮೈಸೂರಿನ ರೋಶಿನಿ ವಿ.ಎಸ್. ಗೌಡ ಎಂಬ ವಿದ್ಯಾರ್ಥಿಯ ತಂದೆ ಎಚ್.ಬಿ. ವಾಸು ತಿಳಿಸಿದರು. 'ಟೆಸ್ಟ್ ಬುಕ್‌ಲೆಟ್ ಕೋಡ್‌ನ ಕೆಳಗಿನ ಯಾವ ಸಾಲಿನಲ್ಲಿ ವೃತ್ತಕ್ಕೆ ಶೇಡ್ ಮಾಡಬೇಕೆಂಬ ಬಗ್ಗೆ ಸ್ಪಷ್ಟ ಸೂಚನೆ ಒಎಂಆರ್ ಹಾಳೆಯಲ್ಲಿ ಇರಲಿಲ್ಲ. ಪರೀಕ್ಷಾ ಕೊಠಡಿಯ ಮೇಲ್ವಿಚಾರಕರೂ ಅದನ್ನು ಪರಿಶೀಲಿಸಿದ ಬಳಿಕ ತಮ್ಮ ಸಹಿ ಮಾಡಬೇಕಿತ್ತು. ಅಚಾತುರ್ಯ, ಅಜಾಗರೂಕತೆಯಿಂದ ಆಗಿರುವ ತಪ್ಪಿನಿಂದ ಹಲವು ವಿದ್ಯಾರ್ಥಿಗಳು ರ್‍ಯಾಂಕ್ ಗಳಿಸುವ ಅವಕಾಶ ಕಳೆದುಕೊಂಡಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಜಾವಾಣಿ ವಿಶೇಷ

ಎನ್‌ಟಿಎ ಅಧ್ಯಕ್ಷರಿಗೆ ಇ–ಮೇಲ್

ನೀಟ್‌ನಲ್ಲಿ ಉತ್ತಮ ಅಂಕ ಪಡೆದು ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಸಿಗಬಹುದೆಂಬ ನಿರೀಕ್ಷೆಯಲ್ಲಿದ್ದ ರೋಶಿನಿ ವಿ.ಎಸ್. ಗೌಡ, ಎನ್‌ಟಿಎ ಅಧ್ಯಕ್ಷರಿಗೆ ಇ-ಮೇಲ್ ಮತ್ತು ಪತ್ರ ಬರೆದಿದ್ದಾರೆ. 'ಉತ್ತರ ಪತ್ರಿಕೆಯ ಪ್ರಶ್ನೆಪತ್ರಿಕೆ ಬುಕ್‌ಲೆಟ್ ಸಂಖ್ಯೆ ಎಸ್ 6 ಎಂದು ನಾನು ಶೇಡ್ ಮಾಡಬೇಕಿತ್ತು. ಆದರೆ, ಎಸ್ 7 ಎಂದಾಗಿದೆ. ಇದರಿಂದಾಗಿ ನನಗೆ ಕೇವಲ 173 ಅಂಕ ಬಂದಿದೆ. ನನ್ನ ಕಣ್ತಪ್ಪಿನಿಂದ ಆಗಿರುವ ಈ ಪ್ರಮಾದವನ್ನು ಸರಿಪಡಿಸಿ, ಅರ್ಹವಾಗಿ ನನಗೆ ಬರಬೇಕಾದ ಅಂಕ ಸಿಗಲು ನೆರವಾಗಬೇಕು' ಎಂದು ಮನವಿ ಮಾಡಿದ್ದಾರೆ.

'ಸಿ.ಎಂಗೆ ಹಾನಗಲ್‌ನಲ್ಲೇ ತಾಕತ್ತು ತೋರಿಸಲು ಆಗಿಲ್ಲ'

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ತಮ್ಮ ಪಕ್ಕದ ಕ್ಷೇತ್ರವಾದ ಹಾನಗಲ್‌ನಲ್ಲಿಯೇ ತಾಕತ್ತು ತೋರಿಸಲು ಆಗಿಲ್ಲ, ಇನ್ನು ರಾಜ್ಯದಲ್ಲಿ ಏನು ತೋರಿಸುತ್ತಾರೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಲೇವಡಿ ಮಾಡಿದರು.

ಭಾನುವಾರ ಇಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, '2023ಕ್ಕೆ ಚುನಾವಣೆಯಲ್ಲಿ ಜನರ ಮುಂದೆ ಹೋಗೋಣ. ಆಗ ಧಮ್ಮು, ತಾಕತ್ತು ಯಾರಲ್ಲಿದೆ ಅಂತ ಗೊತ್ತಾಗುತ್ತದೆ. ಈಗಾಗಲೇ ಕಾಂಗ್ರೆಸ್ ಅಲೆ ಶುರುವಾಗಿದೆ. ಜನ ಬದಲಾವಣೆ ಬಯಸಿದ್ದಾರೆ' ಎಂದು ಪ್ರತಿಪಾದಿಸಿದರು

'ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ದುರಾಡಳಿತದಿಂದ ಜನರು ಬೇಸತ್ತಿದ್ದಾರೆ. ಪ್ರವಾಹ ಬಂದು ಪರಿತಪಿಸುತ್ತಿರುವ ಸಂತ್ರಸ್ತರಿಗೆ ಪೈಸೆ ಪರಿಹಾರವನ್ನು ಕೊಟ್ಟಿಲ್ಲ. ಎಷ್ಟು ಬೇಜವಾಬ್ದಾರಿ' ಎಂದು ಸರ್ಕಾರದ ವಿರುದ್ಧ ಹರಿಹಾಯ್ದರು.

'ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರೋಕೆ ಬಿಡಲ್ಲ ಎಂದು ಹೇಳೋಕೆ, ತೀರ್ಮಾನ ಮಾಡೋದಕ್ಕೆ ಯಡಿಯೂರಪ್ಪ ಯಾರು? ಅವರ ಜೇಬಲ್ಲಿ ವೋಟ್‌ಗಳಿವೆಯಾ? ಅದನ್ನು ಜನರು ತೀರ್ಮಾನಿಸುತ್ತಾರೆ' ಎಂದು ತಿರುಗೇಟು ನೀಡಿದರು.

'ಬಿಜೆಪಿ ಜನಸ್ಪಂದನದಲ್ಲಿ ಎಲ್ಲ ಖಾಲಿ ಕುರ್ಚಿಗಳಿದ್ದವು. ರಾಜ್ಯದಲ್ಲಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 159 ಸ್ಥಾನ ಬರುತ್ತವೆ ಎಂಬ ಭೀತಿ ಬಿಜೆಪಿಯವರಿಗೆ ಶುರುವಾಗಿದೆ. ಅವರಿಗೆ ನಾನೇ ಟಾರ್ಗೆಟ್. ನನ್ನ ಕಂಡ್ರೆ ಭಯ. ದಾವಣಗೆರೆ ಕಾರ್ಯಕ್ರಮದ ಬಳಿಕ ಬಿಜೆಪಿಯವರು ಹತಾಶರಾಗಿದ್ದಾರೆ' ಎಂದು ಅವರು ಟೀಕಿಸಿದರು.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಪಿಯುಸಿಯಲ್ಲಿ ಉತ್ತಮ ಅಂಕ ಮತ್ತು ಸಿಇಟಿಯಲ್ಲಿ ಕಡಿಮೆ ರ‍್ಯಾಂಕ್ ಪಡೆದ ಮಕ್ಕಳನ್ನು ಎಂಜಿನಿಯರಿಂಗ್ ಓದಿಸಬೇಕು ಎಂದು ತವಕಿಸುವ ಕೆಲ ಪೋಷಕರು ಶುಲ್ಕದ ವಿಚಾರದಲ್ಲಿ ಆತಂಕಕ್ಕೊಳಗಾಗುತ್ತಿದ್ದಾರೆ. ಇನ್ನೂ ಕೆಲವರು ಎಂಜಿನಿಯರಿಂಗ್‌ಗೆ ಸಮನಾದ ಕೋರ್ಸ್‌ಗಳ ಹುಡುಕಾಟದಲ್ಲಿದ್ದಾರೆ. ಅಂಥವರಿಗೆ ಪರ್ಯಾಯ ಕೋರ್ಸ್‌ಗಳ ಕುರಿತ ವಿವರ ಇಲ್ಲಿದೆ.

> ಬಿಸಿಎ ಕೋರ್ಸ್ ಆಯ್ಕೆ ಮಾಡಿಕೊಂಡರೆ ಎಂಸಿಎ ಮಾಡಬಹುದು. ಇದು ಎಂಜಿನಿಯರಿಂಗ್ ನಂತರ ಮಾಡುವ 'ಎಂ.ಎಸ್'ಗೆ ಸಮಾನವಾದ ಪದವಿ. ಎಂಜಿನಿಯರಿಂಗ್ ಪದವಿಗೆ ಹೋಲಿಸಿದರೆ ಶುಲ್ಕ ಕಡಿಮೆ. ಗಣಿತ ಹಾಗೂ ಗಣಕ ವಿಜ್ಞಾನ ವಿಷಯದಲ್ಲಿ ಬಿಎಸ್ಸಿ ಪದವಿ ಓದಿದರೆ ಎಂಸಿಎ ಮಾಡಬಹುದು. ಎಂಎಸ್ಸಿಯಲ್ಲಿ ಗಣಿತ ಅಥವಾ ಕಂಪ್ಯೂಟರ್‌ಸೈನ್ಸ್ ಆಯ್ಕೆ ಮಾಡಿಕೊಳ್ಳಬಹುದು.
>
> – ಡಾ. ಅಜಿತ ಪ್ರಸಾದ್, ಶಿಕ್ಷಣ ತಜ್ಞರು, ಧಾರವಾಡ

ಎಂಜಿನಿಯರಿಂಗ್‌ಗೂ ಇವೆ ಪರ್ಯಾಯಗಳು!

ಆತ್ರೇಯ

ಸಿಇಟಿ ಫಲಿತಾಂಶ ಬಂದ ನಂತರ, ಅನೇಕ ಪೋಷಕರು ಮಕ್ಕಳ ಅಂಕಗಳನ್ನು ನೋಡಿ ತೊಳಲಾಟದಲ್ಲಿದ್ದಾರೆ. ಪಿಯುಸಿಯಲ್ಲಿ ಉತ್ತಮ ಅಂಕ ಪಡೆದು, ಸಿಇಟಿ ರ‍್ಯಾಂಕಿಂಗ್‌ನಲ್ಲಿ ಸ್ವಲ್ಪ ವ್ಯತ್ಯಾಸವಾಗಿ ತಾವು ಬಯಸಿದ ಎಂಜಿನಿಯರಿಂಗ್ ಕೋರ್ಸ್‌ಗೆ ಪ್ರವೇಶ ಸಿಗದಿರುವುದು, ಒಂದು ವೇಳೆ ಸಿಕ್ಕಿದರೂ ದುಬಾರಿ ಶುಲ್ಕ ಇತ್ಯಾದಿ ಆತಂಕಗಳು ಅವರನ್ನು ಕಾಡುತ್ತಿವೆ. ಎಂಜಿನಿಯರಿಂಗ್ ಬಿಟ್ಟು ಪರ್ಯಾಯವಾಗಿ ಇನ್ಯಾವ ಕೋರ್ಸ್‌ಗಳಿವೆ ಎಂದು ಚಿಂತಿಸುತ್ತಿದ್ದಾರೆ.

ಹಾಗಾದರೆ, ಇಂಥ ಪರಿಸ್ಥಿತಿಯಲ್ಲಿ ಎಂಜಿನಿಯರಿಂಗ್ ಓದಬೇಕೆಂಬ ಆಸೆ ಇಟ್ಟುಕೊಂಡಿರವವರು ಏನು ಮಾಡಬಹುದು. ಕಡಿಮೆ ಶುಲ್ಕದಲ್ಲಿ, ಎಂಜಿನಿಯರಿಂಗ್ ಪದವಿಗೆ ಪರ್ಯಾಯವಾದ ಹಾಗೂ ಸಮಾನದ ಯಾವ ಕೋರ್ಸ್‌ಗಳನ್ನು ಮಾಡಬಹುದು ಎಂಬ ಪ್ರಶ್ನೆಗೆ ಶಿಕ್ಷಣ ತಜ್ಞರು ನೀಡಿರುವ ಸಲಹೆಗಳು ಇಲ್ಲಿವೆ;

ಪರ್ಯಾಯ ಕೋರ್ಸ್‌ಗಳು ಯಾವುವು?

ಎಂಜಿನಿಯರಿಂಗ್ ಪದವಿಗೆ ಬೇಡಿಕೆ ಕಡಿಮೆಯಾಗಿದೆ ಎಂದು ತಜ್ಞರು ಹೇಳಿದ್ದರೂ, ಆ ಪದವಿಯಲ್ಲಿರುವ ಕಂಪ್ಯೂಟರ್ ಸೈನ್ಸ್ ಶಾಖೆ(ಬ್ರಾಂಚ್)ಯೇ ಬೇಕು ಎನ್ನುವವರ ಸಂಖ್ಯೆ ಹೆಚ್ಚಿದೆ. ಇಂಥ ಕೋರ್ಸ್‌ಗಳಿಗೆ ಬೇಡಿಕೆಯೂ ಹೆಚ್ಚು, ಶುಲ್ಕವೂ ದುಬಾರಿ. ಈ ಹಿನ್ನೆಲೆಯಲ್ಲಿ ಎಂಜಿನಿಯರಿಂಗ್‌ನಲ್ಲಿ ಕಂಪ್ಯೂಟರ್ ಸೈನ್ಸ್ ಸೀಟ್ ಸಿಗದವರು /ಹೋಗಲಾಗದವರು ಬಿಸಿಎ ಅಥವಾ ಬಿ.ಎಸ್ಸಿ (ಕಂಪ್ಯೂಟರ್ ಸೈನ್ಸ್) ಮಾಡಬಹುದು. ಅದೇ ರೀತಿ, ಎಂಜಿನಿಯರಿಂಗ್ (ಎಲೆಕ್ಟ್ರಿಕಲ್) ಬದಲು ಬಿ.ಎಸ್ಸಿ (ಅಪ್ಲೈಡ್ ಫಿಸಿಕ್ಸ್). ಎಲೆಕ್ಟ್ರಾನಿಕ್ಸ್ ಬದಲು ಬಿ.ಎಸ್ಸಿ (ಎಲೆಕ್ಟ್ರಾನಿಕ್ಸ್), ಸಿವಿಲ್ ಎಂಜಿನಿಯರಿಂಗ್ ಬದಲು ಬಿ.ಎಸ್ಸಿ (ಜಿಯಾಲಜಿ), ಕೆಮಿಕಲ್ ಎಂಜಿನಿಯರಿಂಗ್ ಬದಲು ಬಿ.ಎಸ್ಸಿ (ಕೆಮಿಸ್ಟ್ರಿ) ಮಾಡಬಹುದು. ಇದಲ್ಲದೇ, ಬಿಎಸ್ಸಿಯಲ್ಲಿ ಏರೊನಾಟಿಕಲ್ ಎಂಜಿನಿಯರ್ ಕೂಡ ಇದೆ. ಎಂಜಿಯರಿಂಗ್‌ಗೆ ಇರುವ ಇಂಥ ಪರ್ಯಾಯ ಕೋರ್ಸ್‌ಗಳ ನಂತರ ಉನ್ನತ ಅಧ್ಯಯನದ ಜೊತೆಗೆ, ಉದ್ಯೋಗಾವಕಾಶಗಳೂ ವಿಪುಲವಾಗಿವೆ. ಈ ಪರ್ಯಾಯ ಕೋರ್ಸ್‌ಗಳ ಜೊತೆಗೆ ಅರೆಕಾಲಿಕ ಕೌಶಲಾಭಿವೃದ್ಧಿ ಕೋರ್ಸ್‌ಗಳನ್ನು ಮಾಡಿದರೆ, ಎಂಜಿನಿಯರಿಂಗ್ ಕೋರ್ಸ್‌ಗೆ ಸರಿಸಮಾನವಾದ ತಜ್ಞತೆಯನ್ನು ಪಡೆಯಬಹುದು ಎನ್ನುತ್ತಾರೆ ಶಿಕ್ಷಣ ತಜ್ಞ ಹಾಗೂ ವೃತ್ತಿಪರ ಸಲಹೆಗಾರ ಪ್ರದೀಪ್ ವೆಂಕಟರಾಮ್.

ಆನ್‌ಲೈನ್ ಕೋರ್ಸ್‌ಗಳು

ಬಿ.ಎಸ್ಸಿ ಪದವಿ ಓದುತ್ತಾ, ಕಂಪ್ಯೂಟರ್ ಸೈನ್ಸ್ ಕ್ಷೇತ್ರಕ್ಕೆ ಸಂಬಂಧಿಸಿದ ಬೇಡಿಕೆಯಲ್ಲಿರುವ ಅರೆಕಾಲಿಕ ಕೋರ್ಸ್‌ಗಳಾದ ಮಷೀನ್ ಲರ್ನಿಂಗ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಪೈಥಾನ್, ಜಾವ, ಸಿ + +, ಸ್ವಿಫ್ಟ್, ಲೈನಕ್ಸ್, ಡೇಟಾ ಸೈನ್ಸ್, ಸೈಬರ್ ಸೆಕ್ಯೂರಿಟಿಯಂತಹ ಕೋರ್ಸ್‌ಗಳನ್ನು ಮಾಡಬಹುದು ಎನ್ನುತ್ತಾರೆ ಪ್ರದೀಪ್. ಈ ಕೋರ್ಸ್‌ಗಳು ಎಂಜಿನಿಯರಿಂಗ್ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಇವೆ. ವಿಶೇಷವೇನೆಂದರೆ, ಸಾವಿರಾರು ಕೋರ್ಸ್‌ಗಳು 'ಮೂಕ್' (ಮ್ಯಾಸ್ಸೀವ್ ಓಪನ್ ಆನ್‌ಲೈನ್ ಕೋರ್ಸ್- https://www.mooc.org/) ವೇದಿಕೆಯಡಿ ಉಚಿತವಾಗಿಯೂ ಲಭ್ಯ ಎನ್ನುತ್ತಾರೆ ಅವರು.

ಇಷ್ಟೇ ಅಲ್ಲ...

ಎಂಜಿನಿಯರಿಂಗ್ ಪದವಿಯಷ್ಟೇ ಪ್ರಾಮುಖ್ಯವಾಗಿರುವ, ಆ ಶಿಕ್ಷಣದಲ್ಲಿ ಕಲಿಸುವಂತಹ ಡೇಟಾ ಸೈನ್ಸ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಮಷೀನ್ ಲರ್ನಿಂಗ್ ವಿಷಯಗಳಲ್ಲಿ ಬಿಎಸ್ಸಿ ಪದವಿಗಳಿವೆ. ಈ ಪದವಿ ಮೂಲಕ ಎಂಜಿನಿಯರಿಂಗ್ ವಿಭಾಗದಲ್ಲಿ ಕೆಲಸ ಪಡೆದು ಮುಂದುವರಿಯಬಹುದು ಎನ್ನುತ್ತಾರೆ ಬೆಂಗಳೂರಿನ ವಿಡಿಯ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಗುರುರಾಜ್ ಎಸ್. ದಾವಣಗೆರೆ.

ಇದಲ್ಲದೇ, ಆ್ಯನಿಮೇಷನ್, ಬಯೋಟೆಕ್ನಾಲಜಿ, ಇನ್ಸುಟ್ರುಮೆಂಟೇಷನ್, ಕಂಪ್ಯೂಟರ್ ಸೈನ್ಸ್, ಫ್ಯಾಷನ್ ಟೆಕ್ನಾಲಜಿ ಆ್ಯಂಡ್ ಅಪಾರೆಲ್ ಡಿಸೈನ್, ಏವಿಯೇಷನ್, ಡ್ರೋನ್ ಟೆಕ್ನಾಲಜಿ ,ಪ್ರಾಡಕ್ಟ್ ಡಿಸೈನಿಂಗ್, ಮ್ಯಾನುಫ್ಯಾಕ್ಚರಿಂಗ್ ಸೈನ್ಸ್ ವಿಷಯಗಳಲ್ಲಿ ಬಿಎಸ್ಸಿ ಪದವಿ ಪಡೆದು ನಂತರ ಉನ್ನತ ಅಧ್ಯಯನ ಇಲ್ಲವೇ ಆಯಾ ಕ್ಷೇತ್ರಗಳಲ್ಲಿ ಕೆಲಸ ಗಿಟ್ಟಿಸಬಹುದು ಎನ್ನುತ್ತಾರೆ ಅವರು.

ಭಾರತದ ಬಹುಪಾಲು ವಿಶ್ವವಿದ್ಯಾಲಯಗಳಲ್ಲಿ ಈ ಕೋರ್ಸ್‌ಗಳು ಇವೆ. ಎಂಜಿನಿಯರಿಂಗ್ ಪದವಿಯನ್ನೇ ಓದಬೇಕೆನ್ನುವವರು ಎಸ್ಸೆಸ್ಸೆಲ್ಸಿ ಅಂಕಗಳ ಆಧಾರದ ಮೇಲೆ ಡಿಪ್ಲೊಮಾ ಇನ್ ಎಂಜಿನಿಯರಿಂಗ್ ಮುಗಿಸಿ ಲ್ಯಾಟರಲ್ ಎಂಟ್ರಿ ವಿಧಾನದಲ್ಲಿ ಎರಡನೇ ವರ್ಷದ ಎಂಜಿನಿಯರಿಂಗ್‌ಗೆ ನೇರ ಪ್ರವೇಶ ಪಡೆಯಬಹುದು ಎನ್ನುವುದು ಅವರ ಸಲಹೆ.

ಬೇರೆ ದಾರಿಗಳೂ ಇವೆ..

ಸಿಇಟಿ ಮೂಲಕ ಎಂಜಿನಿಯರಿಂಗ್ ಕೋರ್ಸ್ ಮಾಡಲು ಸಾಧ್ಯವಾಗದೇ ಇದ್ದರೂ ತಾಂತ್ರಿಕ ಕ್ಷೇತ್ರದಲ್ಲಿ ಮುಂದುವರಿಯಲೇಬೇಕು ಎನ್ನುವವರು ಡಿಪ್ಲೊಮಾ, ಪಾಲಿಟೆಕ್ನಿಕ್ ಮಾಡಬಹುದು. ಇದನ್ನು ಮುಗಿಸಿದ ನಂತರ ಕಾಲೇಜಿಗೆ ಹೋಗದೆಯೂ ಎಂಜಿನಿಯರಿಂಗ್ ಪದವಿಗೆ ಸಮನಾದ ಡಿಗ್ರಿ ಪಡೆಯಬೇಕು ಎನ್ನುವವರು ಎಎಂಐಇ (ಅಸೋಸಿಯೇಟೇಡ್ ಮೆಂಬರ್ ಆಫ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್)ನಲ್ಲಿರುವ ಕೋರ್ಸ್‌ಗಳನ್ನು ಕಲಿಯಬಹುದು. ಇವು ಬಿ.ಟೆಕ್ ಹಾಗೂ ಎಂ.ಟೆಕ್ ಕೋರ್ಸ್‌ಗಳಿಗೆ ಸಮನಾಗಿವೆ. ಎಎಂಐಇಯು ಬಿ.ಟೆಕ್ ಮತ್ತು ಎಂ.ಟೆಕ್ ಕೋರ್ಸ್‌ಗಳಿಗೆ ಸಮನಾದ ಡಿಗ್ರಿಗಳನ್ನು ನೀಡುತ್ತದೆ ಎನ್ನುತ್ತಾರೆ ಮತ್ತೊಬ್ಬ ಶಿಕ್ಷಣ ತಜ್ಞ, ಸ್ಮಾರ್ಟ್ ಸೆರೆಬ್ರಮ್ ಸಂಸ್ಥೆಯ ನಿರ್ದೇಶಕ ವಿ. ವೆಂಕಟ ಸುಬ್ಬರಾವ್.

'ಎಎಂಐಇ' ಕೋರ್ಸ್ ಪ್ರವೇಶಕ್ಕೆ ದ್ವಿತೀಯ ಪಿಯುಸಿ, ಡಿಪ್ಲೊಮಾ ಮತ್ತು ಕೆಲಸದ ಅನುಭವ ಇರಬೇಕು. ಇದರ ಜತೆ ಐಇಟಿಇಯ (ಇನ್‌ಸ್ಟಿಟ್ಯೂಟ್ ಎಲೆಕ್ಟ್ರಾನಿಕ್ಸ್ ಆ್ಯಂಡ್ ಟೆಲಿಕಮ್ಯುನಿಕೇಷನ್ ಎಂಜಿನಿಯರ್ಸ್) ಆಯ್ಕೆಯೂ ಇದೆ. ಇದರಲ್ಲಿ ಗ್ರ್ಯಾಡ್ ಐಇಟಿಇ- ಡೀಪ್ ಐಇಟಿಇಯೂ ಅಂತ ಎರಡು ಇವೆ. ಇದಕ್ಕೂ ದ್ವಿತೀಯ ಪಿಯು ಆಗಿರಬೇಕು. ಇವೆಲ್ಲ ಕೋರ್ಸ್‌ಗಳು ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದಿವೆ' ಎಂದು ಅವರು ವಿವರಿಸುತ್ತಾರೆ. ಇನ್ನೊಂದು ಸರಳ ಮಾರ್ಗವೆಂದರೆ, ಎನ್‌ಟಿಟಿಎಫ್ (ನೆಟ್ಟೂರು ಟೆಕ್ನಿಕಲ್ ಟ್ರೇನಿಂಗ್ ಫೌಂಡೇಷನ್) ಕೋರ್ಸ್ ಮೂಲಕವೂ ತಾಂತ್ರಿಕ ಕೌಶಲ ಪಡೆಯಲು ಸಾಧ್ಯವಿದೆ' ಎನ್ನುತ್ತಾರೆ ಅವರು.

ಹೀಗಾಗಿ, ವೃತ್ತಿಜೀವನದ ಗುರಿಯನ್ನು ಸಾಧಿಸಲು ಎಂಜಿನಿಯರಿಂಗ್ ಕೋರ್ಸ್ ಅಲ್ಲದೆ ಅನೇಕ ಪರ್ಯಾಯ ಮಾರ್ಗಗಳಿವೆ. ಈ ಕೋರ್ಸ್‌ಗಳಿಗೆ ತಕ್ಕಮಟ್ಟಿಗೆ ಶುಲ್ಕ ಕಡಿಮೆ. ಇವು ಸ್ಥಳೀಯ ಕಾಲೇಜುಗಳಲ್ಲೂ ಲಭ್ಯವಿರುತ್ತವೆ. ಈ ಅವಕಾಶಗಳ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರು ಗಮನ ಹರಿಸಿ, ಎಂಜಿನಿಯರಿಂಗ್ ಕೋರ್ಸ್ ಕುರಿತ ತಮ್ಮ ಅಭಿಪ್ರಾಯವನ್ನು ಪುನರ್ಮೌಲ್ಯಗೊಳಿಸಬಹುದು.

ಎಂಬಿಎ(ಉದ್ಯಮಶೀಲತೆ)ಗೆ ಹೇಗಿದೆ ಬೇಡಿಕೆ ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾನು ಬಿಎ ಪದವಿಯ ವಿದ್ಯಾರ್ಥಿ. ಪದವಿಯಲ್ಲಿ ಐಚ್ಛಿಕ ವಿಷಯಗಳಾದ ಪತ್ರಿಕೋದ್ಯಮ ಮತ್ತು ಸಮೂಹ ಸಂಹವನ ಹಾಗೂ ಅಪರಾಧ ಶಾಸ್ತ್ರ ಮತ್ತು ವಿಧಿ ವಿಜ್ಞಾನ ಓದುತ್ತಿದ್ದೇನೆ. ಇವೆರಡರಲ್ಲಿ ಎಂ.ಎ ಮಾಡಲು ಯಾವುದು ಉತ್ತಮ ವೃತ್ತಿಪರ ಕೋರ್ಸ್ ಆಗಿದೆ ಎಂದು ಸಲಹೆ ನೀಡಿ.

ಪವನಕುಮಾರ್ ಚನ್ನವರ, ಚಿಕ್ಕೋಡಿ.

ನೀವು ಓದುತ್ತಿರುವ ವಿಷಯಗಳು ಬೇಡಿಕೆಯಲ್ಲಿವೆ ಹಾಗೂ ವೃತ್ತಿಜೀವನವನ್ನು ಯಶಸ್ವಿಯಾಗಿ ರೂಪಿಸಿಕೊಳ್ಳಬಹುದಾದ ಕ್ಷೇತ್ರಗಳು. ಆದ್ದರಿಂದ, ನಿಮಗೆ ಹೆಚ್ಚಿನ ಆಸಕ್ತಿ ಮತ್ತು ಒಲವಿರುವ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಮಾಡಬಹುದು.

2. ನಾನು ಬಿಕಾಂ ಪದವಿಯ ಅಂತಿಮ ವರ್ಷದ ವಿದ್ಯಾರ್ಥಿ. ಮುಂದೆ ಎಂಬಿಎ (ಎಂಟರ್‌ಪ್ರಿನರ್‌ಶಿಪ್) ಮಾಡುವ ಆಸೆ ಇದೆ. ಇದರ ಬಗ್ಗೆ ಹೆಚ್ಚಿನ ಮಾಹಿತಿ, ಉದ್ಯೋಗಾವಕಾಶಗಳು ಹಾಗೂ ಕಾಲೇಜಿನ ವಿವರ ತಿಳಿಸಿ.

ಊರು, ಹೆಸರು ತಿಳಿಸಿಲ್ಲ.

ಎಂಬಿಎ-ಉದ್ಯಮಶೀಲತೆ (ಎಂಟರ್‌ಪ್ರಿನರ್‌ಶಿಪ್) ಬೇಡಿಕೆಯಲ್ಲಿರುವ ಕ್ಷೇತ್ರ. ಈ ಕೋರ್ಸ್ ಮಾಡುವುದರಿಂದ ಉದ್ಯಮ ಸ್ಥಾಪಿಸಲು ಬೇಕಾಗುವ ಜ್ಞಾನ, ಕೌಶಲಗಳ ಅಭಿವೃದ್ಧಿ ಮತ್ತು ಪ್ರಕ್ರಿಯೆಯ ಅರಿವಾಗುತ್ತದೆ. ಈ ಕೋರ್ಸ್‌ನಲ್ಲಿ ಸಣ್ಣ ವ್ಯಾಪಾರ ನಿರ್ವಹಣೆ, ಉದಯೋನ್ಮುಖ ಮಾರುಕಟ್ಟೆಗಳ ನಿರ್ವಹಣೆ, ರೀಟೇಲ್ ಮತ್ತು ಫ್ರಾಂಚೈಸಿಂಗ್ ಅವಕಾಶಗಳು, ಸಾಮಾಜಿಕ ಉದ್ಯಮಶೀಲತೆ, ಉದ್ಯಮದಲ್ಲಿ ನಾವೀನ್ಯ ಮತ್ತು ಸೃಜನಶೀಲತೆ, ಹಣಕಾಸು, ಬಂಡವಾಳ ಹೂಡಿಕೆ, ಮಾನವ ಸಂಪನ್ಮೂಲದ ನಿರ್ವಹಣೆ ಮುಂತಾದ ವಿಷಯಗಳನ್ನು ನಿಮ್ಮ ಆಸಕ್ತಿಯಂತೆ ಆರಿಸಿಕೊಳ್ಳಬಹುದು. ಈ ಕೋರ್ಸ್ ನಂತರ ನವೋದ್ಯಮ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳಲ್ಲಿ ಸೇವೆ ಸಲ್ಲಿಸಿ, ಅನುಭವದ ನಂತರ ಸ್ವಂತ ಉದ್ಯಮವನ್ನು ಸ್ಥಾಪಿಸಬಹುದು. ಎಂಟರ್‌ಪ್ರಿನರ್‌ಶಿಪ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಮುಂತಾದ ಸಂಸ್ಥೆಗಳಲ್ಲಿ ಈ ಕೋರ್ಸ್ ಮಾಡಬಹುದು. ಎಂಬಿಎ ಕೋರ್ಸ್‌ನಲ್ಲಿ ಕಲಿಸುವ ತತ್ವಗಳು, ಸೂತ್ರಗಳು ವೃತ್ತಿ ಮತ್ತು ವೈಯಕ್ತಿಕ ಜೀವನವನ್ನು ಯಶಸ್ವಿಯಾಗಿ ರೂಪಿಸಲು ಉಪಯುಕ್ತ. ಹೆಚ್ಚಿನ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/c/EducationalExpertManagementCareerConsultant

3. ನಾನು ಪ್ಯಾರಾ ಮೆಡಿಕಲ್ (ಡಿಎಮ್‌ಎಲ್‌ಟಿ) ಮಾಡುತ್ತಿದ್ದೀನಿ ಮತ್ತು ಫೊರೆನ್ಸಿಕ್ ಮಾಡುವ ಆಸೆ ಇದೆ. ನಾನು ಈ ಕೋರ್ಸ್ ಹೇಗೆ ಮಾಡಬಹುದು? ಫೊರೆನ್ಸಿಕ್ ಕೋರ್ಸ್ ಬಗ್ಗೆ ಮಾಹಿತಿ ನೀಡಿ. ಆದರೆ, ನಮ್ಮ ಮನೆಯಲ್ಲಿ ತುಂಬಾ ತೊಂದರೆಗಳಿವೆ; ನಮಗೆ ಖಾಸಗಿ ಕಾಲೇಜು ಫೀಸ್ ಕಟ್ಟಲು ಆಗುವುದಿಲ್ಲ; ಸರ್ಕಾರಿ ಕಾಲೇಜಿಗೆ ಸೇರಬಹುದಾ?

ಊರು, ಹೆಸರು ತಿಳಿಸಿಲ್ಲ.

ನೀವು ಡಿಎಂಎಲ್‌ಟಿ ಕೋರ್ಸ್ ನಂತರ ನೇರವಾಗಿ ಕೆಲಸಕ್ಕೆ ಸೇರಬಹುದು ಅಥವಾ ನಿಮ್ಮ ಇಚ್ಛೆಯಂತೆ ಬಿ.ಎಸ್ಸಿ ವಿಧಿ ವಿಜ್ಞಾನ (ಫೊರೆನ್ಸಿಕ್ ಸೈನ್ಸ್) ಕೋರ್ಸ್ ಮಾಡಬಹುದು.

ವಿಧಿ ವಿಜ್ಞಾನ ಬೇಡಿಕೆಯಲ್ಲಿರುವ ಕ್ಷೇತ್ರ. ಈ ಕ್ಷೇತ್ರದಲ್ಲಿ ವೃತ್ತಿಯ ಯಶಸ್ಸಿಗೆ ಬೇಕಾಗುವ ಕೌಶಲಗಳೆಂದರೆ ತಾರ್ಕಿಕ ಯೋಚನಾ ಶಕ್ತಿ, ವಿಶ್ಲೇಷಣಾ ಮತ್ತು ಸಂಶೋಧನಾ ಕೌಶಲ, ವಿವರಗಳ ಕಡೆ ಗಮನ, ಒತ್ತಡದಲ್ಲಿ ಕೆಲಸ ಮಾಡುವ ಸಾಮರ್ಥ್ಯ, ಸಮಯದ ನಿರ್ವಹಣೆ ಇತ್ಯಾದಿ. ವಿದ್ಯಾಭ್ಯಾಸದ ನಂತರ ಸಂಶೋಧನಾ ಸಂಸ್ಥೆಗಳು, ಖಾಸಗಿ ಮತ್ತು ಸರ್ಕಾರಿ ಪತ್ತೇದಾರಿ ಸಂಸ್ಥೆಗಳು, ಪೊಲೀಸ್ ಇಲಾಖೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಕಾಲೇಜುಗಳಲ್ಲಿ ವೃತ್ತಿಯನ್ನು ಅರಸಬಹುದು. ಬಿ.ಎಸ್ಸಿ (ವಿಧಿವಿಜ್ಞಾನ) ಕೋರ್ಸ್ ಮಾಡಬಹುದಾದ ಕಾಲೇಜುಗಳ ವಿವರಕ್ಕಾಗಿ ಗಮನಿಸಿ: https://collegedunia.com/bsc/forensic-science/karnataka-colleges

4. ನಾನು ಮೈಸೂರು ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಬಿಎ ಪ್ರವೇಶ ಪಡೆದಿರುತ್ತೇನೆ. ವಿವಿಗಳಲ್ಲಿ ಚಿನ್ನದ ಪದಕ ಮತ್ತು ನಗದು ಬಹುಮಾನ ಪಡೆಯುವುದು ಹೇಗೆ?

ರಾಜ್, ಮೈಸೂರು.

ಅತ್ಯುತ್ತಮ ಸಾಧನೆ ಮಾಡುವ ಮೈಸೂರು ವಿಶ್ವವಿದ್ಯಾಲಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಿಯಮಾವಳಿಗಳ ಅನುಸಾರ ಚಿನ್ನದ ಪದಕವನ್ನು ನೀಡಿ ಪ್ರೋತ್ಸಾಹಿಸುವ ಮತ್ತು ಗೌರವಿಸುವ ಸಂಪ್ರದಾಯವಿದೆ. ಹೆಚ್ಚಿನ ವಿವರಗಳಿಗೆ ಗಮನಿಸಿ: https://uni-mysore.ac.in/sites/default/files/content/provisional_list_of_102nd_ug_gold_medal.pdf

ಹೆಚ್ಚಿನ ಪ್ರಶೋತ್ತರಗಳಿಗೆ ಸಂಪರ್ಕಿಸಿ:https://www.prajavani.net/education-career

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಕೋಟಕ್ ಕನ್ಯಾ ಸ್ಕಾಲರ್‌ಶಿಪ್ 2022

ವಿವರ: ಕೋಟಕ್ ಮಹೀಂದ್ರಾ ಗ್ರೂಪ್ ಕಂಪನಿಗಳ ಶಿಕ್ಷಣ ಮತ್ತು ಜೀವನೋಪಾಯದ ಕುರಿತು ಸಿಎಸ್‌ಆರ್ ಯೋಜನೆಯಡಿಯಲ್ಲಿ, ಕೋಟಕ್ ಎಜುಕೇಶನ್ ಫೌಂಡೇಶನ್ 12 ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿನಿಯರಿಂದ ಕೋಟಕ್ ಕನ್ಯಾ ಸ್ಕಾಲರ್‌ಶಿಪ್ 2022ಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಪಿಯುಸಿಯಲ್ಲಿ ಶೇ 75ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು ಮತ್ತು ವಾರ್ಷಿಕ ಕುಟುಂಬದ ಆದಾಯವು ₹ 3,20,000 ಕ್ಕಿಂತ ಕಡಿಮೆ ಅಥವಾ ಸಮಾನವಾಗಿರಬೇಕು.

ಹಿಂದುಳಿದ ವರ್ಗಗಳ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ಪ್ರಸಿದ್ಧ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಿಂದ ವೃತ್ತಿಪರ ಪದವಿ ಕೋರ್ಸ್‌ಗಳನ್ನು ಮುಂದುವರಿಸಲು ಸಹಾಯ ಮಾಡುವ ಗುರಿಯನ್ನು ಈ ವಿದ್ಯಾರ್ಥಿವೇತನವು ಹೊಂದಿದೆ.

ಅರ್ಹತೆ: ಪ್ರತಿಷ್ಠಿತ ಸಂಸ್ಥೆಗಳಿಂದ (ಎನ್‌ಎಎಸಿ/ ಎನ್‌ಐಆರ್‌ಎಫ್ ಮಾನ್ಯತೆ ಪಡೆದ) ವೃತ್ತಿಪರ ಕೋರ್ಸ್‌ಗಳಲ್ಲಿ 1 ನೇ ವರ್ಷದ ಪದವಿ ಕಾರ್ಯಕ್ರಮಗಳಿಗೆ ಪ್ರವೇಶ ಪಡೆದ ಪ್ರತಿಭಾವಂತ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು.

ವೃತ್ತಿಪರ ಕೋರ್ಸ್‌ಗಳಲ್ಲಿ ಎಂಜಿನಿಯರಿಂಗ್, ಎಂಬಿಬಿಎಸ್, ಆರ್ಕಿಟೆಕ್ಚರ್, ಡಿಸೈನ್, ಇಂಟಿಗ್ರೇಟೆಡ್ ಎಲ್‌ಎಲ್‌ಬಿ ಇತ್ಯಾದಿ ವೃತ್ತಿಪರ ಪದವಿ ಕೋರ್ಸ್‌ಗಳು ಸೇರಿವೆ. ಅರ್ಜಿದಾರರು ತಮ್ಮ 12ನೇ ತರಗತಿಯ ಬೋರ್ಡ್ ಪರೀಕ್ಷೆಗಳಲ್ಲಿ ಶೇ 75 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು.

ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 3,20,000 ಅಥವಾ ಅದಕ್ಕಿಂತ ಕಡಿಮೆ ಇರಬೇಕು

ಆರ್ಥಿಕ ನೆರವು: ವಾರ್ಷಿಕ₹ 1.5 ಲಕ್ಷ ದ ವರೆಗೆ

ಅರ್ಜಿ ಸಲ್ಲಿಸಲು ಕೊನೆಯ ದಿನ: 30-09-2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು

ಮಾಹಿತಿಗೆ : www.b4s.in/praja/KKGS12

ಮಕ್ಕಳಿಗೂ ಬೇಕು 'ಆರ್ಥಿಕ ಸಾಕ್ಷರತೆ'

ಆರ್.ಬಿ. ಗುರುಬಸವರಾಜ

ಇಂದಿನ ಜಗತ್ತು ವ್ಯವಹಾರಮಯವಾಗಿದೆ. ಪ್ರತಿಯೊಂದು ಸಂಗತಿ, ಘಟನೆಗಳಲ್ಲಿ ವ್ಯವಹಾರ ಚತುರತೆ ಅತ್ಯಗತ್ಯ. ವಯಸ್ಕರಿಗೆ ಹೋಲಿಸಿದರೆ ಮಕ್ಕಳು ನಿತ್ಯ ವ್ಯವಹಾರಗಳಲ್ಲಿ ಭಾಗಿಯಾಗುವುದು ಅತಿ ವಿರಳ. 2019ರಲ್ಲಿ 'ನ್ಯಾಷನಲ್ ಸೆಂಟರ್ ಫಾರ್ ಫೈನಾನ್ಶಿಯಲ್ ಎಜುಕೇಶನ್' ಸಂಸ್ಥೆಯು ನಡೆಸಿದ ಸಮೀಕ್ಷೆಯ ಪ್ರಕಾರ ಕೇವಲ ಶೇ 27ರಷ್ಟು ಭಾರತೀಯರು ಆರ್ಥಿಕ ಸಾಕ್ಷರರಾಗಿದ್ದಾರೆ. ಬ್ರಿಕ್ಸ್ ದೇಶಗಳ ಪೈಕಿ ಭಾರತದಲ್ಲಿ ಆರ್ಥಿಕ ಸಾಕ್ಷರತೆ ಅತ್ಯಂತ ಕಡಿಮೆ. ಮಕ್ಕಳಿಗೆ ಅಗತ್ಯ ವಯಸ್ಸಿನಿಂದಲೇ ಹಣಕಾಸಿನ ವ್ಯವಹಾರಗಳ ಬಗ್ಗೆ ತೊಡಗಿಸಿಕೊಳ್ಳದಿರುವುದು ಇದಕ್ಕೆಲ್ಲ ಕಾರಣ ಆಗಿದೆ.

ಮಕ್ಕಳು ಹಣ ಮತ್ತು ವ್ಯವಹಾರದ ಬಗ್ಗೆ ತಿಳಿದುಕೊಳ್ಳಲು ಶಾಲಾ ಶಿಕ್ಷಣದಲ್ಲಿ ನಿಗದಿತ ಪಠ್ಯಕ್ರಮ ಮೀಸಲಾಗಿದ್ದರೂ, ಅದು ಕೇವಲ ತರಗತಿ ಪ್ರಕ್ರಿಯೆಗಳಿಗೆ ಮಾತ್ರ ಸೀಮಿತವಾಗುತ್ತಿದೆ.

ಆರ್ಥಿಕ ಸಾಕ್ಷರತೆ ಎಂದರೆ

ಜ್ಞಾನ ಮತ್ತು ಕೌಶಲಗಳನ್ನು ಬಳಸಿಕೊಂಡು ಆರ್ಥಿಕ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ, ಜೀವಮಾನದ ಆರ್ಥಿಕ ಯೋಗಕ್ಷೇಮಕ್ಕಾಗಿ ನಿರ್ವಹಿಸುವ ಸಾಮರ್ಥ್ಯವೇ ಆರ್ಥಿಕ ಸಾಕ್ಷರತೆ. ಹಣಕಾಸಿನ ಅರಿವು, ಜ್ಞಾನ, ಕೌಶಲಗಳು, ವರ್ತನೆ ಮತ್ತು ನಡವಳಿಕೆಯ ಸಂಯೋಜನೆಯು ಆರ್ಥಿಕ ಸಾಕ್ಷರತೆಯನ್ನು ಸಮರ್ಥ ಹಣಕಾಸಿನ ನಿರ್ಧಾರಗಳನ್ನು ಮಾಡಲು ಮತ್ತು ಅಂತಿಮವಾಗಿ ವೈಯಕ್ತಿಕ ಆರ್ಥಿಕ ಯೋಗಕ್ಷೇಮವನ್ನು ಸಾಧಿಸಲು ಅವಶ್ಯಕ.

ಮಕ್ಕಳಿಗೇಕೆ ಆರ್ಥಿಕ ಸಾಕ್ಷರತೆ ?

ಹೆಚ್ಚಿನ ಪೋಷಕರು ತಮ್ಮ ಮಕ್ಕಳಿಗೆ 'ಪಾಕೆಟ್ ಮನಿ' ನೀಡುತ್ತಾರೆ. ಕೆಲ ಮಕ್ಕಳು ಆ ಹಣವನ್ನು ಪಿಗ್ಗಿ ಬ್ಯಾಂಕ್‌ನಲ್ಲಿ ಶೇಖರಿಸಿ ಇಡುತ್ತಾರೆ. ಅಗತ್ಯ ಇದ್ದಾಗ ಅದನ್ನು ಬಳಸುತ್ತಾರೆ. ಈ ಪರಿಕಲ್ಪನೆಯು ಅವರಿಗೆ ಉಳಿತಾಯದ ಶಿಸ್ತನ್ನು ಕಲಿಯಲು ಸಹಾಯ ಮಾಡುತ್ತದೆ. ಇದು ಕೇವಲ ಹಣ ಉಳಿತಾಯದ ಶಿಸ್ತನ್ನು ಮೂಡಿಸುತ್ತದೆಯೇ ವಿನಾ ಹಣದ ವಹಿವಾಟಿನ ಪ್ರಕ್ರಿಯೆಗಳನ್ನು ಕಲಿಸುವುದಿಲ್ಲ. ಮಕ್ಕಳು ತಮ್ಮ ವಯಸ್ಸಿಗೆ ಅನುಗುಣವಾಗಿ ಹಣಕಾಸು ಮತ್ತು ಮಾರುಕಟ್ಟೆಗಳ ಪರಿಕಲ್ಪನೆಯನ್ನು ಅರ್ಥಮಾಡಿಕೊಂಡರೆ, ಭವಿಷ್ಯದಲ್ಲಿ ಅವರು ತಪ್ಪು ಹಣಕಾಸು ಸಾಧನಗಳಲ್ಲಿ ಹೂಡಿಕೆ ಮಾಡುವುದನ್ನು ತಡೆಯಬಹುದು.

ಮಕ್ಕಳಿಗೆ ಹಣದ ವಹಿವಾಟಿನ ಪರಿಕಲ್ಪನೆಯ ಅರಿವು ಇದ್ದಾಗ, ಅವರು ಉಳಿತಾಯದ ಮಹತ್ವದ ಜ್ಞಾನವನ್ನು ಹಂಚಿಕೊಳ್ಳುವ ಮೂಲಕ ತಮ್ಮ ಕುಟುಂಬದ ಮೇಲೆ ಪ್ರಭಾವ ಬೀರಬಹುದು. ತಾವು ಸಂಗ್ರಹಿಸಿದ ಹಣವನ್ನು ಉತ್ತಮವಾಗಿ ನಿರ್ವಹಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ.

ಹೇಗೆ ಮಾಡಬಹುದು ?

ಶಾಲೆಗಳು/ಶಿಕ್ಷಣ ಸಂಸ್ಥೆಗಳಲ್ಲಿ ಮಾತ್ರ ಮಕ್ಕಳಿಗೆ ಉದ್ಯಮಶೀಲತೆ, ಖರ್ಚು, ಉಳಿತಾಯ ಮತ್ತು ಹೂಡಿಕೆ, ಮುಕ್ತ ಮಾರುಕಟ್ಟೆಗಳ ಮೂಲಭೂತ ಅಂಶಗಳನ್ನು ಕಲಿಯಲು ಸಹಾಯ ಮಾಡಲಾಗುತ್ತದೆ ಎಂಬ ನಂಬಿಕೆ ಬಹಳ ಜನರಲ್ಲಿ ಇದೆ. ಮಕ್ಕಳಲ್ಲಿ ಆರ್ಥಿಕ ಸಾಕ್ಷರತೆ ಬೆಳೆಸುವುದು ಕೇವಲ ಶಾಲೆ/ಶಿಕ್ಷಣದ ಜವಾಬ್ದಾರಿ ಮಾತ್ರವಲ್ಲ. ಪಾಲಕರ ಜವಾಬ್ದಾರಿಯೂ ಇದೆ. ಮಕ್ಕಳು ತಮ್ಮ ಜೀವನದಲ್ಲಿ ಮೂಲಭೂತ ಆರ್ಥಿಕ ನಿರ್ಧಾರಗಳನ್ನು ತೆಗೆದುಕೊಳ್ಳಲು ಬೇಕಾದ ಆರ್ಥಿಕ ಸಾಕ್ಷರತೆಯನ್ನು ಕಲಿಸುವ ಈ ಅವಕಾಶವನ್ನು ನಾವು ಕಳೆದುಕೊಂಡರೆ, ಭವಿಷ್ಯದಲ್ಲಿ ಯಶಸ್ವಿಯಾಗುವ ಅವರ ಸಾಮರ್ಥ್ಯವನ್ನು ನಾವೇ ಹಾಳುಮಾಡಿದಂತಾಗುತ್ತದೆ. ಪೋಷಕರು ಮನೆಯಿಂದಲೇ ಆರ್ಥಿಕ ಸಾಕ್ಷರತೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳುವ ಕೆಲವು ವಿಧಾನಗಳು ಇಲ್ಲಿವೆ!

1. ಅಗತ್ಯ ಮತ್ತು ಅನಗತ್ಯ ವಸ್ತುಗಳ ವ್ಯತ್ಯಾಸ ತಿಳಿಸಿ : ಸಾಮಾನ್ಯವಾಗಿ ಮಕ್ಕಳು ನೋಡಿದ್ದೆಲ್ಲ ಬೇಕು ಎಂದು ಕೇಳುತ್ತಾರೆ. ಆ ವಸ್ತುವಿನ ತಕ್ಷಣದ ಅಗತ್ಯ ಮತ್ತು ಅನಿವಾರ್ಯತೆ ಬಗ್ಗೆ ತಿಳಿದು ಕೊಡಿಸಿ. ಅದನ್ನು ಮಕ್ಕಳಿಗೆ ತಿಳಿ ಹೇಳಿ. ಇದು ಭವಿಷ್ಯದಲ್ಲಿ ಅವರು ವೆಚ್ಚದ ಬಗ್ಗೆ ಮೌಲ್ಯ ನಿರ್ಣಯ ಮಾಡಲು ಸಹಾಯ ಮಾಡುತ್ತದೆ. ಹಣವನ್ನು ಯಾವಾಗ? ಯಾವುದಕ್ಕೆ? ಎಷ್ಟು ಖರ್ಚು ಮಾಡಬೇಕು ಎಂಬುದನ್ನು ತಿಳಿದುಕೊಳ್ಳುವರು. ಇದು ಹಣಕಾಸು ನಿರ್ವಹಣೆಯ ನಿರ್ಣಾಯಕ ಅಂಶವಾಗಿದೆ.

2. ಖರ್ಚು ವೆಚ್ಚಗಳ ಮಾಹಿತಿ ತಿಳಿಸಿ: ಮಕ್ಕಳಿಗೆ ನಿಯಮಿತವಾಗಿ ಮನೆಯ ಖರ್ಚುವೆಚ್ಚಗಳ ಬಗ್ಗೆ ಮಾಹಿತಿ ತಿಳಿಸಿ. ದುಡಿಯುವ ಹಣ ಮತ್ತು ಖರ್ಚಾಗುವ ಹಣ, ಉಳಿತಾಯದ ಬಗ್ಗೆ ತಿಳಿಸುವುದರಿಂದ ಮಕ್ಕಳು ಖರ್ಚುವೆಚ್ಚಗಳ ಬಗ್ಗೆ ತಿಳಿಯುವಂತಾಗುತ್ತದೆ. ಪ್ರತಿ ತಿಂಗಳು ಮಕ್ಕಳನ್ನು ಕೂರಿಸಿಕೊಂಡು ಕುಟುಂಬದ ಖರ್ಚು ವೆಚ್ಚಗಳ ಮಾಹಿತಿಯನ್ನು ಮಂಡಿಸಬೇಕು. ಇದರಿಂದ ಅವರಿಗೆ ಕುಟುಂಬದ ಖರ್ಚುವೆಚ್ಚಗಳ ಮಾಹಿತಿ ತಿಳಿಯುತ್ತದೆ.

3. ದೈನಂದಿನ ವ್ಯವಹಾರಗಳನ್ನು ಪರಿಚಯಿಸಿ: ಮಕ್ಕಳಿಗೆ ದೈನಂದಿನ ಹಣಕಾಸಿನ ವಹಿವಾಟಿನ ಪರಿಚಯ ಮಾಡಿಸುವುದು ಇಂದಿನ ಅಗತ್ಯಗಳಲ್ಲಿ ಒಂದು. ಹೀಗೆ ಮಾಡುವುದರಿಂದ ಮಕ್ಕಳಲ್ಲಿ ಕುಟುಂಬದ ಖರ್ಚು ಮತ್ತು ವೆಚ್ಚಗಳ ಮಾಹಿತಿ ತಿಳಿಯುತ್ತದೆ. ಜೊತೆಗೆ ವಹಿವಾಟಿನಲ್ಲಿ ಕೌಶಲ ಬೆಳೆಯುತ್ತದೆ. ಭವಿಷ್ಯದಲ್ಲಿ ಧೈರ್ಯದಿಂದ ಸ್ವಾವಲಂಬಿಗಳಾಗಿ ಆರ್ಥಿಕ ವಹಿವಾಟಿನಲ್ಲಿ ತೊಡಗಿಕೊಳ್ಳುತ್ತಾರೆ.

4. ಕುಟುಂಬದ ಬಜೆಟ್ ತಯಾರಿಸಿ : ಮಕ್ಕಳಿಂದಲೇ ಕುಟುಂಬದ ಬಜೆಟ್(ಮಾಸಿಕ/ವಾರ್ಷಿಕ) ತಯಾರಿಸಿ ಮಂಡಿಸುವ ಕಾರ್ಯಯೋಜನೆಯು ಅವರಲ್ಲಿ ಆರ್ಥಿಕ ಮೌಲ್ಯವನ್ನು ಬೆಳೆಸುತ್ತದೆ. ಪ್ರತಿ ತಿಂಗಳ ಖರ್ಚು-ವೆಚ್ಚವನ್ನು ಅವರಿಂದಲೇ ಸಿದ್ಧಪಡಿಸುವುದರಿಂದ ಹೊಸ ಹೊಸ ಆರ್ಥಿಕ ಯೋಜನೆಗಳನ್ನು ಕೈಗೊಳ್ಳಲು ಪ್ರೇರಣೆ ದೊರೆಯುತ್ತದೆ.

5. ಉಳಿತಾಯದ ಪ್ರಾಮುಖ್ಯವನ್ನು ತಿಳಿಸಿ: ಮಕ್ಕಳು ವಸ್ತುಗಳ ಬಳಕೆಯ ಬಗ್ಗೆ ಜಾಗೃತಿ ಮೂಡಿಸಬೇಕು. ಮರುಬಳಕೆ ಮಾಡುವಂತಹ ಶೈಕ್ಷಣಿಕ ಪರಿಕರ (ನೋಟ್ ಪುಸ್ತಕ, ಪೆನ್ನು, ಪೆನ್ಸಿಲ್.. ಇತ್ಯಾದಿ) ಬಳಸುವ ಹವ್ಯಾಸ ಬೆಳೆಸಿದರೆ, ಉಳಿತಾಯ ಎನ್ನುವುದು ಅಲ್ಲಿಂದಲೇ ಆರಂಭವಾಗುತ್ತದೆ. ಮಿತವ್ಯಯ ಮತ್ತು ದಿಢೀರ್ ಖರ್ಚುಗಳ ಬಗ್ಗೆ ಮಕ್ಕಳಿಗೆ ಸ್ಪಷ್ಟ ಜ್ಞಾನ ಮೂಡುತ್ತದೆ. ಉದಾಹರಣೆಗೆ ಹಾಸ್ಟೆಲ್‌ನಲ್ಲಿರುವ ಮಗು ಪಾಲಕರಿಂದ ಪಡೆದ ಹಣವನ್ನು ಅನಗತ್ಯವಾಗಿ ಖರ್ಚು ಮಾಡದೇ ಉಳಿತಾಯ ಮಾಡಿಟ್ಟರೆ, ಅಗತ್ಯ ಇದ್ದಾಗ ಬಳಸಿಕೊಳ್ಳಬಹುದು. ಮಗುವಿನ ಹೆಸರಿನಲ್ಲೇ ಬ್ಯಾಂಕ್ ಖಾತೆ ತೆರೆದು, ಹೆಚ್ಚುವರಿ ಹಣವನ್ನು ಉಳಿತಾಯ ಖಾತೆಗೆ ಸೇರಿಸುವ ಮತ್ತು ಅಗತ್ಯವಿದ್ದಾಗ ಅದನ್ನು ಪಡೆಯುವ ಬ್ಯಾಂಕಿಂಗ್ ವ್ಯವಹಾರಗಳನ್ನು ಅಭ್ಯಾಸ ಮಾಡಿಸಿ. ಇಲ್ಲಿ ಮಗುವೇ ಬ್ಯಾಂಕಿಗೆ ಹೋಗಿ ವ್ಯವಹಾರಗಳನ್ನು ಮಾಡಬೇಕು. ಇದರಿಂದ ಉಳಿತಾಯ ಮನೋಭಾವನೆ ಜೊತೆಗೆ ಬ್ಯಾಂಕಿಂಗ್ ವ್ಯವಹಾರಗಳನ್ನೂ ಕಲಿಯುತ್ತಾರೆ.

6. ಹಣಕಾಸಿನ ಮುಕ್ತ ಮಾತುಕತೆ ಇರಲಿ: ಪೋಷಕರು ತಮ್ಮ ಹಣಕಾಸಿನ ನಿರ್ಧಾರಗಳ ಬಗ್ಗೆ ಮಕ್ಕಳೊಂದಿಗೆ ಮುಕ್ತವಾಗಿ ಮಾತನಾಡಬೇಕು. ತಮ್ಮ ಮಕ್ಕಳೊಂದಿಗೆ ಸಾಮಾನ್ಯ ವಿಷಯಗಳ ಚರ್ಚೆಯವೇಳೆಯೂ ಹಣಕಾಸಿನ ವಿಷಯವನ್ನು ಪ್ರಸ್ತಪಿಸಬಹುದು. ಹಣಕಾಸಿನ ಸಾಕ್ಷರತೆಯ ನಿರೀಕ್ಷೆಯಿಂದ ಮಕ್ಕಳಿಗೆ ಎಂದಿಗೂ ಬೇಸರವಾಗುವುದಿಲ್ಲ ಎಂದು ಖಚಿತಪಡಿಸಿ ಕೊಳ್ಳಲು ಆಗಾಗ್ಗೆ ಮಕ್ಕಳಿಗೆ ಕಿರು ಸವಾಲುಗಳನ್ನು ನೀಡಿ. ಉದಾಹರಣೆಗೆ ಗೃಹ ನಿರ್ಮಾಣ, ಮದುವೆ ಖರ್ಚುವೆಚ್ಚಗಳ ಬಗ್ಗೆ ನಿರ್ಧಾರ ಮಾಡುವಾಗ ಮಕ್ಕಳೊಂದಿಗೆ ಮುಕ್ತವಾಗಿ ಮಾತನಾಡಿ.

ಶಿಕ್ಷಣ ಕಲಿಕೆಗೆ ಮನೆಯ ಮೊದಲ ಪಾಠ ಶಾಲೆಯೋ ಹಾಗೆಯೇ, 'ಆರ್ಥಿಕ ಸಾಕ್ಷರತೆ' ಕಲಿಸುವುದಕ್ಕೂ ಮನೆಯೇ ಮೊದಲ ಪಾಠ ಶಾಲೆಯಾಗಬೇಕು.

> **ಮಕ್ಕಳಿಗೆ ಹಣಕಾಸಿನ ಅರಿವು ಮೂಡಿಸುವುದರಿಂದ ಭವಿಷ್ಯದಲ್ಲಿ ಹಣಕಾಸಿನ ಉತ್ತಮ ನಿರ್ವಹಣೆಯ ಬಗ್ಗೆ ತಿಳಿಯುತ್ತಾರೆ. ಆದ್ಯತೆಗೆ ಅನುಗುಣವಾಗಿ ಹಣ ಬಳಕೆ ಮತ್ತು ಉಳಿತಾಯ ಮನೋಭಾವನೆ ಬೆಳೆಸಲು ಈ ಅರಿವು ಅಗತ್ಯ.**
>
> **- ಪ್ರೊ. ಎಸ್.ಎಸ್.ಪಾಟೀಲ್,** ಅರ್ಥಶಾಸ್ತ್ರ ಪ್ರಾಧ್ಯಾಪಕರು,

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಮಾತು ಮನಸ್ಸುಗಳನ್ನು ಒಂದುಗೂಡಿಸಬೇಕೆ ಹೊರತು ಒಡೆಯಬಾರದು.

-ಮಾಸ್ತಿ ವೆಂಕಟೇಶ ಅಯ್ಯಂಗಾರ್

'ರಾಜಪಥ'ದ ಮರುನಾಮಕರಣ ಟೊಳ್ಳು ಸಾಂಕೇತಿಕತೆಯ ಕ್ರಮ

ಹೆಸರೊಂದು ಗುರುತು ಇದ್ದಂತೆ. ಅದು ಏನನ್ನೋ ಸೂಚಿಸುತ್ತಿರುತ್ತದೆ; ಪರಿಕಲ್ಪನೆಗಳನ್ನು, ಚಿಂತನೆಗಳನ್ನು ನೆನಪಿಸಿಕೊಡುತ್ತದೆ. ಕೆಲವು ಸಂದರ್ಭಗಳಲ್ಲಿ ಅದು ಇತಿಹಾಸವನ್ನು ತನ್ನೊಳಗೆ ಇರಿಸಿಕೊಂಡಿರುತ್ತದೆ. ವ್ಯಕ್ತಿಗಳನ್ನು ಮತ್ತು ಸ್ಥಳಗಳನ್ನು ಗುರುತಿಸುವುದಕ್ಕೆ ಮಾತ್ರ ಹೆಸರಿನ ಬಳಕೆ ಆಗುವುದಿಲ್ಲ. ಬದಲಿಗೆ, ಒಂದು ಅರ್ಥವನ್ನು ಧ್ವನಿಸಲು, ಏನನ್ನೋ ಹೇಳಲು ಹೆಸರನ್ನು ಬಳಸಲಾಗುತ್ತದೆ. ರಾಜಕೀಯ ಸಂಕಥನಗಳನ್ನು ಕಟ್ಟಲಿಕ್ಕೆ ಕೂಡ ಹೆಸರಿನ ಬಳಕೆ ಆಗುವುದಿದೆ. ಒಂದು ಹೆಸರನ್ನು ಕೈಬಿಡುವುದು ಹೊಸ ಹೆಸರು ನೀಡುವುದು ಮಹತ್ವವನ್ನು ಹೊಂದಿರುತ್ತದೆ. ಈಚಿನ ವರ್ಷಗಳಲ್ಲಿ ದೇಶದಲ್ಲಿ ಕಾಣುತ್ತಿರುವ ಹೆಸರು ಬದಲಾವಣೆಯ ಅಲೆಯ ಜೊತೆ ಕೆಳಮಟ್ಟದ ರಾಜಕೀಯ ಬೆಸೆದುಕೊಂಡಿದೆ. ಇಲ್ಲಿ ಉನ್ನತ ಭಾವನೆಗಳು ಅಥವಾ ಇತಿಹಾಸವನ್ನು ಋಜು ಕ್ರಮದಲ್ಲಿ ಅರಿಯುವ ಧೋರಣೆ ಕಾಣುತ್ತಿಲ್ಲ. ನವದೆಹಲಿಯ ಐತಿಹಾಸಿಕ ರಾಜಪಥವನ್ನು ಕರ್ತವ್ಯಪಥ ಎಂದು ಮರುನಾಮಕರಣ ಮಾಡಿದ ಕ್ರಮವು ರಾಜಕೀಯವನ್ನು ಅಸಂಗತ ಮಟ್ಟಕ್ಕೆ ಒಯ್ದ ನಡೆ. ಮರುನಾಮಕರಣಕ್ಕೆ ನೀಡಿರುವ ಸಮರ್ಥನೆಯಲ್ಲಿ ಸಾಮಾನ್ಯ ಜ್ಞಾನ ಕಾಣುತ್ತಿಲ್ಲ. ರಾಜಪಥ ಎಂಬ ಹೆಸರು ಬ್ರಿಟಿಷ್ ಆಡಳಿತಕ್ಕೆ ಸೇರಿದ್ದ ಗುಲಾಮಿತನದ ದ್ಯೋತಕವಾಗಿತ್ತು, ಹೊಸ ಹೆಸರು ಆ ಗುಲಾಮಿತನದಿಂದ ವಿಮುಕ್ತಿ ಪಡೆದಿರುವುದನ್ನು ಸೂಚಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವಾರ ಹೇಳಿದ್ದಾರೆ. 2022ರಲ್ಲಿ ಒಂದು ರಸ್ತೆಗೆ ಹೊಸ ಹೆಸರು ಇರಿಸಿದ್ದರಿಂದಾಗಿ ವಸಾಹತುಶಾಹಿ ಆಡಳಿತ ಕೊನೆಗೊಂಡಿತು, ಸ್ವಾತಂತ್ರ್ಯ ಸಿಕ್ಕಿತು ಎನ್ನಲಾಗದು. ಗಾಂಧಿ, ನೆಹರೂ, ಪಟೇಲ್, ಬೋಸ್ ಅವರಂತಹ ನಾಯಕರ ಮುಂದಾಳತ್ವದಲ್ಲಿ ನಡೆದ ಹೋರಾಟದ ಫಲವಾಗಿ ವಸಾಹತು ಆಡಳಿತವು 1947ರಲ್ಲಿಯೇ ಕೊನೆಗೊಂಡಿದೆ. ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟವು ಬಹಳ ಕಠಿಣವಾದುದಾಗಿತ್ತು, ಅನುಭವಜನ್ಯವಾದುದಾಗಿತ್ತು, ಈಗಿನ ಮರುನಾಮಕರಣವು ಸಾಂಕೇತಿಕ ಮಾತ್ರ.

> ಈಚಿನ ವರ್ಷಗಳಲ್ಲಿ ದೇಶದಲ್ಲಿ ಕಾಣುತ್ತಿರುವ ಹೆಸರು ಬದಲಾವಣೆಯ ಅಲೆಯ ಜೊತೆ ಕೆಳಮಟ್ಟದ ರಾಜಕೀಯ ಬೆಸೆದುಕೊಂಡಿದೆ. ಇಲ್ಲಿ ಉನ್ನತ ಭಾವನೆಗಳು ಅಥವಾ ಇತಿಹಾಸವನ್ನು ಋಜು ಕ್ರಮದಲ್ಲಿ ಅರಿಯುವ ಧೋರಣೆ ಕಾಣುತ್ತಿಲ್ಲ

ಭಾರತವು ಬ್ರಿಟಿಷ್ ವಸಾಹತು ಆಗಿದ್ದ ಕಾಲದಲ್ಲಿ 'ಕಿಂಗ್ಸ್‌ವೇ', 'ಇಂಡಿಯಾ ಗೇಟ್'ನಿಂದ ರೈಸಿನಾ ಹಿಲ್‌ವರೆಗೆ ಸಾಗುತ್ತದೆ. ಈ ಮಾರ್ಗದ ಹೆಸರನ್ನು ಸ್ವಾತಂತ್ರ್ಯ ದೊರೆತ ತಕ್ಷಣ ರಾಜಪಥ ಎಂದು ಬದಲಾಯಿಸಲಾಯಿತು. 'ಕ್ವೀನ್ಸ್‌ವೇ' ಹೆಸರನ್ನು 'ಜನಪಥ' ಎಂದು ಬದಲಿಸಲಾಯಿತು. ರಾಜಪಥ ಎಂಬ ಹೆಸರು ಎಷ್ಟರಮಟ್ಟಿಗೆ ಭಾರತೀಯ ಆಗಿತ್ತು, ಕರ್ತವ್ಯಪಥ ಎಂಬ ಹೆಸರು ಅದಕ್ಕಿಂತ ಇನ್ನೆಷ್ಟು ಹೆಚ್ಚು ಭಾರತೀಯ ಆಗಬಹುದು? ಈಗ ರಾಜಭವನ ಎಂಬ ಹೆಸರನ್ನೂ ಬದಲಾಯಿಸಲಾಗುತ್ತದೆಯೇ? ಕರ್ತವ್ಯಪಥ ಎಂಬ ಹೆಸರಿನ ಮೂಲಕ ಸರ್ಕಾರವು ತನ್ನ ಕರ್ತವ್ಯಗಳು ಹಾಗೂ ಜವಾಬ್ದಾರಿಗಳು ಹೆಚ್ಚು ಮುಖ್ಯ ಎಂದು ಭಾವಿಸುತ್ತದೆ ಎಂಬ ಸಂದೇಶ ರವಾನಿಸುವ ಉದ್ದೇಶ ಹೊಂದಿದೆ ಎಂದಾದರೆ, ಅದನ್ನು ತನ್ನ ನೀತಿಗಳು ಹಾಗೂ ಕ್ರಿಯೆಗಳ ಮೂಲಕ ತೋರಿಸಬೇಕು. ಹೆಸರು ಬದಲಾವಣೆ ಹಾಗೂ ಮಾತುಗಳ ಮೂಲಕ ಮಾತ್ರವೇ ಅಲ್ಲ. ದೇಶವನ್ನು ಒಂದಾಗಿ ಇರಿಸುವುದು, ದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಇರುವಂತೆ ನೋಡಿಕೊಳ್ಳುವುದು, ಅರ್ಥ ವ್ಯವಸ್ಥೆಯನ್ನು ಸುಧಾರಿಸುವುದು, ಬಡವರಿಗೆ ನೆರವಾಗುವುದು, ದುರ್ಬಲ ವರ್ಗಗಳಿಗೆ ರಕ್ಷಣೆ ಒದಗಿಸುವುದು, ಪ್ರಜಾತಂತ್ರವನ್ನು ಬಲಿಷ್ಠಗೊಳಿಸುವುದು, ಸಂವಿಧಾನದ ಆಶಯಕ್ಕೆ ಅನುಗುಣವಾಗಿ ದೇಶ ಮುನ್ನಡೆಯುವಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯಗಳು. ಹೆಸರು ಬದಲಾಯಿಸುವುದರಿಂದ ಈ ಯಾವುವೂ ಈಡೇರುವುದಿಲ್ಲ. ಹೆಸರು ಬದಲಾವಣೆಯು ಭ್ರಮೆಯನ್ನು ಸೃಷ್ಟಿಸಬಲ್ಲದು, ಗಮನವನ್ನು ಬೇರೆಡೆ ಸೆಳೆಯಬಲ್ಲದು.

ನಾಗರಿಕರ ಪಾಲಿಗೆ ಹಕ್ಕುಗಳಿಗಿಂತಲೂ ಕರ್ತವ್ಯಗಳೇ ಹೆಚ್ಚು ಮುಖ್ಯ ಎಂಬ ಸಂದೇಶ ರವಾನಿಸುವ ಉದ್ದೇಶದಿಂದ ಹೆಸರು ಬದಲಾವಣೆ ಆಗಿದೆ ಎಂದಾದರೆ, ಅದು ತಪ್ಪು. ಪ್ರಜೆಗಳ ಮೂಲಭೂತ ಹಕ್ಕುಗಳು ದೇಶದ ಸಂವಿಧಾನದ ಆತ್ಮವಿದ್ದಂತೆ. ಮೂಲಭೂತ ಕರ್ತವ್ಯಗಳ ಕುರಿತ ವಿವರಣೆಯನ್ನು ಹಿಂದೊಮ್ಮೆ ಸರ್ವಾಧಿಕಾರಿ ಆಡಳಿತ ಇದ್ದಾಗ, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸಂವಿಧಾನಕ್ಕೆ ಸೇರ್ಪಡೆ ಮಾಡಲಾಯಿತು. ಸರ್ವಾಧಿಕಾರಿ ಮನಃಸ್ಥಿತಿಯು ಪ್ರಜೆಗಳ ಹಕ್ಕುಗಳ ಮಹತ್ವವನ್ನು ಕುಗ್ಗಿಸಿ, ಕರ್ತವ್ಯಕ್ಕೆ ಹೆಚ್ಚಿನ ಮಹತ್ವ ಕೊಡುವ ಕೆಲಸ ಮಾಡುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದ ಕುರಿತು ಇಂದಿನ ಆಡಳಿತವು ಸೃಷ್ಟಿಸಿರುವ ಹೊಸ ಹಾಗೂ ತಪ್ಪು ಸಂಕಥನದ ಭಾಗವಾಗಿ ಇಂಡಿಯಾ ಗೇಟ್‌ನಲ್ಲಿ ಸುಭಾಷ್‌ಚಂದ್ರ ಬೋಸ್ ಅವರ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಸ್ವಾತಂತ್ರ್ಯ ಬಂದ ನಂತರದಲ್ಲಿ ಬೋಸ್ ಅವರನ್ನು ಮರೆಯಲಾಯಿತು, ಅವರನ್ನು ನಿರ್ಲಕ್ಷಿಸಲಾಯಿತು ಎಂದು ಮೋದಿ ಅವರು ಹೇಳಿದ್ದಾರೆ. ಇದು ತಪ್ಪು ಹೇಳಿಕೆ. ಬಿಜೆಪಿ ಮತ್ತು ಅದರ ಸೈದ್ಧಾಂತಿಕ ಪರಿವಾರಕ್ಕೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ತಮ್ಮವರೆಂಬ ಹೀರೊಗಳು ಇಲ್ಲ. ಹಾಗಾಗಿ ಪಕ್ಷವು ಬೋಸ್ ಅವರನ್ನು ತನ್ನವರನ್ನಾಗಿಸಿಕೊಳ್ಳಲು ಯತ್ನಿಸುತ್ತಿದೆ. ಪಕ್ಷವು ಹಿಂದೆ ಸರ್ದಾರ್ ವಲ್ಲಭಭಾಯಿ ಪಟೇಲರ ವಿಚಾರದಲ್ಲಿಯೂ ಹೀಗೇ ಮಾಡಿತ್ತು. ಹುಸಿ ಇತಿಹಾಸವನ್ನು ಅರಸಲು ಹಾಗೂ ತನಗೆ ಬೇರೊಂದು ಹಿನ್ನೆಲೆ ಇದೆ ಎಂದು ತೋರಿಸಲು ನಡೆಸುತ್ತಿರುವ ಯತ್ನ ಇದು.

ದಿನದ ಟ್ವೀಟ್

ಎಂದಿಗೂ ಮರೆಯಬಾರದು

21 ವರ್ಷಗಳ ಹಿಂದೆ, ಈ ದಿನಾಂಕದಂದು ಸಾವಿರಾರು ಅಮೆರಿಕನ್ನರು ಜೀವ ಕಳೆದುಕೊಂಡಿದ್ದನ್ನು ನಾವಿಂದು ನೆನಪಿಸಿಕೊಳ್ಳುತ್ತೇವೆ. ಭಯೋತ್ಪಾದನೆಯು ಗೆಲುವು ಸಾಧಿಸಲು ಯತ್ನಿಸಿದ ದಿನ ಅದು ಎಂಬುದನ್ನು ನಾವು ಎಂದಿಗೂ ಮರೆಯಬಾರದು. ಇದನ್ನು ನಾವು ಸದಾ ನೆನಪಿನಲ್ಲಿ ಇರಿಸಿಕೊಳ್ಳುತ್ತೇವೆ.

(ಅಮೆರಿಕದ ಅವಳಿ ಗೋಪುರದ ಮೇಲೆ ನಡೆದ 9/11 ದಾಳಿಯ ಸ್ಮರಣಾರ್ಥ ಪ್ರತಿಕ್ರಿಯೆ)

ಜಾರ್ಜ್ ಸ್ಯಾಂಟೋಸ್, ಅಮೆರಿಕದ ಅರ್ಥಶಾಸ್ತ್ರಜ್ಞ

ಕಿಡಿನುಡಿ

ಕಸಾಪದಿಂದ ಪಂಪ ಅಲ್ಲ, ಪಂಪನಿಂದ ಕಸಾಪ. ಇದು ತಿಳಿದಿರಲಿ.

(ಪಂಪ ಮಹಾಕವಿ ರಸ್ತೆಯನ್ನು ಕನ್ನಡ ಸಾಹಿತ್ಯ ಪರಿಷತ್ ರಸ್ತೆ ಎಂದು ಮರುನಾಮಕರಣ ಮಾಡಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಕಸಾಪ ಮುಂದಾಗಿರುವುದಕ್ಕೆ ಪ್ರತಿಕ್ರಿಯೆ)

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

25 ವರ್ಷಗಳ ಹಿಂದೆ

ಶುಕ್ರವಾರ, 12-9-1997

• ಕೇಂದ್ರ ಸರ್ಕಾರಿ ನೌಕರರ ವೇತನ: ಒಪ್ಪಂದಕ್ಕೆ ಸಹಿ

ನವದೆಹಲಿ, ಸೆಪ್ಟೆಂಬರ್ 11– ಐದನೇ ವೇತನ ಆಯೋಗದ ಶಿಫಾರಸುಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಹಾಗೂ ನೌಕರರ ಸಂಘಗಳು ಒಪ್ಪಂದಕ್ಕೆ ಸಹಿ ಹಾಕಿವೆ. ಇದರಿಂದ ಸೆಪ್ಟೆಂಬರ್ 24ರಂದು ನಡೆಸಲು ಉದ್ದೇಶಿಸಿದ್ದ ಅನಿರ್ದಿಷ್ಟ ಅವಧಿಯ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಗಿದೆ.

15 ಅಂಶಗಳ ಒಪ್ಪಂದಕ್ಕೆ ಸಿಬ್ಬಂದಿ ಸಚಿವಾಲಯದ ಕಾರ್ಯದರ್ಶಿ ಅರವಿಂದ ವರ್ಮಾ ಹಾಗೂ ನೌಕರರ ಜಂಟಿ ಸಲಹಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಯು. ಪುರೋಹಿತ್ ಸಹಿ ಹಾಕಿದರು.

• ಜಗನ್ನಾಥ್ ಮಿಶ್ರಾ ಬಂಧನಕ್ಕೆ ವಾರಂಟ್

ಪಟ್ನಾ, ಸೆಪ್ಟೆಂಬರ್ 11 (ಯುಎನ್ಐ)– ಮೇವು ಹಗರಣದ ಒಳಸಂಚಿನ ಆರೋಪ ಎದುರಿಸುತ್ತಿರುವ ಬಿಹಾರದ ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ಮುಖಂಡ ಜಗನ್ನಾಥ್ ಮಿಶ್ರಾ ಅವರ ವಿರುದ್ಧ ಇಂದು ಸಿಬಿಐನ ನಿಯೋಜಿತ ನ್ಯಾಯಾಲಯ ಜಾಮೀನುರಹಿತ ವಾರಂಟ್ ಹೊರಡಿಸಿದೆ.

ಮೇವು ಹಗರಣದ ಆರೋಪ ಎದುರಿಸುತ್ತಿರುವ ರಾಜಕೀಯ ವ್ಯಕ್ತಿಗಳ ಪೈಕಿ ಮಿಶ್ರಾ ಅವರೊಬ್ಬರೇ ಇನ್ನೂ ಬಂಧನಕ್ಕೆ ಒಳಗಾಗಿಲ್ಲ.

ನಿನ್ನೆಗೆ ಸುಪ್ರೀಂ ಕೋರ್ಟ್ ಅವರಿಗೆ ನೀಡಿದ್ದ ನಿರೀಕ್ಷಣಾ ಜಾಮೀನಿನ ಅವಧಿ ಮುಗಿದಿತ್ತು. ನಿನ್ನೆಯೇ ಪಟ್ನಾ ಹೈಕೋರ್ಟ್ ಮಿಶ್ರಾ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿ ತಾತ್ಕಾಲಿಕ ಪರಿಹಾರ ನೀಡಲೂ ನಿರಾಕರಿಸಿತ್ತು.

• ಉ.ಪ್ರ: ಕಲ್ಯಾಣ್ ಸಿಂಗ್‌ಗೇ ಮುಖ್ಯಮಂತ್ರಿ ಪಟ್ಟ – ಬಿಜೆಪಿ

ನವದೆಹಲಿ, ಸೆಪ್ಟೆಂಬರ್ 11 (ಪಿಟಿಐ)– ಕಲ್ಯಾಣ್ ಸಿಂಗ್ ಅವರನ್ನು ಉತ್ತರ ಪ್ರದೇಶದ ಮುಖ್ಯಮಂತ್ರಿಯನ್ನಾಗಿ ಮಾಡುವ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಬಿಜೆಪಿ ಇಂದು ರಾತ್ರಿ ಸ್ಪಷ್ಟಪಡಿಸಿದೆ.

ರಾಜ್ಯ ವಿಧಾನಸಭೆಯ ಸ್ಪೀಕರ್ ಹುದ್ದೆ ಕುರಿತು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಜತೆಗೆ ತಲೆದೋರಿರುವ ವಿವಾದ ಪರಿಹಾರ ಕಾಣುವ ಮೊದಲೇ ಬಿಜೆಪಿಯ ಈ ನಿಲುವು ಬಹಿರಂಗಗೊಂಡಿದೆ.

ಮಾಜಿ ಪ್ರಧಾನಿ ಎ.ಬಿ. ವಾಜಪೇಯಿ ಅವರ ನಿವಾಸದಲ್ಲಿ ಸಭೆ ಸೇರಿದ್ದ ಬಿಜೆಪಿ ಹಿರಿಯ ನಾಯಕರ ಸಭೆ, ಮುಖ್ಯಮಂತ್ರಿ ಹುದ್ದೆಗೆ ಕಲ್ಯಾಣ್ ಸಿಂಗ್ ಅವರೇ ಪಕ್ಷದ ಅಭ್ಯರ್ಥಿ ಎಂಬ ನಿರ್ಧಾರಕ್ಕೆ ಅಂಟಿಕೊಂಡಿದೆ. ಬಿಜೆಪಿ ಅಧ್ಯಕ್ಷ ಎಲ್. ಕೆ. ಅಡ್ವಾಣಿ, ಮಾಜಿ ಅಧ್ಯಕ್ಷ ಮುರಳಿ ಮನೋಹರ ಜೋಷಿ, ಉತ್ತರಪ್ರದೇಶದ ಬಿಜೆಪಿ ಅಧ್ಯಕ್ಷ ರಾಜನಾಥ ಸಿಂಗ್, ಪಕ್ಷದ ಮುಖಂಡರಾದ ಕಲ್‌ರಾಜ್ ಮಿಶ್ರಾ, ಲಾಲ್‌ಜಿ ಟಂಡನ್ ಭಾಗವಹಿಸಿದ್ದರು.

ಆಘಾತಕ್ಕೆ ಒಳಗಾದ ಮಕ್ಕಳಿಗೆ ಆಪ್ತ ಸಮಾಲೋಚನೆ ಒದಗಿಸುವ ವ್ಯವಸ್ಥೆ ಬಲಗೊಳ್ಳಬೇಕು

ಪೋಕ್ಸೊ ಕಾಯ್ದೆಯ ಅರಿವಿನ ಮಹತ್ವ

ವಿಶ್ಲೇಷಣೆ

ಡಾ. ಗೀತಾ ಕೃಷ್ಣಮೂರ್ತಿ

ಪೋಕ್ಸೊ ಕಾಯ್ದೆ ಜಾರಿಗೆ ಬಂದು ಹತ್ತು ವರ್ಷಗಳು ಕಳೆದಿವೆ. ಪೋಕ್ಸೊ ಎಂದರೆ ಪ್ರೊಟೆಕ್ಷನ್ ಆಫ್ ಚಿಲ್ಡ್ರನ್ ಫ್ರಮ್ ಸೆಕ್ಷುಯಲ್ ಅಫೆನ್ಸಸ್. ಇದು ಜಾರಿಗೆ ಬಂದದ್ದು 2012ರಲ್ಲಿ. ಇದರ ಉದ್ದೇಶ, ಮಕ್ಕಳ ಮೇಲೆ ನಡೆಯುವ ಲೈಂಗಿಕ ಅಪರಾಧಗಳನ್ನು, ಶೋಷಣೆಗಳನ್ನು ಮತ್ತು ಅತ್ಯಾಚಾರಗಳನ್ನು ಪರಿಣಾಮಕಾರಿಯಾಗಿ ತಡೆಯುವುದು ಮತ್ತು ಮಕ್ಕಳನ್ನು ಅಂಥ ಶೋಷಣೆಗೆ ಗುರಿಪಡಿಸಿದವರನ್ನು ಅತ್ಯಂತ ಕಠಿಣ ಶಿಕ್ಷೆಗೆ ಗುರಿಪಡಿಸುವುದು. ಆ ಮೂಲಕ ಮಕ್ಕಳಿಗೆ ಅಂಥ ಅಪರಾಧಗಳಿಂದ ರಕ್ಷಣೆ ಕೊಡುವುದು. ಈ ಕಾನೂನಿನ ಪ್ರಕಾರ, 18 ವರ್ಷದೊಳಗಿನ ವಯಸ್ಸಿನವರೆಲ್ಲರೂ 'ಮಕ್ಕಳು'.

ಭಾರತದಲ್ಲಿ 18 ವರ್ಷ ವಯಸ್ಸಿನೊಳಗಿರುವವರ ಸಂಖ್ಯೆ 47.2 ಕೋಟಿ! ವಿಶ್ವಸಂಸ್ಥೆಯು 1989ರಲ್ಲೇ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಅಂಗೀಕರಿಸಿದ್ದರೂ 2012ರವರೆಗೂ ಭಾರತದಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ಅಪರಾಧವನ್ನಾಗಿಸುವ ಮತ್ತು ಮಕ್ಕಳಿಗೆ ಲೈಂಗಿಕ ಶೋಷಣೆಯಿಂದ ರಕ್ಷಣೆ ನೀಡುವ ಸಮಗ್ರ ಕಾನೂನು ಜಾರಿಯಾಗಿರಲಿಲ್ಲ. ಈ ಕಾಯ್ದೆಯ ಕೇಂದ್ರ ಗಮನವು ಮಕ್ಕಳ ಸುರಕ್ಷೆ ಮತ್ತು ಅವರ ಹಕ್ಕುಗಳ ರಕ್ಷಣೆ. ಶಾಲೆಗಳಲ್ಲಿ, ಉದ್ಯಾನಗಳಲ್ಲಿ, ವಸತಿ ನಿಲಯಗಳಲ್ಲಿ, ಧಾರ್ಮಿಕ ಸ್ಥಳಗಳಲ್ಲಿ ಮಕ್ಕಳ ಮೇಲೆ ಲೈಂಗಿಕ ಕಿರುಕುಳ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಗಂಡು ಮಕ್ಕಳೂ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಆದರೆ, ಗಂಡು ಮಕ್ಕಳಿಗೆ ಯಾವ ಕಾನೂನಿನ ಅಡಿಯಲ್ಲಿಯೂ ರಕ್ಷಣೆ ಇರಲಿಲ್ಲ. ಆದರೆ ಪೋಕ್ಸೊ, ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಸಮಾನ ರೀತಿಯಲ್ಲಿ ರಕ್ಷಣೆ ನೀಡುವ ಮೂಲಕ ಆ ಕೊರತೆಯನ್ನು ನೀಗಿಸಿದೆ.

ವಿಚಾರಣೆಯ ಕಾಲದಲ್ಲಿ, ಸಂತ್ರಸ್ತೆಯ ಮನಃಸ್ಥಿತಿ ಅತ್ಯಂತ ಸೂಕ್ಷ್ಮವಾಗಿರುತ್ತದೆ. ಆದ್ದರಿಂದ ಈ ಅಪರಾಧದ ಸಂಬಂಧವಾಗಿ ನಡೆಯುವ ವಿಚಾರಣೆಯ ಸಮಯದಲ್ಲಿ ಸಂತ್ರಸ್ತೆಯನ್ನು ಅತ್ಯಂತ ಕಾಳಜಿಯಿಂದ ನಡೆಸಿಕೊಳ್ಳಬೇಕು. ಶೋಷಣೆಗೆ ಒಳಗಾದ ಮಕ್ಕಳು ಮತ್ತೆ ಮತ್ತೆ ಶೋಷಣೆಗೆ ಒಳಗಾಗುವ ಸಾಧ್ಯತೆ ಇರುವುದರಿಂದ ಅವರಿಗೆ ರಕ್ಷಣೆ ನೀಡಬೇಕು. ಸಂತ್ರಸ್ತ ಮಗುವಿಗೆ ಆಗಿರುವ ಆಘಾತದಿಂದ ಚೇತರಿಸಿಕೊಳ್ಳಲು ಅಗತ್ಯವಿರುವ ಹಣಕಾಸು, ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸಬೇಕು. ವಿಚಾರಣೆಗೆ ಮುನ್ನ ಮತ್ತು ವಿಚಾರಣೆ ನಡೆಯುವಾಗ, ಸಂತ್ರಸ್ತೆಯ ಭದ್ರತೆಯ ದೃಷ್ಟಿಯಿಂದ ಆಕೆಯ ಗುರುತನ್ನು ಯಾವುದೇ ಕಾರಣಕ್ಕೂ ಬಹಿರಂಗಗೊಳಿಸಬಾರದು ಮತ್ತು ರಕ್ಷಣೆ ನೀಡಬೇಕು. ಅವಳ ಭವಿಷ್ಯಕ್ಕಾಗಿ ಪರಿಹಾರಧನವನ್ನು ಕೊಡುವ ವ್ಯವಸ್ಥೆ ಮಾಡಬೇಕು.

'ಎಕಾನಮಿಸ್ಟ್ ಇಂಟೆಲಿಜೆನ್ಸ್ ಯುನಿಟ್' ಸಂಸ್ಥೆಯು ಮಕ್ಕಳನ್ನು ಲೈಂಗಿಕ ಶೋಷಣೆಯಿಂದ ರಕ್ಷಿಸಲು 60 ದೇಶಗಳಲ್ಲಿ ಜಾರಿಯಲ್ಲಿರುವ ಕಾನೂನುಗಳ ಬಗ್ಗೆ 2019ರಲ್ಲಿ ನಡೆಸಿದ ಸಮೀಕ್ಷೆಯಲ್ಲಿ, ಭಾರತದಲ್ಲಿ ಜಾರಿಯಲ್ಲಿರುವ ಪೋಕ್ಸೊ ಕಾಯ್ದೆಯು ಅತ್ಯುತ್ತಮವಾದ ಕಾನೂನು ಎಂಬ ಅಂಶ ಹೊರಹೊಮ್ಮಿದೆ. ಲೈಂಗಿಕ ದೌರ್ಜನ್ಯ, ಲೈಂಗಿಕ ಉದ್ದೇಶದಿಂದ ನಡೆಸುವ ದೈಹಿಕ ಸಂಪರ್ಕ, ದೈಹಿಕ ಸಂಪರ್ಕರಹಿತ ಲೈಂಗಿಕ ದೌರ್ಜನ್ಯ, ಮೌಖಿಕ ದೌರ್ಜನ್ಯ, ಅಂತರ್ಜಾಲದ ಮೂಲಕ ನಡೆಯುವ ಲೈಂಗಿಕ ದೌರ್ಜನ್ಯಗಳನ್ನೂ ಭಾರತದಲ್ಲಿನ ಈ ಕಾನೂನು ಅಪರಾಧ ಎಂದು ಪರಿಗಣಿಸುತ್ತದೆ.

ಈ ಕಾನೂನು ಜಾರಿಯಾದ ನಂತರ, ದಾಖಲಾಗುವ ಪ್ರಕರಣಗಳ ಸಂಖ್ಯೆ ನಿರಂತರವಾಗಿ ಏರಿಕೆಯಾಗಿದೆ. ಆದರೆ, ಈ ಏರಿಕೆಯು ವಾಸ್ತವವನ್ನು ಪೂರ್ತಿಯಾಗಿ ಹೇಳುವುದಿಲ್ಲ ಎಂಬುದು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸ್ವಯಂಸೇವಾ ಸಂಸ್ಥೆಗಳ ಅಭಿಪ್ರಾಯ. ಇದಕ್ಕೆ ಒಂದು ಕಾರಣ, ಇಂಥ ದೌರ್ಜನ್ಯದ ಎಲ್ಲ ಪ್ರಕರಣಗಳೂ ವರದಿಯಾಗುವುದಿಲ್ಲ ಎಂಬುದು. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಾಗ, ಬಹುಪಾಲು ಪ್ರಕರಣಗಳಲ್ಲಿ ಪೋಷಕರು ಮೌನಕ್ಕೆ ಶರಣಾಗುವುದೇ ಹೆಚ್ಚು. ಮತ್ತೊಂದು ಕಾರಣ, ಇಂಥದ್ದೊಂದು ಕಾನೂನು ಜಾರಿಯಲ್ಲಿದೆ ಎಂಬ ಅರಿವೇ ಇಲ್ಲದಿರುವುದು. ಪೋಷಕರಲ್ಲೂ ಅರಿವಿನ ಕೊರತೆ ಇದೆ, ಮಕ್ಕಳಲ್ಲೂ ಅರಿವಿನ ಕೊರತೆ ಇದೆ.

'ವರ್ಲ್ಡ್ ವಿಷನ್ ಇಂಡಿಯಾ' ಎಂಬ ಸಂಸ್ಥೆಯು 'ಭಾರತದಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ- ಜಾಗೃತಿ ಮತ್ತು ಮನೋಭಾವ' ಶೀರ್ಷಿಕೆಯ ಅಡಿಯಲ್ಲಿ, ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಹಾಗೂ ಈಶಾನ್ಯದ ತಲಾ ಮೂರು ರಾಜ್ಯಗಳಂತೆ, 15 ರಾಜ್ಯಗಳಲ್ಲಿ, 4,500 ಮಕ್ಕಳು, 4,500 ಮಂದಿ ಪೋಷಕರು ಹಾಗೂ 75 ಮಕ್ಕಳ ರಕ್ಷಣಾ ಅಧಿಕಾರಿಗಳ ಕುರಿತು ಅಧ್ಯಯನ ನಡೆಸಿತು. ಈ ಕಾನೂನಿನ ಬಗ್ಗೆ ಒಟ್ಟಾರೆ ಶೇ 35ರಷ್ಟು ಮಕ್ಕಳಿಗೆ, ಶೇ 32ರಷ್ಟು ಪೋಷಕರಿಗೆ ಮಾತ್ರ ಅರಿವಿದೆ ಎಂಬ ಅಂಶ ಈ ಅಧ್ಯಯನದಿಂದ ತಿಳಿದುಬಂದಿದೆ. ಈ ಅಂಕಿ ಅಂಶಗಳು, ಮಕ್ಕಳು ಮತ್ತು ಪೋಷಕರಲ್ಲಿ ಈ ಕಾನೂನಿನ ಬಗೆಗಿರುವ ಅರಿವಿನ ಕೊರತೆಯ ಸೂಚಿಯಾಗಿವೆ. ಈ ಕಾನೂನಿನ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಬೇಕು ಎಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಹಾಗೂ ಕೆಲವು ರಾಜ್ಯಗಳ ಹೈಕೋರ್ಟ್‌ಗಳು ಪದೇ ಪದೇ ತಿಳಿಸಿವೆ. ಹಕ್ಕುಗಳನ್ನು ನೀಡುವ ಕಾನೂನುಗಳ ಅರಿವಿದ್ದಾಗ ಮಾತ್ರ ಕಾನೂನುಗಳಿಂದ ರಕ್ಷಣೆ ಪಡೆಯುವುದು ಸಾಧ್ಯ.



ಪೋಕ್ಸೊ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ನ್ಯಾಯ ದೊರಕಿಸಿಕೊಡುವಲ್ಲಿ ಸಾಕ್ಷ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ. ದೂರು ದಾಖಲಾದ ಕೂಡಲೇ, ಆರೋಪಿಗಳಿಗೆ ಸಾಕ್ಷ್ಯ ನಾಶಕ್ಕೆ ಅವಕಾಶ ಕೊಡದಂತೆ ಮಿಂಚಿನ ವೇಗದಲ್ಲಿ ಸಾಕ್ಷ್ಯಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಸಾಕ್ಷ್ಯಗಳ ಕೊರತೆಯಿಂದ ಆರೋಪಿ ಖುಲಾಸೆಯಾಗುವ ಸಂಭವ ಜಾಸ್ತಿ. ಹಾಗಾಗಿಯೇ ಪೋಕ್ಸೊ ಕಾಯ್ದೆ ಅಡಿಯಲ್ಲಿ ನ್ಯಾಯಾಲಯದ ಮೆಟ್ಟಿಲು ಹತ್ತಿದ ಪ್ರಕರಣಗಳ ಪೈಕಿ ಶೇ 30ರಿಂದ 40ರಷ್ಟು ಪ್ರಕರಣಗಳಲ್ಲಿ ಮಾತ್ರ ಅಪರಾಧ ರುಜುವಾತಾಗಿ ಶಿಕ್ಷೆಯಾಗಿದೆ. ಕಾನೂನು ದುರ್ಬಳಕೆಯಾಗುವುದನ್ನು ತಡೆಗಟ್ಟಲು ಸುಳ್ಳು ಪ್ರಕರಣ ದಾಖಲಿಸಿದ ದೂರುದಾರರಿಗೂ ಕಠಿಣ ಶಿಕ್ಷೆ ವಿಧಿಸುವ ಅವಕಾಶವನ್ನು ಕಾನೂನಿನಲ್ಲಿ ಕಲ್ಪಿಸಲಾಗಿದೆ.

2019ರಲ್ಲಿ ಈ ಕಾಯ್ದೆಗೆ ತಿದ್ದುಪಡಿ ತರಲಾಯಿತು. 2020ರಲ್ಲಿ ಕೇಂದ್ರ ಸರ್ಕಾರವು ನಿಯಮಗಳನ್ನು ರೂಪಿಸಿ, ಈ ಕಾನೂನಿನ ಬಗ್ಗೆ ಜಾಗೃತಿ ಮೂಡಿಸಲು ಅಗತ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲು ಯೋಜನೆಗಳನ್ನು ರೂಪಿಸಿತು. ಆದರೆ, ಕೊರೊನಾದಿಂದಾಗಿ ಎಲ್ಲವೂ ನನೆಗುದಿಗೆ ಬಿತ್ತು. ಅವೆಲ್ಲವನ್ನೂ ರಾಜ್ಯಗಳು ಸಮರೋಪಾದಿಯಲ್ಲಿ ಅನುಪಾಲನೆಗೆ ತರುವ ತುರ್ತು ಅಗತ್ಯ ಇಂದು ಉಂಟಾಗಿದೆ. ಸುರಕ್ಷಾ ಕ್ರಮಗಳು ಮತ್ತು ಲಿಂಗ ಸಮಾನತೆಯು ಶಾಲಾ ಶಿಕ್ಷಣ ಪಠ್ಯದ ಭಾಗವಾಗಬೇಕು.

ಬೆಳೆಯುವ ಚಿಗುರು ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಳ್ಳದಿರುವುದು ದೇಶದ ಭವಿಷ್ಯದ ದೃಷ್ಟಿಯಿಂದ ಅತಿ ಮುಖ್ಯವಾದುದು. ಹಾಗಾಗಬೇಕಾದರೆ, ಇಂಥ ಪ್ರಕರಣಗಳಲ್ಲಿ ತ್ವರಿತವಾಗಿ ನ್ಯಾಯ ದೊರೆಯಬೇಕು ಮತ್ತು ಅಪರಾಧಿಗಳಿಗೆ ಶಿಕ್ಷೆಯಾಗಬೇಕು. ಆದರೆ, ಏರುತ್ತಿರುವ ಪ್ರಕರಣಗಳ ಸಂಖ್ಯೆ ಮತ್ತು ಏರದಿರುವ ನ್ಯಾಯಾಲಯಗಳ ಸಂಖ್ಯೆಯು ಶೀಘ್ರ ನ್ಯಾಯದಾನಕ್ಕೆ ಅಡ್ಡಿಯಾಗಿವೆ. 2019ರ ಜೂನ್ ಅಂತ್ಯದಲ್ಲಿ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿದ್ದ ಪ್ರಕರಣಗಳ ಸಂಖ್ಯೆ 1,60,828. ಪ್ರತಿವರ್ಷ ದಾಖಲಾಗುವ ಪ್ರಕರಣಗಳ ಸಂಖ್ಯೆ ಏರುತ್ತಲೇ ಇದೆ. ಇದನ್ನು ಮನಗಂಡು, ಸರ್ಕಾರವು 1,023 ತ್ವರಿತಗತಿ ನ್ಯಾಯಾಲಯಗಳನ್ನು ಸ್ಥಾಪಿಸಲು ನಿರ್ಧರಿಸಿತು. ಅವುಗಳ ಪೈಕಿ 2021ರ ಫೆಬ್ರುವರಿ 19ರ ವೇಳೆಗೆ 612 ತ್ವರಿತಗತಿಯ ನ್ಯಾಯಾಲಯಗಳು ಕಾರ್ಯನಿರ್ವಹಿಸಲು ಪ್ರಾರಂಭಿಸಿವೆ.

ಇವೆಲ್ಲದರಷ್ಟೇ ಅಥವಾ ಇವೆಲ್ಲದಕ್ಕಿಂತ ಹೆಚ್ಚು ಮುಖ್ಯವಾಗಿ ಆಗಬೇಕಾದುದು ಎಳೆಯ ವಯಸ್ಸಿನಲ್ಲಿ ಮೃಗೀಯ ಅಪರಾಧಕ್ಕೆ ಒಳಗಾಗಿ ಹೊಸಕಿಹೋದ ಮನಸ್ಸುಗಳಿಗೆ ಸಾಂತ್ವನ ನೀಡಿ ಬದುಕಿನಲ್ಲಿ ಭರವಸೆ ಮೂಡಿಸುವ ಕೆಲಸ. ಆ ಆಘಾತಕಾರಿ ಅನುಭವದಿಂದ ಮಕ್ಕಳು ಹೊರಬರಲು ಅವರಿಗೆ ಸುಮಾರು ವರ್ಷಗಳೇ ಬೇಕಾಗುತ್ತವೆ. ಅಲ್ಲಿಯವರೆಗೆ ಅವರಿಗೆ ಆಪ್ತ ಸಮಾಲೋಚನೆ ಒದಗಿಸುವ ವ್ಯವಸ್ಥೆಯಾಗಬೇಕು. 2020ರಲ್ಲಿ ರಚಿಸಿದ ನಿಯಮಗಳಲ್ಲಿ ಸರ್ಕಾರ ಈ ಬಗ್ಗೆ ಗಮನಹರಿಸಿರುವುದು ಸ್ವಾಗತಾರ್ಹ.

ಕಾನೂನು ಎಷ್ಟೇ ಸಮಗ್ರವಾಗಿ ರೂಪುಗೊಂಡರೂ ಅದರ ಆಶಯ ಈಡೇರುವುದು ವಿಚಾರಣೆ ನಿಷ್ಪಕ್ಷಪಾತವಾಗಿ ನಡೆದಾಗ ಮತ್ತು ನ್ಯಾಯದಾನ ವ್ಯವಸ್ಥೆಯು ಕಾನೂನನ್ನು ಅಕ್ಷರಶಃ ಅನ್ವಯಿಸದೆ, ಕಾನೂನಿನ ಆಶಯವನ್ನು ಈಡೇರಿಸುವ ದಿಸೆಯಲ್ಲಿ ನ್ಯಾಯದಾನ ಮಾಡಿದಾಗ ಮಾತ್ರ. ಇದನ್ನು ಮರೆಯಬಾರದು.

ಚುರುಮುರಿ

ಕೆಸರಾಟವೇ ಪರಿಹಾರ

• ಸುಮಂಗಲಾ

ಬೆಕ್ಕಣ್ಣ 'ಮಸಾಲೆ ದೋಸೆ ಮಾಡಿಕೊಡು' ಎಂದು ದುಂಬಾಲು ಬಿದ್ದಿತ್ತು. 'ಇಲಿ, ಹೆಗ್ಗಣ ಹಿಡಿದು ತಿನ್ನೂದು ಬಿಟ್ಟು ದೋಸೆ ತಿಂತೀಯೇನಲೇ?' ಎಂದೆ ಅಚ್ಚರಿಯಿಂದ.

'ನನಗಲ್ಲ, ತೇಜಸ್ವಿಯಣ್ಣಂಗೆ ಕಳಿಸತೀನಿ. ಕೈಪಕ್ಷದವರು ಅವಂಗ ದೋಸೆ ಕಳಿಸಿದ್ರಂತ, ನಾನೂ ಕಳಸತೀನಿ' ಅಂದಿತು.

'ಬೆಂಗಳೂರಾಗೆ ಮಂದಿ ಮಳೆನೀರಾಗೆ ತೇಲಿ ಹೋಗತಿದ್ದರೆ, ತೇಜಸ್ವಿಯಣ್ಣ ದೋಸೆ ತಿಂತಾ ಕುಂತಿದ್ದನಂತ ಅಣಕಿಸಾಕೆ ಕಳಿಸ್ಯಾರೆ'.

'ಹಂಗಾದ್ರ ಕೈಪಕ್ಷದವರು ಯಾರೂ ಊಟಾನೆ ಮಾಡಿಲ್ಲೇನ್' ಎಂದು ಉಲ್ಟಾ ಹೊಡೆದ ಬೆಕ್ಕಣ್ಣ, 'ಈ ವರ್ಸ ನಮ್ಮಲ್ಲಿ ಎದಕ್ಕ ಇಷ್ಟಕೊಂದು ಮಳಿ ಆಗ್ಯೈತಿ ಹೇಳು' ಎಂದು ಕೇಳಿತು.

'ಗ್ಲೋಬಲ್ ವಾರ್ಮಿಂಗು, ಅಭಿವೃದ್ಧಿಯ ದುಷ್ಪರಿಣಾಮ, ವಿರೋಧಪಕ್ಷಗಳ ಕುತಂತ್ರ' ತಡವರಿಸುತ್ತ ಹೇಳಿದೆ.

ಪಕಪಕನೆ ನಕ್ಕ ಬೆಕ್ಕಣ್ಣ, 'ಇಷ್ಟ್ ಮಳಿ ಆಗಿ, ಕೆರೆಕಾಲುವೆ ತುಂಬಿ ಹರಿದಿದ್ದು ಕಮಲಕ್ಕನ ಕಾಲ್ಗುಣದಿಂದ ಅಂತ ಸಿಟಿ ರವಿಯಣ್ಣ ಹೇಳ್ಯಾನ. ನಮ್ಮ ರಾಜ್ಯದಾಗೆ ಬಿಜೆಪಿ ಅಧಿಕಾರದಾಗೆ ಇದ್ದಾಗೆಲ್ಲ ಅವರ ಕಾಲ್ಗುಣದಿಂದ ಕೆರೆಕಾಲುವೆ ತುಂಬಿ ಹರಿದಾವು. ಕೈಪಕ್ಷದ ಸರ್ಕಾರವಿದ್ದಾಗ ಬರಗಾಲವೇ ಗತಿ' ಎಂದು ಅಣಕಿಸಿತು.

'ಯಾವ ಪಕ್ಷದ ಸರ್ಕಾರ ಅಂತ ನೋಡಿ ಮೋಡಗಳು ಮಳೆ ಸುರಿಸತಾವೇನು? ಈ ಮಳೆ ಮಾತ್ರವಲ್ಲ... ಹಗರಣಗಳ ಮಳೆನೂ ಸುರದೈತಿ. ಪಿಎಸ್‌ಐ ಹಗರಣದಿಂದ ಹಿಡಿದು ಹತ್ತಾರು ನೇಮಕಾತಿ ಹಗರಣ, ನಲ್ವತ್ತು ಪರ್ಸೆಂಟ್ ಹಗರಣದ ಬಿರುಮಳೆನೂ ಸುರಿದೈತಿ'.

'ಸಾವಿಲ್ಲದ ಮನೆ ಹೆಂಗೆ ಇಲ್ಲವೋ ಹಂಗೇ ಹಗರಣದ ಮಳೆ ಸುರಿಸದೇ ಇರೋ ಪಕ್ಷವೇ ಇಲ್ಲ' ಎಂದು ವೇದಾಂತ ಕುಟ್ಟಿದ ಬೆಕ್ಕಣ್ಣ 'ದೊಡ್ಡ ಫೆವಿಕಾಲ್ ಡಬ್ಬ ಕೊಡು. ಕೈಪಕ್ಷದವರು ಅದೇನೋ ಭಾರತ ಜೋಡಿಸ್ತಾರಂತ, ಅದಕ್ಕ ಕೊಟ್ಟುಬರ್ತೀನಿ' ಅಂದಿತು.

'ಮಂದಿಗೆ ಭಾರತ ಜೋಡೊ, ಜನಸ್ಪಂದನ ಇವ್ಯಾವೂ ಬ್ಯಾಡಲೇ. ರಾಜಕಾಲುವೆ ಸರಿಮಾಡಿಸಲಿ, ನೆರೆ ಸಂತ್ರಸ್ತರಿಗೆ ಪರಿಹಾರ ಕೊಡಲಿ'.

'ಪರಿಹಾರದ ಕೆಲಸ ಮಾಡ್ತಾ ಕೂತ್ರೆ ಕೆಸರು ಎರಚಾಟ ಆಡೋರು ಯಾರು ಮತ್ತ' ಬೆಕ್ಕಣ್ಣ ಖೊಳ್ಳನೆ ನಕ್ಕಿತು.

ಸಂಗತ

ಒಡಲಾಗದಿರಲಿ ನಂಜುಬಟ್ಟಲು

ನಮ್ಮ ಆರೋಗ್ಯದ ಹಿತದೃಷ್ಟಿಯಿಂದ, ಕೀಟನಾಶಕಗಳ ಮಾರಾಟ, ಬಳಕೆಯಲ್ಲಿ ಕಟ್ಟುನಿಟ್ಟಿನ ನಿಯಂತ್ರಣ ಕಾಯ್ದುಕೊಳ್ಳಬೇಕಾದುದು ಅತ್ಯಗತ್ಯ

• ಡಾ. ಮುರಳೀಧರ ಕಿರಣಕೆರೆ

ತಿಳಿವಳಿಕೆಯ ಕೊರತೆಯಿಂದಾಗಿ ತನ್ನ ಎರಡು ಹಸುಗಳನ್ನು ಕಳೆದುಕೊಂಡಿದ್ದ ಆ ರೈತ. ತೀವ್ರ ಹೊಟ್ಟೆಯುಬ್ಬರದಿಂದ ಬಳಲುತ್ತಿದ್ದ ಈ ಆಕಳುಗಳು ಚಿಕಿತ್ಸೆಗೆ ಸ್ಪಂದಿಸದೆ ಒಂದೇ ದಿನದಲ್ಲಿ ಅಸುನೀಗಿದ್ದವು. ಅಲ್ಲಿ ಆಗಿದ್ದಿಷ್ಟೇ. ತನ್ನ ಅಡಿಕೆ ತೋಟದಲ್ಲಿ ಬೆಳೆದಿದ್ದ ಕಳೆಯನ್ನು ನಿರ್ನಾಮ ಮಾಡಲು ಧಾರಾಳವಾಗಿ ಕಳೆನಾಶಕ ಸಿಂಪಡಿಸಿದ್ದ. ಫಲಿತಾಂಶವೂ ಅದ್ಭುತ! ಒಂದೇ ವಾರದಲ್ಲಿ ಅಲ್ಲಿದ್ದ ಕಳೆಗಿಡಗಳು, ಹುಲ್ಲು ಸಂಪೂರ್ಣ ನಾಮಾವಶೇಷವಾಗಿದ್ದವು.

ಆರು ತಿಂಗಳ ನಂತರ ಮತ್ತೆ ಅಲ್ಲಿ ಚಿಗುರಿದ್ದ ಹುಲ್ಲನ್ನು ಮೇಯಿಸಲು ದನಗಳನ್ನು ತೋಟದಲ್ಲಿ ಕಟ್ಟಿದ್ದ. ಚೆನ್ನಾಗಿ ಮೇಯ್ದ ಅವು ರಾತ್ರಿಯಿಂದಲೇ ಅಸ್ವಸ್ಥಗೊಂಡವು. ಔಷಧೋಪಚಾರಕ್ಕೆ ಬಗ್ಗಲಿಲ್ಲ. ಮಣ್ಣಿಗೆ ಸೇರಿದ ಆ ರಾಸಾಯನಿಕಗಳು ಇನ್ನೂ ಪೂರ್ಣವಾಗಿ ಕಳೆಗುಂದಿರಲಿಲ್ಲ. ಹುಲ್ಲು ಜೊತೆಗೆ ಮಣ್ಣು ಹಸುಗಳ ದೇಹಕ್ಕೂ ವಿಷ ಉಣಿಸಿದ್ದವು. ಪಾಪ ರೈತನಿಗೆ ಕಳೆನಾಶಕದ ಈ ಅಪಾಯಕಾರಿ ಗುಣದ ಅರಿವಿರಲಿಲ್ಲ.

ಇದು ಮತ್ತೊಬ್ಬ ಕೃಷಿಕನ ಕತೆ. ಆರ್ಥಿಕವಾಗಿ ಅನುಕೂಲವಂತನಾತ. ಮನೆ, ತೋಟದ ಕಾವಲಿಗೆಂದು ಮೂರು ನಾಯಿಗಳನ್ನು ಸಾಕಿಕೊಂಡಿದ್ದ. ಮೊದ ಮೊದಲು ಆರೋಗ್ಯದಿಂದಲೇ ಇದ್ದ ಅವು ದಿನೇ ದಿನೇ ಸೊರಗುತ್ತಾ, ಆಗಾಗ್ಗೆ ಜೊಲ್ಲು ಸುರಿಸುತ್ತಾ ತಿನ್ನುವುದನ್ನು ಕಮ್ಮಿ ಮಾಡಿದವು. ಪತ್ತೆ ಹಚ್ಚಲಾಗದ ಅನಾರೋಗ್ಯದಿಂದ ಬಳಲುತ್ತಿದ್ದ ಆ ನಾಯಿಗಳ ಚಿಕಿತ್ಸೆ ನಿಜಕ್ಕೂ ಸವಾಲಾಗಿತ್ತು. ಒಂದೆರಡು ತಿಂಗಳು ಹೀಗೆಯೇ ನರಳಿ ಮರಣ ಹೊಂದಿದವು. ಏನಾದರೂ ವಿಷಪ್ರಾಶನ ಆಗಿರಬಹುದೇ ಎಂಬ ಸಂಶಯದ ಜಾಡಿನಲ್ಲಿ ತನಿಖೆ ನಡೆಸಿದಾಗಲೇ ಕಾರಣ ಬಹಿರಂಗವಾಗಿದ್ದು.

ಆತ ಮನೆಯ ಹಿತ್ತಲಿನಲ್ಲಿ ಐದಾರು ಸಾಲು ಶುಂಠಿ ಬೆಳೆಯುತ್ತಿದ್ದ. ವಾಡಿಕೆಯಂತೆ ಕಳೆನಾಶಕ, ಕ್ರಿಮಿನಾಶಕವೆಂದು ವಿಷ ಸುರಿದಿದ್ದ. ಆ ಜಾಗದಲ್ಲಿ ಸತ್ತು ಬೀಳುತ್ತಿದ್ದ ಹುಳ, ಹುಪ್ಪಟೆಗಳನ್ನು ತಿನ್ನುವ ಅಭ್ಯಾಸವುಳ್ಳ ನಾಯಿಗಳ ಶರೀರಕ್ಕೂ ನಂಜು ಸೇರುತ್ತಿದ್ದುದು ಅರಿವಿಗೆ ಬರುವಾಗ ತುಂಬಾ ತಡವಾಗಿತ್ತು. ಸುತ್ತೆಲ್ಲಾ ಮತ್ತಷ್ಟು ಅವಲೋಕಿಸಿದಾಗ, ಮಳೆಯ ನೀರು ನಿಂತ ಹೊಂಡಗಳಲ್ಲಿ ಕಪ್ಪೆಗಳು ಸತ್ತು ತೇಲಾಡುತ್ತಿದ್ದುದು ಆಘಾತ ತಂದಿತ್ತು. ಇನ್ನು ಇಂತಹ ನಂಜಿನ ಮಣ್ಣಲ್ಲಿ ಬೆಳೆದ ಬೆಳೆ, ತ್ಯಾಜ್ಯವನ್ನು ಬಳಸುವ ಜನ, ಜಾನುವಾರುಗಳ ಕತೆ ಏನಾದೀತು? ಅಪಾಯಕಾರಿ ವೈರಸ್, ಬ್ಯಾಕ್ಟೀರಿಯಾ ವಿರುದ್ಧ ಹೋರಾಡುವ, ರೋಗ ಪ್ರತಿರೋಧ ಸಾಮರ್ಥ್ಯ ಹೆಚ್ಚಿಸುವ ಬಹೂಪಯೋಗಿ ಶುಂಠಿ, ಅರಿಸಿನಗಳೇ ಒಡಲಲ್ಲಿ ವಿಷ ಹೊತ್ತಿರುವಾಗ ಆರೋಗ್ಯ ಕಾಪಾಡುವ ಗುಣವಾದರೂ ಎಲ್ಲಿಂದ?

ಅಮೆರಿಕದ ಸಂಸ್ಥೆ 'ಪರಿಸರ ಕಾರ್ಯನಿರತ ತಂಡ' (ಇಡಬ್ಲ್ಯುಜಿ) ಪ್ರತಿವರ್ಷ ಅತಿ ಹೆಚ್ಚು ಕೀಟನಾಶಕ ಹೊಂದಿರುವ 12 ಹಣ್ಣು, ತರಕಾರಿಗಳ 'ಡರ್ಟಿ ಡಜನ್' ಪಟ್ಟಿಯನ್ನು ಪ್ರಕಟಿಸುತ್ತದೆ. ಸ್ವಾಸ್ಥ್ಯದ ಬಗ್ಗೆ ಕಾಳಜಿ ಹೊಂದಿರುವವರು ಇಲ್ಲಿ ಹೆಸರಿಸಲಾದ ಪದಾರ್ಥಗಳ ಖರೀದಿಯಿಂದ ದೂರ ಉಳಿಯುತ್ತಾರೆ. ನಮ್ಮಲ್ಲೂ ಹೀಗೊಂದು ವರದಿ ಬಿಡುಗಡೆಯಾಗುವುದಾದರೆ ಸ್ಥಾನ ಪಡೆಯಲು ತೀವ್ರ ಪೈಪೋಟಿಯೇ ಏರ್ಪಡಬಹುದು!

ಹೌದು, ಅರಿವಿನ ಕೊರತೆ, ಸಮರ್ಪಕ ನಿಯಂತ್ರಣ ವ್ಯವಸ್ಥೆಯಿಲ್ಲದ ಕಾರಣ ಆಹಾರೋತ್ಪಾದನೆಯಲ್ಲಿ ವಿಷಕಾರಿ ಕಳೆನಾಶಕ, ಕೀಟನಾಶಕಗಳನ್ನು ಮನಬಂದಂತೆ ಬಳಸಲಾಗುತ್ತಿದೆ. ಪರಿಣಾಮ, ಕೆಲವು ಆಹಾರ ಪದಾರ್ಥಗಳಲ್ಲಿ ಈ ರಾಸಾಯನಿಕಗಳ ಪ್ರಮಾಣ ಅಪಾಯಕಾರಿ ಮಟ್ಟದಲ್ಲಿದೆ. ಹಳ್ಳಿಯದ್ದು, ಸಾವಯವ, ರಾಸಾಯನಿಕಮುಕ್ತ ಎಂಬ ಲೇಬಲ್ಲುಗಳನ್ನು ಅಂಟಿಸಿಕೊಂಡ ಆಹಾರ ಪದಾರ್ಥಗಳನ್ನೂ ಖರೀದಿಸಲು ಹೆದರುವಷ್ಟು ಮಟ್ಟಿಗೆ ಕಾಲ ಕೆಟ್ಟಿದೆ.

ಪೀಡೆನಾಶಕ ರಾಸಾಯನಿಕಗಳ ದುಷ್ಪರಿಣಾಮ ಆಗುವುದು ಮೊದಲು ಕೇಂದ್ರ ನರಮಂಡಲದ ಮೇಲೆ. ತತ್ಪರಿಣಾಮ ಹಾರ್ಮೋನುಗಳ ಸ್ರವಿಕೆಯಲ್ಲಿ ವ್ಯತ್ಯಯವಾಗುತ್ತದೆ. ಈಗೆಲ್ಲಾ ಅಲರ್ಜಿ, ನಿಶ್ಶಕ್ತಿ, ನರದೌರ್ಬಲ್ಯ, ಗಂಟು ನೋವು, ಥೈರಾಯಿಡ್ ಸಮಸ್ಯೆ, ಸಂಧಿವಾತ, ಕ್ಯಾನ್ಸರ್ ಎಂದೆಲ್ಲಾ ಹತ್ತಾರು ತೊಂದರೆಗಳ ಬಾಧೆ. ಸಾಮಾನ್ಯ ಸ್ವಾಸ್ಥ್ಯವೇ ಹಳಿತಪ್ಪಿರುವ ಈ ಕಾಲಘಟ್ಟದಲ್ಲಿ ವಿಷ ಬೆರೆತ ಆಹಾರ, ಕೊಳಕು ನೀರು, ಕಲುಷಿತ ಗಾಳಿಯೇ ಸಮಸ್ಯೆಗಳ ಮೂಲ. ಇತ್ತೀಚೆಗೆ ಬಿಡುಗಡೆಯಾದ 180 ದೇಶಗಳ 'ಪರಿಸರ ನಿರ್ವಹಣಾ ಸೂಚ್ಯಂಕ'ದಲ್ಲಿ ನಮ್ಮ ದೇಶದ್ದು ಕೊನೆಯ ಸ್ಥಾನ!

ಬೇರೆ ದೇಶಗಳಲ್ಲಿ ಪೂರ್ಣ ನಿಷೇಧಕ್ಕೊಳಪಟ್ಟ ಹಲವು ಪೀಡೆನಾಶಕಗಳು ನಮ್ಮಲ್ಲಿ ಮಾತ್ರ ಎಗ್ಗಿಲ್ಲದೆ ಬಳಕೆಯಲ್ಲಿವೆ. ದರವೂ ಅಂತಹ ದುಬಾರಿಯೇನಲ್ಲ. ಎಲ್ಲೆಡೆ ಸುಲಭವಾಗಿ ಲಭ್ಯವಿರುವುದರಿಂದ ಖರೀದಿ, ಬಳಕೆ ಸಲೀಸು. ಇವು ವರ್ಷ ವರ್ಷ ದಾಖಲಿಸುತ್ತಿರುವ ವಹಿವಾಟುಗಳ ಎತ್ತರ ಗಮನಿಸುತ್ತಿದ್ದರೆ ದಿಗಿಲಾಗುತ್ತದೆ.

ಹೌದು, ಫಸಲು ಉಳಿಸಿಕೊಳ್ಳಲು ಹಾಲಾಹಲ ಸುರಿಯುವುದರ ವಿರುದ್ಧ ಬೆಳೆಗಾರನಲ್ಲಿ ಎಚ್ಚರ ಮೂಡಿಸಬೇಕಿದೆ. ಉತ್ಪಾದಕ ಕಂಪನಿಗಳ ಸೂಚನೆ ತಿಳಿದು ಬಳಸಿದಾಗ ಆಗುವ ಹಾನಿ ಕನಿಷ್ಠ ಮಟ್ಟದ್ದು. ಬಳಕೆದಾರನ ಸ್ವಾಸ್ಥ್ಯ ಉತ್ಪಾದಕನ ನೈತಿಕ ಜವಾಬ್ದಾರಿ ಕೂಡ.

ಇಲ್ಲಿ ಸರ್ಕಾರದ ಹೊಣೆಗಾರಿಕೆಯೂ ದೊಡ್ಡದು. ಕೀಟನಾಶಕಗಳ ಮಾರಾಟ, ಬಳಕೆಯಲ್ಲಿ ಕಟ್ಟುನಿಟ್ಟಿನ ನಿಯಂತ್ರಣದ ಜೊತೆಗೆ ಪರಿಸರ, ಪಶುಪಕ್ಷಿಗಳಿಗೆ ಘೋರ ವಿಷಕಾರಿಯಾಗುವ ರಾಸಾಯನಿಕಗಳನ್ನು ಯಾವುದೇ ಮುಲಾಜಿಲ್ಲದೆ ನಿಷೇಧಿಸಬೇಕು. ಬೆಳೆಗಳ ರಕ್ಷಣೆಗೆ ಗ್ರಾಹಕಸ್ನೇಹಿ, ಪರಿಸರಪೂರಕ ಸಾವಯವ ವಿಧಾನಗಳ ಅನ್ವೇಷಣೆ, ಬಳಕೆಗೆ ಒತ್ತು ನೀಡಬೇಕು. ಇಲ್ಲದಿದ್ದರೆ ಭವಿಷ್ಯ ಮತ್ತಷ್ಟು ಕರಾಳವಾದೀತು.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಅಕ್ರಮ ಪಡಿತರ ಚೀಟಿ: ವೋಟಿನ ಮಹಿಮೆ!

ಬಿಪಿಎಲ್ ಪಡಿತರ ಚೀಟಿಯನ್ನು ಅಕ್ರಮವಾಗಿ ಇರಿಸಿಕೊಂಡಿರುವ, ಯೆಲ್ಲೋ ಬೋರ್ಡ್ ಅಲ್ಲದ ನಾಲ್ಕು ಚಕ್ರದ ವಾಹನ ಹೊಂದಿರುವವರು ತಕ್ಷಣ ಕಾರ್ಡನ್ನು ವಾಪಸ್ ಮಾಡಿ ದಂಡ ಕಟ್ಟಬೇಕೆಂದೂ ಇಲ್ಲದಿದ್ದರೆ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದೂ ಆಹಾರ ಇಲಾಖೆಯಿಂದ ಇತ್ತೀಚೆಗೆ ನೋಟಿಸ್ ಹೋಯಿತು. ಕೆಲವರು ಹೆದರಿ ತಮ್ಮ ಪಡಿತರ ಚೀಟಿಗಳನ್ನು ಒಪ್ಪಿಸಿ ದಂಡ ಕಟ್ಟಿ ಬಂದರು. ಅವರದು ಎಪಿಎಲ್ ಕಾರ್ಡ್ ಆಗಿ ಪರಿವರ್ತನೆಯೂ ಆಯಿತು.

ಆದರೆ, ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವ ಕಾರಣ ಸ್ಥಳೀಯ ಜನಪ್ರತಿನಿಧಿಗಳಲ್ಲಿ ಈ ಉಪಕ್ರಮವು ಹೆದರಿಕೆ ಮೂಡಿಸಿದ ಕಾರಣ, 'ನೀವು ಕಾರ್ಡುಗಳನ್ನು ಸದ್ಯಕ್ಕೇನೂ ಹಿಂದಿರುಗಿಸಬೇಕಾಗಿಲ್ಲ' ಎಂದು ಅಕ್ರಮ ಬಿಪಿಎಲ್ ಕಾರ್ಡ್‌ದಾರರಿಗೆ ಅಭಯ ನೀಡಿದ್ದಾರೆ. ಎಲ್ಲವೂ ವೋಟಿನ ಮಹಿಮೆ!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್, ಕೊಪ್ಪ

ವಸಾಹತು ಪದ: ಬರಲಿ ಬದಲಿ ಪದ

ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯ ರಾಜಪಥದಲ್ಲಿನ ರಾಜ ಪದವು ಬ್ರಿಟಿಷ್ ವಸಾಹತು ಪದವಾಗಿರುವ ಕಾರಣ ಕೊಟ್ಟು, ಅದನ್ನು ತೆಗೆದು ರಸ್ತೆಯ ಹೆಸರನ್ನು ಕರ್ತವ್ಯಪಥ ಎಂದು ಬದಲಾಯಿಸಿದ್ದಾರೆ. ಅವರ ವಸಾಹತು ವಿರೋಧಿ ದೃಷ್ಟಿಯು ಮೆಚ್ಚುವಂಥದ್ದು. ದೇಶದಾದ್ಯಂತ ಸರ್ಕಾರಿ ಕಚೇರಿಗಳಲ್ಲಿ, ಅಧಿಕಾರ ಕೇಂದ್ರಗಳಲ್ಲಿ ಮೇಲಧಿಕಾರಿಗಳು ಮತ್ತು ಜನಪ್ರತಿನಿಧಿಗಳನ್ನು ನೌಕರರು ಹಾಗೂ ಹಿಂಬಾಲಕರು ಸಂಬೋಧಿಸುವಾಗ ಮತ್ತು ಇತರರೊಂದಿಗೆ ಪ್ರಸ್ತಾಪಿಸುವಾಗ 'ಸಾಹೇಬರು' ಎಂದು ಹೇಳುವುದು ಈಗಲೂ ರೂಢಿಯಲ್ಲಿದೆ. ಈ ಪದ ಬಳಕೆ ನಿಷೇಧಕ್ಕೆ ಪ್ರಧಾನಿಯವರು ಕೂಡಲೇ ಕ್ರಮ ಕೈಗೊಳ್ಳಬೇಕು. ಸಾಹೇಬರು ಎಂಬ ಪದ ಬ್ರಿಟಿಷ್ ವಸಾಹತುಶಾಹಿ ಮಾತ್ರವಲ್ಲ ಮೊಘಲರ ಆಳ್ವಿಕೆಯ ಪದ. ಹಾಗೆಯೇ ರಾಜಭವನ, ರಾಜಕಾಲುವೆಯಂತಹ ನೂರಾರು ಪದಗಳಿದ್ದು, ಅವುಗಳನ್ನೆಲ್ಲ ತೆಗೆದು ಬದಲಿ ಪದಗಳನ್ನು ಜಾರಿಗೆ ತರುವ ಕೆಲಸವನ್ನೂ ಮಾಡಬಹುದು.

ವಿ.ಎನ್.ಲಕ್ಷ್ಮೀನಾರಾಯಣ, ಮೈಸೂರು

ಸೈಬರ್ ವಂಚನೆ: ಬೇಕು ಎಚ್ಚರ

ಇತ್ತೀಚಿನ ದಿನಗಳಲ್ಲಿ ಸೈಬರ್ ವಂಚನೆಗೆ ಪ್ರತಿಯೊಬ್ಬರೂ ಯಾವುದೋ ಒಂದು ರೂಪದಲ್ಲಿ ಒಳಗಾಗುತ್ತಿದ್ದಾರೆ. ಜನರಲ್ಲಿ ಸೈಬರ್ ವಂಚನೆಯ ಬಗ್ಗೆ ಅರಿವು ಮೂಡಿಸುವುದು, ಜೊತೆಗೆ ಸೈಬರ್ ಪೊಲೀಸರ ಸಂಖ್ಯೆ ಮತ್ತು ಕಾರ್ಯದಕ್ಷತೆ ಹೆಚ್ಚಿಸುವುದು ಅವಶ್ಯವಾಗಿದೆ. ಇಲ್ಲದಿದ್ದರೆ ಇಂದಿನ ನಿರ್ಲಕ್ಷ್ಯದ ಫಲವನ್ನು ಮುಂದೊಂದು ದಿನ ಇನ್ನೂ ಕೆಟ್ಟ ರೀತಿಯಲ್ಲಿ ಅನುಭವಿಸುವ ಪರಿಸ್ಥಿತಿ ಎದುರಾಗುವುದು ಖಂಡಿತ.

ಚಂದ್ರಶೇಖರ ಕಿತ್ತೂರು, ನರಗುಂದ

ಮೊದಲು ಸರ್ವರ್ ವಿಕಾಸವಾಗಲಿ!

'ಸರ್ವರ ವಿಕಾಸ' ಎಂಬ ಘೋಷಣೆಯೊಂದಿಗೆ 'ಜನಸ್ಪಂದನ' ಕಾರ್ಯಕ್ರಮ ಇತ್ತೀಚೆಗೆ ಅದ್ಧೂರಿಯಾಗಿ ಜರುಗಿತು. ಆದರೆ 'ಸರ್ವರ್' ವಿಕಾಸ ಮಾಡಿ ಜನಕ್ಕೆ ಸ್ಪಂದಿಸಿ ಎಂದು ಹೇಳಬೇಕಾಗಿದೆ. ಯಾವ ಸರ್ಕಾರಿ ಕಚೇರಿಗೆ ಹೋದರೂ ಗಂಟೆಗಟ್ಟಲೆ ವಿಳಂಬ, ಕಾಯುವಿಕೆ ಇದ್ದದ್ದೇ. ಕಾರಣ ಒಂದೇ: 'ಸರ್ವರ್ ಡೌನ್'! ಅಲ್ಲಿ ಕ್ಯೂ ನಿಂತ ಸರ್ವರೂ ಡೌನ್ ಆಗಿರುತ್ತಾರೆ. ಸದ್ಯಕ್ಕೆ ಸರ್ವರ್‌ಗಳು ವಿಕಾಸಗೊಂಡರೆ ಅಷ್ಟರಮಟ್ಟಿಗೆ 'ಸರ್ವರ ವಿಕಾಸ' ಆದಂತೆಯೇ.

ರಾಮಚಂದ್ರ ಎಸ್.ಕುಲಕರ್ಣಿ, ಧಾರವಾಡ

ದೋಸೆ ಚಪ್ಪರಿಸುವುದರಲ್ಲಿ ತಪ್ಪೇನಿದೆ?

ಜನಪ್ರತಿನಿಧಿಗಳು ಮೂಲತಃ ಮನುಷ್ಯರೇ. ದೋಸೆ ತಿನ್ನಬಾರದು, ಜಿಲೇಬಿ ಸವಿಯಕೂಡದು, ಮಸಾಲೆ ಚಾ ಕುಡಿಯಕೂಡದು ಮುಂತಾದ ಮೂದಲಿಕೆಗಳು ಅಸಮರ್ಥನೀಯ. ಜನಸಾಮಾನ್ಯರೊಂದಿಗೆ ಸಾಮಾನ್ಯರಂತೆ ಆಳುವವರು ಬೆರೆಯುವುದು, ನಡೆದುಕೊಳ್ಳುವುದು ಜಗತ್ತಿನ ಎಲ್ಲ ನಾಗರಿಕತೆಗಳಲ್ಲೂ ಅನುಮೋದವಾಗಿ ಸಾಗಿ ಬಂದಿದೆ. ಅಂದಕಾಲತ್ತಲೆ ಅರಸರು ಮಾರುವೇಷ ತೊಟ್ಟು ಜನರೊಂದಿಗೆ ಒಂದಾಗುತ್ತಿದ್ದರು, ಕಷ್ಟ ಸುಖ ಅರಿಯುತ್ತಿದ್ದರು.

ತಿಂದು ಉಂಡು ಹಾಗೆ ಕಲೆತರೇನೆ ನಮ್ಮನ್ನು ಪ್ರತಿನಿಧಿಸುವವರು ನಮಗೆ ಹೆಚ್ಚು ಹತ್ತಿರವಾದಾರು. ಚಪ್ಪರಿಸುವ ನಾಲಗೆ ಉಪ್ಪು ಹೆಚ್ಚು- ಸರಿ, ಖಾರ ಜಾಸ್ತಿ- ಕಡಿಮೆ ವಗೈರೆ ಟೀಕಿಸುವ ಮೂಲಕ ಜನಚಿಂತನೆಗೂ ಇಳಿದೀತು. ಒಟ್ಟಾರೆ ಪ್ರಜಾಪ್ರಭುಗಳು ಪ್ರಾಮಾಣಿಕರಾಗಿ, ದಕ್ಷರಾಗಿ, ಶಿಷ್ಟಾಚಾರ ತಪ್ಪದೆ ಶ್ರೀಮದ್ಗಂಭೀರರಾಗಿ ಇದ್ದರಾಯಿತು.

ಬಿ.ಎಸ್.ಭಗವಾನ್, ಬೆಂಗಳೂರು

ಸರಳ ನಡೆಯ ವಿರಳ ರಾಜಕಾರಣಿ

ಇತ್ತೀಚೆಗೆ ನಿಧನರಾದ ಪಾಂಡವಪುರ ತಾಲ್ಲೂಕಿನ ಮಾಜಿ ಶಾಸಕ ಕೆ.ಕೆಂಪೇಗೌಡ ಅವರ ಬಗ್ಗೆ ಒಂದು ನೆನಪು. ಒಮ್ಮೆ ನಾನು 1983 ಅಥವಾ 84ರಲ್ಲಿ ಮೈಸೂರಿನಿಂದ ಮೇಲುಕೋಟೆಗೆ ಹೋಗಲು ಸಂಜೆಯ ಕಡೇ ಸರ್ಕಾರಿ ಬಸ್‌ಗಾಗಿ ಕಾಯುತ್ತಿದ್ದಾಗ, ಬಹಳ ಹೊತ್ತಾದರೂ ಬಸ್ ಬರಲಿಲ್ಲ. ರಾತ್ರಿ ಆಗತೊಡಗಿತು. ಬಸ್ ಡಿಪೊದ ಅಧಿಕಾರಿಗಳನ್ನು ಈ ಬಗ್ಗೆ ವಿಚಾರಿಸಿದರೂ ಸಮರ್ಪಕ ಉತ್ತರ ಸಿಗಲಿಲ್ಲ. ಆಗ ಅನಿವಾರ್ಯವಾಗಿ, ಮೈಸೂರಿನಲ್ಲೇ ಇದ್ದ ಶಾಸಕ ಕೆಂಪೇಗೌಡ ಅವರನ್ನು ಸಂಪರ್ಕಿಸಿ ದೂರು ಕೊಟ್ಟಾಗ, ತಕ್ಷಣ ಬಸ್ ನಿಲ್ದಾಣಕ್ಕೆ ಬಂದ ಅವರು, ಸಾರಿಗೆ ಅಧಿಕಾರಿಗಳನ್ನು ಸಂಪರ್ಕಿಸಿ, ಬಸ್ ತರಿಸಿ ತಾವು ಕೂಡ ನಮ್ಮ ಜೊತೆಯಲ್ಲೇ ಪ್ರಯಾಣ ಮಾಡಿ ಊರು ತಲುಪಿಸಿದ್ದರು. ಅಂತಹ ಸರಳ ರಾಜಕಾರಣಿ ಈಗ ಅತಿ ವಿರಳ.

ಪುರೋಹಿತ್ ಮುರಳಿ, ಮೇಲುಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಸ್ತೆ ಅಪಘಾತ
ಹೆದ್ದಾರಿ ವಿನ್ಯಾಸ ದೋಷವೂ ಕಾರಣ

• ಜಯಸಿಂಹ ಆರ್., ಅಮೃತ ಕಿರಣ್ ಬಿ.ಎಂ.

‘ದೇಶದಲ್ಲಿನ ಬಹುತೇಕ ರಸ್ತೆ ಅಪಘಾತಗಳಿಗೆ ದೋಷಪೂರಿತ ರಸ್ತೆ, ಹೆದ್ದಾರಿ ವಿನ್ಯಾಸಗಳೇ ಕಾರಣ’ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದರು. ರಸ್ತೆ-ಹೆದ್ದಾರಿ ನಿರ್ಮಾಣದ ವಿಸ್ತೃತ ಯೋಜನಾ ವರದಿಗಳಲ್ಲಿ, ದೋಷರಹಿತ ವಿನ್ಯಾಸಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದೂ ಹೇಳಿದ್ದರು. ಉದ್ಯಮಿ ಸೈರಸ್ ಮಿಸ್ತ್ರಿ ಅವರು ರಸ್ತೆ ಅಪಘಾತದಲ್ಲಿ ಮೃತಪಟ್ಟ ನಂತರ, ಆ ಅಪಘಾತಕ್ಕೆ ದೋಷಪೂರಿತ ಹೆದ್ದಾರಿ ವಿನ್ಯಾಸವೇ ಕಾರಣ ಎಂಬ ಆರೋಪ ಕೇಳಿಬಂದಿತ್ತು. ಅಪಘಾತ ನಡೆದ ಸ್ಥಳದಲ್ಲಿನ ಹೆದ್ದಾರಿ ವಿನ್ಯಾಸದಲ್ಲಿರುವ ದೋಷಗಳನ್ನು ಹಲವರು ಪಟ್ಟಿ ಮಾಡಿದ್ದರು. ಇದು ಚರ್ಚೆಗೆ ಬಂದ ಬೆನ್ನಲ್ಲೇ, ದೋಷರಹಿತ ಹೆದ್ದಾರಿ ವಿನ್ಯಾಸಕ್ಕೆ ಒತ್ತು ನೀಡಬೇಕು ಎಂದು ಗಡ್ಕರಿ ಅವರು ಹೇಳಿದ್ದು.

ದೇಶದಲ್ಲಿನ ರಸ್ತೆ, ಹೆದ್ದಾರಿಗಳ ವಿನ್ಯಾಸ ಮತ್ತು ಅಲ್ಲಿ ಲಭ್ಯವಿರಬೇಕಿರುವ ಸವಲತ್ತುಗಳು ಏನು ಎಂಬುದನ್ನು ‘ಭಾರತೀಯ ರಸ್ತೆ ಕಾಂಗ್ರೆಸ್’ ನಿಗದಿಪಡಿಸುತ್ತದೆ. ಸೈರಸ್ ಮಿಸ್ತ್ರಿ ಅವರಿದ್ದ ಕಾರು ಅಪಘಾತಕ್ಕೆ ಒಳಗಾದ ಹೆದ್ದಾರಿಯ ವಿನ್ಯಾಸದಲ್ಲಿ ಯಾವ-ಯಾವ ದೋಷಗಳಿದ್ದವು ಎಂಬುದನ್ನು ಹಲವರು ಪಟ್ಟಿ ಮಾಡಿದ್ದಾರೆ. ಮೇಲ್ನೋಟಕ್ಕೆ ಈ ವಿನ್ಯಾಸಗಳು ದೋಷಪೂರಿತ ಎಂದು ಅನಿಸಿದರೂ, ಭಾರತೀಯ ರಸ್ತೆ ಕಾಂಗ್ರೆಸ್ ರೂಪಿಸಿರುವ ‘ಆರು ಪಥಗಳ ಹೆದ್ದಾರಿ ವಿನ್ಯಾಸ ಕೈಪಿಡಿ’ಗೆ ಅನುಗುಣವಾಗಿಯೇ ವಿನ್ಯಾಸ ಮಾಡಲಾಗಿದೆ. ಆದರೆ, ಕೈಪಿಡಿಯಲ್ಲಿ ತೋರಿಸಲಾಗಿರುವ ಕೆಲವು ಮಾರ್ಗಸೂಚಿಗಳನ್ನು ಈ ಹೆದ್ದಾರಿಯ ವಿನ್ಯಾಸದಲ್ಲಿ ಉಲ್ಲಂಘಿಸಲಾಗಿದೆ. ಈ ಉಲ್ಲಂಘನೆಯೇ, ಅಪಘಾತದ ತೀವ್ರತೆ ಹೆಚ್ಚಲು ಕಾರಣ ಎಂದು ವಿಶ್ಲೇಷಿಸಲಾಗಿದೆ.

ದೋಷವಿದೆ ಎಂದು ಹೇಳಲಾದ ವಿನ್ಯಾಸಗಳು...

ಮುಂಬೈ-ಅಹಮದಾಬಾದ್ (ಹೆದ್ದಾರಿ ಸಂಖ್ಯೆ 48) ಹೆದ್ದಾರಿಯು ಒಟ್ಟು ಆರುಪಥಗಳಿಂದ ಕೂಡಿದೆ. ಇದರಲ್ಲಿ ಸರ್ವಿಸ್ ಪಥಗಳಿಲ್ಲ. ಮುಂಬೈನಿಂದ ಅಹಮದಾಬಾದ್ ಕಡೆಗೆ ಮೂರು ಪಥಗಳು, ಅಹಮದಾಬಾದ್‌ನಿಂದ ಮುಂಬೈ ಕಡೆಗೆ ಮೂರು ಪಥಗಳು ಸಾಗುತ್ತವೆ. ಮಿಸ್ತ್ರಿ ಅವರಿದ್ದ ಕಾರು ಅಪಘಾತಕ್ಕೆ ಒಳಗಾಗಿದ್ದು ಅಹಮದಾಬಾದ್‌ನಿಂದ ಮುಂಬೈ ಕಡೆಗೆ ಸಾಗುವ ಪಥದಲ್ಲಿ.

ನೈಜ ದೋಷ: ಹೆದ್ದಾರಿಯಲ್ಲಿ ಸೇತುವೆಗಳನ್ನು ನಿರ್ಮಿಸುವಾಗ ಅವುಗಳಿಗೆ ತಡೆಗೋಡೆಗಳನ್ನೂ ನಿರ್ಮಿಸಬೇಕು. ಆದರೆ, ಯಾವುದೇ ವಾಹನವು ಚಾಲಕನ ನಿಯಂತ್ರಣ ತಪ್ಪಿದರೂ ತಡೆಗೋಡೆಗೆ ಸವರಿಕೊಂಡು ಹೋಗುವಂತೆ ವಿನ್ಯಾಸ ಮಾಡಿರಬೇಕು. ಇದಕ್ಕಾಗಿ ತಡೆಗೋಡೆಗೆ ಇನ್ನೂ 120 ಮೀಟರ್ ದೂರ ಇರುವಂತೆಯೇ ಉಕ್ಕಿನ ತಡೆಪಟ್ಟಿ (ಬ್ಯಾರಿಯರ್) ನಿರ್ಮಿಸಬೇಕು ಎಂದು ಕೈಪಿಡಿ ಹೇಳುತ್ತದೆ. ಚಾಲಕ ವಾಹನದ ಮೇಲಿನ ನಿಯಂತ್ರಣ ಕಳೆದುಕೊಂಡರೂ, ಉಕ್ಕಿನ ತಡೆಪಟ್ಟಿಗೆ ವಾಹನ ಸವರಿಕೊಂಡು ಹೋಗುತ್ತದೆ. ಸೇತುವೆಯ ತಡೆಗೋಡೆಗೆ ವಾಹನ ನೇರವಾಗಿ ಅಪ್ಪಳಿಸುವುದನ್ನು ಇದು ತಡೆಯುತ್ತದೆ. ಆದರೆ ಮಿಸ್ತ್ರಿ ಅವರಿದ್ದ ಕಾರು ಅಪಘಾತಕ್ಕೆ ಈಡಾದ ಸೇತುವೆಯ ತಡೆಗೋಡೆಗೆ ಉಕ್ಕಿನ ತಡೆಪಟ್ಟಿ ಅಳವಡಿಸಿರಲಿಲ್ಲ. ಇದು ದೊಡ್ಡ ದೋಷ. ಉಕ್ಕಿನ ತಡೆಪಟ್ಟಿ ಇದ್ದಿದ್ದರೆ, ಕಾರು ಸೇತುವೆಯ ಕಾಂಕ್ರೀಟ್ ತಡೆಗೋಡೆಗೆ ನೇರವಾಗಿ ಅಪ್ಪಳಿಸುತ್ತಿರಲಿಲ್ಲ.

ಆರು ಪಥಗಳ ಹೆದ್ದಾರಿ ಸೇತುವೆ ವಿನ್ಯಾಸ



ಆರೋಪಿತ ದೋಷ: ಮೂರು ಪಥಗಳ ಮಾರ್ಗವು, ನದಿ ಮೇಲಿನ ಸೇತುವೆ ಸಮೀಪಿಸುತ್ತಿದ್ದಂತೆಯೇ ಬದಲಾಗುತ್ತದೆ. ಎರಡು ಪಥಗಳದ್ದು ಒಂದು ಮಾರ್ಗ ಮತ್ತು ಒಂದು ಪಥದ್ದು ಮತ್ತೊಂದು ಮಾರ್ಗವಾಗಿ ಬದಲಾಗುತ್ತದೆ. ಮೂರೂ ಪಥಗಳು ಒಂದೇ ಕಡೆ ಹೋಗುವುದರಿಂದ, ಎರಡು ಪ್ರತ್ಯೇಕ ಸೇತುವೆಗಳು ಏಕೆ ಬೇಕಿತ್ತು ಎಂದು ಹಲವರು ಪ್ರಶ್ನಿಸಿದ್ದಾರೆ. ಮೂರು ಪಥಗಳು ಎರಡು ಪಥಗಳಾಗಿ ಬದಲಾಗಿದ್ದರಿಂದಲೇ ಗೊಂದಲವಾಗಿ ಅಪಘಾತ ಸಂಭವಿಸಿದೆ ಎಂದು ಹಲವರು ಆರೋಪಿಸಿದ್ದಾರೆ.

ವಿನ್ಯಾಸದಲ್ಲೇನಿದೆ: ಈ ವಿನ್ಯಾಸವು ಕೈಪಿಡಿಯಲ್ಲಿನ ಮಾರ್ಗಸೂಚಿಗಳಿಗೆ ಅನುಗುಣವಾಗಿಯೇ ಇದೆ. ಯಾವುದೇ ಹೆದ್ದಾರಿಯಲ್ಲಿ ಹಳೆಯ ಸೇತುವೆಗಳು ಇದ್ದರೆ, ಅದನ್ನು ಉಳಿಸಿಕೊಳ್ಳಬೇಕು ಎಂದು ಈ ಮಾರ್ಗಸೂಚಿ ಹೇಳುತ್ತದೆ. ಹೆಚ್ಚುವರಿ ಪಥಗಳಿಗೆ ಅಗತ್ಯವಿರುವ ಸೇತುವೆಯನ್ನು ಹೊಸದಾಗಿ ನಿರ್ಮಿಸಬೇಕು ಎನ್ನುತ್ತದೆ. ಈ ಹೆದ್ದಾರಿಯಲ್ಲಿ ಸೂರ್ಯ ನದಿಗೆ ನಿರ್ಮಿಸಲಾಗಿರುವ ಸೇತುವೆಯು ಈ ಮಾರ್ಗಸೂಚಿಗೆ ಅನುಗುಣವಾಗಿಯೇ ಇದೆ.

ಆರೋಪಿತ ದೋಷ: ಮೂರು ಪಥಗಳನ್ನು ವಿಭಜಿಸುವ ಬಿಳಿಯ ಗುರುತುಗಳು ಹೆದ್ದಾರಿಯ ಈ ಭಾಗದಲ್ಲಿ ಇಲ್ಲ ಎಂದು ಹೇಳಲಾಗಿದೆ.

ವಿನ್ಯಾಸದಲ್ಲೇನಿದೆ: ಪಥಗಳನ್ನು ವಿಭಜಿಸುವ ಬಿಳಿಯ ಗುರುತುಗಳು ಸ್ಪಷ್ಟವಾಗಿರಬೇಕು. ಪಥ ಬದಲಾವಣೆಯಾಗುವಲ್ಲಿ, ಅದನ್ನು ಸ್ಪಷ್ಟವಾಗಿ ಸೂಚಿಸುವಂತಹ ಗುರುತು ಇರಬೇಕು ಎಂದು ಕೈಪಿಡಿ ಹೇಳುತ್ತದೆ. ಹೆದ್ದಾರಿಯ ಈ ಭಾಗದಲ್ಲಿ ಬಿಳಿಯ ಗೆರೆಗಳು ಅಳಿಸಿ ಹೋಗಿರುವುದು ಸ್ಪಷ್ಟವಾಗಿದೆ. ಎರಡನೇ ಪಥ ಯಾವುದು ಮತ್ತು ಮೂರನೇ ಪಥ ಯಾವುದು ಎಂಬುದನ್ನು ಗುರುತಿಸಲು ಸಾಧ್ಯವಿಲ್ಲ. ಪಥ ವಿಭಜನೆಯಾಗುವುದೂ ಸ್ಪಷ್ಟವಾಗಿ ಕಾಣುವುದಿಲ್ಲ. ಹೆದ್ದಾರಿ ನಿರ್ವಹಣೆಯಲ್ಲಿ ಲೋಪವಾಗಿರುವುದನ್ನು ಇಲ್ಲಿ ಗುರುತಿಸಬಹುದು.



ಉಕ್ಕಿನ ತಡೆಪಟ್ಟಿ ಇಲ್ಲದೇ ಇರುವ ಕಾರಣಕ್ಕೆ ಮಿಸ್ತ್ರಿ ಅವರಿದ್ದ ಕಾರು, ಕಾಂಕ್ರೀಟ್ ತಡೆಗೋಡೆಗೆ ನೇರವಾಗಿ ಅಪ್ಪಳಿಸಿದೆ

ಉಕ್ಕಿನ ತಡೆಪಟ್ಟಿಯ ಮಾದರಿ

ನಕ್ಷೆ ಕೃಪೆ: ಗೂಗಲ್ ಅರ್ಥ್ ಪ್ರಜಾವಾಣಿ ಗ್ರಾಫಿಕ್ಸ್

ಬ್ಲ್ಯಾಕ್ ಸ್ಪಾಟ್: ದಕ್ಷಿಣದ ಹೆದ್ದಾರಿಗಳಲ್ಲೇ ಹೆಚ್ಚು

ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಡೆಯುವ ಅಪಘಾತಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ, ಕೆಲವು ಸ್ಥಳಗಳಲ್ಲಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿರುವ ವಿಚಾರ ತಿಳಿದು ಬಂದಿದೆ. ಇಂತಹ ಸ್ಥಳಗಳನ್ನು ‘ಬ್ಲ್ಯಾಕ್ ಸ್ಪಾಟ್’ ಎಂದು ಗುರುತಿಸಲಾಗಿದೆ. ನಿಗದಿತ ಸ್ಥಳವೊಂದರಲ್ಲಿ ಐದು ಬಾರಿ ಅಪಘಾತ ನಡೆದಿದ್ದರೆ ಅಥವಾ ಹತ್ತು ಮಂದಿ ಮೃತಪಟ್ಟಿದ್ದರೆ ಆ ಸ್ಥಳವನ್ನು ಬ್ಲ್ಯಾಕ್ ಸ್ಪಾಟ್ ಎಂದು ಪರಿಗಣಿಸಲಾಗುತ್ತದೆ.

ಇಂತಹ ಸ್ಥಳಗಳಲ್ಲಿ ಸಾಮಾನ್ಯವಾಗಿ ದೋಷಪೂರಿತ ರಸ್ತೆ ವಿನ್ಯಾಸ ಕಂಡುಬರುತ್ತದೆ. ಸೂಕ್ತ ಮಾರ್ಗಸೂಚಿಗಳನ್ನು ಪಾಲಿಸದೇ ರಸ್ತೆ ನಿರ್ಮಾಣ ಮಾಡಿದ್ದರಿಂದ, ಈ ಸ್ಥಳಗಳು ಆಗಾಗ್ಗೆ ಅಪಘಾತಕ್ಕೆ ಸಾಕ್ಷಿಯಾಗುತ್ತವೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಇಂತಹ ಬ್ಲ್ಯಾಕ್ ಸ್ಪಾಟ್‌ಗಳನ್ನು ಗುರುತಿಸುವ ಹಾಗೂ ಅವುಗಳ ದೋಷವನ್ನು ಸರಿಪಡಿಸುವ ಕೆಲಸ ಮಾಡುತ್ತಿದೆ. ಲೋಕಸಭೆಗೆ 2019ರ ಡಿಸೆಂಬರ್‌ನಲ್ಲಿ ಸಲ್ಲಿಸಲಾದ ಮಾಹಿತಿ ಪ್ರಕಾರ, ದೇಶದಲ್ಲಿ 5,803 ಬ್ಲ್ಯಾಕ್ ಸ್ಪಾಟ್‌ಗಳನ್ನು ಗುರುತಿಸಲಾಗಿದೆ. ತಮಿಳುನಾಡಿನಲ್ಲಿ ಅತಿಹೆಚ್ಚು, ಅಂದರೆ 748 ಬ್ಲ್ಯಾಕ್ ಸ್ಪಾಟ್‌ಗಳನ್ನು ಗುರುತಿಸಲಾಗಿದೆ. ನಂತರದ ಸ್ಥಾನಗಳಲ್ಲಿ ಪಶ್ಚಿಮ ಬಂಗಾಳ (701), ಕರ್ನಾಟಕ (551), ತೆಲಂಗಾಣ (485), ಆಂಧ್ರಪ್ರದೇಶ (466), ಉತ್ತರ ಪ್ರದೇಶ (405), ರಾಜಸ್ಥಾನ (349), ಮಧ್ಯಪ್ರದೇಶ (303), ಕೇರಳ (243) ರಾಜ್ಯಗಳಿವೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿಗಳಲ್ಲೇ ಹೆಚ್ಚು ಸಂಖ್ಯೆಯ ಬ್ಲ್ಯಾಕ್ ಸ್ಪಾಟ್‌ಗಳು ಕಂಡುಬಂದಿವೆ. ಇದು 2016ರಿಂದ 2018ರವರೆಗಿನ ಮಾಹಿತಿಯಾಗಿದ್ದು, ನಂತರದ ಅವಧಿಯ ಮಾಹಿತಿ ಲಭ್ಯವಿಲ್ಲ.

ಬ್ಲ್ಯಾಕ್ ಸ್ಪಾಟ್‌ಗಳನ್ನು ಗುರುತಿಸಿ, ಅವುಗಳನ್ನು ಸರಿಪಡಿಸುವ ಯತ್ನದ ಫಲವಾಗಿ ಅಪಘಾತಗಳ ಸಂಖ್ಯೆ ಅಲ್ಪ ಕುಸಿದಿದೆ ಎಂದು ಸರ್ಕಾರದ ಅಂಕಿಅಂಶಗಳು ಹೇಳುತ್ತವೆ. 2016ರಲ್ಲಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಗುರುತಿಸಿದ್ದ ಬ್ಲ್ಯಾಕ್ ಸ್ಪಾಟ್‌ಗಳಲ್ಲಿ 28,626 ಅಪಘಾತಗಳು ಸಂಭವಿಸಿ, 13,734 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಇವೇ ಬ್ಲ್ಯಾಕ್ ಸ್ಪಾಟ್‌ಗಳಲ್ಲಿ 2018ರಲ್ಲಿ 24,940 ಅಪಘಾತಗಳು ನಡೆದಿದ್ದು, 12,047 ಜನ ಮೃತಪಟ್ಟಿದ್ದಾರೆ. ಬ್ಲ್ಯಾಕ್ ಸ್ಪಾಟ್‌ಗಳ ಮೇಲೆ ನಿಗಾ ಹೆಚ್ಚಿಸಿದ್ದರಿಂದ ಅಪಘಾತಗಳು ಹಾಗೂ ಅದರಿಂದ ಉಂಟಾಗುವ ಪ್ರಾಣಹಾನಿಯನ್ನು ಅಲ್ಪಮಟ್ಟಿಗೆ ತಗ್ಗಿಸಲಾಗಿದೆ.

ಆಧಾರ: ಭಾರತೀಯ ರಸ್ತೆ ಕಾಂಗ್ರೆಸ್‌ನ ‘ಆರು ಪಥಗಳ ಹೆದ್ದಾರಿ ವಿನ್ಯಾಸ ಕೈಪಿಡಿ’, ಪಿಟಿಐ, ರಾಯಿಟರ್ಸ್, ಪಿಐಬಿ, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 222

ತಣಿಯದ ಪಾರ್ವತಿಯ ದುಃಖ

ನಾರದ ಬ್ರಹ್ಮನನ್ನು ‘ಜಗತ್ಕರ್ತ! ಶಂಕರನ ಫಾಲನೇತ್ರದಿಂದ ಮನ್ಮಥ ದಗ್ಧನಾದ ಮೇಲೆ ಆ ಕ್ರೋಧಾಗ್ನಿಯು ವಡವಾಗ್ನಿಯಾಗಿ ಸಮುದ್ರವನ್ನು ಪ್ರವೇಶಿಸಿತೆಂದು ಹೇಳಿದೆ. ಮುಂದೆ ಏನಾಯಿತು? ಪಾರ್ವತಿ ಏನು ಮಾಡಿದಳು?’ ಎಂದು ಉತ್ಸುಕನಾಗಿ ಕೇಳುತ್ತಾನೆ.

ಆಗ ಬ್ರಹ್ಮ ‘ಮಹಾಪ್ರಾಜ್ಞನಾದ ಎಲೈ ನಾರದನೆ! ಚಂದ್ರಶೇಖರನ ಚರಿತವನ್ನು ಕೇಳಲು ನಿನಗಿರುವ ಕೌತುಕವನ್ನು ನೋಡಿ ನನಗೆ ಸಂತೋಷವಾಗುತ್ತಿದೆ. ಆದ್ದರಿಂದ ಮಹಾಮಹಿಮನೂ, ನನಗೆ ಒಡೆಯನೂ ಆದ ಶಿವನ ಕಥೆಯನ್ನು ಅವಶ್ಯವಾಗಿ ಹೇಳುವೆನು ಕೇಳು’ ಎಂದು ಶಿವಪುರಾಣ ಪ್ರವಚನ ಮುಂದುವರೆಸುತ್ತಾನೆ.

ಶಂಕರನ ಫಾಲಾಗ್ನಿಯಿಂದ ಮನ್ಮಥ ಭಸ್ಮವಾದೊಡನೆ ಮಹಾಶಬ್ದವಾಯಿತು. ಅದರಿಂದ ಆಕಾಶವೆಲ್ಲವೂ ತುಂಬಿಹೋಯಿತು. ಮಹಾಶಬ್ದವನ್ನು ಕೇಳಿ ಮತ್ತು ಮನ್ಮಥ ಭಸ್ಮವಾದುದನ್ನು ನೋಡಿದ ಪಾರ್ವತಿ ಭಯಭೀತಳಾದಳು. ಮನ್ಮಥನು ದುರಂತ ಅಂತ್ಯ ಕಂಡಿದ್ದು ಪಾರ್ವತಿಗೂ ಬಹಳ ದುಃಖವಾಯಿತು. ಈ ಘಟನೆ ನಂತರ ಪಾರ್ವತಿ ದುಗುಡ ಮನಃಸ್ಥಿತಿಯಲ್ಲೇ ತನ್ನ ಸಖಿಯರೊಡನೆ ಮನೆಗೆ ಹೊರಟಳು.

ಇತ್ತ ಅರಮನೆಯಲ್ಲಿದ್ದ ಪರ್ವತರಾಜ ಮತ್ತವನ ಪರಿವಾರಕ್ಕೂ ದೊಡ್ಡ ಸ್ಫೋಟದ ಶಬ್ದವನ್ನು ಕೇಳಿ ಆಶ್ಚರ್ಯ ಹಾಗೂ ಆತಂಕವಾಯಿತು. ಇದೇನೆಂದು ಯೋಚನೆಗೀಡಾದರು. ಮಗಳು ಪಾರ್ವತಿ ಶಿವನ ಬಳಿಗೆ ಹೋಗಿರುವುದನ್ನು ಪರ್ವತರಾಜ ನೆನಸಿಕೊಂಡು ತುಂಬಾ ಭಯಗೊಂಡ. ಅಷ್ಟರಲ್ಲಿ ಮಗಳು ಮನೆಗೆ ಬಂದಿದ್ದು ನೋಡಿ ಪರ್ವತರಾಜನಿಗೆ ಸಮಾಧಾನವಾಯಿತು. ಆದರೆ ಅವಳ ಮುಖದಲ್ಲಿದ್ದ ಭಯ ಮತ್ತು ದುಃಖವನ್ನು ನೋಡಿ ಆತಂಕವೂ ಆಯಿತು. ಶಂಕರನ ವಿರಹದಿಂದ ದುಃಖಿಸುತ್ತಿದ್ದ ಪಾರ್ವತಿಗೆ ತಂದೆ ಹಿಮವಂತನನ್ನು ನೋಡಿ ಮತ್ತಷ್ಟು ದುಃಖ ಉಮ್ಮಳಿಸಿ, ಓಡಿ ಬಂದು ಅವನ ಎದೆಗೆ ಮುಖವಿಟ್ಟು ಬಿಕ್ಕಳಿಸಿ ಅಳತೊಡಗಿದಳು.

ಮಗಳು ಪಾರ್ವತಿ ತುಂಬಾ ದುಃಖದಿಂದ ಅಳುತ್ತಿರುವುದನ್ನು ನೋಡಿ ಪರ್ವತರಾಜನಿಗೆ ಏನೋ ಮಹಾ ಅನಾಹುತವೇ ಆಗಿರಬೇಕೆಂದು ಭಾವಿಸಿದ. ತನ್ನ ಎದೆಗೊರಗಿ ಅಳುತ್ತಿದ್ದ ಮಗಳ ತಲೆ ನೇವರಿಸುತ್ತಾ, ಕೈಯಿಂದ ಅವಳ ಕಣ್ಣುಗಳನ್ನು ಒರೆಸುತ್ತಾ ಹೇಳಿದ, ‘ಪಾರ್ವತಿ, ಅಳಬೇಡ. ಯಾವುದಕ್ಕೂ ನೀನು ಹೆದರಬೇಡ. ನಾನಿದ್ದೇನೆ, ನಿನ್ನೆಲ್ಲಾ ಕಷ್ಟಗಳನ್ನು ನಿವಾರಿಸುತ್ತೇನೆ. ನಿನಗೇನಾಯಿತು ಹೇಳು?’ ಎಂದು ಅವಳನ್ನು ಪ್ರೀತಿಯಿಂದ ಸಮಾಧಾನಗೊಳಿಸಿದ.

ತಂದೆಯ ಮಾತು ಕೇಳಿ ಪಾರ್ವತಿ ಸಮಾಧಾನವಾಗುವ ಬದಲು ಮತ್ತಷ್ಟು ದುಃಖದಿಂದ ಬಿಕ್ಕಳಿಸಿ ಅಳತೊಡಗಿದಳು. ಆಗ ಪಾರ್ವತಿಯ ಸಖಿಯರಿಂದ ವಿಷಯ ತಿಳಿದುಕೊಂಡ ಪರ್ವತರಾಜನಿಗೂ ಬಹಳ ದುಃಖವಾಯಿತು. ಮುಂದೇನು ಮಾಡುವುದೆಂದು ಚಿಂತೆಗೀಡಾದ. ಅಷ್ಟರಲ್ಲಿ ಅಲ್ಲಿಗೆ ಬಂದ ಮೇನಾದೇವಿ ದುಃಖಿಸುತ್ತಿರುವ ಪತಿ ಮತ್ತು ಮಗಳನ್ನು ನೋಡಿ ಭಯವಿಹ್ವಲಳಾದಳು. ನಡೆದ ವಿಷಯ ತಿಳಿದು, ಮಗಳನ್ನು ಸಮಾಧಾನಿಸಿದಳು.

ತಾಯಿ ಮೇನಾದೇವಿಯ ಮಡಿಲಲ್ಲಿ ತಲೆಯಿಟ್ಟು ಮಲಗಿದಾಗ ಗಿರಿಜೆಗೆ ಮನಸ್ಸು ಹಗುರವಾದಂತಾಯಿತು. ಆದರೆ ಇದು ಕ್ಷಣ ಮಾತ್ರ ಮನಸ್ಸು ನಿರಾಳವೆನಿಸಿತು. ಮತ್ತೆ ಅವಳ ಮನದ ದುಗುಡ ಕಾಣಿಸಿಕೊಂಡು ವ್ಯಥಿಸಿದಳು. ತಾಯಿ ಮತ್ತು ಸಖಿಯರು ಎಷ್ಟು ಹೇಳಿದರೂ ಅವಳು ಸಮಾಧಾನಗೊಳ್ಳಲಿಲ್ಲ. ನಿದ್ರೆಯಲ್ಲಿ, ಪಾನಭೋಜನಗಳಲ್ಲಿ, ಸ್ನಾನ-ಶೃಂಗಾರಗಳಲ್ಲಿ ನಿರಾಸಕ್ತಳಾದಳು. ಮನ್ಮಥನನ್ನು ಭಸ್ಮಮಾಡಿ ಹರ ಅಂತರ್ಧಾನನಾದ ದೃಶ್ಯವನ್ನೇ ಪಾರ್ವತಿ ನೆನೆದು, ತುಂಬಾ ಖಿನ್ನಳಾಗುತ್ತಿದ್ದಳು. ಅವಳಿಗೆ ಎಲ್ಲಿಯೂ ಸುಖವಿಲ್ಲದಂತೆ ಭಾಸವಾಗಿ ಕ್ಷೋಭೆಗೊಳಗಾಗುತ್ತಿದ್ದಳು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ತಮ್ಮ ಸರ್ಕಾರದ ಆಡಳಿತದ ಅವಧಿಯಲ್ಲಿ ರಾಜ್ಯದಲ್ಲಿ ಒಂದೇ ಒಂದು ಗಲಭೆ ನಡೆದಿಲ್ಲ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಕಳೆದವಾರ ಬಿಜ್ನೋರ್‌ನಲ್ಲಿ ಹೇಳಿದ್ದರು. ‘ಉತ್ತರ ಪ್ರದೇಶವು ಗಲಭೆಗಳಿಗೆ ಹೆಸರಾಗಿತ್ತು. ಆದರೆ, ಎನ್‌ಸಿಆರ್‌ಬಿ ವರದಿ ಪ್ರಕಾರ, ಐದು ವರ್ಷಗಳಲ್ಲಿ ಒಂದೂ ಗಲಭೆ ಪ್ರಕರಣ ವರದಿಯಾಗಿಲ್ಲ. ಕೋಮು ಗಲಭೆಗಳೂ ನಡೆದಿಲ್ಲ. ರಾಜ್ಯವು ದಂಗೆ ಮುಕ್ತವಾಗಿದೆ’ ಎಂದು ಅವರು ಹೇಳಿದ್ದರು.

✓ ಎನ್‌ಸಿಆರ್‌ಬಿ ವಾರ್ಷಿಕ ವರದಿಗಳ ಪ್ರಕಾರ, 2017ರಿಂದ 2021ರ ಅವಧಿಯಲ್ಲಿ ಉತ್ತರ ಪ್ರದೇಶದಲ್ಲಿ 35,040 ಗಲಭೆ ಪ್ರಕರಣಗಳು ವರದಿಯಾಗಿವೆ. ಈ ಪೈಕಿ 35 ಕೋಮುಗಲಭೆ ಪ್ರಕರಣಗಳು ಸೇರಿವೆ. ಆದರೆ, 2017ಕ್ಕೆ ಹೋಲಿಸಿದರೆ, 2021ರಲ್ಲಿ ಗಲಭೆ ಪ್ರಕರಣಗಳ ಪ್ರಮಾಣ ಶೇ 41ರಷ್ಟು ಇಳಿಕೆಯಾಗಿದೆ ಎಂದು ವರದಿಗಳು ಹೇಳುತ್ತವೆ. ಆದರೆ ಯೋಗಿ ಅವರು ಒಂದೂ ಪ್ರಕರಣ ವರದಿಯಾಗಿಲ್ಲ ಎಂಬುದು ತಪ್ಪು ಮಾಹಿತಿ ಎಂದು ‘ಸ್ಕ್ರಾಲ್’ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಉತ್ಕೃಷ್ಟತೆಯ ಲಕ್ಷಣ

ನಾಸಿಕದೊಳುಚ್ಛ್ವಾಸ ನಿಶ್ವಾಸ ನಡೆವಂತೆ |
ಸೂಸುತ್ತಲಿರಲಿ ನಿನ್ನಿರವು ಮಂಗಳವ ||
ಆಶಿಸದೆ ಸಂಕಲ್ಪಯತ್ನಗಳನಿನಿತುಮಂ |
ಸಾಜವಾಗಲಿ ಸಯ್ಪು - ಮಂಕುತಿಮ್ಮ || 712 ||

ಪದ-ಅರ್ಥ: ನಾಸಿಕದೊಳುಚ್ಛ್ವಾಸ = ನಾಸಿಕದೊಳು (ಮೂಗಿನಲ್ಲಿ) + ಉಚ್ಛ್ವಾಸ(ಉಸಿರನ್ನು ಒಳಗೆ ಎಳೆದುಕೊಳ್ಳುವುದು), ನಿಶ್ವಾಸ (ಉಸಿರು ಹೊರಗೆ ಬಿಡುವುದು), ಸೂಸುತ್ತಲಿರಲಿ = ಸೂಸುತ್ತಲು + ಇರಲಿ, ನಿನ್ನಿರವು = ನಿನ್ನ + ಇರವು, ಸಂಕಲ್ಪಯತ್ನಗಳನಿನಿತುಮಂ = ಸಂಕಲ್ಪ + ಯತ್ನಗಳನು + ಇನಿತುಮಂ(ಸ್ವಲ್ಪವಾದರೂ), ಸಾಜವಾಗಲಿ = ಸಹಜವಾಗಲಿ, ಸಯ್ಪು = ಸರಿಯಾದ ಕಾರ್ಯ.

ವಾಚ್ಯಾರ್ಥ: ಶ್ವಾಸೋಚ್ಛ್ವಾಸ ನಿನ್ನಲ್ಲಿ ಅತ್ಯಂತ ಸಹಜವಾಗಿ ನಡೆವಂತೆ, ನಿನ್ನ ಬದುಕು ಅನಾಯಾಸವಾಗಿ ಮಂಗಳವನ್ನು ಸೂಸುತ್ತಿರಲಿ, ವಿಶೇಷವಾದ ಸಂಕಲ್ಪ ಮತ್ತು ಯತ್ನಗಳಿಲ್ಲದೆ ಸಹಜವಾಗಿ ನಡೆಯಲಿ ಸರಿಯಾದ ಕಾರ್ಯಗಳು.

ವಿವರಣೆ: ಇದೊಂದು ಅದ್ಭುತವಾದ ಚೌಪದಿ. ಅಷ್ಟೊಂದು ಬಹುದೊಡ್ಡ ಚಿಂತನೆಯನ್ನು ಪುಟ್ಟ ನಾಲ್ಕು ಸಾಲುಗಳಲ್ಲಿ ಹೇಳಲು ಸಾಧ್ಯವಾಗಿರುವುದೇ ಅಚ್ಚರಿ. ಈ ಸಾಲುಗಳು ಮನುಷ್ಯನ ಸಾಧನೆಯ ಉತ್ಕೃಷ್ಟತೆಯ ಬಗ್ಗೆ ಹೇಳುತ್ತವೆ. ಇಂಥ ವಿಷಯದ ಮೇಲೆ ಅನೇಕ ಗ್ರಂಥಗಳನ್ನು ಕಂಡಿದ್ದೇನೆ. ಅವೆಲ್ಲವುಗಳ ಸಾರರೂಪ ಈ ಚೌಪದಿ.

ಮನುಷ್ಯ ಸಾಮಾನ್ಯ ಸ್ಥಿತಿಯಿಂದ ಅತ್ಯುನ್ನತ ನೆಲೆಗೆ ಅನೇಕ ಹಂತಗಳನ್ನು ದಾಟಿ ಬರುತ್ತಾನೆ. ಮೊದಲನೆಯ ಹಂತದಲ್ಲಿ ಆತ ಮುಗ್ಧ. ಅವನಿಗೆ ಏನೂ ತಿಳಿಯದು. ಮುಖ್ಯವಾಗಿ ಅವನಿಗೂ ತನಗೆ ಏನೂ ತಿಳಿದಿಲ್ಲ ಎನ್ನುವುದೂ ತಿಳಿದಿಲ್ಲ. ((He does not know that he does not know).). ಆತ ಮಾನಸಿಕವಾಗಿ, ಬೌದ್ಧಿಕವಾಗಿ ಬೆಳೆದಂತೆ ತನಗೆ ಬಹಳಷ್ಟು ತಿಳಿದಿಲ್ಲ ಎಂಬುದು ಅರಿವಾಗುತ್ತ ಹೋಗುತ್ತದೆ. ((He knows that he does not know).). ಆತ ಮುಂದೆ ಸಾಧನೆ ಮಾಡುತ್ತ ಸಾಗಿದಂತೆ ಬಹಳಷ್ಟು ಜ್ಞಾನವನ್ನು ಸಂಪಾದನೆ ಮಾಡುತ್ತಾನೆ. ತನಗೆ ಸಾಕಷ್ಟು ವಿಷಯಗಳು ತಿಳಿದಿವೆ ಎನ್ನಿಸತೊಡಗುತ್ತದೆ. **(He believes that he knows)...** ಇದೊಂದು ಭ್ರಮಾಲೋಕ. ಅದು ಅಹಂಕಾರದ ಬೀಜವೂ ಆದೀತು.

ಈ ಹಂತದಲ್ಲಿ ವ್ಯಕ್ತಿ ತಾನು ತಿಳಿದವನು, ಬುದ್ಧಿವಂತ ಎಂದು ಪ್ರಯತ್ನಪೂರ್ವಕವಾಗಿ ಜನರನ್ನು ಮೆಚ್ಚಿಸಲು ತೊಡಗುತ್ತಾನೆ. ಆ ನಂತರದ ಹಂತವನ್ನು ಕೆಲವೇ ಕೆಲವು ಜನರು ಏರಲು ಪ್ರಯತ್ನಿಸುತ್ತಾರೆ. ಅದರಲ್ಲಿ ಒಂದಿಬ್ಬರು ಮಾತ್ರ ಸಫಲರಾದಾರು. ಅದೊಂದು ಮಾನವತೆಯ ಅತ್ಯುತ್ತಮತ್ವದ ನೆಲೆ. ಆಗ ವ್ಯಕ್ತಿ ಏನೇನೂ ಪ್ರಯತ್ನವಿಲ್ಲದೆ, ಯಾವ ಸೋಗೂ ಇಲ್ಲದೆ ಎಲ್ಲವನ್ನು ತಿಳಿಯುತ್ತಾನೆ, ತಿಳಿಸುತ್ತಾನೆ. ((He does not know that he knows).). ಅದು ಎಲ್ಲವೂ ತಿಳಿದಿದ್ದ ಮುಗ್ಧತೆ. ಮಗುತನ. ಆಗ ಆತ ಮಾತನಾಡಿದ್ದೆಲ್ಲ ಉಪನಿಷತ್ತು. ಅಪ್ರಯತ್ನವಾಗಿ ಆಗ ನಡೆದದ್ದೆಲ್ಲ ಲೋಕಕ್ಕೆ ಮಾದರಿ. ರಾಮಕೃಷ್ಣ ಪರಮಹಂಸ, ಬಸವಣ್ಣ, ಬುದ್ಧ, ಅಲ್ಲಮಪ್ರಭು ಇಂಥವರು ತಲುಪಿದ್ದು ಈ ನೆಲೆಗೆ. ಕಗ್ಗ ಅದನ್ನು ಹೇಳುತ್ತದೆ. ನಾವು ಉಸಿರಾಡುವುದು ಅಪ್ರಯತ್ನವಾಗಿ. ಉಸಿರಾಡುವುದೇ ನಮಗೆ ತಿಳಿದಿಲ್ಲ, ಅದು ನಿಲ್ಲುವವರೆಗೆ. ಹಾಗೆ ನಮ್ಮ ಬದುಕು ಯಾವ ವಿಶೇಷ ಪ್ರಯತ್ನವೂ ಇಲ್ಲದೆ ಮಂಗಳವನ್ನು ಸೂಸಲಿ. ಮಾಡಿದ ಕಾರ್ಯಗಳೆಲ್ಲ ಶ್ರಮವಿಲ್ಲದೆ ಶುಭಕಾರ್ಯಗಳಾಗಲಿ. ಹೂವು ಯಾವ ಪ್ರಯತ್ನವೂ ಇಲ್ಲದೆ ಸುಗಂಧವನ್ನು ಪಸರಿಸುವಂತೆ, ಹಿಮ ತಂಪನ್ನು ಹರಡುವಂತೆ, ಉನ್ನತಿಕೆಯನ್ನು ಪಡೆದವನು ನಿರ್ಯತ್ನದಿಂದಲೇ, ಸಹಜವಾಗಿ, ಒಳ್ಳೆಯ ಕಾರ್ಯ ಪ್ರಚೋದಕನಾಗುತ್ತಾನೆ. ನಮ್ಮ ಬಾಳು ಹಾಗಾಗಲಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಸೆಪ್ಟೆಂಬರ್ 12, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ದ್ವಿತೀಯ ಗಂ. 11-36 ನಕ್ಷತ್ರ: ಉತ್ತರಾಭಾದ್ರಾ ಗಂ. 06-59 ಯೋಗ: ಗಂಡ ಗಂ. 09-31, ಕರಣ: ಗರಜೆ ಗಂ 11-36, ಸಿಂಹ ಮಾಸದ 26 ನೇ ದಿನ.
ರಾಹುಕಾಲ: ಬೆಳಿಗ್ಗೆ 07:30 - 09:00
ಸೂರ್ಯೋದಯ: 06-23 ಸೂರ್ಯಾಸ್ತ: 06-31
ಮುಸ್ಲಿಂ ದಿನಾಂಕ: 15 ಸಫರ್
ಅದೃಷ್ಟ ಸಂಖ್ಯೆ: 4, 9

ಮೇಷ: ಬದುಕಲು ಬೇಕಾದ ಜೀವನದ ಪಾಠ ಹೇಳುವಿರಿ. ಹಲವಾರು ಅವಕಾಶಗಳು ನಿಮಗೆ ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ದುರ್ಗಾಪರಮೇಶ್ವರಿಯ ಸೇವೆ ಮಾಡುವುದರಿಂದ ಗೊಂದಲ ನಿವಾರಣೆ.

ವೃಷಭ: ಮನೆಯ ಕಟ್ಟಡದ ದುರಸ್ತಿ ಕಾರ್ಯಗಳು ಅನಿವಾರ್ಯವಾಗುತ್ತದೆ. ತೈಲಗಳ ಲೇಪನ ಮಾಡಿಕೊಳ್ಳುವುದರಿಂದ ಕಾಲು ನೋವು ನಿವಾರಣೆಯಾಗುವುದು. ಋಣಾತ್ಮಕ ಚಿಂತನೆಯು ಆರೋಗ್ಯವನ್ನು ಹಾಳು ಮಾಡುತ್ತದೆ.

ಮಿಥುನ: ಬದುಕಿನಲ್ಲಿ ಹೊಸ ವ್ಯಕ್ತಿಯ ಪ್ರವೇಶವಾಗಲಿದೆ ಹಾಗೂ ಅವರಿಂದ ಸಿಗುವ ಸಲಹೆ, ಸಹಕಾರ ಮರೆಯಲಾಗದಂತೆ ಇರುವುದು. ಸರ್ಕಾರಿ ಕಚೇರಿಗಳಲ್ಲಿ ಕೆಲಸಗಳು ಯಶಸ್ಸಿನೊಂದಿಗೆ ಪೂರ್ಣಗೊಳ್ಳಲಿದೆ.

ಕರ್ಕಾಟಕ: ರೈತಾಪಿ ವರ್ಗದವರಿಗೆ ಪರಿಸರದ ವಾತಾವರಣದಿಂದ ಅಥವಾ ಕಾಡು ಪ್ರಾಣಿಗಳಿಂದ ಕೃಷಿಗೆ ತೊಂದರೆ ಆಗುವುದು. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಯತ್ನಬಲವನ್ನು ಹೆಚ್ಚಿಸಿದರೆ ಉದ್ಯೋಗ ಪ್ರಾಪ್ತಿಗೆ.

ಸಿಂಹ: ಸಮಸ್ಯೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ರಾಜಿ ಸಂಧಾನದ ಅಥವಾ ಷರತ್ತುಗಳ ಮೂಲಕ ಬಗೆಹರಿಸಿಕೊಳ್ಳುವುದು ಉತ್ತಮ. ವ್ಯಾಪಾರಗಳಲ್ಲಿ ನಿರೀಕ್ಷಿತ ಆದಾಯಕ್ಕಿಂತ ಹೆಚ್ಚು ಲಾಭಗಳಿಸುವಿರಿ. .

ಕನ್ಯಾ: ಸೇವೆಯ ಕಾಲದ ಆಧಾರದ ಮೇಲೆ ಕೆಲಸದಲ್ಲಿ ಬಡ್ತಿ ದೊರೆಯಲಿದೆ. ಕೌಟುಂಬಿಕ ಸಮಸ್ಯೆಗಳು ಬಗೆಹರಿದು ಮನೆಯವರಿಗೆಲ್ಲ ನೆಮ್ಮದಿ ಉಂಟಾಗುವುದು. ಗೃಹ ನಿರ್ಮಾಣ ಕೆಲಸಗಳು ಮುಂದುವರೆಯುವುದು.

ತುಲಾ: ಹಣಕಾಸಿನ ವಿಚಾರದಲ್ಲಿ ದೃಢ ನಿರ್ಧಾರ ಕೈಗೊಳ್ಳಲು ಉತ್ತಮ ದಿನ. ಅವಕಾಶಗಳು ನಿಮ್ಮನ್ನರಸಿ ಬರಲಿವೆ, ವಿವೇಚನೆಯಿಂದ ಉಪಯೋಗಿಸಿಕೊಂಡಲ್ಲಿ ಹೆಚ್ಚಿನ ಅನುಕೂಲವಾಗಲಿದೆ. ದಂತವೈದ್ಯ ವೃತ್ತಿಯವರಿಗೆ ಒಳ್ಳೆಯ ದಿನ.

ವೃಶ್ಚಿಕ: ಸಾಧ್ಯವಾದಷ್ಟೂ ಉಳಿತಾಯ ಮಾಡುವ ಪ್ರಯತ್ನ ದಿನ ರೂಢಿಸಿ ಕೊಳ್ಳಿ. ಮುಕ್ತ ಮಾತುಕತೆಗಳಿಂದ ವ್ಯವಹಾರಗಳು ನಿಮ್ಮಂತಾಗುವುದು. ಮಾಧ್ಯಮ-ಸಂಸ್ಥೆಗಳವರಿಗೆ ಉತ್ತಮ ದಿನ. ದೈನಂದಿನ ಕೆಲಸಗಳಲ್ಲಿ ಬದಲಾವಣೆ ಇಲ್ಲ.

ಧನು: ಅಹಂಕಾರಭಾವದ ನಡವಳಿಕೆ ಸೋಲು, ನಷ್ಟ, ನಿರಾಸೆಗೆ, ಏಕಾಂಗಿತನಕ್ಕೆ ನೇರ ಕಾರಣವಾಗುವುದು. ಬಂಧುಗಳಲ್ಲಿ ವಿಶ್ವಾಸವನ್ನು, ಸಂಬಂಧವನ್ನು ಉಳಿಸಿ-ಬೆಳೆಸಿಕೊಳ್ಳುವ ಪ್ರಯತ್ನವಿರಲಿ.

ಮಕರ: ಷೇರು ವ್ಯವಹಾರದಲ್ಲಿ ಸಮಸ್ಯೆ ಅಥವಾ ನಷ್ಟ ಸಂಭವಿಸಬಹುದು. ಸಾಲ ಮರುಪಾವತಿ ಮಾಡುವ ವಿಚಾರದಿಂದಾಗಿ ತಲೆಬಿಸಿಯ ವಾತಾವರಣ ಇರುವುದು. ದೇಹದಲ್ಲಿ ರಕ್ತ ಸಂಬಂಧ ತೊಂದರೆಗಳು ಎದುರಾಗಬಹುದು,

ಕುಂಭ: ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ವಾಹನಗಳ ಬಿಡಿ ಭಾಗಗಳ ಮಾರಾಟಗಳಿಂದ ಲಾಭ ಪಡೆಯುವಿರಿ. ಸಾಂಸಾರಿಕವಾಗಿ ವೈದ್ಯಕೀಯ ಖರ್ಚು ಹೆಚ್ಚಲಿದೆ.

ಮೀನ: ಹೊಸ ಕ್ರಿಯಾಶೀಲ ಉದ್ಯೋಗದಿಂದ ತೃಪ್ತಿ ಹಾಗೂ ನೆಮ್ಮದಿ ಕಾಣುವಿರಿ. ಅರ್ಧಕ್ಕೆ ನಿಂತಿರುವ ವ್ಯವಹಾರಗಳನ್ನು ಪೂರ್ತಿಗೊಳಿಸಲು ವ್ಯಕ್ತಿಗಳ ಮೊರೆ ಹೋಗುವುದು. ನೇರ ಭೇಟಿ ಮಾಡುವುದು ಉತ್ತಮ.

ಪದಬಂಧ 5077 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹವಳವನ್ನು ಹೀಗೂ ಹೇಳುವರು (3)
3.ಇಂಪಾದ ಧ್ವನಿಯಿದು (3)
5.ಜನಪ್ರಿಯನಾದವನು ರಾಗಿ ಹಿಡಿದಿದ್ದಾನಲ್ಲಾ! (5)
6.ಅಂಗವಿಕಲನು ಪ್ರವೇಶಿಸಿರುವ ಗುಹೆ (2)
8.ನೆನಪಿನಿಂದ ಮಾಸದ ಆ ತಿಂಗಳು! (2)
9.ಈತ ಮದುವೆಯಾಗುತ್ತಿರುವವನು (2)
10.ಕನಸು ಕಾಣುತ್ತಾ ಬಲವನ್ನು ಹೀಗೆ ಪ್ರಕಟಿಸು (2)
14.ಅಂತರಂಗಸ್ಪರ್ಶಿಯಾದುದು (5)
15.ಆನೆಯ ದಾಡೆ (3)
16.ವರನಲ್ಲಿ ಕಾಣುತ್ತಿರುವ ವಾಗ್ಮಿ (3)

ಮೇಲಿಂದ ಕೆಳಕ್ಕೆ
1.ಯೋಗವಿದ್ದಾಗಲೇ ಇಷ್ಟೊಂದು ವೆಚ್ಚ (4)
2.ಮಜವಾಗಿ ಕಾಣುತ್ತಿರುವ ಹಂತ (3)
3.ತಂಗಿ ವ್ಯಕ್ತಪಡಿಸಿದ ಅಭಿಪ್ರಾಯ (3)
4.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
7.ಹೆಂಡತಿಯನ್ನು ಕಳೆದುಕೊಂಡವನು (3)
8.ಅಳೆಯುವ ಸಾಧನವಿದು (3)
9.ಕಾಡಿನಲ್ಲಿ ಗೋಚರವಾದ ಬೇಡ (4)
11.ಕೋಮಲವಾದ ಶರೀರವುಳ್ಳವನು (4)
12.ವಿಷ್ಣುವಿನ ಐದನೆಯ ಅವತಾರ (3)
13.ಈತ ಬಲು ಪೆದ್ದ! (3)



5076ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಆವಿ 3.ಸರ್ವನಾಶ
5.ಸಹಾಯ 6.ವರ್ತಮಾನ
8.ಯಮಭಾರ 12.ಅಂತರಿಕ್ಷ
14.ಅನುರಾಗ 15.ಪಗಾರ
16.ಸಭಾತ್ಯಾಗ 17.ಜಾಣೆ

ಮೇಲಿಂದ ಕೆಳಕ್ಕೆ:
1.ಅಸಭ್ಯತನ 2.ಆಯವ್ಯಯ
3.ಸರೋವರ 4.ಶಮನ
7.ಮಾಫಿ 9.ಭಾರತ
10.ಗೊಡ್ಡುಹರಟೆ 11.ಜೇನು
12.ಅಂಗರಾಗ 13.ಕ್ಷಮಾಪಣೆ
14.ಅಗಸ

ಸುಡೊಕು 5463

	7			5		2		8
5		4	1		8			
	8			7			5	
	6		9	3		1		2
2		5					8	
	3			8	2	5		6
			5		6		2	
3		2					6	
	5			2		4		1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5462 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಇಳಿಕೆ

ಪೆಟ್ರೋಲ್, ಡೀಸೆಲ್ ಬೆಲೆ ಸ್ಥಿರ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಏಳು ತಿಂಗಳ ಕನಿಷ್ಠ ಮಟ್ಟಕ್ಕೆ ತಲುಪಿದೆ. ಆದರೆ, ದೇಶಿ ಮಾರುಕಟ್ಟೆಯಲ್ಲಿ ತೈಲ ಬೆಲೆಯಲ್ಲಿ ಬದಲಾವಣೆ ಆಗಿಲ್ಲ. ವೆಚ್ಚ ಹೆಚ್ಚಾಗಿದ್ದೂ ತೈಲ ಬೆಲೆ ಏರಿಕೆ ಮಾಡದಿದ್ದ ಕಾರಣದಿಂದಾಗಿ ಆದ ನಷ್ಟವನ್ನು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಈಗ ಸರಿದೂಗಿಸಿಕೊಳ್ಳುತ್ತಿವೆ.

ಬ್ರೆಂಟ್ ಕಚ್ಚಾ ತೈಲದ ದರವು ಹಿಂದಿನ ವಾರ ಬ್ಯಾರಲ್‌ಗೆ 90 ಡಾಲರ್‌ಗಿಂತ ಕಡಿಮೆ ಮಟ್ಟಕ್ಕೆ ಕುಸಿಯಿತು. ಇದು ಫೆಬ್ರುವರಿ ಆರಂಭದಲ್ಲಿನ ದರಕ್ಕಿಂತ ಕಡಿಮೆ. ಆದಾದ ನಂತರದಲ್ಲಿ ತುಸು ಚೇತರಿಕೆ ಕಂಡ ದರವು ಈಗ 92.84 ಡಾಲರ್‌ನಷ್ಟಿದೆ.

ಹೀಗಿದ್ದರೂ, ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಬದಲಾವಣೆ ಆಗಿಲ್ಲ. 158 ದಿನಗಳಿಂದ ಪೆಟ್ರೋಲ್, ಡೀಸೆಲ್ ಬೆಲೆ ಸ್ಥಿರವಾಗಿದೆ.

ದರ ಬದಲಾವಣೆ ಮಾಡದಿರುವುದಕ್ಕೆ ಕಾರಣ ಏನು ಎಂಬ ಪ್ರಶ್ನೆಗೆ ಕೇಂದ್ರ ಇಂಧನ ಸಚಿವ ಹರದೀಪ್ ಸಿಂಗ್ ಪುರಿ ಅವರು ಶುಕ್ರವಾರ, ಕಚ್ಚಾ ತೈಲ ದರವು ಹಲವು ವರ್ಷಗಳ ಗರಿಷ್ಠ ಮಟ್ಟ ತಲುಪಿದ್ದಾಗಲೂ ದೇಶದಲ್ಲಿ ಬೆಲೆ ಏರಿಕೆ ಮಾಡದಿದ್ದುದನ್ನು ಉಲ್ಲೇಖಿಸಿದ್ದರು. ಆದರೆ, ಏಪ್ರಿಲ್ 6ರ ನಂತರದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಬದಲಾವಣೆ ಮಾಡದಿದ್ದುದರಿಂದ ಆದ ನಷ್ಟ ಎಷ್ಟೆಂಬುದನ್ನು ಅವರು ವಿವರಿಸಲಿಲ್ಲ.

ಹಣದುಬ್ಬರ ನಿಯಂತ್ರಿಸಲು ಸರ್ಕಾರದ ನೆರವಾಗುವ ಉದ್ದೇಶದಿಂದ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್, ಡೀಸೆಲ್ ಬೆಲೆಯನ್ನು ಕಚ್ಚಾ ತೈಲದ ಬೆಲೆಗೆ ಅನುಗುಣವಾಗಿ ಐದು ತಿಂಗಳಿಗೂ ಹೆಚ್ಚು ಅವಧಿಯಿಂದ ಬದಲಾಯಿಸಿಲ್ಲ.

'ಈಗ ಪೆಟ್ರೋಲ್ ಮಾರಾಟದಿಂದ ಲಾಭ ಆಗುತ್ತಿದೆ. ಡೀಸೆಲ್ ಮಾರಾಟದಿಂದ ನಷ್ಟವಿಲ್ಲದ ಸ್ಥಿತಿ ತಲುಪಲು ತುಸು ಸಮಯ ಬೇಕು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಐದು ತಿಂಗಳಿಗೂ ಅಧಿಕ ಅವಧಿಯ ನಷ್ಟವನ್ನು ಸರಿದೂಗಿಸಿಕೊಳ್ಳಲು ಕಂಪನಿಗಳಿಗೆ ಅವಕಾಶ ಮಾಡಿಕೊಡುವ ಕಾರಣ, ತಕ್ಷಣಕ್ಕೆ ಪೆಟ್ರೋಲ್, ಡೀಸೆಲ್ ಬೆಲೆ ಇಳಿಕೆಯಾಗಲಿಕ್ಕಿಲ್ಲ ಎಂದು ಮೂಲಗಳು ಹೇಳಿವೆ.

ಈಗ ಎಷ್ಟಿದೆ ದರ?

ಭಾರತವು ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಸರಾಸರಿ ಬೆಲೆಯು ಸೆಪ್ಟೆಂಬರ್ 8ಕ್ಕೆ 88 ಡಾಲರ್ ಆಗಿತ್ತು.

ಸರಾಸರಿ ಬೆಲೆಯು ಏಪ್ರಿಲ್‌ನಲ್ಲಿ 102.97 ಡಾಲರ್, ಮೇ ತಿಂಗಳಲ್ಲಿ 109.51 ಡಾಲರ್, ಜೂನ್‌ನಲ್ಲಿ 116.01 ಡಾಲರ್ ಆಗಿತ್ತು.

ಜುಲೈನಲ್ಲಿ ಸರಾಸರಿ ಬೆಲೆ ಇಳಿಕೆ (105.49 ಡಾಲರ್) ಶುರುವಾಯಿತು. ಆಗಸ್ಟ್‌ನಲ್ಲಿ 97.40 ಡಾಲರ್ ಹಾಗೂ ಸೆಪ್ಟೆಂಬರ್‌ನಲ್ಲಿ ಇದುವರೆಗೆ 92.87 ಡಾಲರ್ ಆಗಿದೆ.

ಎಲೆಕ್ಟ್ರಾನಿಕ್ಸ್ ಉಪಕರಣಗಳ ಮಾರಾಟ ಹೆಚ್ಚಳ ನಿರೀಕ್ಷೆ

ನವದೆಹಲಿ (ಪಿಟಿಐ): ಈ ಬಾರಿಯ ಹಬ್ಬದ ಋತುವಿನಲ್ಲಿ ಗೃಹೋಪಯೋಗಿ ಮತ್ತು ಗ್ರಾಹಕ ಬಳಕೆ ಉತ್ಪನ್ನಗಳ ಮಾರಾಟವು ಶೇಕಡ 35ರವರೆಗೆ ಬೆಳವಣಿಗೆ ಕಾಣುವ ನಿರೀಕ್ಷೆಯನ್ನು ಕಂಪನಿಗಳು ಹೊಂದಿವೆ.

ಪ್ರೀಮಿಯಂ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವುದು ಹಾಗೂ ದರ ಏರಿಕೆಯನ್ನು ಗಮನದಲ್ಲಿ ಇಟ್ಟುಕೊಂಡು ಈ ಪ್ರಮಾಣದ ಬೆಳವಣಿಗೆ ನಿರೀಕ್ಷೆ ಮಾಡಿರುವುದಾಗಿ ಕಂಪನಿಗಳು ಹೇಳಿವೆ.

ಈ ಬಾರಿಯ ಹಬ್ಬದ ಋತುವಿನಲ್ಲಿ ಉತ್ಪನ್ನಗಳ ಮಾರಾಟವು ಕಳೆದ ವರ್ಷಕ್ಕಿಂತಲೂ ಉತ್ತಮವಾಗಿರಲಿದ್ದು, ಕೋವಿಡ್ ಸಾಂಕ್ರಾಮಿಕ ಬರುವುದಕ್ಕೂ ಹಿಂದಿನ ಮಾರಾಟ ಪ್ರಮಾಣ ಮೀರುವ ನಿರೀಕ್ಷೆ ಇದೆ ಎಂದು ಕಂಪನಿಗಳು ಹೇಳಿವೆ.

ಓಣಂ ಮೂಲಕ ಆರಂಭವಾಗುವ ಹಬ್ಬದ ಋತುವು ದೀಪಾವಳಿಗೆ ಕೊನೆಗೊಳ್ಳುತ್ತದೆ. ವಾರ್ಷಿಕವಾಗಿ ಆಗುವ ಉತ್ಪನ್ನಗಳ ಮಾರಾಟದ ಮೌಲ್ಯದ ಮೂರನೆಯ ಒಂದರಷ್ಟು ಈ ಅವಧಿಯಲ್ಲಿ ಆಗುತ್ತದೆ. ಇದು ₹ 75 ಸಾವಿರ ಕೋಟಿ ಇರುವ ಅಂದಾಜು ಮಾಡಲಾಗಿದೆ.

ವಾರಂಟಿ ವಿಸ್ತರಣೆ, ಸುಲಭ ಇಎಂಐ ಸೇರಿದಂತೆ ಗ್ರಾಹಕರನ್ನು ಆಕರ್ಷಿಸಲು ಪ್ರಚಾರದ ಮೇಲೆ ವೆಚ್ಚ ಮಾಡುವ ಕಡೆಗೂ ಕಂಪನಿಗಳು ಗಮನ ಹರಿಸುತ್ತಿವೆ. ಸಣ್ಣ ನಗರಗಳ ಜನರು ಈಗಲೂ ತೀರಾ ಅಗತ್ಯ ಅಲ್ಲದ ವಸ್ತುಗಳ ಖರೀದಿಗೆ ಹಿಂದೇಟು ಹಾಕುತ್ತಿದ್ದಾರೆ. ಹೀಗಾಗಿ ಅತಿ ಹೆಚ್ಚು ಬಳಕೆ ಆಗುವ ಉತ್ಪನ್ನಗಳ ಮಾರಾಟದ ಕಡೆಗೆ ಕಂಪನಿಗಳು ಗಮನ ಹರಿಸುತ್ತಿವೆ.

ಈ ಬಾರಿ ಎರಡಂಕಿ ಪ್ರಗತಿ ನಿರೀಕ್ಷೆ ಮಾಡುತ್ತಿರುವುದಾಗಿ ಪ್ಯಾನಸೋನಿಕ್ ಲೈಫ್ ಸಲ್ಯೂಷನ್ಸ್ ಇಂಡಿಯಾದ ಅಧ್ಯಕ್ಷ ಮನಿಶ್ ಶರ್ಮ ಹೇಳಿದ್ದಾರೆ.

ಇ.ವಿ. ಕಡೆ ಹೆಚ್ಚು ಗಮನ: ಮಹೀಂದ್ರ

ನವದೆಹಲಿ (ಪಿಟಿಐ): 'ಐದು ವರ್ಷಗಳಲ್ಲಿ ಕಂಪನಿಯ ಒಟ್ಟಾರೆ ಎಸ್‌ಯುವಿಗಳಲ್ಲಿ ವಿದ್ಯುತ್ ಚಾಲಿತ ಎಸ್‌ಯುವಿ ಪಾಲು ಶೇಕಡ 20ರಿಂದ ಶೇ 30ರವರೆಗೆ ಇರುವಂತೆ ಯೋಜನೆ ರೂಪಿಸಲಾಗುತ್ತಿದೆ' ಎಂದು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ರಾಜೇಶ್ ಜೆಜುರಿಕರ್ ಹೇಳಿದ್ದಾರೆ.

'ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳ ಬಳಕೆ ಹೆಚ್ಚಾಗುತ್ತಿದ್ದು, ಹೊಸ ಉತ್ಪನ್ನಗಳ ಬಿಡುಗಡೆ ಮತ್ತು ಆ ಕ್ಷೇತ್ರದಲ್ಲಿ ಹೂಡಿಕೆ ಮಾಡುವತ್ತ ಕಂಪನಿ ಗಮನ ಹರಿಸಿದೆ' ಎಂದು ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹430

ಎಸ್‌ಐಪಿ ಹೂಡಿಕೆಯ ಐದು ವಿಧಗಳು

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಶಿಸ್ತುಬದ್ಧ ಹೂಡಿಕೆ ಮೂಲಕ ಸಂಪತ್ತು ವೃದ್ಧಿಸಿಕೊಳ್ಳಲು ಇರುವ ಉತ್ತಮ ಮಾರ್ಗಗಳಲ್ಲಿ ಮ್ಯೂಚುವಲ್ ಫಂಡ್ ವ್ಯವಸ್ಥಿತ ಹೂಡಿಕೆ ಯೋಜನೆಯೂ (ಎಸ್‌ಐಪಿ) ಒಂದು. ಎಸ್‌ಐಪಿಯಲ್ಲಿ ಐದು ಪ್ರಮುಖ ವಿಧಗಳಿವೆ. ಎಸ್‌ಐಪಿ ವಿಧಗಳನ್ನು ತಿಳಿಯುವುದರಿಂದ ನೀವು ಯಾವ ರೀತಿಯ ಹೂಡಿಕೆಯನ್ನು ಆಯ್ಕೆ ಮಾಡಬೇಕು ಎನ್ನುವ ಸ್ಪಷ್ಟತೆ ಸಿಗುತ್ತದೆ.

ಕ್ರಮಬದ್ಧವಾಗಿ ಹೂಡಿಕೆ ಮಾಡಬೇಕು ಎನ್ನುವವರಿಗೆ 'ಎಸ್‌ಐಪಿ' ಒಳ್ಳೆಯ ಆಯ್ಕೆ. 'ಎಸ್‌ಐಪಿ' ಎನ್ನುವುದು ಹೂಡಿಕೆ ಉತ್ಪನ್ನವಲ್ಲ; ಅದು ಹೂಡಿಕೆಯ ವಿಧಾನ. ಪೂರ್ವನಿಗದಿತ ದಿನದಂದು, ಪೂರ್ವನಿಗದಿತ ಮೊತ್ತವನ್ನು ಸ್ವಯಂಚಾಲಿತವಾಗಿ ಹೂಡಿಕೆ ಉತ್ಪನ್ನವೊಂದಕ್ಕೆ ವರ್ಗಾಯಿಸುವ ವಿಧಾನ 'ಎಸ್‌ಐಪಿ'. ಮ್ಯೂಚುವಲ್ ಫಂಡ್ ಹೂಡಿಕೆಗಳಲ್ಲಿ ಎಸ್‌ಐಪಿ ವಿಧಾನ ಹೆಚ್ಚು ಚಾಲ್ತಿಯಲ್ಲಿದೆ. ಇದರಲ್ಲಿನ ಪ್ರಮುಖ ವಿಧಗಳು ಹೀಗಿವೆ:

1. ರೆಗ್ಯೂಲರ್ ಎಸ್‌ಐಪಿ: ರೆಗ್ಯೂಲರ್ ಎಸ್‌ಐಪಿ ಅತ್ಯಂತ ಸರಳವಾದ ಹೂಡಿಕೆ ವಿಧಾನ. ಇದರಲ್ಲಿ ಹೂಡಿಕೆದಾರ ಪ್ರತಿ ತಿಂಗಳಿಗೊಮ್ಮೆ ನಿಗದಿತ ಮೊತ್ತವನ್ನು ಹೂಡಿಕೆ ಮಾಡುತ್ತಾ ಹೋಗುತ್ತಾನೆ. ತಿಂಗಳಿಗೊಮ್ಮೆ, ಎರಡು ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ, ಆರು ತಿಂಗಳಿಗೊಮ್ಮೆ... ಹೀಗೆ ಅನುಕೂಲಕ್ಕೆ ತಕ್ಕಂತೆ ಅವಧಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ಪ್ರತಿ ದಿನ ಅಥವಾ ವಾರಕ್ಕೊಮ್ಮೆ ಹೂಡಿಕೆ ಮಾಡುವ ಎಸ್‌ಐಪಿ ಆಯ್ಕೆಗಳೂ ಇವೆ. ಆದರೆ ಅವು ಅಷ್ಟು ಉತ್ತಮ ಆಯ್ಕೆಗಳಲ್ಲ.

ರೆಗ್ಯೂಲರ್ ಎಸ್‌ಐಪಿ ಆಯ್ಕೆ ಮಾಡಿಕೊಳ್ಳುವಾಗ ಎಷ್ಟು ವರ್ಷಕ್ಕೆ ಎಸ್‌ಐಪಿ ಮಾಡುತ್ತೀರಿ, ಪ್ರತಿ ತಿಂಗಳು ಹೂಡಿಕೆ ಮಾಡುವ ಮೊತ್ತವೆಷ್ಟು ಇತ್ಯಾದಿ ಮಾಹಿತಿಯನ್ನು ನಮೂದಿಸಬೇಕು. ರೆಗ್ಯೂಲರ್ ಎಸ್‌ಐಪಿಯಲ್ಲಿ ಹೂಡಿಕೆ ಅವಧಿಯಲ್ಲಿ ಹೂಡಿಕೆ ಮಾಡುವ ಮೊತ್ತವನ್ನು ಬದಲಾವಣೆ ಮಾಡಲು ಆಗದು. ಉದಾಹರಣೆಗೆ, ಮ್ಯೂಚುವಲ್ ಫಂಡ್ ಒಂದರಲ್ಲಿ ಪ್ರತಿ ತಿಂಗಳ 10ನೆಯ ತಾರೀಕಿನಂದು ನೀವು ₹ 2000 ಹೂಡಿಕೆ ಮಾಡಲು ನಿರ್ಧರಿಸಿದ್ದರೆ, ಪ್ರತಿ ತಿಂಗಳು ಅದನ್ನು ಮುಂದುವರಿಸಿಕೊಂಡು ಹೋಗುವ ಪ್ರಕ್ರಿಯೆಯನ್ನು ರೆಗ್ಯೂಲರ್ ಎಸ್‌ಐಪಿ ಎನ್ನಬಹುದು.

2. ಟಾಪ್ ಅಪ್ ಎಸ್‌ಐಪಿ: ಟಾಪ್ ಅಪ್ ಎಸ್‌ಐಪಿಯಲ್ಲಿ ಹೂಡಿಕೆ ಮಾಡುವ ಮೊತ್ತವನ್ನು ಕಾಲಕಾಲಕ್ಕೆ ಹೆಚ್ಚಿಸಲು ಅವಕಾಶವಿದೆ. ಇದನ್ನು ಸ್ಟೆಪ್ ಅಪ್ ಎಸ್‌ಐಪಿ ಎಂದೂ ಕರೆಯಲಾಗುತ್ತದೆ. ಹಲವು ಕಂಪನಿಗಳು ಟಾಪ್ ಅಪ್ ಎಸ್‌ಐಪಿಗೆ ಅವಕಾಶ ಮಾಡಿಕೊಡುತ್ತವೆ. ಟಾಪ್ ಅಪ್ ಎಸ್‌ಐಪಿ ಆಯ್ಕೆ ಮಾಡಿದಾಗ ನಮ್ಮ ಆದಾಯ ಹೆಚ್ಚಳಕ್ಕೆ ತಕ್ಕಂತೆ ಎಸ್‌ಐಪಿ ಮೊತ್ತ ಹೆಚ್ಚಿಸಿಕೊಳ್ಳಬಹುದು. ಹಾಗಾಗಿ ಈ ಮಾದರಿಯ ಎಸ್‌ಐಪಿಗಳು ಜನಪ್ರಿಯವಾಗುತ್ತಿವೆ.

ಉದಾಹರಣೆಗೆ ಹೂಡಿಕೆದಾರನೊಬ್ಬ ಪ್ರತಿ ತಿಂಗಳು ₹ 10 ಸಾವಿರ ಹೂಡಿಕೆ ಮಾಡುತ್ತಿದ್ದು ವರ್ಷದ ಬಳಿಕ ಹೂಡಿಕೆ ಮೊತ್ತವನ್ನು ₹ 1 ಸಾವಿರದಷ್ಟು ಹೆಚ್ಚಿಸಲು ನಿರ್ಧರಿಸಿದ್ದರೆ, 13ನೇ ತಿಂಗಳಿನಿಂದ ಎಸ್‌ಐಪಿ ಮೊತ್ತವು ₹ 11 ಸಾವಿರ ಆಗುತ್ತದೆ. ಬೆಲೆ ಏರಿಕೆ ಪ್ರಮಾಣ ಮೀರಿ ಲಾಭ ಗಳಿಸಲು ಈ ರೀತಿಯ ಟಾಪ್ ಅಪ್ ಎಸ್‌ಐಪಿ ನೆರವಿಗೆ ಬರುತ್ತದೆ.

3. ಫ್ಲೆಕ್ಸಿಬಲ್ ಎಸ್‌ಐಪಿ: ಹೆಸರೇ ಹೇಳುವಂತೆ ಫ್ಲೆಕ್ಸಿಬಲ್ ಎಸ್‌ಐಪಿಯಲ್ಲಿ ನಿಮ್ಮ ಅನುಕೂಲಕ್ಕೆ ತಕ್ಕಂತೆ ಹೂಡಿಕೆ ಮೊತ್ತ ಹೊಂದಿಸಿಕೊಳ್ಳುವ ಅವಕಾಶವಿರುತ್ತದೆ. ನಿಮ್ಮ ಬಳಿ ಹೆಚ್ಚಿಗೆ ಹಣವಿದ್ದಾಗ ಮ್ಯೂಚುವಲ್ ಫಂಡ್ ಕಂಪನಿಗೆ ತಿಳಿಸಿ ಎಸ್‌ಐಪಿ ಮೊತ್ತವನ್ನು ನಿರ್ದಿಷ್ಟ ಅವಧಿಯಲ್ಲಿ ಹೆಚ್ಚಿಸಿಕೊಳ್ಳಬಹುದು. ಒಂದೊಮ್ಮೆ ನಿಮಗೆ ಹಣದ ಕೊರತೆ ಎದುರಾದರೆ, ಹೂಡಿಕೆ ಮೊತ್ತ ಕಡಿಮೆ ಮಾಡಿಕೊಳ್ಳಬಹುದು.

4. ಪರ್ಪೆಚುವಲ್ ಎಸ್‌ಐಪಿ: ಎಸ್‌ಐಪಿ ಹೂಡಿಕೆ ಆರಂಭಿಸುವಾಗ ಅರ್ಜಿಯಲ್ಲಿ ಎಷ್ಟು ಅವಧಿಗೆ ಹೂಡಿಕೆ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕು. ಇಲ್ಲದಿದ್ದರೆ ಅದು ಪರ್ಪೆಚುವಲ್ ಎಸ್‌ಐಪಿ ಆಗುತ್ತದೆ. ಅಂದರೆ ಅದು ಅನಿರ್ದಿಷ್ಟ ಅವಧಿಯ ಹೂಡಿಕೆಯಾಗುತ್ತದೆ. ದೀರ್ಘಾವಧಿಗೆ ಹೂಡಿಕೆ ಮಾಡುವವರಿಗೆ ಪರ್ಪೆಚುವಲ್ ಎಸ್‌ಐಪಿ ಸರಿಹೊಂದುತ್ತದೆ.

5. ಟ್ರಿಗರ್ ಎಸ್‌ಐಪಿ: ಹೂಡಿಕೆಗಳ ಬಗ್ಗೆ ಸಾಕಷ್ಟು ಮಾಹಿತಿ ಇರುವವರು, ಷೇರು ಮಾರುಕಟ್ಟೆಯ ಬಗ್ಗೆ ಅರಿವಿರುವವರು ಟ್ರಿಗರ್ ಎಸ್‌ಐಪಿ ವಿಧಾನ ಬಳಸುತ್ತಾರೆ. ಷೇರು ಸೂಚ್ಯಂಕ ನಿರ್ದಿಷ್ಟ ಮಟ್ಟಕ್ಕಿಂತ ಕೆಳಗಿಳಿದಾಗ ಹೂಡಿಕೆ ಹಿಂಪಡೆಯಬೇಕು ಎನ್ನುವ ಸೂಚನೆ ಅಥವಾ ಸೂಚ್ಯಂಕ ಮೇಲೆ ಹೋಗುತ್ತಿರುವಾಗ ಎಸ್‌ಐಪಿ ಆರಂಭಿಸಬೇಕು ಎನ್ನುವ ಸೂಚನೆಯನ್ನು ಟ್ರಿಗರ್ ಎಸ್‌ಐಪಿ ಅಡಿಯಲ್ಲಿ ಕೊಡಬಹುದು. ಸರಳವಾಗಿ ಹೇಳುವುದಾದರೆ ಮಾರುಕಟ್ಟೆ ಏರಿಳಿತಗಳು ಮತ್ತು ಕೆಲವು ಲೆಕ್ಕಾಚಾರಗಳನ್ನು ಆಧರಿಸಿ ಎಸ್‌ಐಪಿ ಹೂಡಿಕೆ ನಿರ್ಧರಿಸುವ ವಿಧಾನ ಟ್ರಿಗರ್ ಎಸ್‌ಐಪಿ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಷೇರುಪೇಟೆ

ಮತ್ತೆ ಜಿಗಿದ ಸೂಚ್ಯಂಕಗಳು

ಸೆಪ್ಟೆಂಬರ್ 9ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ. 59,793 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 1.68ರಷ್ಟು ಗಳಿಕೆ ಕಂಡಿದೆ. 17,833 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.68ರಷ್ಟು ಜಿಗಿದಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಖರೀದಿ ಉತ್ಸಾಹ, ತೈಲ ಬೆಲೆ ಇಳಿಕೆ, ಭಾರತ 2029ರ ವೇಳೆಗೆ ಜಗತ್ತಿನ 3ನೇ ಬಲಿಷ್ಠ ಅರ್ಥ ವ್ಯವಸ್ಥೆಯಾಗಲಿದೆ ಎನ್ನುವ ಎಸ್‌ಬಿಐ ವರದಿ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಪುಟಿದೇಳಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಸೂಚ್ಯಂಕದ ಎಲ್ಲ ವಲಯಗಳು ಸಕಾರಾತ್ಮಕ ಗಳಿಕೆ ದಾಖಲಿಸಿವೆ. ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 3.48ರಷ್ಟು, ಬ್ಯಾಂಕ್ ಮತ್ತು ಲೋಹ ವಲಯ ತಲಾ ಶೇ 2ರಷ್ಟು, ಆರೋಗ್ಯ ವಲಯ, ಬಂಡವಾಳ ಸರಕು, ತೈಲ ಮತ್ತು ಅನಿಲ ಸೂಚ್ಯಂಕಗಳು ಶೇ 1.5ರಿಂದ ಶೇ 2ರಷ್ಟು ಗಳಿಸಿಕೊಂಡಿವೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಸುಮಾರು 36 ಷೇರುಗಳು ಕಳೆದ ವಾರ ಸಕಾರಾತ್ಮಕ ಫಲಿತಾಂಶ ಕೊಟ್ಟಿವೆ. ಶ್ರೀ ಸಿಮೆಂಟ್ ಶೇ 16.6ರಷ್ಟು, ಟೆಕ್ ಮಹೀಂದ್ರ ಶೇ 6.64ರಷ್ಟು, ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ ಶೇ 6.52ರಷ್ಟು, ಭಾರತ್ ಪೆಟ್ರೋಲಿಯಂ ಶೇ 5.14ರಷ್ಟು ಮತ್ತು ಎಕ್ಸಿಸ್ ಬ್ಯಾಂಕ್, ಸಿಪ್ಲಾ, ಏರ್‌ಟೆಲ್, ಇನ್ಫೊಸಿಸ್ ತಲಾ ಶೇ 4ರಷ್ಟು ಹೆಚ್ಚಳ ದಾಖಲಿಸಿವೆ.

ಬಜಾಜ್ ಆಟೊ, ಟಾಟಾ ಮೋಟರ್ಸ್, ನೆಸ್ಲೆ ಕ್ರಮವಾಗಿ ಶೇ 4.51, ಶೇ 3.49 ಮತ್ತು ಶೇ 2.69ರಷ್ಟು ಕುಸಿದಿವೆ.

ಮುನ್ನೋಟ: ಕೈಗಾರಿಕಾ ಉತ್ಪಾದನೆ ಸೂಚ್ಯಂಕ ಮತ್ತು ಗ್ರಾಹಕ ಬೆಲೆ ಸೂಚ್ಯಂಕದ ಅಂಕಿ ಅಂಶಗಳು ಬಿಡುಗಡೆಯಾಗಲಿವೆ. ಸೆಪ್ಟೆಂಬರ್ 14ರಂದು ಸಗಟು ಬೆಲೆ ಸೂಚ್ಯಂಕದ ದತ್ತಾಂಶ ಹೊರಬೀಳಲಿದೆ. ಇವಲ್ಲದೆ, ಅಮೆರಿಕದ ಹಣದುಬ್ಬರ ಪ್ರಮಾಣ, ಚಿಲ್ಲರೆ ಮಾರಾಟ ದತ್ತಾಂಶ, ಉದ್ಯೋಗ ಸೃಷ್ಟಿ ಮತ್ತು ಕೈಗಾರಿಕಾ ಉತ್ಪಾದನೆಯ ಮಾಹಿತಿ ಲಭಿಸಲಿದೆ. ಮೇಲಿನ ಅಂಶಗಳು ಮಾರುಕಟ್ಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹325-692

ದ್ವಿತಳಿ (ಬಿ.ವಿ) ₹333-780

ಸಂಕ್ಷಿಪ್ತ ಸುದ್ದಿ

ವಿದರ್ಭದಲ್ಲಿ 72 ಗಂಟೆಯಲ್ಲಿ ಏಳು ರೈತರ ಆತ್ಮಹತ್ಯೆ

ಮುಂಬೈ: ಮಹಾರಾಷ್ಟ್ರದ ವಿದರ್ಭ ಪ್ರದೇಶದಲ್ಲಿ ಕಳೆದ ಮೂರು ದಿನಗಳಿಂದ 7 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ರಾಜ್ಯ ಸರ್ಕಾರ ನೇಮಿಸಿದ ವಸಂತರಾವ್ ನಾಯಕ್ ಶೆಟ್ಟಿ ಸ್ವಾವಲಂಬನ್ ಮಿಷನ್ ಅಧ್ಯಕ್ಷ ಕಿಶೋರ್ ತಿವಾರಿ ತಿಳಿಸಿದ್ದಾರೆ.

'2022ರಲ್ಲಿ 1,060 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಪೈಕಿ ಕಳೆದ 13 ದಿನಗಳಲ್ಲಿ 26 ರೈತರು ಆತ್ಮಹತ್ಯೆ ಮಾಡಿಕೊಂಡರೆ, ಅದರಲ್ಲಿ 14 ಆತ್ಮಹತ್ಯೆಗಳು ಏಳು ದಿನಗಳಲ್ಲಿ ವರದಿಯಾಗಿವೆ' ಎಂದು ತಿವಾರಿ ಹೇಳಿದರು.

ಈ ಭಾಗದಲ್ಲಿ ಸುರಿದ ದಾಖಲೆ ಪ್ರಮಾಣದ ಮಳೆಯಿಂದ ಅಪಾರ ಪ್ರಮಾಣದ ಬೆಳೆ ನಾಶವಾಗಿದೆ. ಕಳೆದ 25 ವರ್ಷಗಳಲ್ಲಿ ಪಶ್ಚಿಮ ವಿದರ್ಭದಲ್ಲಿ ಹತ್ತಿ ಮತ್ತು ಸೋಯಾಬೀನ್ ರೈತರಲ್ಲಿ 28 ಸಾವಿರಕ್ಕೂ ಹೆಚ್ಚು ಆತ್ಮಹತ್ಯೆಗಳು ವರದಿಯಾಗಿವೆ. ಆದರೆ, ಈಗ ಪೂರ್ವ ವಿದರ್ಭದಲ್ಲಿ ಭತ್ತದ ರೈತರು ಅದೇ ದಾರಿ ಹಿಡಿದಿದ್ದಾರೆ ಎಂದು ಅವರು ಹೇಳಿದರು.

ದಾಖಲೆ ಮುರಿದ 'ವಂದೇ ಭಾರತ' ರೈಲು

ನವದೆಹಲಿ: ಸೆಮಿ ಹೈಸ್ಪೀಡ್ ರೈಲು 'ವಂದೇ ಭಾರತ' ಎಕ್ಸ್‌ಪ್ರೆಸ್ 52 ಸೆಕೆಂಡ್‌ಗಳಲ್ಲಿ ಗಂಟೆಗೆ 100 ಕಿ.ಮೀ. ನಷ್ಟು ವೇಗ ಸಾಧಿಸುವ ಮೂಲಕ ಬುಲೆಟ್ ಟ್ರೇನ್‌ನ ದಾಖಲೆಯನ್ನು ಮುರಿದಿದೆ.

ಅಹಮದಾಬಾದ್–ಮುಂಬೈ ನಡುವೆ ಶುಕ್ರವಾರ ಈ ರೈಲಿನ ಪರೀಕ್ಷಾರ್ಥ ಸಂಚಾರ ನಡೆಯಿತು. ಗಂಟೆಗೆ 130 ಕಿ.ಮೀ ವೇಗದೊಂದಿಗೆ ತಡೆರಹಿತವಾಗಿ ಚಲಿಸಿದ ರೈಲು, ಈ ನಗರಗಳ ನಡುವಿನ 491 ಕಿ.ಮೀ. ದೂರವನ್ನು 5 ಗಂಟೆ 14 ನಿಮಿಷಗಳಲ್ಲಿ ಕ್ರಮಿಸಿತು ಎಂದು ರೈಲ್ವೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಿಗದಿತ ವೇಳಾಪಟ್ಟಿ ಹಾಗೂ ನಿಲುಗಡೆಗಳೊಂದಿಗೆ ಸಂಚರಿಸಿದ ಸಂದರ್ಭದಲ್ಲಿ ಇಷ್ಟೇ ದೂರವನ್ನು ಈ ರೈಲು 6 ಗಂಟೆಗಿಂತ ಕಡಿಮೆ ಅವಧಿಯಲ್ಲಿ ಕ್ರಮಿಸಲಿದೆ ಎಂದೂ ತಿಳಿಸಿದ್ದಾರೆ.

ನಿರ್ಲಕ್ಷಿತ ವರ್ಗಕ್ಕೆ ಸಿಕ್ಕ ಗೆಲುವು: ಗುಲಾಂ ಅಲಿ

ಜಮ್ಮು (ಪಿಟಿಐ): ರಾಜ್ಯಸಭೆಗೆ ನಾಮನಿರ್ದೇಶನಗೊಂಡಿರುವುದಕ್ಕೆ ಹರ್ಷ ವ್ಯಕ್ತ ಪಡಿಸಿರುವ ಗುಜ್ಜರ್ ಸಮುದಾಯದ ಜಮ್ಮು–ಕಾಶ್ಮೀರದ ಬಿಜೆಪಿ ನಾಯಕ ಗುಲಾಂ ಅಲಿ ಖತಾನಾ ಅವರು '70 ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಒಳಗಾದ ಸಮುದಾಯದ ಸಾಮಾನ್ಯ ಕಾರ್ಯಕರ್ತನನ್ನು ನಾಮನಿರ್ದೇಶನ ಮಾಡಲಾಗಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ತಮ್ಮ ನಾಮನಿರ್ದೇಶನಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಗುಲಾಂ ಅಲಿ ಧನ್ಯವಾದ ಅರ್ಪಿಸಿದ್ದಾರೆ.

ಗುಲಾಂ ಅಲಿ ಖತಾನಾ ಅವರನ್ನು ಶನಿವಾರ ರಾಜ್ಯಸಭಾ ಸದಸ್ಯರಾಗಿ ನಾಮನಿರ್ದೇಶನ ಮಾಡಲಾಗಿದೆ.

ಮತ್ಸ್ಯರಾಶಿ... ಮುಂಬೈನ ಅತಿದೊಡ್ಡ ಮೀನು ಮಾರುಕಟ್ಟೆ ಭಾವೂಚಾ ಧಕ್ಕೆಯಲ್ಲಿ ಭಾನುವಾರ ಕಂಡುಬಂದ ಮೀನುಗಳ ರಾಶಿ —ಪಿಟಿಐ ಚಿತ್ರ

ನಟ ಸಲ್ಮಾನ್ ಖಾನ್ ಕೊಲೆಗೂ ಸಂಚು: ಡಿಜಿಪಿ

ಪಲಾಯನಕ್ಕೆ ಯೋಜಿಸಿದ್ದ ಶೂಟರ್

ಚಂಡೀಗಡ (ಪಿಟಿಐ): ಭಾರತ-ನೇಪಾಳ ಗಡಿಯಲ್ಲಿ ಬಂಧಿಸಲಾದ ಗಾಯಕ ಸಿಧು ಮೂಸೆವಾಲಾ ಹತ್ಯೆಯ ಆರನೇ ಶೂಟರ್ ದೀಪಕ್ ಅಲಿಯಾಸ್ ಮುಂಡಿ, ನಕಲಿ ಪಾಸ್‌ಪೋರ್ಟ್ ಬಳಸಿ ದುಬೈಗೆ ಪಲಾಯನ ಮಾಡಲು ಯೋಜಿಸಿದ್ದ ಎಂದು ಪಂಜಾಬ್ ಪೊಲೀಸ್ ಮುಖ್ಯಸ್ಥ ಗೌರವ್ ಯಾದವ್ ಭಾನುವಾರ ತಿಳಿಸಿದ್ದಾರೆ.

ದರೋಡೆಕೋರ ಲಾರೆನ್ಸ್ ಬಿಷ್ಣೋಯ್ ನಿರ್ದೇಶನದ ಮೇರೆಗೆ ಶೂಟರ್ ದೀಪಕ್ ಸಹಾಯಕ ಕಪಿಲ್ ಪಂಡಿತ್, ಬಾಲಿವುಡ್ ನಟ ಸಲ್ಮಾನ್ ಖಾನ್ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ ಎಂದು ಹೇಳಿದ್ದಾರೆ.

ಕೇಂದ್ರೀಯ ತನಿಖಾ ದಳ ಮತ್ತು ಪಂಜಾಬ್ ಪೊಲೀಸ್ ಇಲಾಖೆ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ದೀಪಕ್ ಅಲಿಯಾಸ್ ಮುಂಡಿ ಹಾಗೂ ಆತನ ಇಬ್ಬರು ಸಹಚರರನ್ನು ಪಶ್ಚಿಮ ಬಂಗಾಳ–ನೇಪಾಳ ಗಡಿಯಲ್ಲಿ ಶನಿವಾರ ಬಂಧಿಸಲಾಗಿತ್ತು. ಸಹಚರರಾದ ಕಪಿಲ್ ಪಂಡಿತ್ ಮತ್ತು ರಾಜಿಂದರ್ ವಿರುದ್ಧ ಶೂಟರ್‌ಗಳಿಗೆ ಶಸ್ತ್ರಾಸ್ತ್ರ ಒದಗಿಸಿದ ಆರೋಪವಿದೆ.

'ಮೂವರು ಆರೋಪಿಗಳನ್ನು ಪ್ರಾಥಮಿಕ ವಿಚಾರಣೆ ನಡೆಸಲಾಗಿದ್ದು, ಈ ಹಿಂದೆ ನೇಪಾಳದಲ್ಲಿ ನೆಲೆಸಿದ್ದ ರಾಜಿಂದರ್, ಪ್ರಕರಣದ ಮಾಸ್ಟರ್ ಮೈಂಡ್ ಕೆನಡಾ ಮೂಲದ ದರೋಡೆಕೋರ ಗೋಲ್ಡಿ ಬ್ರಾರ್ ಜತೆ ಸಂಪರ್ಕದಲ್ಲಿದ್ದ ಎಂಬುದು ಗೊತ್ತಾಗಿದೆ. ಮುಂಡಿ ಮತ್ತು ಕಪಿಲ್ ಪಂಡಿತ್ ಹರಿಯಾಣ, ರಾಜಸ್ಥಾನ, ಉತ್ತರ ಪ್ರದೇಶದಿಂದ ತಮ್ಮ ನೆಲೆ ಬದಲಿಸಿಕೊಂಡು ಪಶ್ಚಿಮ ಬಂಗಾಳ ತಲುಪಿದ್ದರು. ನಕಲಿ ಪಾಸ್‌ಪೋರ್ಟ್ ಬಳಸಿ ನೇಪಾಳದ ಮೂಲಕ ದುಬೈ ತಲುಪಲು ಯೋಜಿಸಿದ್ದರು' ಎಂದು ಡಿಜಿಪಿ ತಿಳಿಸಿದರು.

ದೆಹಲಿ ಪೊಲೀಸರು ಈ ಹಿಂದೆ ಮೂವರು ಶೂಟರ್‌ಗಳನ್ನು ಬಂಧಿಸಿದ್ದರು ಹಾಗೂ ಪಂಜಾಬ್ ಪೊಲೀಸರು ಇಬ್ಬರನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ 23 ಜನರನ್ನು ಬಂಧಿಸಲಾಗಿದ್ದು, ಒಟ್ಟು 35 ಆರೋಪಿಗಳನ್ನು ಹೆಸರಿಸಲಾಗಿದೆ. ಪಂಜಾಬ್‌ನ ಮಾನ್ಸ ಜಿಲ್ಲೆಯಲ್ಲಿ ಮೇ 29ರಂದು ಮೂಸೆವಾಲಾ ಅವರನ್ನು ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದರು.

ದಲಿತ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ

ಪಿಲಿಭಿತ್, ಉತ್ತರ ಪ್ರದೇಶ (ಪಿಟಿಐ): 'ದಲಿತ ಬಾಲಕಿ ಮೇಲೆ ಇಬ್ಬರು ವ್ಯಕ್ತಿಗಳು ಸಾಮೂಹಿಕ ಅತ್ಯಾಚಾರ ನಡೆಸಿ ಬಳಿಕ ಡೀಸೆಲ್ ಸುರಿದು ಬೆಂಕಿ ಹಚ್ಚಿದ್ದಾರೆ. ಆಕೆಯ ಸ್ಥಿತಿ ಗಂಭೀರವಾಗಿದ್ದು, ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ದಿನೇಶ್‌ಕುಮಾರ್ ಪ್ರಭು ತಿಳಿಸಿದ್ದಾರೆ.

'ಪಿಲಿಭಿತ್ ಜಿಲ್ಲೆಯ ಮಾಧವ್ ತಾಂಡಾದಲ್ಲಿ ಸೆಪ್ಟೆಂಬರ್ 7ರಂದು ಘಟನೆ ಜರುಗಿದೆ. ಬಾಲಕಿಯ ಕುಟುಂಬದವರು ನೀಡಿದ ದೂರಿನ ಆಧಾರದಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಭಾನುವಾರ ಹೇಳಿದ್ದಾರೆ.

ರಸ್ತೆ ಅಪಘಾತ: ಸಾವಿನ ಪ್ರಮಾಣ ತಗ್ಗಿಸಲು ಮಾರ್ಗಸೂಚಿ ಬಿಡುಗಡೆ

ನವದೆಹಲಿ (ಪಿಟಿಐ): ರಸ್ತೆ ಅಪಘಾತಗಳ ಸಂದರ್ಭದಲ್ಲಿ ಸಾವುಗಳು ಹಾಗೂ ಗಾಯಗಳಾಗುವ ಪ್ರಮಾಣವನ್ನು ತಗ್ಗಿಸುವುದಕ್ಕೆ ಸಂಬಂಧಿಸಿ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಬೈಕ್ ಹಾಗೂ ತ್ರಿಚಕ್ರ ವಾಹನಗಳ ಸವಾರರು ಹೆಲ್ಮೆಟ್‌ಅನ್ನು ಸಮರ್ಪಕವಾಗಿ ಬಳಸುವುದಕ್ಕೆ ಹಾಗೂ ಪಾದಚಾರಿಗಳ ಸುರಕ್ಷತೆ ಬಗ್ಗೆ ಒತ್ತು ನೀಡಲು ಈ ಮಾರ್ಗಸೂಚಿಗಳಲ್ಲಿ ಹೇಳಲಾಗಿದೆ.

ಐಐಟಿ–ದೆಹಲಿ ಹಾಗೂ ಡಬ್ಲ್ಯುಎಚ್‌ಒದ ಸುರಕ್ಷತೆ ಹಾಗೂ ಸಂಚಾರ ಘಟಕ ಜಂಟಿಯಾಗಿ ಈ ಮಾರ್ಗಸೂಚಿಗಳನ್ನು ಸಿದ್ಧಪಡಿಸಿವೆ. ರಸ್ತೆ ಸಂಚಾರ ಮತ್ತು ಸುರಕ್ಷತೆಗೆ ಸಂಬಂಧಿಸಿ ಎಲ್ಲ ರಾಷ್ಟ್ರಗಳು ನೀತಿ ರೂಪಿಸುವಾಗ ಈ ಮಾರ್ಗಸೂಚಿಗಳನ್ನು ಅನುಸರಿಸಬೇಕು ಎಂದು ಡಬ್ಲ್ಯುಎಚ್‌ಒ ತಿಳಿಸಿದೆ.

'ಬೈಕ್ ಸವಾರರು ಮುಖವನ್ನು ಪೂರ್ತಿಯಾಗಿ ಮುಚ್ಚುವ ಹೆಲ್ಮೆಟ್‌ಗಳನ್ನು ಧರಿಸುವುದರಿಂದ ಮಾರಣಾಂತಿಕ ಗಾಯಗಳಾಗುವ ಪ್ರಮಾಣ ಶೇ 64ರಷ್ಟು ಹಾಗೂ ಮಿದುಳಿಗೆ ಪೆಟ್ಟಾಗುವುದು ಶೇ 74ರಷ್ಟು ತಗ್ಗುವುದು ಎಂದು ತಜ್ಞರು ಹೇಳಿದ್ದಾರೆ.

'ರಸ್ತೆ ಅಪಘಾತಗಳಲ್ಲಿ ಸಂಭವಿಸುತ್ತಿರುವ ಸಾವುಗಳ ಈಗಿನ ಪ್ರಮಾಣವನ್ನು 2030ರ ವೇಳೆಗೆ ಅರ್ಧದಷ್ಟು ಕಡಿಮೆ ಮಾಡಬೇಕಿದೆ. ಇದಕ್ಕಾಗಿ ಸುರಕ್ಷಿತ ಸಂಚಾರ ವ್ಯವಸ್ಥೆಯನ್ನು ರೂಪಿಸಬೇಕು. ಈ ನಿಟ್ಟಿನಲ್ಲಿ ನೂತನ ಮಾರ್ಗಸೂಚಿಗಳು ಪ್ರಮುಖ ಪಾತ್ರ ವಹಿಸುತ್ತವೆ' ಎಂದು ಡಬ್ಲ್ಯುಎಚ್‌ಒದ ಸುರಕ್ಷತೆ ಹಾಗೂ ಸಂಚಾರ ಘಟಕದ ಮುಖ್ಯಸ್ಥ ಡಾ.ಎನ್‌ಹಾನ್ ಟ್ರ್ಯಾನ್ ಹೇಳಿದ್ದಾರೆ.

ಶೆಲ್ ಕಂಪನಿಗಳ 'ಸೂತ್ರಧಾರ' ಬಂಧನ

ನವದೆಹಲಿ (ಪಿಟಿಐ): ಚೀನಾ ಜೊತೆ ನಂಟು ಹೊಂದಿರುವ ಹತ್ತಾರು ಶೆಲ್ ಕಂಪನಿಗಳನ್ನು (ಸಕ್ರಿಯವಾದ ಚಟುವಟಿಕೆ ಇಲ್ಲದ ಕಂಪನಿಗಳು) ಭಾರತದಲ್ಲಿ ಆರಂಭಿಸಿದ ಪ್ರಕರಣದ ಹಿಂದಿನ ಸೂತ್ರಧಾರನನ್ನು ಗಂಭೀರ ವಂಚನೆ ಪ್ರಕರಣಗಳ ತನಿಖಾ ಕಚೇರಿಯು (ಎಸ್‌ಎಫ್‌ಐಒ) ಬಂಧಿಸಿದೆ.

ಗಂಭೀರವಾದ ಹಣಕಾಸಿನ ಅಪರಾಧಗಳನ್ನು ಎಸಗುತ್ತಿವೆ ಎನ್ನಲಾದ ಚೀನಾ ಶೆಲ್ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತಿರುವ ನಡುವೆಯೇ ಈ ಬಂಧನ ಆಗಿದೆ. ದೋರ್ತ್‌ಸೆ ಹೆಸರಿನ ವ್ಯಕ್ತಿಯೊಬ್ಬರನ್ನು ಬಂಧಿಸಿರುವುದಾಗಿ ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಭಾನುವಾರ ತಿಳಿಸಿದೆ. ಈ ವ್ಯಕ್ತಿಯು ಜಿಲ್ಲಿಯನ್ ಇಂಡಿಯಾ ಲಿ. ಹೆಸರಿನ ಕಂಪನಿಯ ಆಡಳಿತ ಮಂಡಳಿಯಲ್ಲಿ ಇದ್ದಾರೆ.

ಗುರುಗ್ರಾಮದ ಜಿಲ್ಲಿಯನ್ ಕನ್ಸಲ್ಟೆಂಟ್ಸ್ ಇಂಡಿಯಾ ಪ್ರೈ.ಲಿ., ಬೆಂಗಳೂರಿನ ಫಿನಿಂಟಿ ಪ್ರೈ. ಲಿ. ಮತ್ತು ಹೈದರಾಬಾದ್‌ನ ಹುಸಿಸ್ ಕನ್ಸಲ್ಟಿಂಗ್ ಲಿ. ಸೇರಿದ ಕಚೇರಿಗಳಲ್ಲಿ ಸಚಿವಾಲಯ ಅಧಿಕಾರಿಗಳು ಶೋಧ ನಡೆಸಿದ ನಂತರದಲ್ಲಿ ಈ ಬಂಧನ ಆಗಿದೆ.

ಈ ಶೆಲ್ ಕಂಪನಿಗಳು ದೇಶದ ಹಣಕಾಸಿನ ಭದ್ರತೆಗೆ ಧಕ್ಕೆ ತರುವ ರೀತಿಯಲ್ಲಿ ಗಂಭೀರ ಸ್ವರೂಪದ ಅಪರಾಧಗಳಲ್ಲಿ ತೊಡಗಿರಬಹುದು ಎಂಬುದನ್ನು ಇದುವರೆಗಿನ ತನಿಖೆಯು ತೋರಿಸಿದೆ ಎಂದು ಸಚಿವಾಲಯ ಹೇಳಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು, ಹುಡುಗರು ಬೇಕಾಗಿದ್ದಾರೆ ಊಟವಸತಿಯಿದೆ 10,000 - 15,000. 8951315839, 9880545002

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC,PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225388/ 9611225266

ಭವಿಷ್ಯ

Astrology

★||ಶ್ರೀಚಾಮುಂಡೇಶ್ವರಿ||★ ಜ್ಯೋತಿಷ್ಯರು ಸ್ತ್ರೀಪುರುಷ ಪ್ರೇಮವಿಚಾರ, ಪ್ರೀತಿಯಲ್ಲಿಮೋಸ, ಆರೋಗ್ಯ, ದಾಂಪತ್ಯ, ಸಾಲಭಾದೆ, ಸಂತಾನಫಲ, ಮದುವೆ, ಇನ್ಯಾವುದೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. 8050061378

ಇತರೆ

Books & Periodicals

ಶಾಂತಿ ಮತ್ತು ಕ್ಷಮೆಯ ಧರ್ಮವಾಗಿದೆ 'ಇಸ್ಲಾಮ್'. ಇಸ್ಲಾಮಿನ ಕುರಿತು ಸಂಶಯವೇ? ಮುಸ್ಲಿಮರ ಬಗ್ಗೆ ತಪ್ಪು ಕಲ್ಪನೆಯೇ? ಧರ್ಮ ಅಧ್ಯಯನದ ಜಿಜ್ಞಾಸೆಯೇ?ಓದಲು ಪುಸ್ತಕಗಳನ್ನು ರವಾನಿಸಲಾಗುವುದು. ಪೂರ್ಣ ಹೆಸರು, ಸ್ಪಷ್ಟ ವಿಳಾಸ ಹಾಗೂ ದೂರವಾಣಿ ಸಂಖ್ಯೆಯೊಂದಿಗೆ ಬರೆಯಿರಿ. ಇಸ್ಮಿಕಾ, ಪಿ.ಬಿ.ನಂ. 229, ಮಂಗಳೂರು-1, ಮೊಬೈಲ್:9060341799. Email:info@ismika.com, Web:www.ismika.com

ಪ್ರವಾಸ

Travel

ಉಜ್ಜಯಿನಿ ಓಂಕಾರೇಶ್ವರ್ ಖಜರಾವೊ ಚಿತ್ರಕೂಟ ಕಾಶಿ,ಗಯಾ,ಪ್ರಯಾಗ 21.10.2022 04.11.2022, ರಿಂದ 12/16 ದಿನಗಳು. ದೆಹಲಿ ವೈಷ್ಣವಿದೇವಿ ಶಕ್ತಿಪೀಠಗಳು ಕುಲು,ಮನಾಲಿ 31.10.2022 05.11.2022 ರಿಂದ 12/16 ದಿನಗಳು. ಸೋಮನಾಥ್ ಮಾತ್ರಗಯಾ,ದ್ವಾರಕಾ ಅಷ್ಟ ಜ್ಯೋತಿರ್ಲಿಂಗಗಳು ಅಲಹಾಬಾದ್ 31.10.2022 05.11.2022 ರಿಂದ 15/18 ದಿನಗಳು. ಗೌಹಾಟಿ,ಸಿಕ್ಕಿಂ,ಡಾರ್ಜಲಿಂಗ್ ಕೊಲ್ಕತ್ತ,ಪುರಿ ಭುವನೇಶ್ವರ್10.11.2022 25.11.2022 ರಿಂದ 14/18 ದಿನಗಳು. ಸಂಪರ್ಕಿಸಿ: 26508925, 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
THE RcsS SPOKEN ENGLISH ACADEMY
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
The RCSS
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

16.11.2022 11.01.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.11.2022 13.01.2023 ದುಬೈ 5 ದಿನಗಳು. 27.11.2022 ನೇಪಾಳ 8 ದಿನಗಳು. 06.10.2022 06.11.2022 09.12.2022 ಕಾಶಿ,ಗಯಾ,ಅಯೋಧ್ಯ 7 ದಿನಗಳು. 13.10.2022 12.11.2022 12.12.2022 ಗುಜರಾತ್ 8 ದಿನಗಳು. 06.11.2022 05.12.2022 ರಾಜಸ್ಥಾನ್ 9 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು-3 9448402248 7022547922

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ರೈಲು/ಬಸ್ಸಿನಲ್ಲಿ ದೆಹಲಿ,ಹರಿದ್ವಾರ್ ಚಾರ್‌ಧಾಮ್ ಸಮೇತ 26.09.2022 10.10.2022 ನೇಪಾಳ,ಮುಕ್ತಿನಾಥ ಪೋಕ್ರಾ,ಲುಂಬಿನಿ 09.10.2022 12 ದಿನಗಳು. 09.11.2022 ಸೋಮನಾಥ ದ್ವಾರಕ ಓಂಕಾರೇಶ್ವರ್ ಭಾವನಗರ. 06.10.2022 ರ್‍ರಾಮೇಶ್ವರ ಮಧುರೈ ಕನ್ಯಾಕುಮಾರಿ ಇತ್ಯಾದಿ. (ಒಟ್ಟಿಗೆ ಹದಿನೈದು ಸೀಟು ರಿಸರ್ವ್ ಮಾಡಿದರೆ ಒಂದು ಸೀಟು ಉಚಿತ) ಸಂಪರ್ಕಿಸಿ. ವಿಷ್ಣು ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು.4 26574131 9448508708

★ಶ್ರೇಯಸ್ ಟೂರ್ಸ್★ 08.10.2022 12ದಿನಗಳು ಅಖಂಡ ಗುಜರಾತ್‌ರಾಜ್ಯ ಪ್ರವಾಸ.12.10.2022 10ದಿನಗಳು ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ. 01.11.2022 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ.04.11.2022 10ದಿನಗಳು ಅಖಂಡ ನೇಪಾಳರಾಷ್ಟ್ರ(ಮುಕ್ತಿನಾಥ) 25.10.2022 8ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.8073824856 9206979202 6366322639

Travel Agencies

10/11/2022 6/10 ದಿನಗಳು AC ಬಸ್ಸಿನಲ್ಲಿ ಕಾಶಿ, ಗಯಾ, ಬುದ್ಧಗಯಾ, ಅಲಹಾಬಾದ್, ಅಯೊಧ್ಯ 15500/ (ಕೆಲವೇ ಸೀಟುಗಳಿವೆ) ಅಂಡಮಾನ್ ಹವಳದ್ವೀಪ 5/8 ದಿನಗಳು ಹಡಗು/ವಿಮಾನದಲ್ಲಿ. ರಾಯಲ್ ಪ್ಯಾಕೇಜ್. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್9739847429/ 9845560219.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಶಿಕ್ಷಣಕ್ಕೆ

ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ: 9845114560

ಪ್ರಜಾವಾಣಿ

BOOK YOUR CLASSIFIEDS ADVERTISEMENT

PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*

For More Details Contact:
Ph:080- 45557160 | 163 | 164 |
9731810277 | 9901641752 | 9845114560 | 9886213331

dhclassifieds@deccanherald.co.in www.dhclassifieds.com

ದೆಹಲಿ ಸರ್ಕಾರ– ಲೆಫ್ಟಿನೆಂಟ್ ಗವರ್ನರ್ ಸಕ್ಸೇನಾ ನಡುವೆ ಮತ್ತೊಂದು ಸಂಘರ್ಷಕ್ಕೆ ಹಾದಿ

ಬಸ್ ಖರೀದಿ ಹಗರಣ: ಸಿಬಿಐ ತನಿಖೆ

ನವದೆಹಲಿ (ಪಿಟಿಐ): ದೆಹಲಿ ಸಾರಿಗೆ ನಿಗಮಕ್ಕೆ (ಡಿಟಿಸಿ) ಒಂದು ಸಾವಿರ ಬಸ್‌ಗಳ ಖರೀದಿಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಸಲ್ಲಿಕೆಯಾಗಿದ್ದ ದೂರನ್ನು ತನಿಖೆಗಾಗಿ ಸಿಬಿಐಗೆ ವರ್ಗಾಯಿಸಲು ದೆಹಲಿ ಲೆಫ್ಟಿನೆಂಟ್ ಗವರ್ನರ್ (ಎಲ್.ಜಿ) ವಿ.ಕೆ. ಸಕ್ಸೇನಾ ಅವರು ಒಪ್ಪಿಗೆ ಕೊಟ್ಟಿದ್ದಾರೆ.

ಈ ಕುರಿತ ದೂರು ಇದೇ ಜೂನ್‌ನಲ್ಲಿ ಸಕ್ಸೇನಾ ಅವರಿಗೆ ಸಲ್ಲಿಕೆಯಾಗಿತ್ತು. ಡಿಟಿಸಿಗೆ ಬಸ್ ಖರೀದಿಗೆ ಟೆಂಡರ್ ಮತ್ತು ಖರೀದಿ ಸಮಿತಿಯ ಅಧ್ಯಕ್ಷರಾಗಿ ಸಾರಿಗೆ ಸಚಿವರನ್ನು ನೇಮಕ ಮಾಡಲಾಗಿದೆ ಎಂಬ ವಿಚಾರಕ್ಕೆ ದೂರಿನಲ್ಲಿ ಒತ್ತು ಕೊಡಲಾಗಿದೆ. ಡಿಐಎಂಟಿಎಸ್‌ಯನ್ನು (ದೆಹಲಿ ಬಹುವಿಧಾನ ಸಾರಿಗೆ ವ್ಯವಸ್ಥೆ) ಟೆಂಡರ್ ಪ್ರಕ್ರಿಯೆಯ ಸಮಾಲೋಚನಾ ಸಂಸ್ಥೆಯನ್ನಾಗಿ ನೇಮಕ ಮಾಡಿರುವ ಉದ್ದೇಶವೇ ಅಕ್ರಮ ನಡೆಸುವುದಾಗಿತ್ತು ಎಂದೂ ದೂರಿನಲ್ಲಿ ಹೇಳಲಾಗಿದೆ.

2019ರ ಜುಲೈನಲ್ಲಿ ಸಾವಿರ ಬಸ್‌ಗಳನ್ನು ಖರೀದಿಸಲಾಗಿತ್ತು. ಬಸ್‌ಗಳ ನಿರ್ವಹಣೆಗಾಗಿ 2020ರಲ್ಲಿ ಮಾರ್ಚ್‌ನಲ್ಲಿ ಮತ್ತೊಂದು ಕರಾರನ್ನು ಮಾಡಿಕೊಳ್ಳಲಾಗಿತ್ತು. ದೆಹಲಿ ಸರ್ಕಾರದ ಇಲಾಖೆಗಳ ಪ್ರತಿಕ್ರಿಯೆ ಮತ್ತು ಶಿಫಾರಸುಗಳಿಗಾಗಿ ಈ ದೂರನ್ನು ಮುಖ್ಯ ಕಾರ್ಯದರ್ಶಿಗೆ ಜುಲೈ 22ರಂದು ಸಲ್ಲಿಸಲಾಗಿತ್ತು ಎಂದು ಮೂಲಗಳು ಹೇಳಿವೆ.

ಬಸ್ ಖರೀದಿ ಮತ್ತು ನಿರ್ವಹಣೆ ಗುತ್ತಿಗೆಯಲ್ಲಿ ಕೆಲವು ಅವ್ಯವಹಾರ ನಡೆದಿದೆ ಎಂದು ಮುಖ್ಯ ಕಾರ್ಯದರ್ಶಿಯವರು ಆಗಸ್ಟ್ 19ರಂದು ವರದಿ ನೀಡಿದ್ದರು. ಅದರ ಬಳಿಕ, ದೂರನ್ನು ಸಿಬಿಐಗೆ ವರ್ಗಾಯಿಸಲಾಗಿದೆ. ಸಿಬಿಐ ಪ್ರಾಥಮಿಕ ಹಂತದ ತನಿಖೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

ಬಸ್ ಖರೀದಿಯಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪದ ಬಗ್ಗೆ ಪರಿಶೀಲನೆ ನಡೆಸಲು ನಿವೃತ್ತ ಐಎಎಸ್ ಅಧಿಕಾರಿ ಒ.ಪಿ. ಅಗರ್‌ವಾಲ್ ನೇತೃತ್ವದ ಸಮಿತಿಯನ್ನು ರಚಿಸಲಾಗಿತ್ತು. ಆಗಸ್ಟ್‌ನಲ್ಲಿ ಈ ಸಮಿತಿಯು ವರದಿ ಕೊಟ್ಟಿತ್ತು. 'ಟೆಂಡರ್ ಮತ್ತು ಖರೀದಿಯಲ್ಲಿ ಪ್ರಕ್ರಿಯೆಗಳ ಉಲ್ಲಂಘನೆ ಆಗಿದೆ' ಎಂದು ಈ ವರದಿಯಲ್ಲಿ ಹೇಳಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಈ ಪ್ರಕರಣದಲ್ಲಿ ಒಂದೇ ಒಂದು ಬಸ್ ಖರೀದಿಸಲಾಗಿಲ್ಲ, ಯಾರಿಗೂ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ಹೀಗಿರುವಾಗ ಭ್ರಷ್ಟಾಚಾರ ನಡೆಯುವುದು ಹೇಗೆ ಸಾಧ್ಯ?

ಸೌರಭ್ ಭಾರದ್ವಾಜ್
ಎಎಪಿ ಮುಖ್ಯ ವಕ್ತಾರ

ಮೊದಲು, ಅಬಕಾರಿ ನೀತಿ ಜಾರಿಯಲ್ಲಿನ ಅಕ್ರಮ ಬಯಲಿಗೆ ಬಂತು. ಈಗ ಬಸ್ ಖರೀದಿಯಲ್ಲಿನ ಅವ್ಯವಹಾರ ಬೆಳಕಿಗೆ ಬಂದಿದೆ

ಗೌರವ ಭಾಟಿಯಾ, ಬಿಜೆಪಿ ವಕ್ತಾರ

ಕೇಜ್ರಿವಾಲ್ ಭ್ರಷ್ಟ ಬಿಜೆಪಿ ಆರೋಪ

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಭ್ರಷ್ಟಾಚಾರ ಒಂದೇ ಅರ್ಥದ ಪದಗಳಾಗಿವೆ ಎಂದು ಬಿಜೆಪಿ ಭಾನುವಾರ ಹೇಳಿದೆ.

ದೆಹಲಿ ಸರ್ಕಾರದ ಪ್ರತಿಯೊಂದು ಇಲಾಖೆಯೂ ಭ್ರಷ್ಟ ಚಟುವಟಿಕೆಗಳಲ್ಲಿ ತೊಡಗಿವೆ. ಕೇಜ್ರಿವಾಲ್ ಅವರ ಗೆಳೆಯರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಟೆಂಡರ್ ಮತ್ತು ಗುತ್ತಿಗೆಗಳನ್ನು ರೂಪಿಸಲಾಗಿದೆ ಎಂದು ಬಿಜೆಪಿ ವಕ್ತಾರ ಗೌರವ ಭಾಟಿಯಾ ಆರೋಪಿಸಿದ್ದಾರೆ. 'ನೀವು ಅತ್ಯಂತ ಪ್ರಾಮಾಣಿಕ ಎಂದು ಹೇಗೆ ಹೇಳಿಕೊಳ್ಳುವಿರಿ? ನೀವು ಭ್ರಷ್ಟ ಎಂಬುದನ್ನು ಜನರು ಅರ್ಥ ಮಾಡಿಕೊಂಡಿದ್ದಾರೆ. ಮುಖ್ಯಮಂತ್ರಿಯಾಗಿ ಮುಂದುವರಿಯಲು ನಿಮಗೆ ಯಾವುದೇ ಹಕ್ಕು ಇಲ್ಲ' ಎಂದು ಭಾಟಿಯಾ ಅವರು ಕೇಜ್ರಿವಾಲ್‌ಗೆ ಹೇಳಿದ್ದಾರೆ.

ಗಮನ ಬೇರೆಡೆ ಸೆಳೆಯುವ ತಂತ್ರ: ಎಎಪಿ

ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರ ಮೇಲೆ ಕೇಳಿ ಬಂದಿರುವ ಆರೋಪಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯುವುದಕ್ಕಾಗಿ ಅವರು ಬಸ್ ಖರೀದಿಯಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪದ ಕುರಿತು ಸಿಬಿಐ ತನಿಖೆಗೆ ಒಪ್ಪಿಗೆ ಕೊಟ್ಟಿದ್ದಾರೆ ಎಂದು ಎಎಪಿ ಹೇಳಿದೆ.

ಸಿಬಿಐ ಅಥವಾ ಇನ್ನಾವುದೇ ಸಂಸ್ಥೆಯಿಂದ ತನಿಖೆ ನಡೆಸುವುದಕ್ಕೆ ವಿರೋಧ ಇಲ್ಲ ಎಂದೂ ಎಎಪಿ ತಿಳಿಸಿದೆ.

ಪ್ರಕರಣದ ಬಗ್ಗೆ ತನಿಖೆ ಆರಂಭವಾದ ಕೂಡಲೇ ಬಸ್ ಖರೀದಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ. ಎರಡು ವರ್ಷದಿಂದ ಇದು ಹೀಗೆಯೇ ಇದೆ ಎಂದು ಎಎಪಿ ಹೇಳಿದೆ.

ನೌಕಾಪಡೆಗೆ ತಾರಾಗಿರಿ ಬಲ

ಪ್ರಜಾವಾಣಿ ವಾರ್ತೆ

ಮುಂಬೈ: ರೇಡಾರ್‌ಗಳ ಕಣ್ತಪ್ಪಿಸಿ ಸಂಚರಿಸುವ ಸಾಮರ್ಥ್ಯದ, ಭಾರತೀಯ ನೌಕಾಪಡೆಯ ಪ್ರಾಜೆಕ್ಟ್–17 ಯೋಜನೆಯ ಮೂರನೇ ನೌಕೆ 'ತಾರಾಗಿರಿ' ಭಾನುವಾರ ಅರಬ್ಬಿ ಸಮುದ್ರಕ್ಕೆ ಇಳಿಯಿತು. 'ನೀಲಗಿರಿ ಶ್ರೇಣಿ'ಯ ನೌಕೆಗಳಲ್ಲಿ ಈ ನೌಕೆ ಮೂರನೆಯದ್ದಾಗಿದ್ದು, ಇದು ರಕ್ಷಣಾ ಸ್ವಾವಲಂಬನೆಯಲ್ಲಿ ಭಾರತದ ಮಹತ್ವದ ಹೆಜ್ಜೆ ಎಂದು ವಿಶ್ಲೇಷಿಸಲಾಗಿದೆ.

ಮುಂಬೈನ ಮಡಗಾಂವ್ ಡಾಕ್ ಶಿಪ್‌ಬಿಲ್ಡರ್ಸ್ (ಎಂಡಿಎಲ್) ಸಂಸ್ಥೆಯು ಈ ಸರಣಿಯ ನೌಕೆಗಳನ್ನು ನಿರ್ಮಿಸುತ್ತಿದೆ. ಯೋಜನೆಯ ಮೊದಲ ನೌಕೆ 'ನೀಲಗಿರಿ' 2019ರ ಸೆ. 28ರಂದು ಉದ್ಘಾಟನೆಗೊಂಡಿತ್ತು. 2024ರ ಆರಂಭದಲ್ಲಿ ಸಮುದ್ರದಲ್ಲಿ ಇದರ ಪರೀಕ್ಷೆ ಆರಂಭಗೊಳ್ಳುವ ನಿರೀಕ್ಷೆಯಿದೆ. ಎರಡನೇ ನೌಕೆ 'ಉದಯಗಿರಿ' 2022ರ ಮೇ 17ರಂದು ಉದ್ಘಾಟನೆಗೊಂಡಿತ್ತು. ಇದು 2024ರ ಕೊನೆಯ ಹೊತ್ತಿಗೆ ಪರೀಕ್ಷೆಗೆ ಒಳಪಡಲಿದೆ. ಭಾನುವಾರ ಉದ್ಘಾಟನೆಗೊಂಡ ತಾರಾಗಿರಿ ನೌಕೆಯನ್ನು 2025ರಲ್ಲಿ ನೌಕಾಪಡೆಗೆ ಹಸ್ತಾಂತರಿಸುವ ಸಾಧ್ಯತೆಯಿದೆ.

'ತಾರಾಗಿರಿ' ನೌಕೆಗೆ ಮುಂಬೈನಲ್ಲಿ ಭಾನುವಾರ ಚಾಲನೆ ನೀಡಲಾಯಿತು —ಪಿಟಿಐ ಚಿತ್ರ

ನೌಕೆಯ ಭಾಗಗಳನ್ನು ಪ್ರತ್ಯೇಕವಾಗಿ ತಯಾರಿಸಿ, ನಂತರ ಅವುಗಳನ್ನು ಒಟ್ಟುಗೂಡಿಸಿ ನೌಕೆ ನಿರ್ಮಾಣ ಮಾಡುವ ತಂತ್ರಜ್ಞಾನವನ್ನು (ಹಲ್ ಬ್ಲಾಕ್) ಇಲ್ಲಿ ಅನುಸರಿಸಲಾಗಿದೆ. ಭಾರತೀಯ ನೌಕಾಪಡೆಯ 'ಬ್ಯೂರೊ ಆಫ್ ನೇವಲ್ ಡಿಸೈನ್' ಘಟಕವು ತಾರಾಗಿರಿ ನೌಕೆಯನ್ನು ವಿನ್ಯಾಸ ಮಾಡಿದ್ದು, ಎಂಡಿಎಲ್ ಸಂಸ್ಥೆಯು ನಿರ್ಮಾಣದ ಜವಾಬ್ದಾರಿ ಹೊತ್ತಿದೆ. ಎರಡು ಗ್ಯಾಸ್ ಟರ್ಬೈನ್‌ಗಳು, 2 ಮುಖ್ಯ ಡೀಸೆಲ್ ಎಂಜಿನ್‌ಗಳ ಸಹಾಯದಿಂದ ನೌಕೆ ಸಂಚರಿಸುತ್ತದೆ. ಇದರ ನಿರ್ಮಾಣಕ್ಕೆ ಬಳಸಿರುವ ಉಕ್ಕನ್ನು ಸರ್ಕಾರಿ ಸ್ವಾಮ್ಯದ ಸೈಲ್ ಸಂಸ್ಥೆ ಪೂರೈಸಿದೆ.

ದೇಶೀಯವಾಗಿ ತಯಾರಿಸಲಾದ ಶಸ್ತ್ರಾಸ್ತ್ರ, ಸೆನ್ಸರ್‌ಗಳು, ಅತ್ಯಾಧುನಿಕ ಮಾಹಿತಿ ವ್ಯವಸ್ಥೆ ಮೊದಲಾದ ಸೌಲಭ್ಯಗಳನ್ನು ನೌಕೆಯಲ್ಲಿ ಅಳವಡಿಸಲಾಗಿದೆ. ಮೇಲ್ಮೈನಿಂದ ಮೇಲ್ಮೈಗೆ ಉಡ್ಡಯನ ಮಾಡಬಲ್ಲ ಸಾಮರ್ಥ್ಯದ ಸೂಪರ್‌ಸಾನಿಕ್ ಕ್ಷಿಪಣಿಯನ್ನು ಇದರಲ್ಲಿ ಅಳವಡಿಸಲಾಗುತ್ತದೆ. ಶತ್ರು ಯುದ್ಧವಿಮಾನಗಳು ಹಾಗೂ ಕ್ರೂಸ್ ಕ್ಷಿಪಣಿಗಳ ಬೆದರಿಕೆಯನ್ನು ಸಮರ್ಥವಾಗಿ ಎದುರಿಸುವ ವಾಯುರಕ್ಷಣಾ ಸಾಮರ್ಥ್ಯವನ್ನೂ ಈ ನೌಕೆ ಹೊಂದಿದೆ.

ಅಂಕಿ-ಅಂಶಗಳು

₹25,700 ಕೋಟಿ
ನೀಲಗಿರಿ ಶ್ರೇಣಿಯ ನಾಲ್ಕು ನೌಕೆಗಳ ನಿರ್ಮಾಣ ವೆಚ್ಚ

3,510 ಟನ್
ತಾರಾಗಿರಿ ನೌಕೆಯ ಅಂದಾಜು ತೂಕ

149.02 ಮೀ.
ನೌಕೆಯ ಉದ್ದ

17.8 ಮೀ.
ನೌಕೆಯ ಅಗಲ

'370ನೇ ವಿಧಿ ಹೆಸರಲ್ಲಿ ಜನರ ದಾರಿ ತಪ್ಪಿಸುವುದಿಲ್ಲ'

ಬೃಹತ್ ರ‍್ಯಾಲಿ ನಡೆಸಿದ ಆಜಾದ್

ಬಾರಾಮುಲ್ಲಾ (ಪಿಟಿಐ): ಕಾಂಗ್ರೆಸ್ ಅನ್ನು ಇತ್ತೀಚೆಗೆ ತೊರೆದಿರುವ ಗುಲಾಂ ನಬಿ ಆಜಾದ್ ಅವರು, '370ನೇ ವಿಧಿಯ ಹೆಸರಿನಲ್ಲಿ ನಾನು ಜನರನ್ನು ದಾರಿ ತಪ್ಪಿಸುವುದಿಲ್ಲ. ರದ್ದಾಗಿರುವ 370ನೇ ವಿಧಿಯನ್ನು ಪುನರ್ ಸ್ಥಾಪಿಸಲು ಸಂಸತ್ತಿನಲ್ಲಿ ಮೂರನೇ ಎರಡರಷ್ಟು ಬಹುಮತ ಸಾಬೀತಾಗಬೇಕು' ಎಂದು ಭಾನುವಾರ ಹೇಳಿದ್ದಾರೆ.

ತಮ್ಮ ಹೊಸ ಪಕ್ಷದ ಘೋಷಣೆ ಕುರಿತು ಸಿದ್ಧತೆ ನಡೆಸಿರುವ ಆಜಾದ್, ಇಲ್ಲಿನ ಡಾಕ್ ಬಂಗ್ಲೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿ, 'ಆಜಾದ್‌ಗೆ ಗೊತ್ತು ಯಾವುದು ಮಾಡಬಹುದು, ಯಾವುದು ಮಾಡಲಾಗದು ಎನ್ನುವುದು. ನಾನಾಗಲೀ, ಕಾಂಗ್ರೆಸ್ ಪಕ್ಷವಾಗಲೀ ಅಥವಾ ಮೂರು ಪ್ರಾದೇಶಿಕ ಪಕ್ಷಗಳಾಗಲೀ ನಿಮಗೆ 370ನೇ ವಿಧಿಯನ್ನು ಮರಳಿಸಲಾಗದು. ಟಿಎಂಸಿಯ ಮುಖ್ಯಸ್ಥೆ ಮಮತಾ ಬ್ಯಾನರ್ಜಿಯಾಗಲೀ ಅಥವಾ ಡಿಎಂಕೆ–ಎನ್‌ಸಿಪಿಯ ಮುಖ್ಯಸ್ಥರಾಗಲೀ ಇದನ್ನು ಮರಳಿಸಲಾಗದು. ನನಗೆ ನಿಯಂತ್ರಣವಿರದ ವಿಚಾರಗಳ ಬಗ್ಗೆ ನಾನು ಪ್ರಸ್ತಾಪಿಸುವುದಿಲ್ಲ' ಎಂದು ತಿಳಿಸಿದ್ದಾರೆ.

'ನಾನು 370ನೇ ವಿಧಿಯ ಬಗ್ಗೆ ಮಾತನಾಡುವುದಿಲ್ಲ ಎಂದು ಕೆಲವು ಜನರು ಹೇಳುತ್ತಾರೆ. 'ಆಜಾದ್, ಚುನಾವಣಾ ರಾಜಕೀಯಕ್ಕಾಗಿ ಜನರನ್ನು ಮರಳು ಮಾಡುವುದಿಲ್ಲ ಎಂಬುದನ್ನು ನಾನು ಅವರಿಗೆ ಹೇಳಲಿಚ್ಛಿಸುತ್ತೇನೆ. ನಾನು ನಿಮ್ಮನ್ನು ದಾರಿ ತಪ್ಪಿಸುವುದಿಲ್ಲ ಎಂದು ದೇವರ ಮುಂದೆ ಪ್ರಮಾಣ ಮಾಡುವೆ. ಅಂಥ ಯಾವುದೇ ವಿಚಾರಗಳನ್ನಾಗಲೀ, ಘೋಷಣೆಗಳನ್ನಾಗಲೀ ನಾನು ಪ್ರಸ್ತಾಪಿಸುವುದಿಲ್ಲ' ಎಂದು ಅವರು ಹೇಳಿದ್ದಾರೆ.

'ಕಳೆದ ಹತ್ತು ವರ್ಷಗಳಿಂದ ಕಾಂಗ್ರೆಸ್‌ಗೆ 85ಕ್ಕಿಂತ ಹೆಚ್ಚು ಲೋಕಸಭಾ ಸ್ಥಾನಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಎಲ್ಲ ರಾಜ್ಯಗಳಲ್ಲೂ ತನ್ನ ಸಾಮರ್ಥ್ಯ ಕಳೆದುಕೊಳ್ಳುತ್ತಿರುವ ಕಾಂಗ್ರೆಸ್ ರಾಜ್ಯಸಭೆಯಲ್ಲೂ ತನ್ನ ಸಾಮರ್ಥ್ಯ ಕಳೆದುಕೊಳ್ಳುತ್ತಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 350 ಸ್ಥಾನಗಳನ್ನು ಗಳಿಸುವ ಸಾಧ್ಯತೆ ಇಲ್ಲ. ಹಾಗಿರುವಾಗ ನಾನು ಅಷ್ಟೊಂದು ಸ್ಥಾನ ಗಳಿಸಲು ಸಾಧ್ಯವೇ? ಹಾಗಾಗಿ ಜನರ ದಾರಿ ತಪ್ಪಿಸುವುದೇಕೆ. ನಮ್ಮ ಕೈಲಿ ಸಾಧ್ಯವಾಗುವುದಷ್ಟನ್ನೇ ನಾನು ಜನರಿಗೆ ಹೇಳುವೆ' ಎಂದರು.

370ನೇ ವಿಧಿಯ ರದ್ದತಿ ಪರವಾಗಿ ಆಜಾದ್ ಮತ ಚಲಾಯಿಸಿದ್ದಾರೆ ಎಂಬ ಅಪ್ನಿ ಪಕ್ಷದ ಅಧ್ಯಕ್ಷ ಅಲ್ತಾಫ್ ಬುಖಾರಿ ಅವರ ಆರೋಪವನ್ನು ಉಲ್ಲೇಖಿಸಿದ ಅವರು, ಸಂಸತ್ತು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಬುಖಾರಿ ಮೊದಲು ಅರ್ಥಮಾಡಿಕೊಳ್ಳಬೇಕು ಎಂದು ಹೇಳಿದರು.

370ನೇ ವಿಧಿಯ ರದ್ದತಿಗಾಗಿ ಗೃಹ ಸಚಿವಾಲಯವು ತಂದ ಮಸೂದೆಯ ವಿರುದ್ಧ ನಾನು ಮತ ಚಲಾಯಿಸಿದ್ದೇನೆ ಎಂದೂ ಆಜಾದ್ ಅವರು ಹೇಳಿದರು.

ದಕ್ಷಿಣ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಭಾನುವಾರ ನಡೆದ ಸಾರ್ವಜನಿಕ ಸಭೆಯಲ್ಲಿ ಗುಲಾಂ ನಬಿ ಆಜಾದ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

'ಹತ್ತು ದಿನಗಳಲ್ಲಿ ಹೊಸ ಪಕ್ಷ ಘೋಷಣೆ'

'ಇನ್ನು ಹತ್ತು ದಿನಗಳ ಒಳಗೆ ನೂತನ ಪಕ್ಷವನ್ನು ಘೋಷಿಸುತ್ತೇನೆ' ಎಂದು ಗುಲಾಂ ನಬಿ ಆಜಾದ್ ಹೇಳಿದ್ದಾರೆ.

'ಹೊಸದಾಗಿ ರಚನೆಯಾಗಲಿರುವ ಪಕ್ಷಕ್ಕೆ 'ಆಜಾದ್' ಎನ್ನುವ ಹೆಸರು ಇಡಬೇಕೆಂಬ ಒತ್ತಾಯ ಕೇಳಿಬರುತ್ತಿದೆ. ಸದ್ಯಕ್ಕೆ ಹೆಸರನ್ನು ನಿರ್ಧರಿಸಿಲ್ಲ. ಆದರೆ, ಹೆಸರಿಗೆ ತಕ್ಕಂತೆ ಹೊಸ ಪಕ್ಷವು ಸ್ವತಂತ್ರ ಚಿಂತನೆ ಮತ್ತು ಸಿದ್ಧಾಂತವನ್ನು ಹೊಂದಿರಲಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ದೊರಕಿಸಿಕೊಡಲು, ಇಲ್ಲಿನ ಜನರ ಭೂಮಿಯ ಹಕ್ಕು ಮತ್ತು ಉದ್ಯೋಗಗಳಿಗೆ ಸಂಬಂಧಿಸಿದ ಹೋರಾಟವನ್ನು ಒಳಗೊಂಡಿರುತ್ತದೆ' ಎಂದೂ ಅವರು ಮಾಹಿತಿ ನೀಡಿದ್ದಾರೆ.

17ರಿಂದ ಮೋದಿ ಉಡುಗೊರೆಗಳ ಹರಾಜು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿಯವರಿಗೆ ಸಾರ್ವಜನಿಕರು, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ಕ್ರೀಡಾಪಟುಗಳು ಹಾಗೂ ಇತರರು ನೀಡಿರುವ 1,200ಕ್ಕೂ ಅಧಿಕ ಉಡುಗೊರೆಗಳ ಹರಾಜು ಪ್ರಕ್ರಿಯೆಯು ಇದೇ 17ರಿಂದ ಅಕ್ಟೋಬರ್ 2ರವರೆಗೆ ಆನ್‌ಲೈನ್‌ನಲ್ಲಿ ನಡೆಯಲಿದೆ.

'pmmementos.gov.in ವೆಬ್ ಪೋರ್ಟಲ್ ಮೂಲಕ ಹರಾಜು ಪ್ರಕ್ರಿಯೆ ನಡೆಸಲಾಗುತ್ತದೆ. ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ನೀಡಿರುವ ರಾಣಿ ಕಮಲಾಪತಿಯ ವಿಗ್ರಹ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಕೊಟ್ಟಿರುವ ಹನುಮಾನ್ ವಿಗ್ರಹ, ಸೂರ್ಯನ ಕಲಾಕೃತಿ ಸೇರಿ ₹100 ರಿಂದ ₹10 ಲಕ್ಷದವರೆಗಿನ ಮೂಲಬೆಲೆಯ ಹಲವು ಉಡುಗೊರೆಗಳನ್ನು ಹರಾಜಿನಲ್ಲಿಡಲಾಗಿದೆ. ಸಂಗ್ರಹವಾದ ಹಣವನ್ನು ನಮಾಮಿ ಗಂಗಾ ಯೋಜನೆಗೆ ನೀಡಲಾಗುತ್ತದೆ' ಎಂದು ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ನ ಮಹಾನಿರ್ದೇಶಕ ಹೇಳಿದ್ದಾರೆ.

ರಾಜ್ಯದ ಶಿಶಿರ್‌ಗೆ ಮೊದಲ ರ‍್ಯಾಂಕ್

ಒಂದನೇ ಪುಟದಿಂದ...

ಜೆಇಇ ಮೇನ್‌ನಲ್ಲಿ ಶಿಶಿರ್, ಅಖಿಲ ಭಾರತ ಮಟ್ಟದಲ್ಲಿ 56ನೇ ರ‍್ಯಾಂಕ್ ಪಡೆದಿದ್ದರು. ಅಲ್ಲದೆ, ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಸಿಇಟಿಯಲ್ಲಿ ನಾಲ್ಕನೇ ಮತ್ತು ಬಿ.ಫಾರ್ಮಾ ಪ್ರವೇಶಕ್ಕೆ ಮೊದಲ ರ‍್ಯಾಂಕ್ ಪಡೆದಿದ್ದರು.

ಲಕ್ಷ್ಮೀ ಸಾಯಿ ಲೋಹಿತ್ ರೆಡ್ಡಿ ಕೂಡಾ ನಾರಾಯಣ ಟೆಕ್ನೊ ಸಂಸ್ಥೆಯ ವಿದ್ಯಾರ್ಥಿ.

'ಪ್ರಜಾವಾಣಿ' ಜೊತೆ ಮಾತನಾಡಿದ ಶಿಶಿರ್, ಐಐಟಿ ಬಾಂಬೆ ಸೇರುವ ಬಯಕೆ ವ್ಯಕ್ತಪಡಿಸಿದರು. 'ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ವ್ಯಾಸಂಗ ಮಾಡಿ, ನವೋದ್ಯಮದ (ಸ್ಟಾರ್ಟ್–ಅಪ್) ಮೂಲಕ ಸಮಾಜಕ್ಕೆ ಕೊಡುಗೆ ನೀಡುವ ಗುರಿಯಿದೆ' ಎಂದರು. ಶಿಶಿರ್ ತಂದೆ ಮಾಧ್ಯಮ ಸಂಸ್ಥೆಯೊಂದರ ಉದ್ಯೋಗಿ, ತಾಯಿ ಗೃಹಿಣಿ.

'ಈ ಯಶಸ್ಸನ್ನು ಪ್ರೇರಣೆ ನೀಡಿದ ಪೋಷಕರಿಗೆ ಅರ್ಪಿಸುತ್ತೇನೆ. ಸೂಕ್ತ ಯೋಜನೆಯೊಂದಿಗೆ ಪರೀಕ್ಷೆಗೆ ತಯಾರಿ ನಡೆಸಲು ಮಾರ್ಗದರ್ಶನ ಮತ್ತು ನೆರವು ನೀಡಿದ ಆರ್ಗ್ಯಾನಿಕ್ ಕೆಮಿಸ್ಟ್ರಿ ವಿಷಯ ಪ್ರಾಧ್ಯಾಪಕ ರಾಮು ಸರ್ ಅವರಿಗೂ ಧನ್ಯವಾದ ಹೇಳಲೇಬೇಕು' ಎಂದರು.

'ಓದಿನ ಮಧ್ಯೆ ಒತ್ತಡದಿಂದ ಮುಕ್ತನಾಗಲು ಬ್ಯಾಡ್ಮಿಂಟನ್ ಆಡುತ್ತಿದ್ದೆ. ರುಬಿಕ್ಸ್ ಕ್ಯೂಬ್ ಸಮಸ್ಯೆ ಬಿಡಿಸಲು ಒಂದಷ್ಟು ಸಮಯ ಕಳೆಯುತ್ತಿದ್ದೆ. ಕೇವಲ ಪರೀಕ್ಷೆಗಾಗಿ ಓದುತ್ತಿರಲಿಲ್ಲ, ವಿಷಯ ಅರ್ಥಮಾಡಿಕೊಂಡು ಅಧ್ಯಯನ ಮಾಡುತ್ತಿದ್ದೆ. ಮುಖ್ಯವಾಗಿ ನಾನು ಕಲಿಕೆಯನ್ನು ಆನಂದಿಸುತ್ತೇನೆ' ಎಂದೂ ಹೇಳಿದರು.

ಬೆಂಗಳೂರಿನ ಅಲೆನ್ ಕೆರಿಯರ್ ಇನ್‌ಸ್ಟಿಟ್ಯೂಟ್‌ನ ವಿದ್ಯಾರ್ಥಿಯಾಗಿರುವ ವಿಶಾಲ್ ಬೈಸಾನಿ, ಕಾಮೆಡ್–ಕೆ ಪ್ರವೇಶ ಪರೀಕ್ಷೆಯಲ್ಲಿ ಮೊದಲ ರ‍್ಯಾಂಕ್ ಪಡೆದಿದ್ದರು. 'ಎರಡು ವರ್ಷದಿಂದ ಮಾರ್ಗದರ್ಶನ ನೀಡಿದ ಅಲೆನ್ ಸಂಸ್ಥೆಗೆ ಈ ಯಶಸ್ಸು ಸಲ್ಲಬೇಕು. ಓದಿನ ಕಡೆಗಿನ ನನ್ನ ಆಸಕ್ತಿ, ಪರೀಕ್ಷೆಯ ತಯಾರಿ ಕಂಡು ಸಂಸ್ಥೆಯವರಿಗೆ ಅತಿಯಾದ ವಿಶ್ವಾಸವಿತ್ತು. ಪೋಷಕರು, ಶಿಕ್ಷಕರ ಬೆಂಬಲದಿಂದ ಈ ಯಶಸ್ಸು ಸಾಧ್ಯವಾಗಿದೆ' ಎಂದು ಬೈಸಾನಿ ಪ್ರತಿಕ್ರಿಯಿಸಿದರು.

ವಿದ್ಯಾರ್ಥಿನಿಯರಲ್ಲಿ ತನಿಷ್ಕಾ ಪ್ರಥಮ

277 ಅಂಕ ಗಳಿಸಿದ ದೆಹಲಿ ವಲಯದ ತನಿಷ್ಕಾ ಕಾಬ್ರ ವಿದ್ಯಾರ್ಥಿನಿಯರಲ್ಲಿ ಮೊದಲ ಸ್ಥಾನದಲ್ಲಿದ್ದಾರೆ. ಇವರು ಒಟ್ಟು ರ‍್ಯಾಂಕ್ ಪಟ್ಟಿಯಲ್ಲಿ 16ನೆಯವರು.

ವಿವಿಧ 23 ಐಐಟಿಗಳಲ್ಲಿ ಪ್ರವೇಶಕ್ಕಾಗಿ ಈ ವರ್ಷ 16,598 ಸೀಟುಗಳು ಲಭ್ಯವಿವೆ. ಇವುಗಳಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಮೀಸಲಾಗಿರುವ ವಿಶೇಷ 1,567 ಸೀಟುಗಳೂ ಸೇರಿವೆ.

ಈ ವರ್ಷ ಪರೀಕ್ಷೆ ಆಯೋಜಿಸಿದ್ದ ಐಐಟಿ ಬಾಂಬೆ ಮೂಲಗಳ ಪ್ರಕಾರ, ಜೆಇಇ (ಅಡ್ವಾನ್ಸ್ಡ್) 1ನೇ ಮತ್ತು 2ನೇ ಪತ್ರಿಕೆಯ ಪರೀಕ್ಷೆಗೆ 1,55,538 ಅಭ್ಯರ್ಥಿಗಳು ಹಾಜರಾಗಿದ್ದರು. ಅಂತಿಮವಾಗಿ 6,516 ವಿದ್ಯಾರ್ಥಿನಿಯರೂ ಸೇರಿದಂತೆ 40,712 ಅಭ್ಯರ್ಥಿಗಳು ಪ್ರವೇಶಕ್ಕೆ ಅರ್ಹತೆ ಪಡೆದುಕೊಂಡಿದ್ದಾರೆ.

200 ದಿನ ಪೂರೈಸಿದ ಉಭಯ ದೇಶಗಳ ನಡುವಿನ ಯುದ್ಧ

ಇಝಿಯುಮ್ ಮರಳಿ ಉಕ್ರೇನ್ ವಶಕ್ಕೆ

ಕೀವ್, ಉಕ್ರೇನ್ (ಎಪಿ): ಕಳೆದ ಒಂದು ವಾರದಿಂದ ರಷ್ಯಾ ಪಡೆಗಳಿಗೆ ಪ್ರತಿರೋಧವನ್ನು ಒಡ್ಡುತ್ತಿರುವ ಉಕ್ರೇನ್ ಸೈನ್ಯ, ದೇಶದ ಪೂರ್ವಭಾಗದಲ್ಲಿ ಶತ್ರುಪಡೆಗಳನ್ನು ಹಿಮ್ಮೆಟ್ಟಿಸುವ ಮೂಲಕ ಭಾನುವಾರ ಮೇಲುಗೈ ಸಾಧಿಸಿದೆ.

ಹಾರ್ಕಿವ್ ಪ್ರಾಂತ್ಯದ ಇಝಿಯುಮ್ ನಗರವನ್ನು ಉಕ್ರೇನ್ ಪಡೆಗಳು ಮತ್ತೆ ತಮ್ಮ ವಶಕ್ಕೆ ಪಡೆದುಕೊಂಡಿವೆ.

ಭಾನುವಾರಕ್ಕೆ ಉಕ್ರೇನ್ ಮೇಲಿನ ರಷ್ಯಾ ದಾಳಿಗೆ 200 ದಿನಗಳು ಪೂರೈಸಿವೆ. ಈ ಅವಧಿಯಲ್ಲಿ ಉಕ್ರೇನ್ ಪಡೆಗಳಿಗೆ ಸಿಕ್ಕ ದೊಡ್ಡ ಗೆಲುವು ಇದಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಉಕ್ರೇನ್ ಪಡೆಗಳು ತನ್ನ ಸೈನಿಕರನ್ನು ಸುತ್ತುವರಿಯುವುದನ್ನು ತಡೆಯುವುದು ಹಾಗೂ ಆ ಮೂಲಕ ಗಮನಾರ್ಹ ಸಂಖ್ಯೆಯ ಶಸ್ತ್ರಾಸ್ತ್ರಗಳನ್ನು ತೊರೆಯಬೇಕಾದ ಅಪಾಯದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ರಷ್ಯಾ ಪಡೆಗಳು ಹಾರ್ಕಿವ್ ಪ್ರದೇಶದಿಂದ ಕಾಲ್ಕಿತ್ತಿವೆ ಎಂದು ಮೂಲಗಳು ಹೇಳಿವೆ.

ವೊಲೊಡಿಮಿರ್ ಝೆಲೆನ್‌ಸ್ಕಿ

'ರಷ್ಯಾ ಪಡೆಗಳು ಬೆನ್ನು ತೋರಿಸುವ ಮೂಲಕ ಇತ್ತೀಚಿನ ದಿನಗಳಲ್ಲಿ ಉತ್ತಮ ಪ್ರದರ್ಶನ ನೀಡುತ್ತಿವೆ' ಎಂದು ಅಣಕವಾಡಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ಈ ಕುರಿತ ವಿಡಿಯೊವೊಂದನ್ನು ಬಿಡುಗಡೆ ಮಾಡಿದ್ದಾರೆ.

ಈ ಬೆಳವಣಿಗೆ ಬಗ್ಗೆ ಪ್ರತಿಕ್ರಿಯಿಸಿರುವ ರಷ್ಯಾದ ರಕ್ಷಣಾ ಸಚಿವಾಲಯ, 'ಡೊನೆಟ್‌ಸ್ಕ್ ಪ್ರದೇಶದಲ್ಲಿ ನಿಯೋಜಿಸಿರುವ ಸೇನೆಗೆ ಮತ್ತಷ್ಟು ಬಲತುಂಬುವ ಉದ್ದೇಶದಿಂದ ಹಾರ್ಕಿವ್ ಹಾಗೂ ಇಝಿಯುಮ್ ಪ್ರದೇಶಗಳಿಂದ ಸೈನಿಕರನ್ನು ವಾಪಸು ಕರೆಸಿಕೊಳ್ಳಲಾಗಿದೆ' ಎಂದಿದೆ.

ಕಾರ್ಯಾಚರಣೆ ಸ್ಥಗಿತ: ವಿಕಿರಣ ಪ್ರಸರಣವನ್ನು ತಡೆಯುವ ಉದ್ದೇಶದಿಂದ, ಉಕ್ರೇನ್‌ನ ಜಪೋರಿಝಿಯಾದಲ್ಲಿರುವ ಅಣು ವಿದ್ಯುತ್ ಸ್ಥಾವರದ ಕೊನೆಯ ರಿಯಾಕ್ಟರ್‌ನ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ.

ಈ ಪ್ರದೇಶದಲ್ಲಿ ರಷ್ಯಾ ಪಡೆಗಳೊಂದಿಗಿನ ಕಾದಾಟ ಹೆಚ್ಚಿದ್ದು, ಸಂಭಾವ್ಯ ಅವಘಡ ತಪ್ಪಿಸುವ ಸಲುವಾಗಿ ಈ ಕ್ರಮ ಕೈಗೊಳ್ಳಲಾಗಿದೆ.

3 ಸಾವಿರ ಚ.ಕಿ.ಮೀ ಮರುಸ್ವಾಧೀನ: ಉಕ್ರೇನ್

ಕೀವ್ (ಎಎಫ್‌ಪಿ): ಈ ತಿಂಗಳ ಅವಧಿಯಲ್ಲಿ ನಡೆಸಿದ ಪ್ರತಿದಾಳಿಯಲ್ಲಿ, ರಷ್ಯಾ ಪಡೆಗಳ ವಶದಲ್ಲಿದ್ದ ತನ್ನ 3,000 ಚದರ ಕಿ.ಮೀ.ಗಿಂತಲೂ ಅಧಿಕ ಪ್ರದೇಶವನ್ನು ಮತ್ತೆ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಉಕ್ರೇನ್ ಭಾನುವಾರ ಹೇಳಿದೆ.

'ದೇಶದ ದಕ್ಷಿಣ ಹಾಗೂ ಪೂರ್ವ ಭಾಗದಲ್ಲಿ ಮಾತ್ರವಲ್ಲ, ಉತ್ತರದಲ್ಲಿಯೂ ಮುನ್ನುಗ್ಗುತ್ತಿದ್ದೇವೆ. ಗಡಿಯಿಂದ 50 ಕಿ.ಮೀ. ದೂರದಲ್ಲಿದ್ದೇವೆ' ಎಂದು ಉಕ್ರೇನ್ ಸೇನೆಯ ಜನರಲ್ ವಾಲೆರಿಯ್ ಝುಲುಝುನಿ ಹೇಳಿದ್ದಾರೆ.

ರಾಷ್ಟ್ರೀಯ ಪಕ್ಷ ಸ್ಥಾಪನೆ: ಕೆಸಿಆರ್

ಹೈದರಾಬಾದ್ (ಪಿಟಿಐ): 'ಶೀಘ್ರವೇ ರಾಷ್ಟ್ರೀಯ ಪಕ್ಷ ಸ್ಥಾಪಿಸಲಾಗುವುದು ಮತ್ತು ಅದಕ್ಕಾಗಿ ನೀತಿಗಳನ್ನು ರೂಪಿಸುವ ಕೆಲಸ ನಡೆದಿದೆ' ಎಂದು ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ (ಕೆಸಿಆರ್) ಅವರು ಭಾನುವಾರ ಹೇಳಿದ್ದಾರೆ.

'ತೆಲಂಗಾಣ ಚಳವಳಿ ಆರಂಭವಾಗುವುದಕ್ಕೆ ಮುನ್ನ ಮಾಡಿದಂತೆ ವಿವಿಧ ಕ್ಷೇತ್ರಗಳ ತಜ್ಞರ ಜೊತೆ ಸುದೀರ್ಘ ಚರ್ಚೆ ನಡೆಸಿ ರಾಷ್ಟ್ರೀಯ ಪಕ್ಷ ಸ್ಥಾಪಿಸುವ ತೀರ್ಮಾನಕ್ಕೆ ಬರಲಾಗಿದೆ' ಎಂದು ಚಂದ್ರಶೇಖರ ರಾವ್ ಅವರ ಕಚೇರಿಯ ಹೇಳಿಕೆ ತಿಳಿಸಿದೆ.

ರಾವ್–ಕುಮಾರಸ್ವಾಮಿ ಭೇಟಿ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಚಂದ್ರಶೇಖರ ರಾವ್ ಅವರನ್ನು ಭಾನುವಾರ ಭೇಟಿಯಾಗಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಕೆಸಿಆರ್ ಅವರ ಹೈದರಾಬಾದ್‌ನಲ್ಲಿರುವ ಅಧಿಕೃತ ನಿವಾಸ ಪ್ರಗತಿ ಭವನದಲ್ಲಿ ಭೋಜನಕೂಟದ ಬಳಿಕ ಇಬ್ಬರು ನಾಯಕರು ಮಾತುಕತೆ ನಡೆಸಿದ್ದಾರೆ.ರಾಷ್ಟ್ರ ರಾಜಕಾರಣದಲ್ಲಿ ಪ್ರಾದೇಶಿಕ ಪಕ್ಷಗಳ ಪಾತ್ರ ಹಾಗೂ ಪ್ರಸ್ತುತ ರಾಜಕೀಯ ಸನ್ನಿವೇಶಗಳ ಕುರಿತು ಕುಮಾರಸ್ವಾಮಿ ಹಾಗೂ ಕೆಸಿಆರ್ ಅವರು ಚರ್ಚೆ ನಡೆಸಿದ್ದಾರೆ ಎಂದಿವೆ.

ಟಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್ ಅವರನ್ನೂ ಕುಮಾರಸ್ವಾಮಿ ಭೇಟಿಯಾಗಿದ್ದಾರೆ. 'ತೆಲಂಗಾಣ ಮತ್ತು ಕರ್ನಾಟಕ ರಾಜ್ಯಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ನಾವು ಚರ್ಚೆ ನಡೆಸಿದ್ದೇವೆ. ಕೆ.ಟಿ. ರಾಮರಾವ್ ಅವರು ನೀಡಿದ ಆತಿಥ್ಯಕ್ಕೆ ಋಣಿಯಾಗಿದ್ದೇನೆ' ಎಂದು ಕುಮಾರಸ್ವಾಮಿ ಟ್ವೀಟ್ ಮಾಡಿದ್ದಾರೆ.

ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರ ಹೈದರಾಬಾದ್‌ನಲ್ಲಿರುವ ಅಧಿಕೃತ ನಿವಾಸಕ್ಕೆ ಎಚ್.ಡಿ.ಕುಮಾರಸ್ವಾಮಿ ಅವರು ಭಾನುವಾರ ಭೇಟಿ ನೀಡಿದರು —ಪಿಟಿಐ ಚಿತ್ರ

ಅಧ್ಯಯನಕ್ಕೆ ಅನುಮತಿ ಕೋರಿದ ಭಾರತ್ ಬಯೋಟೆಕ್

ನವದೆಹಲಿ (ಪಿಟಿಐ): ಮೂಗಿನ ಮೂಲಕ ನೀಡಬಹುದಾದ ಕೋವಿಡ್ ಲಸಿಕೆಯನ್ನು 5 ರಿಂದ 18 ವರ್ಷ ವಯೋಮಾನದವರಿಗೆ ನೀಡುವುದಕ್ಕೆ ಸಂಬಂಧಿಸಿ ಮೂರನೇ ಹಂತದ ಅಧ್ಯಯನ ಕೈಗೊಳ್ಳಲು ಹೈದರಾಬಾದ್ ಮೂಲದ ಭಾರತ್ ಬಯೋಟೆಕ್ ಅನುಮತಿ ಕೇಳಿದೆ.

'5 ರಿಂದ 18 ವರ್ಷ ವಯೋಮಾನದವರಿಗೆ ಮೂಗಿನ ಮೂಲಕ ನೀಡಬಹುದಾದ ಕೋವಿಡ್ ಲಸಿಕೆಯು (ಬಿಬಿವಿ154) ಎಷ್ಟರ ಮಟ್ಟಿಗೆ ಸುರಕ್ಷಿತ, ಅದರ ಪ್ರತಿಕ್ರಿಯಾತ್ಮಕತೆ ಏನು ಹಾಗೂ ಲಸಿಕೆಯಿಂದ ಸಿಗುವ ರೋಗನಿರೋಧಕ ಶಕ್ತಿ ಎಷ್ಟು ಎಂಬುದು ಸೇರಿದಂತೆ ವಿವಿಧ ವಿಷಯಗಳ ಮೌಲ್ಯಮಾಪನ ನಡೆಸಲು ಅನುಮತಿ ನೀಡಬೇಕು' ಎಂದು ಕಂಪನಿಯು ಭಾರತೀಯ ಔಷಧ ಮಹಾನಿಯಂತ್ರಕರಿಗೆ (ಡಿಸಿಜಿಐ) ಅರ್ಜಿ ಸಲ್ಲಿಸಿದೆ.

ಈ ಲಸಿಕೆಯ ಪರಿಣಾಮದ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನದ ಅಗತ್ಯ ಇದೆ ಎಂದು ಕಂಪನಿ ತಿಳಿಸಿದೆ.

ಜ್ಞಾನವಾಪಿ ಮಸೀದಿ: ಅರ್ಜಿಯ ಅರ್ಹತೆ ತೀರ್ಪು ಇಂದು

ಲಖನೌ: ಜ್ಞಾನ ವಾಪಿ ಮಸೀದಿ ಆವರಣದಲ್ಲಿ ಇದೆ ಎಂದು ಹೇಳಲಾದ ಶೃಂಗಾರ ಗೌರಿ ದೇವಾಲಯದಲ್ಲಿ ನಿತ್ಯ ಪೂಜೆ ಸಲ್ಲಿಸಲು ಅವಕಾಶ ಕೋರಿ ಸಲ್ಲಿಸಿರುವ ಅರ್ಜಿಯು ವಿಚಾರಣೆಗೆ ಅರ್ಹವಲ್ಲ ಎಂದು ಸಲ್ಲಿಸಲಾಗಿರುವ ಅರ್ಜಿಯ ಕುರಿತು ತೀರ್ಪನ್ನು ವಾರಾಣಸಿ ಜಿಲ್ಲಾ ನ್ಯಾಯಾಲಯವು ಸೋಮವಾರ ಪ್ರಕಟಿಸುವ ನಿರೀಕ್ಷೆ ಇದೆ.

ಈ ಹಿನ್ನೆಲೆಯಲ್ಲಿ ವಾರಾಣಸಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

'ನಗರದಲ್ಲಿ ಶಾಂತಿ–ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ, ತಮ್ಮ ಠಾಣಾ ವ್ಯಾಪ್ತಿಯಲ್ಲಿರುವ ಧಾರ್ಮಿಕ ಮುಖಂಡರೊಂದಿಗೆ ಸಭೆ ನಡೆಸುವಂತೆ ಎಲ್ಲ ಪೊಲೀಸ್ ಅಧಿ ಕಾರಿಗಳಿಗೆ ಸೂಚಿಸಲಾಗಿದೆ' ಎಂದು ವಾರಾಣಸಿ ಪೊಲೀಸ್‌ಕಮಿಷನರ್ ಎ.ಸತೀಶಗಣೇಶ್ ಹೇಳಿದ್ದಾರೆ.

ಮಸೀದಿಯ ಹೊರ ಗೋಡೆಯೊಂದರ ಬಳಿ ಹಿಂದೂ ದೇವತೆಗಳ ವಿಗ್ರಹಗಳಿವೆ. ಅವುಗಳಿಗೆ ದಿನನಿತ್ಯವೂ ಪೂಜೆ ಸಲ್ಲಿಸಲು ಅವಕಾಶ ನೀಡಬೇಕು ಎಂದು ಕೋರಿ ಹಿಂದೂ ಧರ್ಮಕ್ಕೆ ಸೇರಿದ ಐವರು ಮಹಿಳೆಯರು ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ್ದ ಜಿಲ್ಲಾ ನ್ಯಾಯಾಧೀಶ ಅಜಯ್ ಕೃಷ್ಣ ವಿಶ್ವೇಶ್ ಅವರು ಈ ಪ್ರಕರಣದ ತೀರ್ಪನ್ನು ಸೆ.12 ರವರೆಗೆ ಕಾಯ್ದಿರಿಸಿ ಆಗಸ್ಟ್ 24ರಂದು ತೀರ್ಪು ನೀಡಿದ್ದರು. ಇದಕ್ಕೂ ಮೊದಲು, ಮಸೀದಿಯ ಆವರಣದಲ್ಲಿ ವಿಡಿಯೊಗ್ರಫಿ ಸಮೀಕ್ಷೆ ನಡೆಸಲು ಕೋರ್ಟ್ ಆದೇಶಿಸಿತ್ತು. ಈಗಾಗಲೇ ಸಮೀಕ್ಷೆಯ ವರದಿಯನ್ನು ಕೋರ್ಟ್‌ಗೆ ನೀಡಲಾಗಿದೆ.

15,16ಕ್ಕೆ ಮೋದಿ ಉಜ್ಬೇಕಿಸ್ತಾನ ಭೇಟಿ

ನವದೆಹಲಿ: ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) 22ನೇ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಸೆ.15 ಮತ್ತು 16ರಂದು ಉಜ್ಬೇಕಿಸ್ತಾನಕ್ಕೆ ಭೇಟಿ ನೀಡಲಿದ್ದಾರೆ.

ಶೃಂಗಸಭೆಯಲ್ಲಿ ಎಸ್‌ಸಿಒ ಸದಸ್ಯ ರಾಷ್ಟ್ರಗಳ ನಾಯಕರು ಎರಡು ದಶಕಗಳಲ್ಲಿನ ತಮ್ಮ ಗುಂಪು ಚಟುವಟಿಕೆಗಳ ಪರಿಶೀಲನೆ ಹಾಗೂ ಬಹುಪಕ್ಷೀಯ ಸಹಕಾರದ ನಿರೀಕ್ಷೆಗಳ ಕುರಿತು ಚರ್ಚಿಸುವ ಸಾಧ್ಯತೆ ಇದೆ.

ಉಜ್ಬೇಕಿಸ್ತಾನದ ಅಧ್ಯಕ್ಷ ಶಾಕತ್ ಮಿಜಿಯೊಯೆವ್ ಅವರ ಆಹ್ವಾನದ ಮೇರೆಗೆ ಮೋದಿ ಅವರು ಸಮರ್‌ಕಾಂಡ್‌ಗೆ ಭೇಟಿ ನೀಡುವರು. ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ.

ನಿಧನ ವಾರ್ತೆ

ಸ್ವಾಮಿ ಸ್ವರೂಪಾನಂದ ಸರಸ್ವತಿ

ಭೋಪಾಲ್: ದ್ವಾರಕಾ ಪೀಠದ ಶಂಕರಾಚಾರ್ಯ ಸ್ವಾಮಿ ಸ್ವರೂಪಾನಂದ ಸರಸ್ವತಿ (99) ಅವರು ಮಧ್ಯಪ್ರದೇಶದ ನರಸಿಂಗಪುರ ಜಿಲ್ಲೆಯಲ್ಲಿ ಭಾನುವಾರ ನಿಧನರಾದರು.



ಸ್ವರೂಪಾನಂದ ಸರಸ್ವತಿ ಅವರು ಒಂದು ವರ್ಷಕ್ಕೂ ಹೆಚ್ಚು ಸಮಯದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ನರಸಿಂಗಪುರ ಜಿಲ್ಲೆಯಲ್ಲಿರುವ ಆಶ್ರಮದಲ್ಲಿ ಮಧ್ಯಾಹ್ನ 3.30ಕ್ಕೆ ಕೊನೆಯುಸಿರೆಳೆದಿದ್ದಾರೆ ಎಂದು ಪೀಠದ ಸ್ವಾಮಿ ಸದಾನಂದ ಮಹಾರಾಜ್ ತಿಳಿಸಿದ್ದಾರೆ.

ಸಿಯೋನಿ ಜಿಲ್ಲೆಯ ದಿಘೋರಿ ಎಂಬ ಹಳ್ಳಿಯಲ್ಲಿ 1924ರಲ್ಲಿ ಜನಿಸಿದ ಸ್ವರೂಪಾನಂದ ಸರಸ್ವತಿ ಅವರ ಬಾಲ್ಯದ ಹೆಸರು ಪೋಥಿರಾಮ್ ಉಪಾಧ್ಯಾಯ. ಅಧ್ಯಾತ್ಮದ ಕಡೆ ಆಕರ್ಷಿತರಾದ ಅವರು ತಮ್ಮ 9ನೇ ವಯಸ್ಸಿನಲ್ಲಿ ಮನೆಯಿಂದ ಹೊರ ನಡೆದಿದ್ದರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸೆರೆವಾಸವನ್ನೂ ಅನುಭವಿಸಿದ್ದರು.

ಅವರ 99ನೇ ವರ್ಷದ ಜನ್ಮದಿನವನ್ನು ಇತ್ತೀಚೆಗೆ ಆಚರಿಸಲಾಗಿತ್ತು ಎಂದು ಸ್ವಾಮೀಜಿಯ ಅನುಯಾಯಿಗಳು ತಿಳಿಸಿದ್ದಾರೆ.

ನಟ ಕೃಷ್ಣಂ ರಾಜು

ಹೈದರಾಬಾದ್: ತೆಲುಗು ಚಿತ್ರರಂಗದ ಹಿರಿಯ ನಟ ಕೃಷ್ಣಂ ರಾಜು (83) ಅವರು ಭಾನುವಾರ ಮುಂಜಾನೆ ನಿಧನರಾಗಿದ್ದಾರೆ.

ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಹೈದರಾಬಾದ್‌ನ ಖಾಸಗಿ ಆಸ್ಪತ್ರೆಯಲ್ಲಿ ಬೆಳಿಗ್ಗೆ 3.30ರ ಸುಮಾರಿಗೆ ಕೊನೆಯುಸಿರೆಳೆದಿದ್ದಾರೆ ಎಂದು ವರದಿಯಾಗಿದೆ. ಕೃಷ್ಣಂ ರಾಜು ಅವರಿಗೆ ಪತ್ನಿ ಹಾಗೂ ಮೂವರು ಪುತ್ರಿಯರು ಇದ್ದಾರೆ.

ಕೃಷ್ಣಂ ರಾಜು ಅವರು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಸಂಪುಟದಲ್ಲಿ ಸಚಿವರಾಗಿದ್ದರು. 1966ರಲ್ಲಿ 'ಚಿಲಕಾ ಗೋರಿಂಕಾ' ಚಿತ್ರದ ಮೂಲಕ ತೆಲುಗು ಚಿತ್ರರಂಗಕ್ಕೆ ನಾಯಕನಾಗಿ ಪದಾರ್ಪಣೆ ಮಾಡಿದ ಅವರು, ಈವರೆಗೆ 180ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ.

ಅವರ ನಿಧನಕ್ಕೆ ಚಿತ್ರರಂಗದ ಗಣ್ಯರು, ಅಭಿಮಾನಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಸಂತಾಪ ಸೂಚಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

9/11 ಭಯೋತ್ಪಾದನಾ ದಾಳಿಗೆ 21 ವರ್ಷ

ನ್ಯೂಯಾರ್ಕ್ (ಪಿಟಿಐ): ಅಮೆರಿಕದಲ್ಲಿ 21 ವರ್ಷಗಳ ಹಿಂದೆ ನಡೆದ ಭೀಕರ ಭಯೋತ್ಪಾದನಾ ದಾಳಿ 9/11 ಅನ್ನು ಅಮೆರಿಕನ್ನರು ಭಾನುವಾರ ಮೌನಾಚರಣೆ, ಮೃತರ ಹೆಸರುಗಳನ್ನು ಓದುವುದು ಹಾಗೂ ಸ್ವಯಂಸೇವೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ನೆನಪಿಸಿಕೊಂಡರು.

2001ರ ಸೆ. 11ರಂದು ಅಪಹರಿಸಲ್ಪಟ್ಟ ಜೆಟ್ ವಿಮಾನಗಳು ನ್ಯೂಯಾರ್ಕ್‌ನ ವಿಶ್ವ ವಾಣಿಜ್ಯ ಕೇಂದ್ರದ ಅವಳಿ ಗೋಪುರಗಳ ಮೇಲೆ ನಡೆಸಿದ್ದ ದಾಳಿ ಯಲ್ಲಿ ಸುಮಾರು ಮೂರು ಸಾವಿರ ಮಂದಿ ಸಾವಿಗೀಡಾಗಿದ್ದರು. ಅವರ ನೆನಪಿಗಾಗಿ ಮೃತರ ಸಂಬಂಧಿಕರು, ಸ್ನೇಹಿತರು ಮತ್ತು ಗಣ್ಯರು ಪೆಂಟಗನ್, ಪೆನ್ಸಿಲ್ವೇನಿಯಾದ ಮೈದಾನದಲ್ಲಿ ನೆರೆದು ಗೌರವ ಸಲ್ಲಿಸಿದರು.

ಷಿ ಜಿನ್‌ಪಿಂಗ್‌ಗೆ ಹೆಚ್ಚಿನ ಅಧಿಕಾರ ನೀಡಲು ಸಿಪಿಸಿ ಒಲವು

ಬೀಜಿಂಗ್ (ಪಿಟಿಐ): ಚೀನಾದ ಆಡಳಿತಾರೂಢ ಕಮ್ಯುನಿಸ್ಟ್ ಪಾರ್ಟಿ ಆಫ್ ಚೀನಾ(ಸಿಪಿಸಿ) ಪಕ್ಷದ ಸಂವಿಧಾನಕ್ಕೆ ತಿದ್ದುಪಡಿ ತರಲು ತಯಾರಿ ನಡೆಸಿದೆ. ಮುಂದಿನ ತಿಂಗಳು ನಡೆಯಲಿರುವ ಪಕ್ಷದ ಪಂಚವಾರ್ಷಿಕ ಸಮ್ಮೇಳನದಲ್ಲಿ (ಸಿಪಿಸಿ ನ್ಯಾಷನಲ್ ಕಾಂಗ್ರೆಸ್) ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನೇ ಮುಂದಿನ 5 ವರ್ಷಗಳ ಅವಧಿಗೂ ಅಧ್ಯಕ್ಷರಾಗಿ ಮುಂದುವರೆಸುವುದನ್ನು ದೃಢಪಡಿಸುವುದರ ಜೊತೆಗೆ ಅವರಿಗೆ ಹೆಚ್ಚಿನ ಅಧಿಕಾರ ನೀಡುವ ನಿರೀಕ್ಷೆಯೂ ಇದೆ ಎಂದು ರಾಜಕೀಯ ವಿಶ್ಲೇಷಕರು ಹೇಳಿದ್ದಾರೆ.

ಪಕ್ಷದ ಸಂವಿಧಾನಕ್ಕೆ ತಿದ್ದುಪಡಿ ತಂದ ಬಳಿಕ ಜಿನ್‌ಪಿಂಗ್ ಅವರ ಪದವಿಯನ್ನು ಉನ್ನತೀಕರಿಸುವ ನಿರೀಕ್ಷೆಯೂ ಇದೆ ಎನ್ನಲಾಗಿದೆ. ಪಾಲಿಟ್‌ಬ್ಯೂರೊದ (ಸಿಪಿಸಿಯ ಪ್ರಧಾನ ನೀತಿ ನಿರೂಪಕರ ಮಂಡಳಿ) 25 ಸದಸ್ಯರು ಕಳೆದ ಶುಕ್ರವಾರ ನಡೆಸಿದ್ದ ಸಭೆಯಲ್ಲಿ ಜಿನ್‌ಪಿಂಗ್ ಅವರನ್ನು ಅಧ್ಯಕ್ಷರಾಗಿ ಮುಂದುವರೆಸುವ ಕುರಿತು ಚರ್ಚೆಗಳು ನಡೆದಿದ್ದವು.

'ದೆಹಲಿ ದೊರೆ'ಗಳಿಗೆ ತಲೆಬಾಗುವುದಿಲ್ಲ: ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್

ನವದೆಹಲಿ (ಪಿಟಿಐ): 'ದೆಹಲಿ ದೊರೆ'ಗಳ ಎದುರು ಪಕ್ಷವು ಎಂದಿಗೂ ತಲೆಬಾಗುವುದಿಲ್ಲ ಎಂದು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಹೇಳಿದರು. ವಿರೋಧ ಪಕ್ಷಗಳ ಹಲವು ನಾಯಕರ ವಿರುದ್ಧ ಕೇಂದ್ರ ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿರುವ ಸಂದರ್ಭದಲ್ಲಿ ಅವರು ಈ ಮಾತನ್ನು ಹೇಳಿದ್ದಾರೆ.

ಇಲ್ಲಿ ಭಾನುವಾರ ನಡೆದ ಎನ್‌ಸಿಪಿಯ ಎಂಟನೇ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ಅವರು, 'ಜಾರಿ ನಿರ್ದೇಶನಾಲಯ, ಸಿಬಿಐನಂಥ ಕೇಂದ್ರ ತನಿಖಾ ಸಂಸ್ಥೆಗಳನ್ನು ಕೇಂದ್ರ ಸರ್ಕಾರವು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಆದ್ದರಿಂದ ಈ ಸರ್ಕಾರವನ್ನು ನಾವು ಪ್ರಜಾತಾಂತ್ರಿಕವಾಗಿಯೇ ಎದುರಿಸಬೇಕು. ಎಂಥ ಹೋರಾಟಕ್ಕೂ ನಾವು ಸಿದ್ಧರಾಗಿರಬೇಕು' ಎಂದು ಪಕ್ಷದ ಕಾರ್ಯಕರ್ತರಿಗೆ ತಿಳಿಸಿದರು.

'ಕೇಸರಿ ಪಕ್ಷವನ್ನು ಅಧಿಕಾರದಿಂದ ಕೆಳಗಿಳಿಸಲು ಬಿಜೆಪಿಯೇತರ ಎಲ್ಲಾ ಪಕ್ಷಗಳು ಒಗ್ಗೂಡಿ ಕೆಲಸ ಮಾಡಬೇಕು' ಎಂದು ವಿರೋಧ ಪಕ್ಷಗಳಿಗೆ ಕರೆ ನೀಡಿದರು.

'ತಾವು ಪ್ರಧಾನಿ ಅಭ್ಯರ್ಥಿ ಎಂದು ಶರದ್ ಪವಾರ್ ಅವರು ಎಂದೂ ಹೇಳಿಲ್ಲ. ಬೇರೆ ಎಲ್ಲಾ ಪಕ್ಷಗಳಿಗೆ ಹೋಲಿಸಿಕೊಂಡರೆ ನಮ್ಮದು ಸಣ್ಣ ಪಕ್ಷ ಇರಬಹುದು. ಆದರೆ, ನಮ್ಮ ಪಕ್ಷದ ಜನಪ್ರಿಯತೆಯನ್ನೂ ಮೀರಿ ಶರದ್ ಪವಾರ್ ಅವರನ್ನು ದೇಶದಾದ್ಯಂತ ಗೌರವಿಸಲಾಗುತ್ತದೆ' ಎಂದು ಎನ್‌ಸಿಪಿ ನಾಯಕ ಪ್ರಫುಲ್ ಪಟೇಲ್ ಹೇಳಿದರು.

ರೈಲ್ವೆ ಆದಾಯ ಶೇ 38ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಈ ವರ್ಷದ ಆಗಸ್ಟ್‌ಗೆ ಅಂತ್ಯಗೊಂಡ ಅವಧಿವರೆಗೆ ಭಾರತೀಯ ರೈಲ್ವೆಯ ಒಟ್ಟಾರೆ ಆದಾಯವು ₹95,486 ಕೋಟಿಯಾಗಿದೆ. ಕಳೆದ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಆದಾಯದಲ್ಲಿ ಶೇ 38ರಷ್ಟು ಏರಿಕೆಯಾದಂತಾಗಿದೆ ಎಂದು ಭಾನುವಾರ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಈ ಅವಧಿಯಲ್ಲಿ ಪ್ರಯಾಣಿಕರ ಸಂಚಾರದಿಂದಾಗಿ ₹25,276 ಕೋಟಿ ಆದಾಯ ಬಂದಿದೆ' ಎಂದೂ ಪ್ರಕಟಣೆ ಹೇಳಿದೆ.

ವಿಮಾನನಿಲ್ದಾಣದಲ್ಲೇ ಅಭಿಷೇಕ್ ಸಂಬಂಧಿ ತಡೆದು ಇ.ಡಿ ಸಮನ್ಸ್

ನವದೆಹಲಿ/ಕೋಲ್ಕತ್ತ (ಪಿಟಿಐ): ವಿದೇಶಕ್ಕೆ ತೆರಳಲು ಸಿದ್ಧರಾಗಿದ್ದ ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಅವರ ಸಂಬಂಧಿ ಮನೇಕಾ ಗಂಭೀರ್ ಅವರನ್ನು ವಿಮಾನ ನಿಲ್ದಾಣದಲ್ಲೇ ತಡೆದ ಜಾರಿ ನಿರ್ದೇಶನಾಲಯ(ಇ.ಡಿ), ಹಣಕಾಸು ಅಕ್ರಮ ಮೊಕದ್ದಮೆಗೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗಲು ಅವರಿಗೆ ಸಮನ್ಸ್ ನೀಡಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಮನೇಕಾ ಅವರು ಬ್ಯಾಂಕಾಕ್‌ಗೆ ತೆರಳಲು ಕೋಲ್ಕತ್ತ ವಿಮಾನ ನಿಲ್ದಾಣಕ್ಕೆ ತೆರಳಿದ್ದರು. ಅವರಿಗೆ ಇ.ಡಿ ಲುಕ್‌ಔಟ್ ನೋಟಿಸ್ ನೀಡಿದ್ದ ಆಧಾರದ ಮೇಲೆ ವಲಸೆ ಅಧಿಕಾರಿಗಳು ಅವರನ್ನು ತಡೆದರು. ಬಳಿಕ ಅವರೊಂದಿಗೆ ಮಾತನಾಡಿದ ಇ.ಡಿ ಅಧಿಕಾರಿಗಳು ಅವರಿಗೆ ಸಮನ್ಸ್ ನೀಡಿ ಸೆ. 12ರಂದು ಬೆಳಗ್ಗೆ 11 ಗಂಟೆಗೆ ಕೋಲ್ಕತ್ತದ ಸಾಲ್ಟ್ ಲೇಕ್ ಪ್ರದೇಶದಲ್ಲಿರುವ ಇ.ಡಿ ಕಚೇರಿಗೆ ಹಾಜರಾಗುವಂತೆ ಹೇಳಿದರು.

'ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯವ್ಯಾಪ್ತಿ ವಿಸ್ತರಣೆ'

ಅಮ್ರೇಲಿ, ಗುಜರಾತ್ (ಪಿಟಿಐ): ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು (ಪಿಎಸಿಎಸ್) ವಿವಿಧೋದ್ದೇಶ ಸಂಸ್ಥೆಗಳಾಗಿ ರೂಪಿಸಲು ಕೇಂದ್ರ ಸರ್ಕಾರ ಉದ್ದೇಶಿಸಿದ್ದು, ಪೂರಕವಾಗಿ ಕರಡು ಬೈ–ಲಾ ಅನ್ನೂ ಸಿದ್ಧಪಡಿಸಲಾಗಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಹೇಳಿದರು.

ಭಾನುವಾರ ಅಮ್ರೇಲಿ ಜಿಲ್ಲೆಯ ಏಳು ಸಹಕಾರ ಸಂಘಟನೆಗಳ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು, ಬೀಜ ಸಂಸ್ಕೃತಿ ಪ್ರಚಾರ ಮತ್ತು ಮಾರುಕಟ್ಟೆ ನಿರ್ವಹಣೆ, ಸಾವಯವ ಉತ್ಪನ್ನಗಳ ಪ್ರಮಾಣೀಕರಣ ಕಾರ್ಯ ನಿರ್ವಹಿಸುವಂತೆ ಬಹುರಾಜ್ಯ ಸಹಕಾರ ಸೊಸೈಟಿಗಳಾಗಿ ಹೊಸರೂಪ ನೀಡುವ ಉದ್ದೇಶ ಸರ್ಕಾರದ್ದಾಗಿದೆ ಎಂದರು.

ಈಗಾಗಲೇ ಕರಡು ಬೈ–ಲಾ ಸಿದ್ಧವಾಗಿದೆ. ಪರಾಮರ್ಶೆಗೆ ಸೆಪ್ಟೆಂಬರ್ ಅಂತ್ಯದೊಳಗೆ ಸಂಘಗಳಿಗೆ ಕಳುಹಿಸಲಾಗುತ್ತದೆ ಎಂದು ಅವರು ತಿಳಿಸಿದರು.

ಅಮೆರಿಕ ಓಪನ್ ಟೆನಿಸ್ ಟೂರ್ನಿ: ಫೈನಲ್‌ನಲ್ಲಿ ಆನ್ಸ್ ಜಬೇರ್‌ಗೆ ನಿರಾಸೆ

ಇಗಾ ಮುಡಿಗೆ ಕಿರೀಟ

- ಹೆಸರು: ಇಗಾ ಸ್ವಟೆಕ್
- ದೇಶ: ಪೋಲೆಂಡ್
- ಜನ್ಮದಿನ: ಮೇ 31, 2001
- ಹುಟ್ಟೂರು: ವಾರ್ಸಾ, ಪೋಲೆಂಡ್
- ಎತ್ತರ: 5 ಅಡಿ 9 ಇಂಚು

1 ವಿಶ್ವ ರ‍್ಯಾಂಕಿಂಗ್ | 10 ಒಟ್ಟು ಪ್ರಶಸ್ತಿ

3 ಗ್ರ್ಯಾನ್‌ಸ್ಲಾಮ್ ಕಿರೀಟ

2 ಫ್ರೆಂಚ್ ಓಪನ್ (2020, 2022)

1 ಅಮೆರಿಕ ಓಪನ್ (2020, 2022)

ನ್ಯೂಯಾರ್ಕ್ (ಎಎಫ್‌ಪಿ): ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರ್ತಿ ಪೋಲೆಂಡ್‌ನ ಇಗಾ ಸ್ವಟೆಕ್ ಅವರು ಅಮೆರಿಕ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದರು.

ಶನಿವಾರ ರಾತ್ರಿ ನಡೆದ ಫೈನಲ್‌ನಲ್ಲಿ ಅವರು 6–2, 7–6 (7–5) ರಲ್ಲಿ ಟ್ಯುನೀಷಿಯಾದ ಆನ್ಸ್ ಜಬೇರ್ ಅವರನ್ನು ಮಣಿಸಿದರು. ವೃತ್ತಿಜೀವನದ ಮೂರನೇ ಗ್ರ್ಯಾನ್‌ಸ್ಲಾಮ್ ಗೆದ್ದ ಸ್ವಟೆಕ್, ಅಮೆರಿಕ ಓಪನ್‌ನಲ್ಲಿ ಚಾಂಪಿಯನ್ ಆದ ಪೋಲೆಂಡ್‌ನ ಮೊದಲ ಆಟಗಾರ್ತಿ ಎನಿಸಿಕೊಂಡರು.

ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಕಿಕ್ಕಿರಿದು ನೆರೆದ ಪ್ರೇಕ್ಷಕರ ಮುಂದೆ ಸೊಗಸಾದ ಆಟವಾಡಿದ 21 ವರ್ಷದ ಸ್ವಟೆಕ್, ಒಂದು ಗಂಟೆ 52 ನಿಮಿಷಗಳಲ್ಲಿ ಗೆಲುವು ಒಲಿಸಿಕೊಂಡರು. ಜೂನ್‌ನಲ್ಲಿ ಫ್ರೆಂಚ್ ಓಪನ್ ಗೆದ್ದಿದ್ದ ಅವರು ಈ ವರ್ಷದ ಎರಡನೇ ಗ್ರ್ಯಾನ್‌ಸ್ಲಾಮ್ ಗೆಲ್ಲಲು ಯಶಸ್ವಿಯಾದರು.

ಪೋಲೆಂಡ್‌ನ ಆಟಗಾರ್ತಿಗೆ ಫೈನಲ್‌ನಲ್ಲಿ ದೊರೆತ ಸತತ 10ನೇ ಗೆಲುವು ಇದು. ಮೂರು ವರ್ಷಗಳ ಹಿಂದೆ ಸ್ವಿಟ್ಜರ್‌ಲೆಂಡ್‌ನ ಲುಗಾನೊದಲ್ಲಿ ನಡೆದಿದ್ದ ಡಬ್ಲ್ಯುಟಿಎ ಟೂರ್ನಿಯ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಸೋತ ಬಳಿಕ ಆಡಿದ ಎಲ್ಲ ಫೈನಲ್‌ಗಳಲ್ಲೂ ಅವರು ಗೆಲುವು ಸಾಧಿಸಿದ್ದಾರೆ.

‘ಇಲ್ಲಿ ಪ್ರಶಸ್ತಿ ಗೆಲ್ಲುವ ಖಚಿತತೆ ಇರಲಿಲ್ಲ. ಆದರೂ ಅದರಲ್ಲಿ ಯಶಸ್ವಿಯಾಗಿರುವುದು ಅಚ್ಚರಿ ಉಂಟುಮಾಡಿದೆ. ಈ ಸಾಧನೆ ಸಂತಸ ನೀಡಿದೆ’ ಎಂದು ಸ್ವಟೆಕ್ ಪ್ರತಿಕ್ರಿಯಿಸಿದರು.

ಗ್ರ್ಯಾನ್‌ಸ್ಲಾಮ್ ಗೆದ್ದ ಆಫ್ರಿಕಾದ ಮೊದಲ ಮಹಿಳೆ ಎನಿಸಿಕೊಳ್ಳುವ ಅವಕಾಶವನ್ನು ಆನ್ಸ್ ಜಬೇರ್ ಮತ್ತೊಮ್ಮೆ ಕಳೆದುಕೊಂಡರು.

ಮುಖ್ಯಾಂಶಗಳು

- ₹ 20.71 ಕೋಟಿ ನಗದು ಬಹುಮಾನ
- ಅಮೆರಿಕ ಓಪನ್ ಗೆದ್ದ ಪೋಲೆಂಡ್‌ನ ಮೊದಲ ಆಟಗಾರ್ತಿ
- ಫೈನಲ್‌ನಲ್ಲಿ 6–2, 7–6 ರಲ್ಲಿ ಗೆಲುವು

ಜುಲೈನಲ್ಲಿ ನಡೆದಿದ್ದ ವಿಂಬಲ್ಡನ್ ಟೂರ್ನಿಯಲ್ಲೂ ಅವರಿಗೆ ಫೈನಲ್ ಪಂದ್ಯದಲ್ಲಿ ನಿರಾಸೆ ಎದುರಾಗಿತ್ತು.

‘ಫೈನಲ್‌ನಲ್ಲಿ ಪೂರ್ಣ ಸಾಮರ್ಥ್ಯದೊಂದಿಗೆ ಆಡಿದ್ದೇನೆ. ಆದ್ದರಿಂದ ಪಶ್ಚಾತ್ತಾಪ ಪಡಲು ಯಾವುದೇ ಕಾರಣಗಳಿಲ್ಲ’ ಎಂದು ಜಬೇರ್ ಪ್ರತಿಕ್ರಿಯಿಸಿದರು.

‘ನಾನು ಇನ್ನೊಮ್ಮೆ ಫೈನಲ್ ಪ್ರವೇಶಿಸುವುದು ಖಚಿತ. ಆಗ ಇದಕ್ಕಿಂತಲೂ ಉತ್ತಮ ಆಟವಾಡುತ್ತೇನೆ’ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಬೇರ್ ಅವರು ಟೂರ್ನಿಯಲ್ಲಿ ಕೇವಲ ಒಂದು ಸೆಟ್ ಮಾತ್ರ ಎದುರಾಳಿಗೆ ಒಪ್ಪಿಸಿ ಫೈನಲ್ ಪ್ರವೇಶಿಸಿದ್ದರು. ಆದರೆ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಅವರಿಗೆ ಎಂದಿನ ಲಯದಲ್ಲಿ ಆಡಲು ಆಗಲಿಲ್ಲ.

ಪಂದ್ಯ ಆರಂಭವಾಗಿ ಎಂಟು ನಿಮಿಷಗಳಲ್ಲೇ ಸ್ವಟೆಕ್ 3–0 ರಲ್ಲಿ ಮುನ್ನಡೆ ಪಡೆದರು. ಮರುಹೋರಾಟದ ಸೂಚನೆ ನೀಡಿದ ಜಬೇರ್ ಹಿನ್ನಡೆಯನ್ನು 2–3ಕ್ಕೆ ತಗ್ಗಿಸಿದರು. ಆದರೆ, ವೇಗದ ಸರ್ವ್ ಮತ್ತು ಫೋರ್‌ಹ್ಯಾಂಡ್ ರಿಟರ್ನ್‌ಗಳ ಮೂಲಕ ಎದುರಾಳಿಯನ್ನು ಕಾಡಿದ ಸ್ವಟೆಕ್ ಮುಂದಿನ ಮೂರೂ ಗೇಮ್ ಗೆದ್ದು ಸೆಟ್ ಜಯಿಸಿದರು.

ಎರಡನೇ ಸೆಟ್‌ನಲ್ಲೂ ಸ್ವಟೆಕ್ 3–0 ರಲ್ಲಿ ಮುನ್ನಡೆ ಗಳಿಸಿ ಸುಲಭ ಗೆಲುವಿನ ಸೂಚನೆ ನೀಡಿದ್ದರು. ತಿರುಗೇಟು ನೀಡಿದ ಜಬೇರ್ 4–4 ಹಾಗೂ ಆ ಬಳಿಕ 6–6 ರಲ್ಲಿ ಸಮಬಲ ಸಾಧಿಸಿದರು. ಇದರಿಂದ ಸೆಟ್, ಟೈಬ್ರೇಕರ್‌ಗೆ ಮುನ್ನಡೆಯಿತು. ಟೈಬ್ರೇಕರ್‌ನಲ್ಲಿ ಟ್ಯುನೀಷಿಯಾ ಆಟಗಾರ್ತಿ 5–4 ರಲ್ಲಿ ಮೇಲುಗೈ ಸಾಧಿಸಿದ್ದರು. ಈ ವೇಳೆ ಆಟದ ಮೇಲೆ ಪೂರ್ಣ ನಿಯಂತ್ರಣ ಸಾಧಿಸಿದ ಸ್ವಟೆಕ್ ಸತತ ಮೂರು ಪಾಯಿಂಟ್ ಗೆದ್ದು ಪಂದ್ಯ ತಮ್ಮದಾಗಿಸಿಕೊಂಡರು.

ಜಬೇರ್ ಅವರು ರಿಟರ್ನ್ ಮಾಡಿದ ಚೆಂಡು ಕೋರ್ಟ್‌ನ ಹೊರಗೆ ಬೀಳುತ್ತಿದ್ದಂತೆಯೇ, ಸ್ವಟೆಕ್ ತಮ್ಮ ಎರಡೂ ಕೈಗಳಲ್ಲಿ ಮುಖ ಮುಚ್ಚಿಕೊಂಡು ನೆಲಕ್ಕೊರಗಿ ಸಂಭ್ರಮಿಸಿದರು.

ಏಷ್ಯಾ ಕ್ರಿಕೆಟ್‌ಗೆ ಲಂಕಾ ‘ದೊರೆ’

ಭಾನುಕಾ, ಪ್ರಮೋದ್ ಮಿಂಚು: ಫೈನಲ್‌ನಲ್ಲಿ ಪಾಕಿಸ್ತಾನ ಎದುರು ಗೆಲುವು

ಏಷ್ಯಾಕಪ್ ಟ್ರೋಫಿಯೊಂದಿಗೆ ಸಂಭ್ರಮಿಸಿದ ಶ್ರೀಲಂಕಾ ತಂಡದ ಆಟಗಾರರು— ಎಎಫ್‌ಪಿ ಚಿತ್ರ

ದುಬೈ (ಪಿಟಿಐ): ಭಾನುಕಾ ರಾಜಪಕ್ಸ ಅವರ ದಿಟ್ಟ ಬ್ಯಾಟಿಂಗ್ ಮತ್ತು ಬೌಲರ್‌ಗಳ ಚುರುಕಿನ ದಾಳಿಯ ನೆರವಿನಿಂದ ಶ್ರೀಲಂಕಾ ತಂಡ ಏಷ್ಯಾಕಪ್ ಗೆದ್ದುಕೊಂಡು ಸಂಭ್ರಮಿಸಿತು.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟಿ20 ಟೂರ್ನಿಯ ಫೈನಲ್‌ನಲ್ಲಿ ಲಂಕಾ, 23 ರನ್‌ಗಳಿಂದ ಪಾಕಿಸ್ತಾನ ತಂಡವನ್ನು ಮಣಿಸಿತು.ಮೊದಲು ಬ್ಯಾಟ್ ಮಾಡಿದ ದಸುನ್ ಶನಕ ಬಳಗ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 170 ರನ್ ಪೇರಿಸಿದರೆ, ಬಾಬರ್ ಅಜಂ ನೇತೃತ್ವದ ಪಾಕಿಸ್ತಾನ 20 ಓವರ್‌ಗಳಲ್ಲಿ 147 ರನ್‌ಗಳಿಗೆ ಆಲೌಟಾಯಿತು.

ಐದನೇ ಕ್ರಮಾಂಕದಲ್ಲಿ ಕ್ರೀಸ್‌ಗಿಳಿದ ಬ್ಯಾಟರ್ ಭಾನುಕಾ (ಔಟಾಗದೆ 71; 45ಎ, 4X6, 6X3) ಅವರ ಸೊಗಸಾದ ಆಟದ ಜತೆಗೆ ಪ್ರಮೋದ್ ಮಧುಶನ್ (34ಕ್ಕೆ 4) ಮತ್ತು ವಣಿಂದು ಹಸರಂಗ (27ಕ್ಕೆ 3) ತೋರಿದ ಕೈಚಳಕ ಲಂಕಾ ತಂಡಕ್ಕೆ ಸ್ಮರಣೀಯ ಗೆಲುವು ತಂದುಕೊಟ್ಟಿತು.

ಸವಾಲಿನ ಗುರಿ ಬೆನ್ನಟ್ಟಿದ ಪಾಕ್ ತಂಡ ಬಾಬರ್ (5) ಮತ್ತು ಫಖರ್ ಜಮಾನ್ (0) ಅವರನ್ನು ಬೇಗನೇ ಕಳೆದುಕೊಂಡಿತು. ಮೊಹಮ್ಮದ್ ರಿಜ್ವಾನ್ (55 ರನ್, 49 ಎ., 4X4, 6X1) ಹಾಗೂ ಇಫ್ತಿಕಾರ್ ಅಹ್ಮದ್ (32 ರನ್, 31 ಎ., 4X2, 6X1) ಎರಡನೇ ವಿಕೆಟ್‌ಗೆ 71 ರನ್ ಸೇರಿಸಿ ಗೆಲುವಿನ ಆಸೆ ಜೀವಂತವಾಗಿರಿಸಿಕೊಂಡರು.

14ನೇ ಓವರ್‌ನಲ್ಲಿ ಇಫ್ತಿಕಾರ್ ವಿಕೆಟ್ ಪಡೆದ ಮಧುಶನ್ ಈ ಜತೆಯಾಟ ಮುರಿದರು. ಆ ಬಳಿಕ ಲಂಕಾ ಬೌಲರ್‌ಗಳು ಪಂದ್ಯದ ಮೇಲೆ ಹಿಡಿತ ಬಿಗಿಗೊಳಿಸಿದರು. ರನ್‌ರೇಟ್ ಹೆಚ್ಚಿಸುವ ಪ್ರಯತ್ನದಲ್ಲಿ ಪಾಕ್ ತಂಡ ಒಂದೊಂದೇ ವಿಕೆಟ್‌ಗಳನ್ನು ಕಳೆದುಕೊಂಡು ಸೋಲಿನ ಹಾದಿ ಹಿಡಿಯಿತು.

ರಾಜಕೀಯ ಬಿಕ್ಕಟ್ಟು ಮತ್ತು ಆರ್ಥಿಕ ಸಂಕಷ್ಟದಿಂದ ನಲುಗಿರುವ ದ್ವೀಪರಾಷ್ಟ್ರದ ಜನರಿಗೆ ಲಂಕಾ ಕ್ರಿಕೆಟ್ ತಂಡ ಈ ಮೂಲಕ ಅಲ್ಪ ಸಂಭ್ರಮ ತಂದುಕೊಟ್ಟಿತು.

ಭಾನುಕಾ ಆಸರೆ: ಇದಕ್ಕೂ ಮುನ್ನ ಪಾಕ್ ತಂಡದ ಯುವ ಬೌಲರ್ ನಸೀಮ್ ಶಾ ಮೊದಲ ಓವರ್‌ನಲ್ಲಿಯೇ ಕುಶಾಲ ಮೆಂಡಿಸ್ ವಿಕೆಟ್ ಗಳಿಸಿದರು. ಹ್ಯಾರಿಸ್ ರವೂಫ್ (29ಕ್ಕೆ3) ಕೂಡ ಇನ್ನೊಂದು ಬದಿಯಿಂದ ಪರಿಣಾಮಕಾರಿ ದಾಳಿ ನಡೆಸಿದರು. ಅದರಿಂದ ಲಂಕಾ ತಂಡವು 58 ರನ್‌ಗಳಿಗೆ 5 ವಿಕೆಟ್‌ಗಳನ್ನು ಕಳೆದುಕೊಂಡಿತು.

ಭಾನುಕಾ ಹಾಗೂ ವಣಿಂದು ಹಸರಂಗಾ (36; 21ಎ) ಆರನೇ ವಿಕೆಟ್ ಜೊತೆಯಾಟದಲ್ಲಿ 68 ರನ್ ಸೇರಿಸಿದರು. ಈ ಹಂತದಲ್ಲಿ ಪಾಕ್ ಫೀಲ್ಡರ್‌ಗಳು ಮಾಡಿಕೊಂಡ ಎಡವಟ್ಟುಗಳು ತುಟ್ಟಿಯಾದವು.

ಎರಡು ಬಾರಿ ಭಾನುಕಾ ಅವರ ಕ್ಯಾಚ್ ಕೈಚೆಲ್ಲಿದರು. ಇದರ ಸಂಪೂರ್ಣ ಲಾಭ ಪಡೆದ ಅವರು ತಂಡದ ಮೊತ್ತ ಹೆಚ್ಚಿಸಿದರು. ಕೊನೆಯ ಐದು ಓವರ್‌ಗಳಲ್ಲಿ ತಂಡದ ಮೊತ್ತಕ್ಕೆ 54 ರನ್‌ಗಳು ಸೇರುವಲ್ಲಿ ಅವರ ಆಟವೇ ಮಹತ್ವದ್ದಾಯಿತು.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 170 (ಪಥಮ್ ನಿಸಾಂಕಾ 8, ಧನಂಜಯ ಡಿಸಿಲ್ವಾ 28, ಭಾನುಕಾ ರಾಜಕಪ್ಸ 71, ವಣಿಂದು ಹಸರಂಗಾ 36, ಚಾಮಿಕ ಕರುಣಾರತ್ನೆ 14, ಹ್ಯಾರಿಸ್ ರವೂಫ್ 29ಕ್ಕೆ 3, ಇಫ್ತಿಕಾರ್ ಅಹ್ಮದ್ 21ಕ್ಕೆ 1).

ಪಾಕಿಸ್ತಾನ: 20 ಓವರ್‌ಗಳಲ್ಲಿ 147 (ಮೊಹಮ್ಮದ್ ರಿಜ್ವಾನ್ 55, ಇಫ್ತಿಕಾರ್ ಅಹ್ಮದ್ 32, ಹ್ಯಾರಿಸ್ ರವೂಫ್ 13, ಪ್ರಮೋದ್ ಮಧುಶನ್ 34ಕ್ಕೆ 4, ವಣಿಂದು ಹಸರಂಗ 27ಕ್ಕೆ 3) ಫಲಿತಾಂಶ: ಶ್ರೀಲಂಕಾಕ್ಕೆ 23 ರನ್ ಗೆಲುವು

ಗ್ಲೆನ್ ಸ್ಪಿನ್‌ಗೆ ಮಣಿದ ಭಾರತ

ಚೆಸ್ಟರ್ ಲೀ ಸ್ಟ್ರೀಟ್ (ಎಎಫ್‌ಪಿ): ಸಾರಾ ಗ್ಲೆನ್ (23ಕ್ಕೆ4) ಸ್ಪಿನ್ ದಾಳಿಯ ಮುಂದೆ ಭಾರತ ತಂಡವು ಸೋಲಿನ ಕಹಿಯುಂಡಿತು.

ಸ್ಮೃತಿ ಮಂದಾನ

ರಿವರ್ಸ್‌ಸೈಡ್ ಮೈದಾನದಲ್ಲಿ ಭಾನುವಾರ ನಡೆದ ಮಹಿಳೆಯರ ಟಿ20 ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು 9 ವಿಕೆಟ್‌ಗಳಿಂದ ಭಾರತದ ಎದುರು ಜಯಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಗಳಿಸಿತು.

ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸ್ಮೃತಿ ಮಂದಾನ (23; 20ಎ) ಹಾಗೂ ಶಫಾಲಿ ವರ್ಮಾ (14; 13ಎ) ದೊಡ್ಡ ಮೊತ್ತದ ಆರಂಭ ನೀಡಲಿಲ್ಲ. ಆದರೆ, ಸಾರಾ ಗ್ಲೆನ್ ಕೊಟ್ಟ ಪೆಟ್ಟಿಗೆ ಅಗ್ರಕ್ರಮಾಂಕ ಹಾಗೂ ಮಧ್ಯಮ ಕ್ರಮಾಕದ ಬ್ಯಾಟರ್‌ಗಳು ಕುಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 132 ರನ್‌ಗಳ ಸಾಧಾರಣ ಮೊತ್ತ ಗಳಿಸಿತು.

ಅದಕ್ಕುತ್ತರವಾಗಿ ಆತಿಥೇಯ ತಂಡವು 13 ಓವರ್‌ಗಳಲ್ಲಿ 1 ವಿಕೆಟ್‌ಗೆ 134 ರನ್ ಗಳಿಸಿತು. ಸೋಫಿಯಾ ಡಂಕ್ಲಿ (ಔಟಾಗದೆ 61; 44ಎ, 4X8, 6X1) ಹಾಗೂ ಅಲೈಸ್ ಕ್ಯಾಪ್ಸಿ (ಔಟಾಗದೆ 32;20ಎ,4X3, 6X2) ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 7ಕ್ಕೆ 132 (ಸ್ಮೃತಿ ಮಂದಾನ 23, ಹರ್ಮನ್‌ಪ್ರೀತ್ ಕೌರ್ 20, ದೀಪ್ತಿ ಶರ್ಮಾ ಔಟಾಗದೆ 29, ಸಾರಾ ಗ್ಲೆನ್ 23ಕ್ಕೆ4), ಇಂಗ್ಲೆಂಡ್: 13 ಓವರ್‌ಗಳಲ್ಲಿ 1 ವಿಕೆಟ್‌ಗೆ 134 (ಸೋಫಿಯಾ ಡಂಕ್ಲಿ ಔಟಾಗದೆ 61, ಡೇನಿಲ್ ವೈಟ್ 24, ಅಲೈಸ್ ಕ್ಯಾಪ್ಸಿ ಔಟಾಗದೆ 32, ಸ್ನೇಹಾ ರಾಣಾ 31ಕ್ಕೆ1) ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 9 ವಿಕೆಟ್‌ಗಳ ಜಯ.

ಎರಡನೇ ಟೆಸ್ಟ್ ಡ್ರಾನಲ್ಲಿ ಅಂತ್ಯ

ಕ್ರಿಕೆಟ್: ಭಾರತ ‘ಎ’, ನ್ಯೂಜಿಲೆಂಡ್ ‘ಎ’ ನಡುವಣ ಪಂದ್ಯ

• ಬಸೀರಅಹ್ಮದ್ ನಗಾರಿ

ಹುಬ್ಬಳ್ಳಿ: ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಭಾರತ ‘ಎ’ ಹಾಗೂ ನ್ಯೂಜಿಲೆಂಡ್ ‘ಎ’ ತಂಡಗಳ ನಡುವಣ ನಾಲ್ಕು ದಿನಗಳ ‘ಟೆಸ್ಟ್’ ಪಂದ್ಯ ಭಾನುವಾರ ಡ್ರಾನಲ್ಲಿ ಅಂತ್ಯ ಕಂಡಿತು.

ಪಂದ್ಯದ ಕೊನೆಯ ದಿನವೂ ಮಳೆಯ ಆಟವಿತ್ತು. ಆದರೆ ತುಸು ಹೊತ್ತು ನಿಂತಿದ್ದರಿಂದ ಒಂದಿಷ್ಟು ಆಟ ನಡೆಯಲು ಸಾಧ್ಯವಾಯಿತು. ಮಧ್ಯಾಹ್ನ ಆರಂಭವಾಗುವ ಹೊತ್ತಿಗೆ ಇನಿಂಗ್ಸ್ ಡಿಕ್ಲೇರ್ ಘೋಷಿಸಿದ ಭಾರತ, ಪ್ರವಾಸಿ ಬಳಗವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು.

ಎರಡು ಸಲ ಮಳೆ ಬಂದು ಹೋಗುವ ಮುನ್ನ 63 ನಿಮಿಷಗಳ ಆಟ ನಡೆಯಿತು. 12.5 ಓವರ್‌ಗಳಲ್ಲಿ ಕಿವೀಸ್ ತಂಡವು 2 ವಿಕೆಟ್ ನಷ್ಟಕ್ಕೆ 39 ರನ್‌ಗಳಿಸಿ ಆಡುತ್ತಿದ್ದಾಗ 2ನೇ ಸಲ ಮಳೆ ಸುರಿಯಿತು. ನಂತರ ಆಟ ನಡೆಯಲಿಲ್ಲ.

ಇದಕ್ಕೂ ಆತಿಥೇಯ ತಂಡದ ವೇಗಿಗಳು ಮೊನಚಿನ ದಾಳಿ ನಡೆಸಿದರು. ಬೆಂಗಳೂರಿನಲ್ಲಿ ಐದು ವಿಕೆಟ್ ಗಳಿಸಿದ್ದ ಮುಕೇಶಕುಮಾರ್, ಜೋ ಕಾರ್ಟರ್(17; 37ಎ, 4x3) ವಿಕೆಟ್ ಪಡೆದು ಸಂಭ್ರಮಿಸಿದರು. ಬೆಂಗಳೂರಿನ ಪಂದ್ಯದಲ್ಲಿ 197 ರನ್ ಗಳಿಸಿದ್ದ ಕಾರ್ಟರ್, 9.5ನೇ ಓವರ್‌ನಲ್ಲಿ ವಿಕೆಟ್ ಕೀಪರ್ ಕೆ.ಎಸ್.ಭರತ್‌ಗೆ ಕ್ಯಾಚಿತ್ತು ನಿರ್ಗಮಿಸಿದರು.

ಹುಬ್ಬಳ್ಳಿಯ ರಾಜನಗರ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಭಾನುವಾರ ನ್ಯೂಜಿಲೆಂಡ್ ತಂಡ ಆಟಗಾರ ಡೇನ್ ಕ್ಲೆವರ್ ವಿಕೆಟ್ ಪಡೆದಾಗ ಭಾರತ ತಂಡದ ಆಟಗಾರರು ಸಂಭ್ರಮಿಸಿದ ಕ್ಷಣ –ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಬಳಿಕ ಬಂದ ಡೇನ್ ಕ್ಲೆವರ್(1 ರನ್,10ಎಸೆತ) ಹೆಚ್ಚು ಹೊತ್ತು ನಿಲ್ಲಲಿಲ್ಲ. ಶಾರ್ದೂಲ್ ಟಾಕೂರ್ ಬೌಲಿಂಗ್‌ನಲ್ಲಿ ಕ್ಲೆವರ್ ಗಲ್ಲಿಯಲ್ಲಿದ್ದ ತಿಲಕ್ ವರ್ಮಾಗೆ ಕ್ಯಾಚಿತ್ತರು.

ನಾಲ್ಕು ದಿನಗಳ ಈ ಪಂದ್ಯ ಮೊದಲ ದಿನ ಹಾಗೂ ಮೂರನೇ ದಿನದ ಆಟ ಮಳೆಯಿಂದ ರದ್ದಾಗಿತ್ತು. 2ನೇ ದಿನ 66 ಓವರ್ ಆಟ ನಡೆದಿತ್ತು.

ಸಂಕ್ಷಿಪ್ತ ಸ್ಕೋರ್: ಭಾರತ ಮೊದಲ ಇನಿಂಗ್ಸ್: 66 ಓವರ್‌ಗಳಲ್ಲಿ 6 ವಿಕೆಟ್‌ಗೆ 229 ರನ್. ನ್ಯೂಜಿಲೆಂಡ್ ಮೊದಲ ಇನಿಂಗ್ಸ್: 12.5 ಓವರ್‌ಗಳಲ್ಲಿ 2 ವಿಕೆಟ್‌ಗೆ 39 ರನ್(ಜೋ ಕಾರ್ಟರ್ 17ರನ್, ರಚಿನ್ ರವೀಂದ್ರ ನಾಟೌಟ್ 14). ಭಾರತ ಬೌಲಿಂಗ್– ಮುಕೇಶಕುಮಾರ್ 2ಕ್ಕೆ1, ಶಾರ್ದೂಲ್ 19ಕ್ಕೆ1).

ಫಲಿತಾಂಶ: ಪಂದ್ಯ ಡ್ರಾ.

ದುಲೀಪ್ ಟ್ರೋಫಿ: ಸೆಮಿಗೆ ಪಶ್ಚಿಮ, ಉತ್ತರ ವಲಯ

ಪುದುಚೇರಿ/ ಚೆನ್ನೈ (ಪಿಟಿಐ): ಪಶ್ಚಿಮ ವಲಯ ಮತ್ತು ಉತ್ತರ ವಲಯ ತಂಡಗಳು ಮೊದಲ ಇನಿಂಗ್ಸ್ ಮುನ್ನಡೆಯ ಆಧಾರದಲ್ಲಿ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದವು.

ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಶ್ಚಿಮ ವಲಯ– ಈಶಾನ್ಯ ವಲಯ ನಡುವಿನ ಕ್ವಾರ್ಟರ್ ಫೈನಲ್ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತು. ಅಜಿಂಕ್ಯ ರಹಾನೆ ನೇತೃತ್ವದ ಪಶ್ಚಿಮ ವಲಯ ಮೊದಲ ಇನಿಂಗ್ಸ್‌ನಲ್ಲಿ 355 ರನ್ ಮುನ್ನಡೆ ಗಳಿಸಿತ್ತು. ಕೊನೆಯ ದಿನವೂ ‘ಬ್ಯಾಟಿಂಗ್ ತಾಲೀಮು’ ನಡೆಸಿದ ಈ ತಂಡ ಪಂದ್ಯ ಡ್ರಾದಲ್ಲಿ ಕೊನೆಗೊಳ್ಳುವಾಗ ಎರಡನೇ ಇನಿಂಗ್ಸ್‌ನಲ್ಲಿ ಐದು ವಿಕೆಟ್‌ಗೆ 268 ರನ್ ಗಳಿಸಿತ್ತು.

ಪುದುಚೇರಿಯಲ್ಲಿ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಉತ್ತರ ವಲಯ ತಂಡ, ಪೂರ್ವ ವಲಯ ಎದುರು ಇನಿಂಗ್ಸ್ ಮುನ್ನಡೆ ಗಳಿಸಿತು. ಮೂರು ವಿಕೆಟ್‌ಗೆ 433 ರನ್‌ಗಳಿಂದ ಭಾನುವಾರ ಆಟ ಮುಂದುವರಿಸಿದ ಉತ್ತರ ವಲಯ, ಮೊದಲ ಇನಿಂಗ್ಸ್‌ನಲ್ಲಿ 545 ರನ್‌ಗಳಿಗೆ ಆಲೌಟಾಯಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಪಶ್ಚಿಮ ವಲಯ 123 ಓವರ್‌ಗಳಲ್ಲಿ 2ಕ್ಕೆ 590 ಡಿಕ್ಲೇರ್ಡ್. ಈಶಾನ್ಯ ವಲಯ 81.5 ಓವರ್‌ಗಳಲ್ಲಿ 235. ಎರಡನೇ ಇನಿಂಗ್ಸ್: ಪಶ್ಚಿಮ ವಲಯ 64.3 ಓವರ್‌ಗಳಲ್ಲಿ 5 ವಿಕೆಟ್‌ಗೆ 268 (ಅತಿಥ್ ಶೇಟ್ ಔಟಾಗದೆ 102, ಶಮ್ಸ್ ಮುಲಾನಿ 97, ದಿಪ್ಪು ಸಂಗ್ಮಾ 70ಕ್ಕೆ 3) ಫಲಿತಾಂಶ: ಪಂದ್ಯ ಡ್ರಾ

ಪುದುಚೇರಿ ಪಂದ್ಯ: ಮೊದಲ ಇನಿಂಗ್ಸ್: ಪೂರ್ವ ವಲಯ 136.4 ಓವರ್‌ಗಳಲ್ಲಿ 397. ಉತ್ತರ ವಲಯ148.5 ಓವರ್‌ಗಳಲ್ಲಿ 545 (ಮನ್‌ದೀಪ್ ಸಿಂಗ್ 63, ಹಿಮಾನ್ಶು ರಾಣಾ 81, ಶಹಬಾಜ್ ಅಹ್ಮದ್ 86ಕ್ಕೆ 5). ಎರಡನೇ ಇನಿಂಗ್ಸ್: ಪೂರ್ವ ವಲಯ 21 ಓವರ್‌ಗಳಲ್ಲಿ 3 ವಿಕೆಟ್‌ಗೆ 102 (ಅಭಿಷೇಕ್ ಔಟಾಗದೆ 50) ಫಲಿತಾಂಶ: ಪಂದ್ಯ ಡ್ರಾ

ಹಾಕಿ: ರೈಸಿಂಗ್ ಸ್ಟಾರ್‌ಗೆ ಜಯ

ಬೆಂಗಳೂರು: ಖುಷಿ ಹಾಗೂ ಕೇಶವರ್ಧಿನಿ ಆಟದ ಬಲದಿಂದ ಬಿಎಚ್‌ಎ ಪ್ರೆಸಿಡೆಂಟ್ಸ್ ಕಪ್ 5 ಎ ಸೈಡ್ ಹಾಕಿ ಟೂರ್ನಿಯಲ್ಲಿ ರೈಸಿಂಗ್ ಸ್ಟಾರ್ ಕ್ಲಬ್ ಜಯ ಸಾಧಿಸಿತು. ಭಾನುವಾರ ನಡೆದ ಪಂದ್ಯದಲ್ಲಿ ರೈಸಿಂಗ್ ಸ್ಟಾರ್ 13–2ರಿಂದ ಸೇಂಟ್ ತೆರೇಸಾ ತಂಡವನ್ನು ಸೋಲಿಸಿತು. ಕೇಶವರ್ಧಿನಿ 3, 6, 15ನೇ ನಿಮಿಷಗಳಲ್ಲಿ ಮತ್ತು ಖುಷಿ 8, 17, 19 ಮತ್ತು 20ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು.

ಚೆನ್ನೈ ಓಪನ್: ರಿಸ್ಕ್ ‘ಫೇವರಿಟ್’

ಚೆನ್ನೈ (ಪಿಟಿಐ): ಡಬ್ಲ್ಯುಟಿಎ ಚೆನ್ನೈ ಓಪನ್ ಟೆನಿಸ್ ಟೂರ್ನಿ ಸೋಮವಾರ ಆರಂಭವಾಗಲಿದ್ದು, ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರ 100ರ ಒಳಗಿನ ಸ್ಥಾನದಲ್ಲಿರುವ ಕೆಲವು ಆಟಗಾರ್ತಿಯರು ಪ್ರಶಸ್ತಿಗೆ ಪೈಪೋಟಿ ನಡೆಸಲಿದ್ದಾರೆ.

ವಿಶ್ವದ 29ನೇ ರ‍್ಯಾಂಕ್‌ನ ಆಟಗಾರ್ತಿ ಅಮೆರಿಕದ ಆ್ಯಲಿಸನ್ ರಿಸ್ಕ್ ಅಮೃತ್‌ರಾಜ್ ಅವರಿಗೆ ಅಗ್ರಶ್ರೇಯಾಂಕ ನೀಡಲಾಗಿದ್ದು, ಪ್ರಶಸ್ತಿ ಗೆಲ್ಲುವ ನೆಚ್ಚಿನ ಸ್ಪರ್ಧಿ ಆಗಿದ್ದಾರೆ. ಭಾರತದ ಟೆನಿಸ್ ಆಟಗಾರ ಆನಂದ್ ಅಮೃತ್‌ರಾಜ್ ಪುತ್ರ ಸ್ಟೀಫನ್ ಅಮೃತ್‌ರಾಜ್ ಅವರನ್ನು ಮದುವೆಯಾಗಿರುವ ಆ್ಯಲಿಸನ್, ಅಮೆರಿಕ ಓಪನ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

ವಿಶ್ವದ 17ನೇ ರ‍್ಯಾಂಕ್‌ನ ಆಟಗಾರ್ತಿ ಫ್ರಾನ್ಸ್‌ನ ಕೆರೋಲಿನಾ ಗಾರ್ಸಿಯಾ ಅವರು ಕೊನೆಯ ಕ್ಷಣದಲ್ಲಿ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ಬ್ಯಾಸ್ಕೆಟ್‌ಬಾಲ್: ಆಸ್ಟ್ರೇಲಿಯಾಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಲಾ ಜಫರ್‌ಮನ್ಸ್ ಮತ್ತು ನಾಯಕಿ ಡಲ್ಲಾಸ್ ಲಾಫ್‌ರಿಜ್ ಅವರ ಅಮೋಘ ಆಟದ ಬಲದಿಂದ ಆಸ್ಟ್ರೇಲಿಯಾ ತಂಡವು ಫಿಬಾ 18 ವರ್ಷದೊಳಗಿನ ಮಹಿಳೆಯರ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಎ ಡಿವಿಷನ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಫೈನಲ್ ಹಣಾಹಣಿಯಲ್ಲಿ ಭಾನುವಾರ ಆಸ್ಟ್ರೇಲಿಯಾ 81–55ರಿಂದ ಚೀನಾ ತಂಡವನ್ನು ಮಣಿಸಿತು. ಐಲಾ ಅಮೋಘ 26 ಪಾಯಿಂಟ್ಸ್ ಗಳಿಸಿದರೆ, ಡಲ್ಲಾಸ್ 17 ಪಾಯಿಂಟ್ಸ್ ಕಲೆಹಾಕಿದರು.

ನಾಲ್ಕು ಕ್ವಾರ್ಟರ್‌ಗಳಲ್ಲೂ ಉತ್ತಮ ಆಟವಾಡಿದ ಆಸ್ಟ್ರೇಲಿಯಾ ಮುನ್ನಡೆ ಕಳೆದುಕೊಳ್ಳಲಿಲ್ಲ.

ಆಸ್ಟ್ರೇಲಿಯಾ ತಂಡದ ಸಂಭ್ರಮ– ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಮೂರನೇ ಸ್ಥಾನಕ್ಕಾಗಿ ನಡೆದ ಸೆಣಸಾಟದಲ್ಲಿ ಜಪಾನ್ 77–45ರಿಂದ ಚೀನಾ ತೈಪೆ ತಂಡವನ್ನು ಸೋಲಿಸಿತು.

ಕೋರಮಂಗಲದಲ್ಲಿ ನಡೆದ ಬಿ ಗುಂಪಿನ ಫೈನಲ್‌ನಲ್ಲಿ ಮಲೇಷ್ಯಾ ತಂಡವು 64–53ರಿಂದ ಮಂಗೋಲಿಯಾ ಎದುರು ಗೆದ್ದಿತು.

ಸಂಕ್ಷಿಪ್ತ ಸುದ್ದಿ

ಫಾರ್ಮುಲಾ 2: ಜೆಹಾನ್‌ಗೆ 3ನೇ ಸ್ಥಾನ

ಮೊಂಜಾ, ಇಟಲಿ (ಪಿಟಿಐ): ಭಾರತದ ಜೆಹಾನ್ ದಾರುವಾಲಾ ಅವರು ಇಲ್ಲಿ ನಡೆದ ಫಾರ್ಮುಲಾ 2 ಸ್ಪ್ರಿಂಟ್ ರೇಸ್‌ನಲ್ಲಿ ಮೂರನೇ ಸ್ಥಾನ ಗಳಿಸಿದರು.

ಜೆಹಾನ್

ಐದನೇ ಸಾಲಿನಿಂದ ರೇಸ್ ಆರಂಭಿಸಿದ 23 ವರ್ಷದ ಜೆಹಾನ್, ಅಗ್ರಸ್ಥಾನ ಗಳಿಸಿದ ಈಸ್ಟೋನಿಯಾದ ಜೂರಿ ವಿಪ್ಸ್ ಮತ್ತು ಡೆನ್ಮಾರ್ಕ್‌ನ ಫ್ರೆಡರಿಕ್ ವೆಸ್ಟಿ (ಎರಡನೇ ಸ್ಥಾನ) ನಂತರದ ಸ್ಥಾನ ಪಡೆದರು.

ಪ್ರೆಮಾ ರೇಸಿಂಗ್ ತಂಡದ ಜೆಹಾನ್ ಅವರಿಗೆ ಈ ಋತುವಿನಲ್ಲಿ ಇದು ಮೂರನೇ ‘ಪೋಡಿಯಂ ಫಿನಿಶ್’ ಆಗಿದೆ. ಮೊಂಜಾದಲ್ಲಿ ಐದನೇಯದ್ದು.

ವೆರ್ಸ್ಟಪನ್‌ಗೆ ಪ್ರಶಸ್ತಿ

ಮೊಂಜಾ, ಇಟಲಿ (ಎಎಫ್‌ಪಿ): ರೆಡ್ ಬುಲ್ ತಂಡದ ಮ್ಯಾಕ್ಸ್ ವೆರ್ಸ್ಟಪನ್ ಅವರು ಭಾನುವಾರ ನಡೆದ ಇಟಲಿಯನ್ ಗ್ರ್ಯಾನ್ ಪ್ರಿ ಫಾರ್ಮುಲಾ ಒನ್ ರೇಸ್ ಗೆದ್ದುಕೊಂಡರು.

ಮೊಂಜಾದಲ್ಲಿ ಮೊದಲ ಬಾರಿ ಅಗ್ರಸ್ಥಾನ ಪಡೆದ ಅವರು, ಈ ಋತುವಿನಲ್ಲಿ ಗೆದ್ದ ಸತತ ಐದನೇ ರೇಸ್ ಇದಾಗಿದೆ. ಫೆರಾರಿ ತಂಡದ ಚಾರ್ಲ್ಸ್ ಲೆಕ್ಲೆರ್ಕ್ ಎರಡನೇ ಸ್ಥಾನ ಪಡೆದರೆ, ಮರ್ಸಿಡಿಸ್ ತಂಡದ ಜಾರ್ಜ್ ರಸೆಲ್ ಮೂರನೆಯವರಾಗಿ ರೇಸ್ ಕೊನೆಗೊಳಿಸಿದರು.

ವೆರ್ಸ್ಟಪನ್ ಇದರೊಂದಿಗೆ ಸತತ ಎರಡನೇ ಬಾರಿ ಫಾರ್ಮುಲಾ ಒನ್ ಚಾಂಪಿಯನ್‌ಪಟ್ಟ ತಮ್ಮದಾಗಿಸಿಕೊಳ್ಳುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯಿಟ್ಟರು. ಅವರು ಒಟ್ಟು 335 ಪಾಯಿಂಟ್‌ಗಳೊಂದಿಗೆ ಚಾಲಕರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ.

ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ವೇದಾ ಕೃಷ್ಣಮೂರ್ತಿ ಹಾಗೂ ಕರ್ನಾಟಕ ಕ್ರಿಕೆಟಿಗ ಅರ್ಜುನ್ ಹೊಯ್ಸಳ ಅವರು ದಾಂಪತ್ಯ ಜೀವನಕ್ಕೆ ಕಾಲಿಡಲಿದ್ದಾರೆ. ವೇದಾ ಅವರಿಗೆ ಪ್ರೇಮನಿವೇದನೆ ಮಾಡಿದ ಚಿತ್ರ ಹಾಗೂ ಸಂದೇಶವನ್ನು ಅರ್ಜುನ್ ತಮ್ಮ ಇನ್‌ಸ್ಟಾಗ್ರಾಂನಲ್ಲಿ ಹಾಕಿದ್ದಾರೆ. ವೇದಾ ಕೂಡ ಈ ಚಿತ್ರ ಪೋಸ್ಟ್ ಮಾಡಿದ್ದಾರೆ. ಮುಂದಿನ ವಾರ ಬೆಂಗಳೂರಿನಲ್ಲಿ ನಿಶ್ಚಿತಾರ್ಥ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಟೆನ್‌ಪಿನ್ ಬೌಲಿಂಗ್: ನವೀನ್, ಸಬೀನಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆಲಂಗಾಣದ ನವೀನ್ ಸಿದ್ದಂ ಮತ್ತು ತಮಿಳುನಾಡಿನ ಸಬೀನಾ ಅಧಿಕಾ ಅವರು ಇಲ್ಲಿ ನಡೆದ ರಾಷ್ಟ್ರೀಯ ಟೆನಿಸ್ ಬೌಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಫೈನಲ್‌ನಲ್ಲಿ ನವೀನ್ 483-457ರಿಂದ ಕರ್ನಾಟಕದ ಆಕಾಶ್ ಅಶೋಕ್‌ಕುಮಾರ್ ಅವರನ್ನು ಸೋಲಿಸಿದರು. ಸಬೀನಾ ಅವರು 273–261ರಿಂದ ಆತಿಥೇಯ ರಾಜ್ಯದ ಜೂಡಿ ಅಲ್ಬನ್ ಅವರನ್ನು ಮಣಿಸಿದರು.

ಕ್ರಿಕೆಟ್: ಆಸ್ಟ್ರೇಲಿಯಾ ‘ಕ್ಲೀನ್‌ಸ್ವೀಪ್’

ಕೇನ್ಸ್, ಆಸ್ಟ್ರೇಲಿಯಾ (ಎಎಫ್‌ಪಿ): ಸ್ಟೀವನ್ ಸ್ಮಿತ್ ಅವರ ಶತಕದ (105) ನೆರವಿನಿಂದ ಆಸ್ಟ್ರೇಲಿಯಾ ತಂಡ, ನ್ಯೂಜಿಲೆಂಡ್ ಎದುರಿನ ಕೊನೆಯ ಏಕದಿನ ಕ್ರಿಕೆಟ್ ಪಂದ್ಯದಲ್ಲಿ 25 ರನ್‌ಗಳ ಜಯ ಸಾಧಿಸಿತು.

ಈ ಮೂಲಕ ಮೂರು ಪಂದ್ಯಗಳ ಸರಣಿಯಲ್ಲಿ ‘ಕ್ಲೀನ್‌ಸ್ವೀಪ್’ ಸಾಧನೆ ಮಾಡಿತು. ತಮ್ಮ ಕೊನೆಯ ಏಕದಿನ ಪಂದ್ಯವನ್ನಾಡಿದ ಆ್ಯರನ್ ಫಿಂಚ್ ಐದು ರನ್ ಗಳಿಸಿ ಔಟಾದರು. ಆದರೆ ಸ್ಮಿತ್ ಹಾಗೂ ಸಹ ಆಟಗಾರರು ಉತ್ತಮ ಆಟವಾಡಿ ಅವರಿಗೆ ‘ಗೆಲುವಿನ ವಿದಾಯ’ ನೀಡಿದರು.

ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ 50 ಓವರ್‌ಗಳಲ್ಲಿ 5 ವಿಕೆಟ್‌ಗೆ 267 ರನ್ ಗಳಿಸಿದರೆ, ಕೇನ್ ವಿಲಿಯಮ್ಸನ್ ಬಳಗ 49.5 ಓವರ್‌ಗಳಲ್ಲಿ 242 ರನ್‌ಗಳಿಗೆ ಆಲೌಟಾಯಿತು.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ 50 ಓವರ್‌ಗಳಲ್ಲಿ 5ಕ್ಕೆ 267 (ಸ್ಟೀವನ್ ಸ್ಮಿತ್ 105, ಮಾರ್ನಸ್ ಲಾಬುಶೇನ್ 52, ಅಲೆಕ್ಸ್ ಕೇರಿ ಔಟಾಗದೆ 42, ಟ್ರೆಂಟ್ ಬೌಲ್ಟ್ 25ಕ್ಕೆ 2)

ನ್ಯೂಜಿಲೆಂಡ್ 49.5 ಓವರ್‌ಗಳಲ್ಲಿ 242 (ಗ್ಲೆನ್ ಫಿಲಿಪ್ಸ್ 47, ಜೇಮ್ಸ್ ನೀಶಮ್ 36, ಮಿಚೆಲ್ ಸ್ಟಾರ್ಕ್ 60ಕ್ಕೆ 3, ಕೆಮರಾನ್ ಗ್ರೀನ್ 25ಕ್ಕೆ 2, ಸೀನ್ ಅಬಾಟ್ 31ಕ್ಕೆ 2) ಫಲಿತಾಂಶ: ಆಸ್ಟ್ರೇಲಿಯಾಕ್ಕೆ 25 ರನ್ ಗೆಲುವು